ಗ್ರಾಂಶಿ ಬರಹಗಳ ಪರಿಭಾಷೆಗಳು



ಡಾ. ಕೇಶವ ಶರ್ಮ ಕೆ.

ಗ್ರಾಂಶಿ ಬರಹಗಳ ಪರಿಭಾಷೆಗಳು

ಗ್ರಾಂಶಿ ಬರಹಗಳ ಪರಿಭಾಷೆಗಳು

ಡಾ. ಕೇಶವ ಶರ್ಮ ಕೆ.

ರಚನ ಪ್ರಕಾಶನ
ನಂ. 2346/1, 10ನೇ ಕ್ರಾಸ್, ಬಸವೇಶ್ವರ ರಸ್ತೆ
ಕೆ.ಆರ್. ಮೊಹಲ್ಲಾ, ಮೈಸೂರು–570004

GRAMSI BARAHAGALA PARIBHASHEGALU

Written by
Dr. Keshavasharma K.
Rtd. Professor
1st Cross, Shanthinagara
Near Chowdamma Temple
B.R. Project, Badravathi
Mob: 9448730611
email: dr.keshavasharma.k@gmail.com

Published by
Rachana Prakashana
No. 2346/1, 10th Cross, Basaveshwara Road
K.R. Mohalla, Mysore-570004

First Impression : 2021

Copies : 1000
Page : xii + 152 + 4 = 168
Price : Rs. 170/-
Paper used : Maplitho
D.T.P. : Anukshana Creations
Mob : 8660867073
Cover Page Design : Kiran S V
Printed at : Kamal Impressions, Mysore

ಲೇಖಕರ ಮಾತು

ಗ್ರಾಂಶಿಯೇ ಯಾಕೆ ಬೇಕು?

ಆಧುನಿಕ ಜಗತ್ತಿನಲ್ಲಿ ಅತ್ಯಂತ ಮಹತ್ವದ ಚಿಂತಕ ಎಂದು ಹೆಸರುವಾಸಿಯಾದ ಗ್ರಾಂಶಿಯು ನಮಗೆ ಅನೇಕ ಚಿಂತನೆಗಳು ಮತ್ತು ವಿಚಾರಧಾರೆಯನ್ನು ರೂಪಿಸಿ ಕೊಟ್ಟಿದ್ದಾನೆ, ನಾವು ಗ್ರಾಂಶಿಯನ್ನು ನೋಡುವುದು ಅಂದರೆ ಮತ್ತೆ ಸಂಸ್ಕೃತಿಯ ಚಿಂತನೆಗಳನ್ನು ಮರುಯೋಚನೆ ಮಾಡುವುದೂ ಹೌದು. ಅದರ ಜೊತೆಗೆ ಅವನು ತನ್ನ ಬರಹಗಳಲ್ಲಿ ಬರೀ ಸಂಸ್ಕೃತಿಯನ್ನು ಮಾತ್ರವೇ ಹೇಳಿದ್ದಾನೆ ಎಂದು ಭಾವಿಸಬಾರದು. ಅವನಲ್ಲಿ ರಾಜಕೀಯ, ಸಾಂಸ್ಕೃತಿಕ, ತಾತ್ವಿಕ, ಮೊದಲಾದ ಅನೇಕ ವಿಶ್ಲೇಷಣೆಯನ್ನು ಕಾಣುತ್ತೇವೆ. ಅವನ ಚಿಂತನೆಗಳು ಅನೇಕ ರೀತಿಯಲ್ಲಿ ಹರಡಿಕೊಂಡಿದೆ. ಆದ್ದರಿಂದ ಈವತ್ತಿಗೂ ಅವನು ಅತ್ಯಂತ ಮಹತ್ವದ ಚಿಂತಕ ಎನ್ನುವ ಹೆಸರನ್ನು ಪಡೆದುಕೊಂಡಿದ್ದಾನೆ. ಅವನ ಬರಹಗಳು ಮುಕ್ತವಾಗಿದೆ. ಅದರಲ್ಲಿ ಒಂದು ತಾತ್ವಿಕ ವಿವರಣೆಯು ಮಾತ್ರವೇ ಮುಂದೆ ಬರುತ್ತದೆ ಎಂದು ಹೇಳುವಂತಿಲ್ಲ. ಆದರೆ ಅವನನ್ನು ನೋಡುವಾಗ ನಾವು ಬರೀ ವೀಕ್ಷಕ ವಿವರಣೆಯನ್ನು ಮಾತ್ರವೇ ಮಾಡಬೇಕಾಗಿಲ್ಲ. ಯಾವುದೇ ಒಂದು ಕಾರ್ಯಕ್ರಮವನ್ನು ನೋಡುವಾಗ ಅದಕ್ಕೆ ಒಂದು ರೂಪವು ಮಾತ್ರವೇ ಇದೆ ಎಂದು ಹೇಳಲು ಬರುವುದಿಲ್ಲ. ಅದರ ಹಿಂದೆ ರಾಜಕಾರಣ, ಆರ್ಥಿಕತೆ ಮತ್ತು ಸಾಮಾಜಿಕ ಸಂಗತಿಗಳೂ ಇರುತ್ತವೆ. ಕೆಲವು ನಮಗೆ ಕಾಣುತ್ತವೆ. ಮತ್ತೆ ಕೆಲವು ಕಾಣುವುದಿಲ್ಲ. ಮತ್ತೊಂದು ರೀತಿಯಲ್ಲಿ ಹೇಳುವುದಿದ್ದರೆ ಸಾಮಾಜಿಕ ಜೀವನದಲ್ಲಿ ಬಹುತ್ವ ಎನ್ನುವುದು ಕೆಲಸವನ್ನು ಮಾಡುತ್ತದೆ. ಇದನ್ನು ಇನ್ನೊಂದು ರೀತಿಯಲ್ಲಿಯೂ ಹೇಳಬಹುದು: ಸಮಾಜದಲ್ಲಿ ಬೇರೆ ಬೇರೆ ಗುಂಪುಗಳಿವೆ. ಅವು ನಿರ್ದಿಷ್ಟವಾದ ಕಾರ್ಯವನ್ನು ಕೂಡಾ ಮಾಡುತ್ತವೆ.ಆದರೆ ಅದೇ ಕೆಲಸವನ್ನು ಮತ್ತೊಂದು ಗುಂಪು ಮಾಡುತ್ತದೆ ಎಂದು ಹೇಳುವಂತೆ ಇಲ್ಲ. ಅದರ ಸ್ವರೂಪವು ಬೇರೆ ಇರಬಹುದು. ಗ್ರಾಂಶಿಯಲ್ಲಿ ಗುಂಪು ಎನ್ನುವುದು ಅತ್ಯಂತ ವಿಶಿಷ್ಟವಾದ ಕೆಲಸವನ್ನು ಮಾಡುತ್ತದೆ. ಕೆಲವು ಕಾರ್ಯಕ್ರಮಗಳು ಇನ್ನೊಬ್ಬರ ಜೊತೆಗೆ ಹಂಚಿಕೊಳ್ಳುವ ಮಾದರಿಯಲ್ಲಿ

ಇರುತ್ತವೆ. ಮತ್ತೆ ಕೆಲವು ಸ್ವಗತದ ಮಾದರಿಯಲ್ಲಿಯೂ ಇರುತ್ತದೆ. ನಾವು ಯಾವುದೇ ಕಾರ್ಯಕ್ರಮವು ನಡೆಯುತ್ತಿರುವಾಗ ಅದರ ಹಿಂದೆ ಯಾವ ಸನ್ನಿವೇಶವು ಇದೆ ಎಂದು ನೋಡುವುದು ಅತ್ಯಂತ ಅಗತ್ಯ.. ಯಾವುದಾದರೂ ಕಾರ್ಯಕ್ರಮವನ್ನು ಯಾವುದೇ ಮಾಧ್ಯಮದಲ್ಲಿ ವರದಿ ಮಾಡುವಾಗ ಇದು ಅತ್ಯಂತ ಮಹತ್ವದ್ದು. ಇನ್ನೊಂದು ಅಂಶವನ್ನು ನಾವು ಇಲ್ಲಿ ಗಮನಕ್ಕೆ ತಂದು ಕೊಳ್ಳಬೇಕು: ಇದೇ ವಿಷಯವು ಯಾಕೆ ಒಂದು ಮಾಧ್ಯಮದಲ್ಲಿ ಪ್ರಸಾರವಾಗುತ್ತಿದೆ? ಯಾಕಿದು ಮೌಲಿಕವಾಗಿದೆ ಎನ್ನುವುದು ಇಲ್ಲಿ ಮಹತ್ವ. ಕಾರನವು ಇಲ್ಲಿ ಮುಖ್ಯವಾಗುತ್ತದೆ. ನಿಲುವು ಎನ್ನುವುದು ಅತ್ಯಂತ ಅಗತ್ಯ. ಯಾವುದೇ ಚರ್ಚೆಯನ್ನು ಮಾಡುತ್ತಿರುವಾಗ ಅದರ ಹಿಂದೆ ಏನು ಮಹತ್ವವಿದೆ ಇದನ್ನು ನಾವು ಇನ್ನೊಬ್ಬರ ಹಾಜರಾತಿ ಎಂದೂ ಹೇಳುತ್ತೇವೆ. ತೀರಾ ಸರಳವಾದ ಒಂದು ಉದಾಹರಣೆಯನ್ನು ಕೊಡುವುದಿದ್ದರೆ ಮದುವೆಯಲ್ಲಿ ಬರೀ ಹುಡುಗ ಮತ್ತು ಹುಡುಗಿಯು ಇರುವುದಿಲ್ಲ. ಅವರ ಜೊತೆಗೆ ಸಾಕ್ಷ್ಯ ಎನ್ನುವಂತೆ ಬೇರೆ ಜನರೂ ಇರುತ್ತಾರೆ. ಮದುವೆ ಯಾಗುವವರನ್ನು ನಾವು ಮತ್ತೆ ಮತ್ತೆ ಪಂಥಾಹ್ವಾನ ಮಾಡುವುದು ಇಲ್ಲ. ಆದ್ದರಿಂದ ಒಂದು ವಿಷಯವನ್ನು ನಾವು ಹೇಳುವುದಿದ್ದರೆ ಅದರಲ್ಲಿ ವಿವಿಧ ಜನರು ಸೇರಿದರೆ ಅದರಲ್ಲಿ ವಿವಿಧ ಅಭಿಪ್ರಾಯಗಳೂ ಬರುತ್ತವೆ. ಅದನ್ನು ನಾವು ಬಹುತ್ವ ಎಂದು ಹೇಳುತ್ತೇವೆ. ಚರ್ಚೆಯಲ್ಲಿ ಭಾಗವಹಿಸುವುದು ಅಂದರೆ ಒಂದು ಅವಕಾಶವನ್ನು ಕಲ್ಪಿಸುವುದೂ ಹೌದು. ಅವಕಾಶ ಎನ್ನುವುದು ಅತ್ಯಂತ ಮಹತ್ವದ್ದೂ ಹೌದು. ಇದನ್ನು ಗ್ರಾಂಶಿಯು ಹೇಳಿದ್ದಾನೆ. ನಾವು ರಾಷ್ಟ್ರ ಮತ್ತು ಅದರ ರಾಜಕಾರಣವನ್ನು ಹೇಳುವಾಗ ಅದರ ಅರ್ಥವು ಭಿನ್ನವಾಗುತ್ತದೆ. ಅದನ್ನು ಅನೇಕರು ಅತ್ಯಂತ ಉತ್ಸಾಹದಿಮದ ವಿವರಿಸುವುದು. ಅದರಲ್ಲಿ ಬೇರೆ ಬೇರೆ ದೇಶಗಳಿಂದ ಬಂದವರು ಮತ್ತು ಸ್ವದೇಶಿಗರು ಎನ್ನುವುದು ಚರ್ಚೆಗೆ ಮಹತ್ವವನ್ನು ಕೊಡುತ್ತದೆ. ಇಲ್ಲಿ ಸ್ಥಳ ಎನ್ನುವುದು ಅತ್ಯಂತ ಮುಖ್ಯ. ಸೀಮಾ ರೇಖೆಗಿಂತ ಆಚೆಗೆ ಇರುವವರು ಮತ್ತೊಂದು ವಿಮರ್ಶೆಗೆ ಅವಕಾಶವನ್ನು ಕೊಡುತ್ತಾರೆ.

ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕಾಗುತ್ತದೆ: ಗ್ರಾಂಶಿಯು ಅತ್ಯಂತ ಮಹತ್ವದ ಚಿಂತಕರಲ್ಲಿ ಒಬ್ಬ ಅವನ ಬರಹಗಳು ನಮ್ಮ ಮೇಲೆ ವಿವಿಧ ರೀತಿಯಲ್ಲಿ ಪ್ರಭಾವ ಬೀರಿದೆ. ಸ್ವತಃ ಹೋರಾಟಗಾರನಾಗಿದ್ದ ಗ್ರಾಂಶಿಯು ಅನೇಕ ರೀತಿಯ ಟಿಪ್ಪಣಿಗಳನ್ನು ತನ್ನ ನೋಟ್_ಬುಕ್‌ನಲ್ಲಿ ಹೇಳಿದ್ದಾನೆ. ಅವನು ಅತ್ಯಂತ ಮುಖ್ಯವಾಗಿ ತಾತ್ವಿಕತೆಯನ್ನು ತನ್ನ ಎಲ್ಲಾ ಬರಹಗಳಲ್ಲಿ ಮತ್ತೆ ಮತ್ತೆ ಹೇಳಿದ್ದಾನೆ. ಸಮಾಜ ಮತ್ತು ಅದರ ಅಧ್ಯಯನಕ್ಕೆ ನಮಗೆ ಅವನ ನಿಲುವುಗಳು ಉಪಯುಕ್ತವಾಗುತ್ತದೆ. ಸಮಾಜ ಮತ್ತು ಅದರ ಕುರಿತಾದ ಚಿಂತನೆಗೆ ನಮಗೆ

ಹೆಚ್ಚು ಅನುಕೂಲವನ್ನು ಒದಗಿಸುವುದು ತಾತ್ವಿಕತೆಯೇ. ಯಾವುದು ನಮ್ಮ ಸಾಮಾಜಿಕ ಜ್ಞಾನವು ಆಗಿದೆಯೋ ಅದರ ಮೂಲವು ಇರುವುದು ತಾತ್ವಿಕ ಗ್ರಹಿಕೆಯಲ್ಲಿ ಎನ್ನುವುದು ಸ್ಪಷ್ಟ. ತತ್ವಜ್ಞಾನದಲ್ಲಿಯೂ ಅತ್ಯಂತ ಮುಖ್ಯವಾಗಿರುವುದು ತಾತ್ವಿಕತೆ. ತಾತ್ವಿಕತೆಯೆನ್ನುವುದು ನಮಗೆ ಸಮಾಜದ ಜೊತೆಗೆ ಸಂಬಂಧವನ್ನು ಬೆಳೆಸಲು ಅವಕಾಶವನ್ನು ಮಾಡಿಕೊಡುತ್ತವೆ. ಅದನ್ನು ನಾವು ವಸ್ತುನಿಷ್ಟವಾಗಿಯೂ ನೋಡಬೇಕಾಗುತ್ತದೆ. ತಾತ್ವಿಕತೆ ಎನ್ನುವುದು ನಮಗೆ ಅತ್ಯಂತ ಮಹತ್ವದ್ದು. ಅದನ್ನು ಒಂದು ಪರಿಕರವಾಗಿಯೂ ಬಳಸಬೇಕಾಗುತ್ತದೆ. ತಾತ್ವಿಕತೆಯ ರೂಪಗಳು ಮತ್ತು ಸಾಮಾಜಿಕ ರಚನೆಗಳು ಹಾಗೂ ಆರ್ಥಿಕತೆಗಳ ನಡುವೆ ಸಂಬಂಧವನ್ನು ಬೆಸೆಯುವುದು ತಾತ್ವಿಕತೆ. ಆದ್ದರಿಂದ ತಾತ್ವಿಕತೆ ಎನ್ನುವುದು ನಮಗೆ ಒಂದು ಅರ್ಥದಲ್ಲಿ ಒಂದು ಸೇತುವೆಯಂತೆ ಕೆಲಸವನ್ನು ಮಾಡುತ್ತದೆ. ಆದರಲ್ಲಿಯೂ ನಮಗೆ ಮಾರ್ಕ್ಸವಾದಿ ಅಧ್ಯಯನ ಕ್ರಮವು ನಮಗೆ ತಾತ್ವಿಕತೆಯು ಕುರಿತು ಮುಖ್ಯವಾದ ನಿಲುವನ್ನು ವ್ಯಕ್ತ ಮಾಡಿದೆ. ಅಲ್ತೂಸರ್ ತಾತ್ವಿಕತೆಯನ್ನು ಸಮಾಜ ಮತ್ತು ಅದರ ಸಮಗ್ರತೆಯ ಭಾಗವಾಗಿ ಇರುತ್ತದೆ. ಅದು ವಿಷಯ ನಿಷ್ಟವಲ್ಲ ಎಂದು ಹೇಳುತ್ತಾನೆ. ಆದರೆ ಗ್ರಾಂಶಿಯು ತಾತ್ವಿಕತೆ ಮತ್ತು ಅದರ ಸ್ವರೂಪವನ್ನು ವಿವರಿಸುವಾಗ ಅದನ್ನು ಸಮಾಜದ ಭಾಗವಾಗಿಯೂ ನೋಡುತ್ತಾನೆ. ಸಮಾಜ ಮತ್ತು ಅದರ ಸಮಗ್ರತೆಯು ಹೇಗೆ ಒಂದು ತಾತ್ವಿಕತೆಯನ್ನು ರೂಪಿಸುತ್ತದೆ ಎನ್ನುವುದು ಅವನ ಚರ್ಚೆಯ ಕೇಂದ್ರವೂ ಆಗಿದೆ. ಗ್ರಾಂಶಿಯು ಚರಿತ್ರೆ ಮತ್ತು ಅದರ ಬ್ಲಾಕ್ ಹೇಗೆ ತಾತ್ವಿಕತೆಯನ್ನು ನಿರ್ವಹಿಸುತ್ತದೆ ಎಂದೂ ವಿವರಿಸುತ್ತಾನೆ. ಚರಿತ್ರೆಯು ಅನೇಕವನ್ನು ರೂಪಿಸುತ್ತದೆ. ಚರಿತ್ರೆಯು ರೂಪವಾಗುತ್ತದೆ. ಆದರೆ ಅದರ ಸ್ವರೂಪವು ಆಗಾಗ ತನ್ನ ಚಹರೆಯನ್ನು ಬದಲಿಸುತ್ತದೆ. ಆದರೆ ತಾತ್ವಿಕತೆಯನ್ನು ಕುರಿತು ವಿವರಿಸುವಾಗ ಸಾಮಾನ್ಯ ಜ್ಞಾನ ಮತ್ತು ಅದರ ಸ್ವರೂಪವನ್ನು ಒಂದು ಹರಡಿಕೊಂಡ ಕ್ರಮವಾಗಿ ನೋಡುತ್ತಾನೆ. ಚರಿತ್ರೆಯು ಯಾವುದನ್ನು ರೂಪಿಸುತ್ತದೆ ಅದನ್ನು ಗ್ರಾಂಶಿಯು ಅತ್ಯಂತ ಮುಖ್ಯವಾದ್ದು ಎಂದು ಭಾವಿಸುತ್ತಾನೆ. ನಮಗೆ ಇರುವ ಜ್ಞಾನ ಮತ್ತು ಅದರ ರೂಪಗಳು ಹೇಗೆ ನಮಗೆ ಸಮಾಜವನ್ನು ನೋಡಲು ಸಹಾಯವನ್ನು ಮಾಡುತ್ತದೆ ಎಂದು ಹೇಳುತ್ತಾನೆ. ಒಂದು ಸಮಾಜ ಮತ್ತು ಅದರ ರಚನೆಗಳು ಯಾವ ರೀತಿಯಲ್ಲಿ ಇರುತ್ತದೆಯೋ ಅದರ ಸ್ವರೂಪಕ್ಕೆ ಅನುಸಾರವಾಗಿ ಭಿನ್ನವಾದ ಜ್ಞಾನಗಳು ರೂಪಿಸಲ್ಪಡುತ್ತವೆ. ಜ್ಞಾನ ಎನ್ನುವುದು ಈ ಅರ್ಥದಲ್ಲಿ ನಮಗೆ ಒಂದು ನಿರ್ದಿಷ್ಟವಾದ ಚೌಕಟ್ಟು ಕೂಡಾ ಆಗಿದೆ. 1930ರಲ್ಲಿ ಗ್ರಾಂಶಿಯು ಬರೆದುದು ಅನಂತರ ಬೇರೆ ಬೇರೆ ತಾತ್ವಿಕ ನೆಲೆಯನ್ನು ಪಡೆದುಕೊಂಡಿರುವುದು ನಿಜ. ಈ ದೃಷ್ಟಿಯಿಂದ ನಮಗೆ

ಈವತ್ತು ಕೂಡಾ ಗ್ರಾಂಶಿಯು ಅತ್ಯಂತ ಅಗತ್ಯ, ನಮ್ಮ ಆಧುನಿಕ ರಾಜಕೀಯ ಸನ್ನಿವೇಶದಲ್ಲಿಯೂ ನಮಗೆ ಅವನು ಮುಖ್ಯನಾಗಿದ್ದಾನೆ. ಒಂದು ಬಗೆಯಲ್ಲಿ ಮಾತುಗಳನ್ನು ಮುಚ್ಚಿ ಹಾಕಲಾಗಿದೆ. ಅದೂ ಅತ್ಯಂತ ವ್ಯವಸ್ಥಿತವಾಗಿ.

ಗ್ರಾಂಶಿಯು ಇಟಲಿಯವನು. (22-1-1891 ರಿಂದ 27-4-1937) ಮಾರ್ಕ್ಸವಾದಿ ಚಿಂತಕ. ಪತ್ರಕರ್ತ. ಬರಹಗಾರ. ರಾಜಕರಣಿ. ಕಮ್ಯುನಿಸ್ಟ್ ಪಕ್ಷದ ಸಸ್ಯನಾಗಿದ್ದ. ಮುಸಲೊನಿಯ ಪ್ಯಾಸಿಸ್ಟ್ ಆಳ್ವಿಕೆಯನ್ನು ಗ್ರಾಂಶಿಯು ವಿರೋಸಿದ್ದ. ಅವನು ಜೈಲಿನಲ್ಲಿ ಬರೆದ ನೋಟು ಬುಕ್ಕುಗಳಿ ಹೆಚ್ಚು 3000 ಸಾವಿರ ಪುಟಗಳು ಇವೆ. ಗ್ರಾಂಶಿಯ ಕುರಿತು ಗೆಳೆಯರಾದ ಫಣಿರಾಜ್ ಅತ್ಯಂತ ಮಹತ್ವದ ಕೃತಿಯನ್ನು ಬರೆದಿದ್ದಾರೆ.

ಈ ಕೃತಿಯಲ್ಲಿ ನಾನು ಗ್ರಾಂಶಿಯ ಚಿಂತನೆಗಳ ಹಿಂದೆ ಇರುವ ಪ್ರಮುಖ ಪರಿಭಾಷೆಗಳನ್ನು ಚರ್ಚೆ ಮಾಡಿದ್ದೇನೆ. ಆದರೆ ಇದು ಸಂಪೂರ್ಣ ಎಂದು ಅರ್ಥವಲ್ಲ.

ವಂದನೆಗಳು:

ಡಾ. ಭಂಡಾರಿ, ಕುಲಪತಿಯವರಾದ ಪ್ರೊ. ವೀರಭದ್ರಪ್ಪ, ಕುಲಸಚಿವರಾದ ಎಸ್.ಎಸ್ ಪಾಟೀಲ್, ಕೆವಿ,ಯನ್. ಮೇಟಿ, ಅವಿನಾಶ್, ಶಿವಾನಂದ ಕೆಳಗಿನ ಮನೆ, ಬರಗೂರು, ಆರ್ಜಿಹಳ್ಳಿ ನಾಗರಾಜ್, ಪುಷ್ಪ, ನಾಗಾರ್ಜುನ, ಕವಿತಾ ರೈ, ಫಣಿರಾಜ್, ಮಯ್ಯ, ಮತ್ತು ನನ್ನ ವಿದ್ಯಾರ್ಥಿಗಳಿಗೆ,

ಸಬಿತಾ, ನಹುಷ ಮತ್ತು ನಿಯತಿಯರಿಗೆ;

ಕರಡು ತಿದ್ದಿದ ನವೀನ, ಪಾಂಡುರಂಗ, ಸುನಿಲ,ಅಭಿಲಾಷ, ಪ್ರವೀಣ, ಕೃಷ್ಣ ಮೂರ್ತಿಯವರಿಗೆ, ಬೆರಳಚ್ಚು ಮಾಡಿದ ಶ್ರೀಮತಿ ಅರ್ಪುದ ಮೇರಿಮ ಪ್ರಕಟಿಸುತ್ತಿರುವ ರಚನ ಪ್ರಕಾಶನದ ಓಂಕಾರಪ್ಪರಿಗೆ ಮತ್ತು ನಿಮಗೆ-

ಕೇಶವ ಶರ್ಮ.ಕೆ.

ಪರಿವಿಡಿ

1	ಚಾರಿತ್ರಿಕತೆ ಮತ್ತು ತಾತ್ವಿಕತೆ:	1
2	ಗ್ರಾಂಶಿಯಲ್ಲಿ ಅಧಿಕಾರ ಮತ್ತು ಅದರ ಸೂಕ್ಷ್ಮತೆಗಳು	3
3	ನಿರ್ಧಾರಾತ್ಮಕವಾದ ಏಕ ಕೇಂದ್ರಿತ ಆರ್ಥಿಕ ಚಟುವಟಿಕೆ	9
4	ರಾಜಕೀಯ ವರ್ಗ	10
5	ಪ್ರಜ್ಞೆ	10
6	ಹಳೆಯದು ಮತ್ತು ಹೊಸತು	11
7	ತಾತ್ವಿಕತೆ ಮತ್ತು ಸಾಮಾಜಿಕ ಆವಶ್ಯಕತೆ	12
8	ಹೋರಾಟಗಳು	12
9	ಪ್ರಜ್ಞೆ	13
10	ಪರಕೀಯತೆ	13
11	ಕಲೆ ಮತ್ತು ಅದರ ಸ್ವಾಯತ್ತತೆ	14
12	ವ್ಯಕ್ತಿ ಮತ್ತು ಅವನ ಸ್ವಾತಂತ್ರ್ಯ	16
13	ಜ್ಞಾನ	16
14	ಸಾಂಸ್ಕೃತಿಕ ಪ್ರಾಬಲ್ಯ	17
15	ಪ್ರತಿ ಪ್ರಾಬಲ್ಯ	19
16	ವಿಪತ್ತು ಮತ್ತು ವಿಜಯ	21
17	ವ್ಯಕ್ತಿ ಮತ್ತು ಸಂಬಂಧಗಳು	21
18	ವ್ಯಕ್ತಿ	22
19	ಮನುಷ್ಯ ಮತ್ತು ಮನುಷ್ಯತ್ವ	22
20	ಹೆಜೆಮನಿ	23
21	ಯಜಮಾನಿಕೆ	24
22	ಸಾಮಾನ್ಯ ಸಂವೇದನೆ	27
23	ವಸ್ತ್ರಗಳು	29

24	ನಾಗರಿಕ ಸಮಾಜ	30
25	ಮೇಲ್‌ರಚನೆ:	31
26	ರಾಷ್ಟ್ರ – ಜನಪ್ರಿಯತೆ	32
27	ರಾಷ್ಟ್ರೀಯ ಮತ್ತು ಜನಪ್ರಿಯತೆ ಕುರಿತಾದ ಕೆಲವು ಪ್ರಶ್ನೆಗಳು	35
28	ಹೆಜಮನಿ	35
29	ಹೆಜೆಮನಿ ಮತ್ತು ಅದರ ಸ್ವರೂಪ:	36
30	ಹೆಜೆಮನಿಯ ರಾಜಕೀಯ ಮತ್ತು ತಾತ್ವಿಕ ಆಯಾಮಗಳು:	36
31	ಬಲಾತ್ಕಾರ ಮತ್ತು ಒಪ್ಪಿಗೆಗಳು	38
32	ಬಲಾತ್ಕಾರ ಮತ್ತು ಅದರ ವಿಸ್ತರಣೆ ಹಾಗೂ ಮಿತಿಗಳು	41
33	ಸಾಮಾನ್ಯ ತಿಳುವಳಿಕೆ ಮತ್ತು ಒಳ್ಳೆಯ ಗುಣ	41
34	ಅನನ್ಯತೆ	42
35	ಅತ್ಯುತ್ತಮ	43
36	ಯುವ ಉಪಸಂಸ್ಕೃತಿ	45
37	ಯಜಮಾನಿಕೆ, ಪ್ರಾತಿನಿಧಿಕತೆ ಮತ್ತು ಸಂಸ್ಥೆಗಳು	47
38	ಸಂಧಾನ ಮತ್ತು ಸ್ವಯಂಬಲ	48
39	ಬುದ್ಧಿಜೀವಿಗಳು	49
40	ಗ್ರಾಂಶಿಯಲ್ಲಿ ರಾಜಕೀಯ ಮತ್ತು ಬುದ್ಧಿಜೀವಿಗಳ ಕುರಿತು ಚರ್ಚೆ:	52
41	ಬುದ್ಧಿಜೀವಿಗಳು	54
42	ಬುದ್ಧಿಜೀವಿಗಳು ಮತ್ತು ಅವರ ಚಹರೆಗಳು	59
43	ಸಾಂಪ್ರದಾಯಿಕ ಜ್ಞಾನಿಗಳು	60
44	ಕ್ರಾಂತಿ ಮತ್ತು ಜಡತೆ	61
45	ತಾತ್ವಿಕತೆ	61
46	ಚರಿತ್ರೆ	67
47	ಸಂಸ್ಕೃತಿ ಅಧ್ಯಯನ	72
48	ಫ್ರಾಂಕ್‌ಫ್ರಾರ್ಕ್ಟ್ ಸ್ಕೂಲ್	73
49	ಫೋಸ್ಟ್ ಫೋರ್ಡಿಸಂ	74
50	ವ್ಯಕ್ತಿ	75
51	ದೇಹ ಮತ್ತು ಮನಸ್ಸು	77
52	ಚರಿತ್ರೆ	81
53	ಹೊಸತು ಮತ್ತು ಹಳೆಯದು	84

54 ಯಜಮಾನಿಕೆ ಮತ್ತು ಕಾರ್ಮಿಕರ ನಡುವಣ ಸಂಬಂಧ 85
55 ಸಬಾಲ್ಟ್ರನ್ ಅಧ್ಯಯನ 86
56 ಭಾಷೆ 87
57 ಕ್ರೋಸೆಯ ತತ್ವಜ್ಞಾನದ ತುಣುಕುಗಳು 88
58 ಉತ್ಪಾದನೆ ಮತ್ತು ಪ್ರಭುತ್ವ: 88
59 ಸಾಮಾನ್ಯರು ಮತ್ತು ಬುದ್ಧಿಜೀವಿಗಳು 88
60 ಬುದ್ಧಿಜೀವಿಗಳು ಮತ್ತು ಅವರ ಸ್ವರೂಪ 89
61 ಬುದ್ಧಿಜೀವಿಗಳ ಮಿತಿಗಳು 94
62 ನವೀನ ಮಾದರಿಯ ಬುದ್ಧಿಜೀವಿಗಳು 96
63 ನಾಗರಿಕ ಬುದ್ಧಿಜೀವಿಗಳು ಮತ್ತು ಗ್ರಾಮೀಣ ಬುದ್ಧಿಜೀವಿಗಳು 98
64 ಗ್ರಾಂಶಿಯಲ್ಲಿ ಶಿಕ್ಷಣ 102
65 ಶಿಕ್ಷಣ ಮತ್ತು ಸಂಸ್ಕೃತಿಗಳ ಸಂಘಟನೆಗಳು : 105
66 ಶೈಕ್ಷಣಿಕ ಸಂಹಿತೆಗಳು ಮತ್ತು ಅದರ ನಿಯಮಗಳು 108
67 ಆಧುನಿಕ ಅರಸು ಕುಮಾರರು 112
68 ಮೆಕೆವೆಲ್ಲಿ ಮತ್ತು ಮಾರ್ಕ್ಸವಾದ 117

ಭಾಗ–2

69 ಯಜಮಾನಿಕೆ ಮತ್ತು ಸಾಂಸ್ಕೃತಿಕ ಪರಂಪರೆ 118
70 ಥಿಯಾಡರ್ ಅಡರ್ನೊ: 119
71 ಸಂಸ್ಕೃತಿ ಮತ್ತು ಕಾರ್ಮಿಕರ ಹೋರಾಟ 119
72 ನಡವಳಿಕೆ 123
73 ಸನ್ನಿವೇಶ 125
74 ವಸ್ತುನಿಷ್ಠ 125
75 ಚರಿತ್ರೆ ಮತ್ತು ಜ್ಞಾನ 126
76 ಚರಿತ್ರೆ ಮತ್ತು ಕಲೆಯ ಪ್ರಶ್ನೆಗಳು 127
77 ಸತ್ಯ ಮತ್ತು ಚರಿತ್ರೆ 127
78 ಬದ್ಧತೆ ಮತ್ತು ಕಲಾಕೃತಿ ಹಾಗೂ ಅದರ ಇತರ ಚಟುವಟಿಕೆಗಳು 128
79 ಕಲೆ ಸಮಾಜ ಮತ್ತು ಸೌಂದರ್ಯಶಾಸ್ತ್ರ 130
80 ಚರಿತ್ರೆ ಮತ್ತು ಕಲಾತ್ಮಕವಾದ ಅಭಿವ್ಯಕ್ತಿ 135
81 ವಿಚಾರವಾದ ಮತ್ತು ಆಶಯ 136
82 ವಿಶ್ವಾತ್ಮಕ ಮತ್ತು ರಾಷ್ಟ್ರೀಯತೆ 137

83 ಜ್ಞಾನ 138
84 ಪುನರುಜ್ಜೀವನ ಚಳುವಳಿ 139
85 ಆಲೋಚನೆ ಮತ್ತು ಸೃಜನಶೀಲತೆ 140
86 ನಾಗರಿಕತೆ ಮತ್ತು ವಿನಿಮಯ ಮೌಲ್ಯ 141
87 ಪ್ರಾತಿನಿಧೀಕರಣ ಮತ್ತು ನೈಜಕಲೆ 143
88 ನೈಜ ಕವಿತೆ 147
89 ಪುನರುಜ್ಜೀವನ ಮತ್ತು ವಸ್ತುನಿಷ್ಠತೆ 148
90 ಗಿಪುನರುಜ್ಜೀವನ ಕಾಲ ಮತ್ತು ಜ್ಞಾನ ಹಾಗೂ ದ್ವಂದ್ವಾತ್ಮಕತೆ 149
91 ಪುನರುಜ್ಜೀವನ ಮತ್ತು ಹೊಸ ಜೀವನದ ಕ್ರಮ 150
92 ನಿಸರ್ಗವಾದದ ನಿಲುವು: 151
93 ಕಾರಣ 152
94 ತತ್ವಜ್ಞಾನ ಮತ್ತು ಅದರ ಸಾಧ್ಯತೆಗಳು 152

ಚಾರಿತ್ರಿಕತೆ ಮತ್ತು ತಾತ್ವಿಕತೆ:

ತಾತ್ವಿಕತೆಯನ್ನು ಗ್ರಾಂಶಿಯು ಅತ್ಯಂತ ವಿಶಿಷ್ಟವಾಗಿ ಹೇಳಿದ್ದಾನೆ. ಸಂವೇದನೆ ಮತ್ತು ತಾತ್ವಿಕತೆಗೆ ಸಂಬಂಧವು ಇದೆ ಎನ್ನುವುದು ಅವನ ಮೊದಲ ವಾದ. ಹಾಗೆ ನೋಡಿದರೆ ನಾವು ಮತ್ತೆ ಮತ್ತೆ ನೆನಪು ಮಾಡಿಕೊಳ್ಳಬೇಕಾದ ಲೇಖಕರಲ್ಲಿ ಗ್ರಾಂಶಿಯು ಒಬ್ಬ. ಅವನು ತನ್ನ ನೋಟ್ ಬುಕ್‌ನಲ್ಲಿ ತಾನು ಹೇಗೆ ಫ್ರೆಂಚ್‌ನ ಹದಿನೆಂಟನೆಯ ಶತಮಾನದ ಭೌತಿಕವಾದದ ಪ್ರಭಾವವನ್ನು ಅವನು ಒಪ್ಪಿಕೊಂಡಿದ್ದೇನೆ ಎಂದು ಹೇಳಿದ್ದಾನೆ. ಫ್ರೆಂಚ್ ಭೌತಿಕವಾದಿ ನಿಲುವು ಬರೀ ಭೌತಿಕವಾದಿ ನಿಲುವು ಮಾತ್ರವೇ ಅಲ್ಲ. ಅದರಲ್ಲಿ ಮುಖ್ಯವಾಗಿ ವಿಜ್ಞಾನದ ಪ್ರಭಾವವನ್ನು ನಾವು ಕಾಣುತ್ತೇವೆ. ಅದರ ವಿಶ್ಲೇಷಣೆಯ ಕ್ರಮವು ಅನ್ವಯಿಕ ವಿಜ್ಞಾನವೂ ಆಗಿದೆ. ಅಂದರೆ ಅದು ಆಲೋಚನೆ ಮತ್ತು ಅದರ ಹಿಂದೆ ಇರುವ ತರ್ಕವನ್ನು ಯೋಚಿಸುತ್ತದೆ. ಗ್ರಾಂಶಿಯು ನಮಗೆ ಆಲೋಚನೆಯ ವಿಶ್ಲೇಷಣೆ ಎಂದು ತಿಳಿಸುತ್ತಾನೆ. ಮೂಲ ಆಲೋಚನೆ ಮತ್ತು ಅದರ ಹುಡುಕಾಟವನ್ನು ಅವನು ಮುಖ್ಯವೆಂದು ಪರಿಗಣಿಸುತ್ತಾನೆ. ಆಲೋಚನೆ ಮತ್ತು ಅದರ ಅಂಶಗಳು ನಮ್ಮ ಸಂವೇದನೆಯನ್ನು ಬಿಟ್ಟು ಇರುವುದೂ ಇಲ್ಲ. ಅಂದರೆ ಅವನು ಹೇಳುವುದು ಸಂವೇದನೆಗೂ ಆಲೋಚನೆಗೂ ತಾತ್ವಿಕತೆಗೂ ಒಂದು ಸಂಬಂಧವು ಇದೆ. ವಾಸ್ತವವಾಗಿ ಟ್ರೆಸಿಯು ಹೇಳುವ ಮಾತನ್ನು ಇಲ್ಲಿ ಉಲ್ಲೇಖಿಸಬೇಕು: ರಾಜಕೀಯವಾಗಿ ನಮಗೆ ತಾತ್ವಿಕತೆ ಎನ್ನುವುದು ಅತ್ಯಂತ ಮುಖ್ಯವಾಗಿದೆ. ರಾಜಕೀಯ ಮತ್ತು ಸಾಮಾಜಿಕವಾದ ಕಾರಣದಿಂದ ತಾತ್ವಿಕ ದೃಷ್ಟಿಯನ್ನು ಹೊಂದುತ್ತೇವೆ. ಅದರ ಹೊರತು ನಾವು ಸಮಾಜವನ್ನು ವೈಜ್ಞಾನಿಕವಾಗಿ ವಿಶ್ಲೇಷಣೆಯನ್ನು ಮಾಡಲಾರೆವು. ವಿಜ್ಞಾನವು ನಮಗೆ ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಪಲ್ಲಟಕ್ಕೆ ಕಾರಣವೂ ಆಯಿತು. ವಿಜ್ಞಾನವು ನಮಗೆ ಹೊಸದಾದ ಅವಕಾಶವನ್ನು ಕಲ್ಪಿಸಿತು. ಅದರಿಂದ ನಾವು ಹೊಸದಾದ ಪ್ರಶ್ನೆಗಳನ್ನು ಕೇಳಿದೆವು. ಮನುಷ್ಯನು ಸ್ವತಂತ್ರನೇ? ಹೌದು ಎಂದಾದರೆ ಎಷ್ಟರಮಟ್ಟಿಗೆ ಅವನು ಸ್ವತಂತ್ರನಾಗಿದ್ದಾನೆ? ಮನುಷ್ಯನು ಹೇಗೆ ಆಲೋಚನೆಯನ್ನು ಮಾಡುತ್ತಾನೆ ಮತ್ತು ಅದರ ಕಾರಣವು ಏನು ಎನ್ನುವುದನ್ನು ವಿಜ್ಞಾನವು ನಮಗೆ ತಿಳಿಸಿಕೊಟ್ಟಿತು.

ವಿಜ್ಞಾನವು ನಮಗೆ ಹೊಸದಾದ ಸನ್ನಿವೇಶವನ್ನು ಸೃಷ್ಟಿಸಿಕೊಟ್ಟಿತು. ಸಮಾಜದಲ್ಲಿ ಸಾಂಪ್ರದಾಯಿಕ ಜನರಿಗೆ ಇದ್ದ ಅವಕಾಶಕ್ಕಿಂತ ಹೆಚ್ಚಿನ ಅವಕಾಶವನ್ನು ನಮಗೆ ಅದು ಕೊಟ್ಟಿತು. ಅವರಿಗೆ ಇದ್ದ ಶಕ್ತಿಯು ಒಂದು ಬಗೆಯದು. ಆದರೆ ನವೀನ ಮನುಷ್ಯರಿಗೆ ಹೆಚ್ಚು ಅವಕಾಶವು ಸಿಕ್ಕಿತು. ತಂತ್ರಜ್ಞಾನವು ಸಿಕ್ಕಿತು. ವಿಜ್ಞಾನದಿಂದ ನಮಗೆ ಹೊಸದಾದ ಆಲೋಚನೆಯು ದೊರೆಯಿತು. ವಿಜ್ಞಾನವನ್ನು ಜನರು ಹೇಗೆ ಬಳಸಿಕೊಳ್ಳುತ್ತಾರೆ ಎನ್ನುವುದು ಬೇರೆ ಪ್ರಶ್ನೆ. ವಿಜ್ಞಾನವನ್ನು ಮತ್ತು ಅದರ ಪರಿಣಾಮವನ್ನು ಮೊದಲೇ ಊಹಿಸುವುದು ಅಶಕ್ಯವಾಗಿತ್ತು. ಗ್ರಾಂಶಿಯು ಈ ಪಲ್ಲಟವನ್ನು ಗಮನಿಸಿದ್ದ. ಚರಿತ್ರೆಯು ಹೇಗೆ ಬದಲಾಗುತ್ತದೆ ಎನ್ನುವುದು ಅವನಿಗೆ ಗೊತ್ತಾಗಿತ್ತು. ವಿಜ್ಞಾನವು ಹೇಗೆ ನಮ್ಮ ಆಲೋಚನೆಯನ್ನು ಬದಲಿಸುತ್ತದೆ ಮತ್ತು ಅದರ ಮೂಲಕ ಹೇಗೆ ಒಂದು ತಾತ್ವಿಕತೆಯನ್ನು ಹುಟ್ಟು ಹಾಕುತ್ತದೆ ಎಂದು ಗ್ರಾಂಶಿಯು ಗ್ರಹಿಸಿದ್ದರಿಂದಲೇ ಅವನು ತಾತ್ವಿಕತೆಯನ್ನು ಒಂದು ಸ್ಥಳ ಮತ್ತು ಕಾಲದ ಆಧಾರದ ಮೂಲಕವೇ ಗ್ರಹಿಸುತ್ತಾನೆ. ಚರಿತ್ರೆ ಮತ್ತು ತಾತ್ವಿಕತೆಯು ಹೇಗೆ ಜೊತೆಯಲ್ಲಿ ಹೋಗುತ್ತವೆ ಎನ್ನುವುದು ಅವನಿಗೆ ಮುಖ್ಯ. ಚರಿತ್ರೆಯಲ್ಲಿ ತಾತ್ವಿಕತೆಯು ತರ್ಕ ರಹಿತವಾದ್ದು ಎಂದು ಹೇಳಲು ಬರುವುದಿಲ್ಲ. ಅದರ ರೂಪವು ಆಗುತ್ತದೆ. ಅಂದರೆ ಅದು ಏಕಾ ಏಕಿ ನಿರ್ಧಾರವಾಗುವ ಸಂದರ್ಭವಲ್ಲ. ಅದು ಚಲನೆ. ಅದಕ್ಕೆ ಒಂದು ಪ್ರತ್ಯೇಕವಾದ ಒಂದು ನಿರ್ದಿಷ್ಟವಾದ ಗುಣವು ಇರುತ್ತದೆ ಎಂದು ಹೇಳುವುದು ಅಸಾಧ್ಯ. ಅದಕ್ಕೆ ಅದರದೇ ಆದ ಒಂದು ಸಾಮಾಜಿಕ ಮತ್ತು ರಾಜಕೀಯವಾದ ಸಂಬಂಧವೂ ಇರುತ್ತದೆ. ಈ ದೃಷ್ಟಿಯಿಂದ ಭೌತವಾದಿ ಚಿಂತನೆಯು ತಾತ್ವಿಕತೆಗೆ ಅತ್ಯಂತ ಮಹತ್ವದ ಕೊಡುಗೆಯನ್ನು ಕೊಟ್ಟಿದೆ. ಅದನ್ನು ರಾಜಕಾರಣವೆಂಬ ಮೇಲುರಚನೆಯ ಜೊತೆಗೆ ನಾವು ನೋಡಬೇಕಾಗುತ್ತದೆ. ಪ್ರಿಸನ್ ನೋಟ್ಬುಕ್ ಕೃತಿಯಲ್ಲಿ ಗ್ರಾಂಶಿಯು ನಮಗೆ ಈ ದೃಷ್ಟಿಯಿಂದ ಕೆಲವು ಒಳನೋಟವನ್ನು ಕೊಡುತ್ತಾನೆ. ರಾಜಕಾರಣ ಮತ್ತು ಚರಿತ್ರೆ ಎರಡೂ ಅವನಿಗೆ ಅತ್ಯಂತ ಅಗತ್ಯ. ಆದರೆ ಅದಕ್ಕೆ ಒಂದು ನಿಯಮವು ಇರುತ್ತದೆ. ವಿಜ್ಞಾನದಲ್ಲಿ ಆಲೋಚನೆ ಮತ್ತು ಅದರ ಸ್ವರೂಪವು ಒಂದು ಥರ ಇರುತ್ತದೆ. ವಿಜ್ಞಾನದ ಪ್ರಕಾರ ಆಲೋಚನೆ ಮತ್ತು ಅದರ ಚಹರೆಗಳು ಒಂದು ಬಗೆಯವು. ಆದರೆ ಅದನ್ನೇ ನಾವು ಮಾನವಿಕಗಳಲ್ಲಿ ಆಲೋಚನೆ ಎಂದು ಹೇಳುವಾಗ ಬೇರೆ ಥರ ಹೇಳುತ್ತೇವೆ. ಇದನ್ನು ಹೀಗೆಯೂ ಹೇಳಬಹುದು: ಒಬ್ಬ ವ್ಯಕ್ತಿಯು ಹೇಗೆ ತನ್ನ ಆಲೋಚನೆಯನ್ನು ವ್ಯಕ್ತಮಾಡುತ್ತಾನೆಯೋ ಅದು ತಾತ್ವಿಕ ರೂಪವನ್ನು ಪಡೆಯುತ್ತದೆ. ಮೊದಲು ಚರಿತ್ರೆಯಲ್ಲಿ ತಾತ್ವಿಕತೆಯು ಹೇಗೆ ಭೌತಿಕವಾದ ರೂಪವನ್ನು ಹೊಂದಿದ್ದವೋ ಅದು ಅನಂತರ ರಾಜಕೀಯ ಮತ್ತು ಸಾಂಸ್ಕೃತಿಕವಾದ ಅರ್ಥವನ್ನು ಪಡೆದುಕೊಂಡಿತು. ತಾತ್ವಿಕತೆ ಎನ್ನುವುದು ಒಂದು ಪರಿಕಲ್ಪನೆಯೂ ಹೌದು.

ಅದೇ ಹೊತ್ತಿಗೆ ಅದು ಸೈದ್ಧಾಂತಿಕವೂ ಆಗಿದೆ. ಆದ್ದರಿಂದ ಗ್ರಾಶಿಯಲ್ಲಿ ತಾತ್ವಿಕತೆಯೆ ಭಿನ್ನವಾದ ಚರ್ಚೆಯನ್ನು ಒಳಗೊಳ್ಳುತ್ತದೆ. ತಾತ್ವಿಕತೆಗೆ ಒಂದು ನಿಜವಾದ ಪದವೆಂದರೆ ನಿಯಮಬದ್ಧವಾದ ನಿರೂಪಣೆ. ಅದನ್ನು ಅಶಾಸ್ತ್ರ ಮಾಡಬೇಕಾದ ಅಗತ್ಯವು ಇಲ್ಲ. ಅದಕ್ಕೆ ಒಂದು ಕ್ರಿಯಾತ್ಮಕವಾದ ರೂಪವೂ ಇದೆ ಎಂದು ಗ್ರಾಂಶಿಯು ನಂಬುತ್ತಾನೆ. ಸಮಾಜ ಮತ್ತು ಅದರ ಅತ್ಯಂತ ಸಂಕೀರ್ಣವಾದ ರೂಪವು ತಾತ್ವಿಕತೆಯು ಆಗುತ್ತದೆ ಎಂದು ಅವನು ಹೇಳುತ್ತಾನೆ. ಹಾಗೆಂದು ತಾತ್ವಿಕತೆಯು ಯಾವತ್ತೂ ಕ್ರಿಯಾರಹಿತವಾಗಿರುವುದೂ ಇಲ್ಲ. ಅದು ನಮ್ಮ ನಮ್ಮ ಮನೋಸ್ಥಿತಿಯನ್ನು ಹೇಳುತ್ತದೆ. ಒಬ್ಬ ಸಾಮಾನ್ಯ ವ್ಯಕ್ತಿಯು ತಾನು ಯಾವುದನ್ನು ಮಾಡುತ್ತಿದ್ದೇನೆ ಎಂದು ತಿಳಿದಿರುತ್ತಾನೆ. ಆದರೆ ಅವನಿಗೆ ಸೈದ್ಧಾಂತಕವಾದ ಅರಿವಿರಬೇಕು ಎಂದೇನೂ ಇಲ್ಲ. ಅವನು ಕೆಲಸವನ್ನು ಮಾಡುತ್ತಾನೆ. ಅವನು ತನ್ನ ಕೆಲಸವನ್ನು ಮಾಡುವ ಅರಿವನ್ನು ಹೊಂದುತ್ತಾನೆ ಎನ್ನುವುದು ಒಂದು ಅಂಶವಾದರೆ ಮತ್ತೊಂದು ಕಡೆಯಿಂದ ಅವನು ತಾನು ಮಾಡುವ ಕೆಲಸ ಮತ್ತು ಅದರ ಮೂಲಕ ಪರಿವರ್ತನೆ ಮಾಡುವುದನ್ನು ಅರ್ಥಮಾಡಿಕೊಳ್ಳುತ್ತಾನೆ. ಗ್ರಾಂಶಿಯು ಒಂದು ಕಡೆಗೆ ತತ್ವಜ್ಞಾನದ ಜಾನಪದ ಎಂದು ಹೇಳುತ್ತಾನೆ. ಅದು ಸಾಮಾಜಿಕವಾಗಿ ಅತ್ಯಂತ ಮಹತ್ವದ್ದು. ನೈತಿಕತೆ, ಧರ್ಮ, ಆಧ್ಯಾತ್ಮ ಎಲ್ಲವೂ ನಮ್ಮ ಪ್ರಜ್ಞೆಯನ್ನು ರೂಪಿಸುತ್ತವೆ ಎಂದು ಮಾರ್ಕ್ಸ್ ಹೇಳುತ್ತಾನೆ. ಇದನ್ನು ಇಲ್ಲಿ ಯಾಕೆ ಹೇಳಲಾಯಿತು ಎಂದರೆ ನಮ್ಮ ಆಧುನಿಕತೆಯ ಪರಿಸ್ಥಿತಿಯನ್ನು ನಾವು ನಮ್ಮದೇ ತಾತ್ವಿಕತೆ ಮೂಲಕವೇ ಅರ್ಥಮಾಡಿಕೊಳ್ಳುವುದು ಅತ್ಯಂತ ಸೂಕ್ತವಾಗಿದೆ. ಗ್ರಾಂಶಿಯಲ್ಲಿ ಯಜಮಾನಿಕೆಗೆ ಮತ್ತು ತಾತ್ವಿಕತೆಗೆ ಒಂದು ಸಂಬಂಧವು ಇದೆ.

ಆಧುನಿಕ ಸಂದರ್ಭದಲ್ಲಿ ನಾವು ವಿಮರ್ಶೆಯ ಬಗ್ಗೆ ಹೆಚ್ಚು ಮಾತಾಡುತ್ತಿದ್ದೇವೆ. ನಾವು ಏನೇ ಮಾತಾಡಿದರೂ ಇವತ್ತು ನಮ್ಮ ಸಾಹಿತ್ಯ ಮತ್ತು ಅದರ ಸಿದ್ಧಾಂತಗಳು ಸಾಹಿತ್ಯವನ್ನು ಒಂದು ವಲಯದಲ್ಲಿ ತರುತ್ತದೆ. ಲುಕಾಕ್ಸ್ ತನ್ನ ಸಾಹಿತ್ಯ ಮತ್ತು ಸಿದ್ದಾಂತದ ಚರ್ಚೆಯ ಸಂದರ್ಭದಲ್ಲಿ ಅಭಿವ್ಯಕ್ತಿ ಸಿದ್ಧಾಂತ ಮತ್ತು ಅದರ ಬೆಳವಣಿಗೆ ಹಾಗೂ ಅದರ ಪಲ್ಲಟವನ್ನು ಕುರಿತು ಹೇಳುತ್ತಾನೆ. ಆಧುನಿಕ ವಿಮರ್ಶೆಯು ಹೇಗೆ ಪ್ಯಾಸಿಸಂ ಎನ್ನುವುದನ್ನು ವಿರೋಧಿಸಿತು ಎಂದು ಅವನು ವಿವರಿಸುತ್ತಾನೆ.

ಗ್ರಾಂಶಿಯಲ್ಲಿ ಅಧಿಕಾರ ಮತ್ತು ಅದರ ಸೂಕ್ಷ್ಮತೆಗಳು

ವಾಸ್ತವವಾಗಿ ಗ್ರಾಂಶಿಯು ಇದನ್ನು ಅತ್ಯಂತ ಸೂಕ್ಷ್ಮವಾದ ಸಂಗತಿಯೆಂದು ಹೇಳುತ್ತಾನೆ. ನಮ್ಮ ಚರ್ಚೆಗಳ ಹಿಂದೆ ಬೇರೆ ಬೇರೆ ಒತ್ತಡಗಳೂ ಇರುತ್ತವೆ.

ಹಾಗೆಯೇ ಕೆಲವೊಮ್ಮೆ ರಾಜಕೀಯ ಆಸಕ್ತಿಗಳೂ ಇರುತ್ತವೆ. ಚರ್ಚೆಗಳಿಗೆ ಇರುವ ರಾಜಕೀಯ ಆಯಾಮವು ಒಂದು ಅಧಿಕಾರದ ವಿಭಿನ್ನವಾದ ಒಂದು ನಿಲುವನ್ನು ಹೇಳುತ್ತದೆ. ಅದನ್ನು ನಾವು ಯಜಮಾನಿಕೆಯ ನಿಲುವು ಎಂದೂ ಹೇಳಬಹುದು. ಯಾವುದು ಒಂದು ದೇಶದಲ್ಲಿ ಯಜಮಾನಿಕೆಯನ್ನು ಸೂಚಿಸುತ್ತದೆಯೋ ಅದು ತನ್ನ ಹಿತಾಸಕ್ತಿಗಾಗಿ ತನ್ನದೇ ಆದ ಮೌಲ್ಯವನ್ನು ಉಳಿದವರ ಮೇಲೆ ಹೇರುತ್ತದೆ. ಆದರೆ ಸಾಮಾನ್ಯ ಮನುಷ್ಯರು ರಾಜಕಾರಣವನ್ನು ಮತ್ತು ಅಧಿಕಾರದ ಕೇಂದ್ರವನ್ನು ನೋಡುವ ಕ್ರಮಗಳು ಬೇರೆಯಾಗುತ್ತದೆ. ಅವರು ಯಾವುದೇ ವಿಮರ್ಶೆಯನ್ನು ಮಾಡುವದಿದ್ದರೂ ಅದರ ನಿರೂಪಣೆಯು ಬೇರೆಯಾಗಿರುತ್ತದೆ. ಲೇಖಕರು ಮತ್ತು ಬುದ್ಧಿಜೀವಿಗಳು ರಾಜಕಾರಣವನ್ನು ನೋಡುವ ವಿಧಾನವು ಬೇರೆಯಾಗಿರುತ್ತದೆ. ಸಾಧಾರಣ ವರ್ಗದ ಜನರು ರಾಜಕಾರಣವನ್ನು ನೋಡುವ ಕ್ರಮದಲ್ಲಿ ವ್ಯತ್ಯಾಸವಿದೆ. ಅದನ್ನು ಇನ್ನೊಂದರ ಥರ ಹೇಳುವುದು ಸಾಧ್ಯವಿಲ್ಲ. ಯಾವುದೇ ವಾಗ್ವಾದ ಮತ್ತು ಚರ್ಚೆಯಲ್ಲಿ ಅತ್ಯಂತ ಮುಖ್ಯವಾಗಿ ಇರುವುದು ಒಂದು ಸಂಗತಿ: ಅದನ್ನು ನಾವು ಹೀಗೆ ಹೇಳಬಹುದು. ಮೌಖಿಕ ಶಕ್ತಿ ಮತ್ತು ವೈಯಕ್ತಿಕವಾದ ನಿರೂಪಣೆಗಳು. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ನಡೆಯುತ್ತಿರುವ ಚರ್ಚೆಗಳನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಇಬ್ಬರು ಚರ್ಚೆಯನ್ನು ಮಾಡುತ್ತಾರೆ ಎಂದರೆ ಅದರಲ್ಲಿ ಬರುವ ಚರ್ಚೆಗೆ ಮತ್ತು ಹೊರಗೆ ನಡೆಯುತ್ತಿರುವ ವಿದ್ಯಮಾನಕ್ಕೆ ಎಷ್ಟೋ ಸರ್ತಿ ಸಂಬಂಧವು ಇಲ್ಲದೆ ಹೋಗಬಹುದು. ಒಂಥರ ಅಸಂಗತವಾದ ನಾಟಕದಂತೆ ನಮಗೆ ಭಾಸವಾಗಬಹುದು. ಅಧಿಕಾರ ಎನ್ನುವುದು ಇರುವುದು ದೂರದರ್ಶನದ ಆಚೆಗೆ. ದೂರದರ್ಶನದಲ್ಲಿ ನಡೆಯುವ ಚರ್ಚೆಗಳು ಹೇಗೆ ಇರುತ್ತವೆ ಎಂದು ಪೀಟರ್ ಲಂಟ್ ಹೀಗೆ ಹೇಳುತ್ತಾನೆ: ಅದರಲ್ಲಿ ಭಾಗವಹಿಸುವವರು ಒಂದು ದೃಷ್ಟಿಯಿಂದ ಜನರ ಪ್ರತಿನಿಧಿಗಳಂತೆ ಕಾಣುಸುತ್ತಾರೆ. ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಾರೆ. ರಾಜಕಾರಣಿಗಳು ಮತ್ತು ರಾಜಕೀಯವನ್ನು ಹೇಳುವಾಗ ಅವರಲ್ಲಿ ಒಂದು ಅಧಿಕೃತತೆಯು ಕಾಣುತ್ತದೆ. ಸಂವಹನದ ದೃಷ್ಟಿಯಿಂದ ಅವರಿಗೆ ಒಂದು ಅವಕಾಶವೂ ಸಿಕ್ಕಿದೆ. ಅದನ್ನು ಸಾಮಾಜಿಕ ಮತ್ತು ರಾಜಕೀಯ ಅವಕಾಶ ಎಂದೂ ಹೇಳಬಹುದು. ದೂರದರ್ಶನದಲ್ಲಿ ಕೇಳುಗರು ಇರುತ್ತಾರೆ. ಅವರು ನೋಟಕರ ಮೇಲೆ ಒಂದು ನಿಲುವನ್ನು ಪ್ರಸ್ತುತಪಡಿಸುತ್ತಾರೆ, ಆದರೆ ಒಂದು ಸಂಗತಿಯನ್ನು ನಾವು ನಮ್ಮ ಗಮನಕ್ಕೆ ತರುವುದು ಅತ್ಯಂತ ಆವಶ್ಯಕ. ಅಧಿಕಾರ ಎನ್ನುವುದು ಒಂದು ಎಳೆಯ ಸರವಲ್ಲ. ಅದರಲ್ಲಿ ಬೇರೆ ಬೇರೆ ಎಳೆಗಳು ಇರುತ್ತವೆ. ಅದರ ರೂಪವನ್ನು ನಾವು ಒಂದು ಮುಷ್ಟಿಯಲ್ಲಿ ಹಿಡಿಯಲು ಆಗುವುದಿಲ್ಲ ಎನ್ನುವುದು ಗ್ರಾಂಶಿಯವರಿಗೆ ಗೊತ್ತಿದೆ. ಅಧಿಕಾರಗಳ ನಡುವೆ ಒಂದು ಒಪ್ಪಂದವು ಇರುತ್ತದೆ.

ಮತ್ತೊಂದು ಕಡೆಯಿಂದ ಅದರಲ್ಲಿ ಸಹಮತವು ಇರುತ್ತದೆ. ಸಂವಹನದ ಸಾಮಾಜಿಕ ಅನ್ವಯಗಳು ಹೊಸದಾದ ಅವಕಾಶವನ್ನು ನಮ್ಮ ಮುಂದೆ ಇಡುತ್ತದೆ ಎನ್ನುವುದೂ ನಿಜ. ಸಂವಹನ ಮತ್ತು ಅದರ ಸಾಮಾಜಿಕ ಸಂಬಂಧಗಳನ್ನು ಇದು ಹೇಳುತ್ತದೆ. ಇದಕ್ಕೆ ಹೆಚ್ಚು ಮಹತ್ವವು ಇದೆ. ಗ್ರಾಂಶಿಯು ಸಮಾಜದ ಸ್ವರೂಪವನ್ನು ಹೇಳುವುದು ಮಾತ್ರವೇ ಅಲ್ಲ, ಅದರ ಜೊತೆಗೆ ಸಮಾಜದಲ್ಲಿ ಇರುವ ಅಧಿಕಾರ ಮತ್ತು ಅದರ ರೂಪಗಳನ್ನು ಹೇಳುತ್ತಾನೆ. ಯಜಮಾನಿಕೆಯನ್ನು ವಹಿಸುವ ಗುಂಪುಗಳು ಇನ್ನೊಂದು ಗುಂಪನ್ನು ಆಳಿಸಿಕೊಳ್ಳುವ ಗುಂಪಾಗಿ ಪರಿವರ್ತನೆ ಮಾಡುತ್ತದೆ. ಅವನಲ್ಲಿ ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗವು ಸ್ಪಷ್ಟವಾಗಿ ಕಾಣುತ್ತದೆ. ಆಳುವವರು ಮತ್ತು ಆಳಿಸಿಕೊಳ್ಳುವವರು ಎನ್ನುವುದು ಇಲ್ಲಿ ಖಚಿತ. ಇದನ್ನು ಸಂವಾದಿ ಎಂದು ಹೇಳಬೇಕಾಗಿಲ್ಲ. ಆದರೆ ಇದರ ನಿಯಮ ಎನ್ನುವುದು ಬೇರೆಯಾಗುತ್ತದೆ. ಆಳುವವರು ನಿರ್ದಿಷ್ಟವಾದ ಅಧಿಕಾರವನ್ನು ಹೊಂದಿರುತ್ತಾರೆ. ಇದರಲ್ಲಿಯೂ ಪ್ರಜಾಪ್ರಭುತ್ವವು ಇದನ್ನು ಬಹಳ ಚೆನ್ನಾಗಿ ಬಳಸುತ್ತದೆ. ಅದು ಜನರನ್ನು ಕೆಲವು ನಿಯಮಕ್ಕೆ ಒಪ್ಪುವ ಹಾಗೆ ಮಾಡುತ್ತದೆ. ಹಾಗೆಂದು ಇದನ್ನು ಹೇಳುವಾಗ ಗ್ರಾಂಶಿಯು ಸನ್ನಿವೇಶ ಎನ್ನುವುದನ್ನು ಗಮನಿಸುತ್ತಾನೆ. ಯಾವಾಗ ನಾವು ಅಧಿಕಾರವನ್ನು ಒಪ್ಪುತ್ತೇವೆಯೋ ಆಗ ಅದನ್ನು ನಾವು ಒಪ್ಪಿದ್ದೇವೆ ಮತ್ತು ಅದನ್ನು ನಾವು ಅಂಗೀಕರಿಸಿದ್ದೇವೆ ಎನ್ನುವುದೂ ನಮ್ಮ ಅರಿವಿಗೆ ಬರುವುದಿಲ್ಲ. ಆಳುವ ವರ್ಗವು ಯಾವಾಗಲೂ ಆಳಿಸಿಕೊಳ್ಳುವ ವರ್ಗಕ್ಕೆ ನಾನು ನಿನ್ನನ್ನು ಆಳು ಎಂದು ಭಾವಿಸುವುದಿಲ್ಲ ಎಂಬಂತೆ ಸೂಚಿಸುತ್ತದೆ. ಇದು ಕೇವಲ ಸೂಚನೆಯು ಮಾತ್ರವೇ.

ಅಧಿಕಾರ ಎನ್ನುವುದು ಕೂಡಲೇ ಯಾರೋ ಒಬ್ಬರು ತಕ್ಷಣವೇ ಇದನ್ನು ಹೇಳುವುದಿಲ್ಲ. ಅದು ಒಂದು ಚಲನೆಯೂ ಹೌದು. ಹಾಗೆಯೇ ಅದು ನಿರಂತರವೂ ಹೌದು. ಆದ್ದರಿಂದ ಇದನ್ನು ನಾವು ಬೇರೆ ಥರ ನೋಡಬೇಕು ಆಳುವ ವರ್ಗವು ತನಗೆ ಬೇಕಾದ ರೀತಿಯಲ್ಲಿ ಹೇಗೆ ಕಾನೂನು ಮುಂತಾದವುಗಳನ್ನು ಚಲಾವಣೆಗೆ ತರುತ್ತದೆ ಎಂದರೆ ಇದರಲ್ಲಿ ಮೇಲು ನೋಟಕ್ಕೆ ಯಾವುದೇ ಹುಳುಕು ಕಾಣಿಸುವುದೇ ಇಲ್ಲ. ಅದು ಎಷ್ಟರ ಮಟ್ಟಿಗೆ ಇದೆ ಎಂದರೆ ಯಾವುದೋ ಒಂದು ಕ್ಷಣಕ್ಕೆ ತನ್ನ ನಿಯಮವನ್ನು ಕೂಡಾ ಮುರಿಯಬಹುದು. ಮತ್ತೊಂದು ನಿರ್ಧಾರವನ್ನು ಚಾಲ್ತಿಗೆ ತರಬಹುದು. ಇದು ವಾಸ್ತವವಾಗಿ ಸಮಸ್ಯೆ. ಇದು ನಡೆಯುವಾಗ ಒಂದು ಪ್ರಭುತ್ವವು ಆಳಿಸಿಕೊಳ್ಳುವವರ ಒಪ್ಪಿಗೆಯನ್ನು ಪಡೆದೇ ಪಡೆಯುತ್ತದೆ ಎಂದು ಅರ್ಥವಲ್ಲ. ಇದು ನಡೆಯುವಾಗ ಸಮಾಜವು ಪರಿವರ್ತನೆಯನ್ನು ಕಾಣುತ್ತದೆ. ಅದರ ಮತ್ತೊಂದು ಬಗೆಯಲ್ಲಿ ಹರಡುತ್ತದೆ. ಇದು ಅತ್ಯಂತ ಮುಖ್ಯವಾದ

ಅಂಶವೂ ಹೌದು. ಆಳುವ ವರ್ಗ ಮತ್ತು ಅದರ ಯಜಮಾನಿಕೆಗೆ ಬೇಕಾದ ಪೋಲಿಸ್ ವ್ಯವಸ್ಥೆಯು ಇರುತ್ತದೆ. ಅದರ ಮೂಲಕವೇ ಒಂದು ವ್ಯವಸ್ಥೆಯು ಮತ್ತೊಂದು ವ್ಯವಸ್ಥೆಯಾಗಿಯೂ ಪಲ್ಲಟವಾಗುತ್ತದೆ. ಜನರ ಮಧ್ಯೆ ಕಾನೂನು ಇರುತ್ತದೆ. ಮತ್ತೊಂದು ಅರ್ಥದಲ್ಲಿ ಈ ಪೋಲಿಸ್ ವ್ಯವಸ್ಥೆಯೇ ಒಂದು ಸೀಮಾ ರೇಖೆಯನ್ನು ನಿರ್ಮಾಣ ಮಾಡುತ್ತದೆ. ಆಳುವವರ ಆಸೆಗಳು ಮತ್ತು ಆಳುವ ವರ್ಗದ ಹಿತಾಸಕ್ತಿಯು ಮಾತ್ರವೇ ಮುಖ್ಯವಾಗಿ ಉಳಿದ ವಿಚಾರಗಳು ಗೌಣವಾಗುತ್ತದೆ. ಸಾಮಾನ್ಯರು ಮತ್ತು ಅವರ ಬಯಕೆಗಳು ಹೇಗೆ ಇರುತ್ತವೆ ಎಂದರೆ ಅದು ಹೆಚ್ಚು ವಿಶೇಷವನ್ನು ಹೊಂದಿರುವುದು ಸಾಧ್ಯವಿಲ್ಲ. ಆದರೆ ಜನರು ಮತ್ತು ಅವರ ಬಯಕೆಗಳನ್ನು ಆಳುವ ವರ್ಗ ಸಹಿಸುವುದು ಸಾಧ್ಯವಿಲ್ಲ. ಜನರು ಮತ್ತು ಅವರ ಬಯಕೆಗಳನ್ನು ನಿಯಂತ್ರಣ ಮಾಡುವುದು ಹೇಗೆ ಎನ್ನುವುದು ಅಧಿಕ್ಕೆ ಗೊತ್ತು. ಗ್ರಾಂಶಿಯು ನಮಗೆ ಇರುವ ಕೆಲವು ಸಾಮಾನ್ಯವಾದ ಸಂವೇದನೆಯು ಹೇಗೆ ಇರುತ್ತದೆ ಎನ್ನುವುದನ್ನು ವಿಚಾರವನ್ನು ಮಾಡುವಾಗ ಇದನ್ನು ಹೇಳುತ್ತಾನೆ. ಅವನಲ್ಲಿ ನಿಯಂತ್ರಣ ಎನ್ನುವುದಕ್ಕೆ ಹೆಚ್ಚು ವಿಶಾಲವಾದ ವ್ಯಾಪ್ತಿಯು ಇದೆ. ಹಾಗೆ ನೋಡಿದರೆ ಇಲ್ಲಿ ಅತ್ಯಂತ ಮುಖ್ಯವಾದ ಅಂಶವನ್ನು ನೆನಪು ಮಾಡಬೇಕಾಗುತ್ತದೆ. ವಿಲಿಯಂಸ್ ಒಂದು ಮಾತನ್ನು ಹೇಳುತ್ತಾನೆ. ವಸ್ತು ಮತ್ತು ಅದರ ಅಸ್ತಿತ್ವ ಎನ್ನುವುದು ಪರಿಪೂರ್ಣವಾದರೆ ಅದರಲ್ಲಿ ಒಂದು ರೂಪವು ಸಿದ್ಧವಾಗುತ್ತದೆ. ಮನುಷ್ಯ ಮತ್ತು ಅವನ ಸಾಮಾನ್ಯವಾದ ಸಂವೇದನೆಯು ಬೇರೆ ಬೇರೆ ಥರ ಇರುತ್ತಾರೆ. ಅನೇಕ ಜನರು ಈವತ್ತು ಸಮಾಜದಲ್ಲಿ ತಮ್ಮ ಸಂವೇದನೆಯ ಮೂಲಕ ಒಂದು ನಿರ್ಧಾರವನ್ನು ಮಾಡುತ್ತಾರೆ. ವಾಸ್ತವವನ್ನು ಅರ್ಥ ಮಾಡಿಕೊಳ್ಳಲು ನಮಗೆ ಒಂದು ಸಂವೇದನೆಯು ಇರಬೇಕಾಗುತ್ತದೆ. ಸಮಾಜ ಮತ್ತು ಅದರ ಅರ್ಥವನ್ನು ಗಮನಿಸಲು ಕೂಡಾ ನಮಗೆ ಸಂವೇದನೆಯು ಇರಬೇಕಾಗುತ್ತದೆ. ಆದ್ದರಿಂದ ತಾತ್ವಿಕ ಎನ್ನುವುದು ನಮಗೆ ಒಂದು ಅಮೂರ್ತವಾದ ಸಂಗತಿಯೂ ಆಗಿರುತ್ತದೆ. ತಾತ್ವಿಕ ಎನ್ನುವುದು ನಮ್ಮ ಅಸ್ತಿತ್ವವನ್ನು ನಿರೂಪಿಸುತ್ತದೆ. ಅದನ್ನು ನಾವು ಇನ್ನೊಂದು ಥರ ಯೋಚಿಸಬಹುದು. ಎಷ್ಟೋ ಸರ್ತಿ ನಮ್ಮ ಅನುಭವ ಎನ್ನುವುದು ಸಾಚಾ ಆಗಿರುತ್ತದೆ ಎಂದು ಹೇಳುವುದು ಅತ್ಯಂತ ಕಷ್ಟ. ನಮ್ಮ ವ್ಯಕ್ತಿತ್ವವನ್ನು ಅನೇಕ ಸಂಗತಿಗಳು ನಿರ್ಧಾರ ಮಾಡುತ್ತದೆ. ಅದರ ಮೂಲಕ ಕೆಲವನ್ನು ತರಬೇತು ಮಾಡುತ್ತದೆ. ಇದನ್ನು ನಾವು ಇನ್ನೂ ಅನೇಕ ಸಂಗತಿಗಳಲ್ಲಿ ಕಾಣುತ್ತೇವೆ. ಗುಂಪು ಮತ್ತು ಅವುಗಳ ವಿಚಾರಧಾರೆಗಳು ಬೇರೆ ಬೇರೆ ಸಂಸ್ಥೆಗಳ ಮೂಲಕ ವ್ಯಕ್ತವಾಗುತ್ತದೆ. ಶಾಲೆಗಳು, ಸಂಸತ್ತು, ಆಸ್ಪತ್ರೆಗಳು ಸಂಸ್ಕೃತಿಯ ಮೇಲೆ ಪ್ರಭಾವವನ್ನು ಬೀರುತ್ತವೆ ಎಂದು ವಿಲಿಯಂಸ್ ಹೇಳುತ್ತಾನೆ. ಆದರೆ ಗ್ರಾಂಸಿಯು ನಮಗೆ ಒಂದು ಸಂಸ್ಕೃತಿಯ ಮೇಲೆ ಯಾವುದು ಹೆಚ್ಚು ಪ್ರಭಾವವನ್ನು ಬೀರುತ್ತದೆ

ಎಂದು ಹೇಳುವಾಗ ಗ್ರಾಂಶಿಯು ಆರ್ಥಿಕ ಸಂಗತಿಗಳನ್ನು ಮರೆಯಬಾರದು ಎಂದು ಭಾವಿಸುತ್ತಾನೆ. ಅದನ್ನು ಬಿಡಬಾರದು ಎನ್ನುವುದು ಅವನ ವಾದವಾಗಿದೆ. ಮೇಲು ನೋಟಕ್ಕೆ ಗ್ರಾಂಶಿಯು ಆರ್ಥಿಕತೆ ಮತ್ತು ಅದರ ಪರಿಣಾಮಗಳಿಗೆ ಹೆಚ್ಚು ಮಹತ್ವವನ್ನು ಕೊಡುತ್ತಾನೆ ಎಂದು ಅನಿಸುತ್ತದೆ. ಆರ್ಥಿಕತೆ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅವನು ಸಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿಗೆ ಇದು ಮೂಲವಾಗಿದೆ. ಅದನ್ನು ಅಷ್ಟು ಸುಲಭವಾಗಿ ತಳ್ಳಿಹಾಕಲು ಸಾಧ್ಯವಿಲ್ಲ. ಇಲ್ಲಿ ಅವನ ಅಭಿಪ್ರಾಯವು ಲಿಂಗ ಪ್ರಭೇದವನ್ನು ಸೂತ್ರದಲ್ಲಿ ಹೇಳುತ್ತದೆ.ಧರ್ಮ ಮತ್ತು ಅದರ ರೂಪಿಸುವ ಸಂಬಂಧಗಳನ್ನು ನಿರ್ವಚನ ಮಾಡುತ್ತದೆ. ಆರ್ಥಿಕತೆ ಎನ್ನುವುದು ಹೇಗೆ ರಾಜಕಾರಣ, ಸಂಸ್ಕೃತಿ, ಮತ್ತು ಅವುಗಳ ಸಾವಯವ ಸಂಬಂಧವನ್ನು ಇಟ್ಟುಕೊಂಡಿರುತ್ತದೆ ಎನ್ನುವುದು ಗ್ರಾಂಶಿಯ ವಾದವಾಗಿದೆ. ಇದನ್ನು ಅವನು ಹೆಜಮನಿ ಎಂದು ಹೇಳುತ್ತಾನೆ. ಇದು ಒಂದು ಸೂತ್ರವಾಗಿದೆ ಎಂದು ಅನಿಸುತ್ತದೆ. ಅದು ಯಜಮಾನಿಕೆಯನ್ನು ಹೇಳುತ್ತದೆ. ಗ್ರಾಂಶಿಯಲ್ಲಿ ಇದು ಕೂಡಾ ಚಲನಶೀಲವಾದ್ದು ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸಾಂಸ್ಕೃತಿಕ ಉತ್ಪಾದನೆಯಲ್ಲಿಯೂ ಇದು ಕೆಲಸವನ್ನು ಮಾಡುತ್ತದೆ. ಸಾಂಸ್ಕೃತಿಕವಾದ ಉತ್ಪಾದನೆಯಲ್ಲಿ ಕೆಲವು ಮಾನ್ಯವಾಗುತ್ತವೆ. ಕೆಲವು ಅಮಾನ್ಯವಾಗುತ್ತವೆ. ಇದು ಸಾಂಸ್ಕೃತಿಕ ರಾಜಕಾರಣದಿಂದ ಆಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ನಮ್ಮ ಸಮಾಜದ ಅನೇಕ ಸಂಬಂಧಗಳು ಇದನ್ನು ಆಧರಿಸಿಕೊಂಡು ಇರುತ್ತದೆ. ಇದರ ನಡುವೆ ಆಧುನಿಕ ಜಗತ್ತು ಸ್ಪರ್ಧೆಯನ್ನು ಅವಲಂಬಿಸಿದೆ ಎನ್ನುವುದು ಗ್ರಾಂಶಿಗೆ ಗೊತ್ತಿದೆ. ಅದಕ್ಕೆ ಅವನು ಚರಿತ್ರೆ ಮತ್ತು ಸಂಸ್ಕೃತಿಗಳ ಸಂಬಂಧವನ್ನು ಹೇಳುತ್ತಾನೆ. ಒಂದು ಉದಾಹರಣೆಯನ್ನು ಕೊಡಬಹುದು: ಸಿನಿಮಾಗಳನ್ನು ಸೆನ್ಸಾರ್ ಮಾಡಲಾಗುತ್ತದೆ. ಸಿನಿಮಾಕ್ಕೆ ವಿಮರ್ಶೆಯು ಇರುತ್ತದೆ. ಅದೇ ರೀತಿಯಲ್ಲಿ ಪತ್ರಿಕೆಯಲ್ಲಿ ಬರುವ ಸುದ್ದಿಗಳಿಗೆ ಕೂಡಾ ಸೋಸಿದ ಪಠ್ಯಗಳನ್ನು ಮಾತ್ರವೇ ಓದುಗರಿಗೆ ಕೊಡುತ್ತದೆ. ಸರಕಾರವು ಕೆಲವನ್ನು ಮಾನ್ಯ ಮಾಡುವುದರಿಂದ ಹೀಗಾಗುತ್ತದೆ ಎನ್ನುವುದನ್ನು ನಮ್ಮ ಅರಿವಿನಲ್ಲಿ ಇಟ್ಟುಕೊಳ್ಳುವುದು ಸೂಕ್ತ. ಪತ್ರಿಕೆಯಲ್ಲಿ ಬರುವ ಎಲ್ಲಾ ಸುದ್ಧಿಗಳು ನಂಬಲೇ ಬೇಕಾದ ಅಗತ್ಯವಿಲ್ಲ. ಅವನು ಜ್ಞಾನ ಮತ್ತು ಅದರ ಪ್ರಾತಿನಿಧಿಕತೆಯನ್ನು ಹೇಳುವಾಗ ಅತ್ಯಂತ ಸರಳವಾದ ಒಂದು ನಿಲುವಿಗೆ ಬರುವುದಿಲ್ಲ. ಆಳ್ವಿಕೆ ಮತ್ತು ಆಳ್ವಿಸಿಕೊಳ್ವಿಕೆ ಎನ್ನುವುದು ಬೇರೆ ಬೇರೆ ಅರ್ಥವನ್ನು ಕೊಡುತ್ತದೆ. ಆಳುವುದು ಮತ್ತು ಆಳಿಸಿಕೊಳ್ಳುವುದು ಎಂದರೆ ಅದರಲ್ಲಿ ಪರಿವರ್ತನೆಯು ಇರುತ್ತದೆ. ಹಾಗೆಯೇ ಅದರಲ್ಲಿ ನಿರಾಕರಣೆಯು ಇರುತ್ತದೆ, ಅದರಲ್ಲಿ ಒಂದು ಬಗೆಯ ಒಪ್ಪಂದವೂ ಇರುತ್ತದೆ. ಯಜಮಾನಿಕೆ ಎನ್ನುವುದು ಸಂಸ್ಕೃತಿಯಲ್ಲಿ ಇರುತ್ತದೆ. ಸಂವೇದನೆಯಲ್ಲಿ ಇದರ ಪ್ರಭಾವವು

ಇರುತ್ತವೆ. ಅವರಲ್ಲಿ ಸಂಘರ್ಷಗಳು ಇರುತ್ತವೆ.ಅದುವೇ ತನಗೆ ಬೇಕಾದ ಬುದ್ಧಿಜೀವಿಗಳನ್ನು ಉತ್ಪಾದಿಸುತ್ತದೆ.ಇದರಲ್ಲಿ ಸೌಂದರ್ಯಶಾಸ್ತ್ರವೂ ಭಿನ್ನವಾದ್ದು ಅಲ್ಲ. ಗ್ರಾಂಶಿಯು ಒಂದು ವಿವರವನ್ನು ನಮ್ಮ ಮುಂದೆ ಇಡುತ್ತಾನೆ–ಆಧುನಿಕ ಶಾಲೆಗಳು, ಚರ್ಚುಗಳು, ಸಮೂಹ ಮಾಧ್ಯಮಗಳು, ಸಿನಿಮಾಗಳು ನಮ್ಮ ಮುಂದೆ ಇಡುವುದು ಸಂಸ್ಕೃತಿಯ ವಿಭಿನ್ನ ಸಂಗತಿಗಳನ್ನು. ಸಿವಿಲ್ ಸೊಸೈಟಿಯು ಸಂಸ್ಕೃತಿಯನ್ನೂ ತನಗೆ ಬೇಕಾದಂತೆ ವ್ಯಾಖ್ಯಾನಿಸುತ್ತದೆ. ಹಾಗೂ ಸಿವಿಲ್ ಸೊಸೈಟಿಯು ಅನೇಕ ಸಂಸ್ಥೆಗಳನ್ನು ನಿರ್ದಿಷ್ಟವಾಗಿ ಒಂದು ಕೇಂದ್ರದಲ್ಲಿ ತಂದು ನಿಲ್ಲಿಸಿ ಸಂಸ್ಕೃತಿಯನ್ನು ವ್ಯಾಖ್ಯಾನಿಸುವ ಪ್ರಯತ್ನವನ್ನೂ ಮಾಡುತ್ತದೆ. ಈ ಕಾರಣದಿಂದ ಆಧುನಿಕ ಪ್ರಭುತ್ವವು ಸಂಸ್ಥೆಗಳನ್ನು ಸಮಾಜದ ಕೇಂದ್ರದಲ್ಲಿ ತಂದು ನಿಲ್ಲಿಸುತ್ತದೆ. ಯಜಮಾನಿಕೆಯನ್ನು ವಹಿಸುವ ವರ್ಗವು ತನಗೆ ಬೇಕಾದಂತೆ ಕೆಲವು ವ್ಯಾಖ್ಯಾನಗಳನ್ನು ಮಾಡುತ್ತದೆ. ಸಮಾಜದ ಸರಿ ಮತ್ತು ತಪ್ಪು ಎಂದು ಕೆಲವನ್ನು ನಿಶ್ಚಯಿಸುವುದೂ ಇದೇ. ಕೇಂದ್ರ ಮತ್ತು ಪರಿಧಿಯ ಕಲ್ಪನೆಯೂ ಇದರದೇ. ಸಂಸ್ಕೃತಿಯ ಅಧ್ಯಯನದಲ್ಲಿ ಗ್ರಾಂಶಿಯು ಬಳಸಿದ ಪರಿಭಾಷೆಯೆಂದರೆ ಹೆಜೆಮನಿ. ಯಜಮಾನಿಕೆಯು ನಮ್ಮನ್ನು ಆಳಲು ಕೆಲವು ಸಂಸ್ಥೆಗಳನ್ನು ಹುಟ್ಟು ಹಾಕುತ್ತದೆ. ಅದರಲ್ಲಿ ಪೋಲಿಸ್ ವ್ಯವಸ್ಥೆ, ಕೋರ್ಟ್, ಮಿಲಿಟರಿ ಮುಂತಾದವುಗಳು ಇರುತ್ತವೆ. ಮತ್ತು ಪರೋಕ್ಷವಾಗಿ ಕೆಲವನ್ನು ಅದು ಶ್ರೇಷ್ಟವೆಂದು ಹೇಳುತ್ತದೆ. ಹಾಗೂ ಯಜಮಾನಿಕೆಯು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಹೀಗೆ ಯತ್ನಿಸುತ್ತದೆ. ಕೆಲವು ಬೌಂಡರಿಗಳನ್ನು ಕೂಡಾ ಅದು ರೂಪಿಸುತ್ತದೆ. ಅಧಿಕಾರ ರಚನೆಗೆ ಯಾವುದು ಶ್ರೇಷ್ಟ, ಯಾವುದು ಕನಿಷ್ಟವೆಂಬ ವರ್ಗೀಕರಣಗಳು ತುಂಬಾ ಅಗತ್ಯವಿರುತ್ತದೆ. ಯಾವುದು ಯಜಮಾನಿಕೆಯ ಪ್ರಾತಿನಿಧಿಕ ರೂಪವಾಗಿದೆಯೋ ಅದು ಸಾಂಸ್ಕೃತಿಕ ರೂಪಗಳ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಯಾವುದು ಸಾಮಾಜಿಕ ರಚನೆಯ ಭಾಗವಾಗಿದೆಯೋ ಅದನ್ನು ನಿರೂಪಿಸುವ ಸಂಸ್ಥೆಗಳನ್ನು ಸಾಮಾಜಿಕ ಸಿಮೆಂಟ್ ಎಂದು ಗ್ರಾಂಶಿಯು ಹೇಳುತ್ತಾನೆ. ಯಜಮಾನಿಕೆಯನ್ನು ವಹಿಸುವ ವರ್ಗಗಳು ರೂಪಿಸುವ ನೀತಿ ಸಂಹಿತೆಗಳು ನಮ್ಮ ಸಂಸ್ಕೃತಿಯ ಭಾಗಗಳು ಎಂದೇ ನಾವು ಭಾವಿಸುತ್ತೇವೆ. ಅನೇಕ ಸಂದರ್ಭಗಳಲ್ಲಿ ಬುದ್ಧಿಜೀವಿಗಳು ಸಾಂಸ್ಥಿಕವಾದ ಮೌಲ್ಯಗಳನ್ನು ಪ್ರಚುರ ಪಡಿಸುವಂತೆಯೇ ಮಾತಾಡುತ್ತಾರೆ. ಹಾಗೆ ನೋಡುವುದಿದ್ದರೆ ಆಧುನಿಕ ಯುಗದಲ್ಲಿ ಬಂದಿರುವ ಆಢಳಿತ್ಮಾಕ ವ್ಯವಸ್ಥೆಯು ಅದರದೇ ಆದ ರಚನೆಯನ್ನು ಒಳಗೊಂಡಿದೆ. ಸಂಸ್ಕೃತಿಯ ಚರ್ಚೆಯಲ್ಲಿ ಈ ಆಢಳಿತ್ಮಾಕ ವ್ಯವಸ್ಥೆಯು ಬಹು ದೊಡ್ಡ ಸಂಶೋಧನೆಯ ಅವಕಾಶವನ್ನೂ ಕಲ್ಪಿಸಿದೆ. ಗ್ರಾಂಶಿಯು ತನ್ನ ವಾದವನ್ನು ಮಂಡಿಸುವ ಮೊದಲು ಮಾರ್ಕ್ಸವಾದವು ಸಂಸ್ಕೃತಿಯನ್ನು ಹೇಗೆ ನೋಡಿದೆ ಎಂದು ಗಮನಿಸುತ್ತಾನೆ. ಮಾರ್ಕ್ಸವಾದದಲ್ಲಿ

ಆರ್ಥಿಕ ಚಟುವಟಿಕೆ ಎನ್ನುವುದು ತಳ ರಚನೆಯನ್ನು ಹೇಳುತ್ತದೆ. ಸಂಸ್ಕೃತಿಯು ಅದರಲ್ಲಿ ಮೇಲು ರಚನೆಯು ಆಗುತ್ತದೆ. ಇದನ್ನು ಅತ್ಯಂತ ಗಂಭೀರವಾಗಿ ಗ್ರಾಂಶಿಯು ಪರಿಗಣಿಸುತ್ತಾನೆ. ಮಾರ್ಕ್ಸವಾದದ ಸಂಬಂಧವು ಸಂಸ್ಕೃತಿಯ ಚರ್ಚೆಯಲ್ಲಿ ಅತ್ಯಂತ ಮಹತ್ವದ್ದು ಎಂದು ಗ್ರಾಂಶಿಯು ಭಾವಿಸುತ್ತಾನೆ. ತಾತ್ವಿಕತೆಗೆ ಮತ್ತು ಸಂಸ್ಕೃತಿಗೆ ಒಂದು ನಿಕಟವಾದ ಸಂಬಂಧವು ಇದೆ ಎಂದು ಅವನು ತಿಳಿಯುತ್ತಾನೆ. ನಮ್ಮ ಸಂವೇದನೆ ಮತ್ತು ಅದರ ಆಯಾಮಗಳು ಹೇಗೆ ಇರುತ್ತವೆ ಎನ್ನುವುದನ್ನು ವಿವರಿಸುವಾಗ ಈ ಮಾತು ಬರುತ್ತವೆ. (ನೋಡಿ: ಇದೇ ಲೇಖಕರ– ಮಕೋ ನನ್ನು ಒದಲು ಬೇಕಾದ ಚಿಪ್ಪಣಿಗಳು)

ನಿರ್ಧಾರಾತ್ಮಕವಾದ ಏಕ ಕೇಂದ್ರಿತ ಆರ್ಥಿಕ ಚಟುವಟಿಕೆ

ಸಂಸ್ಕೃತಿಯ ಅಧ್ಯಯನವು ಒಂದು ಗುಂಪಿನ ಪ್ರಾತಿನಿಧಿಕ ಮಾದರಿಯೆನ್ನುವಂತೆ ನಡೆದ ಅಧ್ಯಯನಗಳಿಗೆ ಸೀಮಿತವಾದ ಗಡಿರೇಖೆಗಳಿವೆ. ಯಾವಾಗ ಪೋಸ್ಟ್ ಫೋರ್ಡಿಸಂ ಮತ್ತು ಪೋಸ್ಟ್ ಮೊರ್ಡನಿಸಂ ಬಂತೋ ಅಗ ಅದರ ಚರ್ಚೆಗಳ ಸ್ವರೂಪವೂ ಬದಲಾಯಿತು. ಉದಾಹರಣೆಗೆ ನಾವು ಬಳಸುವ ಆಧುನಿಕೋತ್ತರವೆಂದು ಯಾವುದನ್ನು ಹೇಳುತ್ತಿದ್ದೇವೆಯೋ ಅದು ಯಾರಿಗೆ ಮತ್ತು ಹೇಗೆ ಅನ್ವಯವಾಗುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಫ್ರೆಡ್ರಿಕ್ ಜೇಮ್ಸನ್ ಹೇಳುವುದು ಏನೆಂದರೆ ಆಧುನಿಕ ಜಾಗತಿಕ ಮಾರುಕಟ್ಟೆಯ ಕಲ್ಪನೆಯೂ ಅಷ್ಟೇ ಮುಖ್ಯವಾದ ಪರಿಕಲ್ಪನೆಯನ್ನು ನಮ್ಮ ಮುಂದೆ ಇಟ್ಟಿದೆ ಅದು ರಾಷ್ಟ್ರೀಯತೆಯ ಗಡಿಯನ್ನು ಮೀರಿ ಜಾಗತಿಕ ಮಾರುಕಟ್ಟೆಯನ್ನು ಕೇಂದ್ರವಾಗಿರಿಸಿಕೊಂಡಿದೆ. ಆದರೆಅದರ ಸಮಸ್ಯೆಯೂ ಅಷ್ಟು ಬೇಗನೆ ನಮ್ಮ ಗಮನಕ್ಕೆ ಬರುವುದೂ ಇಲ್ಲ. ಬೆಳೆಯುತ್ತಿರುವ ತಾಂತ್ರಿಕತೆಯು ಮನುಷ್ಯರನ್ನು ಹತ್ತಿರ ತರುತ್ತಿದೆ.ಇದರಿಂದ ಸಾಂಸ್ಕೃತಿಕ ಅಧ್ಯಯನವು ಮತ್ತೆ ಬೇರೆ ರೀತಿಯಲ್ಲಿಯೂ ಬೆಳೆಯಿತು.ಆಧುನಿಕ ಬಂಡವಾಳವಾದವು ಮಾಹಿತಿ, ತಾಂತ್ರಿಕತೆ, ಮನೋರಂಜನೆ, ಮಾರುಕಟ್ಟೆಯ ವಿಸ್ತರಣೆಯನ್ನು ಒಳಗೊಂಡಿದೆ. ಏಕಕೇಂದ್ರಿತ ಬಂಡವಾಳವಾದವು ತನಗೆ ಬೇಕಾದಂತೆ ಮನುಷ್ಯರನ್ನು ವ್ಯಾಖ್ಯಾನಿಸುತ್ತದೆ. ಮನುಷ್ಯನು ಈಗ ಕೇವಲ ಗ್ರಾಹಕನಾಗಿದ್ದಾನೆ. ವ್ಯಕ್ತಿಯ ಅನನ್ಯತೆಯು ಈ ದೃಷ್ಟಿಯಿಂದ ಭಿನ್ನವಾಗಿದೆ. ಅನೇಕ ಸಾಂಸ್ಕೃತಿಕ ಅಧ್ಯಯನವು ವ್ಯಕ್ತಿಯನ್ನು ಒಂದು ಬಿಡಿಯಾದ ಭಾಗವಾಗಿ ನೋಡುತ್ತಿರುವುದರಿಂದ ಹೀಗೆ ಆಗುತ್ತಿದೆ. "ನಿರ್ಧಾರಾತ್ಮಕವಾದ ಏಕಕೇಂದ್ರಿತ ಆರ್ಥಿಕ ಚಟುವಟಿಕೆಯಿದು." ಎನ್ನುವ ಗ್ರಾಂಶಿಯ ಮಾತು ಇಲ್ಲಿಗೆ ಸರಿಯಾಗಿ ಹೊಂದಾಣಿಕೆಯಾಗುತ್ತಿದೆ. ಜಾಗತಿಕ ಮಾರುಕಟ್ಟೆಯ ಸಂದರ್ಭವನ್ನು ನಾವು ಸರಳವಾಗಿ ಪರಿಗಣಿಸಬೇಕಾಗಿಯೂ ಇಲ್ಲ. ವಾಸ್ತವವಾಗಿ ಈಗ ನಡೆಯುತ್ತಿರುವ

ಚರ್ಚೆಯನ್ನು ನಾವು ಹೀಗೂ ವಿಶ್ಲೇಷಿಸಬಹುದು–ನಾವೀಗ ಮಾಡಬೇಕಾದುದು ಏನೆಂದರೆ ಜಾಗತಿಕ ಬಂಡವಾಳವಾದವು ಸಂಸ್ಕೃತಿಯೊಂದಿಗೆ ಯಾವ ರೀತಿಯ ಒಡನಾಟವನ್ನು ಇಟ್ಟುಕೊಂಡಿದೆ ಎಂದು ನೋಡುವುದು.ಹಾಗೂ ಈ ಸಂದರ್ಭದಲ್ಲಿ ಮನುಷ್ಯನು ಹೇಗಿದ್ದಾನೆ. ಜಾಗತಿಕ ಬಂಡವಾಳವಾದವು ವ್ಯಕ್ತಿಯನ್ನು ನಿರೂಪಿಸುವ ಕ್ರಮಗಳು ಭಿನ್ನ. ಸ್ಥಳೀಯತೆಯು ನಾಶ ಹೊಂದಿ ಅದರ ಬದಲಿಗೆ ಹೊಸ ನಿರ್ವಚನಗಳು ಪ್ರಾರಂಭವಾಗಿದೆ. ಜಾಗತಿಕ ಸಮೂಹ ಮಾಧ್ಯಮಗಳು ತನಗೆ ಬೇಕಾದಂತೆ ಜನರನ್ನು ರೂಪಿಸುತ್ತಿದೆ. ತಮಗೆ ಬೇಕಾದಂತೆ ಸಂಸ್ಕೃತಿಯನ್ನು ಹಿಡಿತಕ್ಕೆ ತಂದು ನಿರ್ವಹಿಸುತ್ತಿದೆ. ಎನ್.ಬಿ.ಸಿ. ಎಂ.ಟಿ.ವಿ. ಮುಂತಾದವುಗಳು ನಮ್ಮನ್ನು ರೂಪಿಸುವುದು ಮಾತ್ರವೇ ಅಲ್ಲ ಕೆಲವು ಸಂಗತಿಗಳನ್ನು ಕೈಬಿಟ್ಟಿವೆ – ಇವುಗಳ ಎದುಎನಲ್ಲಿ ಅನನ್ಯತೆ, ಪ್ರತ್ಯೇಕತೆ, ಮೌಲ್ಯ, ಸಂಸ್ಕೃತಿಯ ವ್ಯಾಖ್ಯೆಗಳು ಬದಲಾಗಿವೆ. ಕಸಿ ಸಂಸ್ಕೃತಿಯೊಂದು ಮನುಷ್ಯರನ್ನು ಆಳುತ್ತದೆ. ಮನುಷ್ಯನ ಆಸೆ, ಅವನ ಬಯಕೆ. ಅವನ ಅತೃಪ್ತಿಯನ್ನು ಮಾರುಕಟ್ಟೆಯು ನಿಯಂತ್ರಿಸುತ್ತದೆ ಎನ್ನುವುದೇ ಮುಖ್ಯ. ಸಾಂಸ್ಕೃತಿಕ – ಹಾಗೂ ಶೈಕ್ಷಣಿಕ ವರ್ಗೀಕರಣವು ಮನುಷ್ಯನ ಕೆಲಸವನ್ನು ಅನನ್ಯವೆಂದು ಹೇಳುತ್ತವೆ. ಕಲಾತ್ಮಕ ಆಧುನಿಕತೆಗೂ ಬದಲಾದ ಸಂಸ್ಕೃತಿಯ ಪ್ರಶ್ನಗೂ ವ್ಯತ್ಯಾಸವಿದೆ. ಆಧುನಿಕವಾದ ಅನೇಕ ಕೆಲಸಗಳು ಮತ್ತೆ ಬೇರೆ ಬೇರೆ ವರ್ಗೀಕರಣಗಳನ್ನು ಮಾಡಿದವು.ಮನುಷ್ಯನು ಹಳೆಯದಕ್ಕೆ ವಿದಾಯವನ್ನು ಹೇಳುತ್ತಾನೆ, ಹಾಗೂ ತನ್ನ ಅಸ್ತಿತ್ವವನ್ನು ತನಗೆ ತಾನೇ ರೂಢಿಸಿಕೊಳ್ಳುತ್ತಾನೆ. ಆಧುನಿಕವಾಗಿ ಮನುಷ್ಯರ ಸ್ವಭಾವವು ಬದಲಾಗುತ್ತಿದೆ ಎನ್ನುವುದೇ ಮನನೀಯ. ಸಂಸ್ಕೃತಿಯನ್ನು ನೋಡುವಾಗ ನಾವು ಗ್ರಹಿಸುವ ವಿಧಾನಗಳು ಹೇಗೆ ಇವೆ ಎನ್ನುವುದೂ ಅಷ್ಟೇ ಮುಖ್ಯ.

ರಾಜಕೀಯ ವರ್ಗ

ಇದನ್ನು ಸಾಮಾನ್ಯವಾಗಿ ಇಂಗ್ಲೆಂಡಿನಲ್ಲಿ ರಾಜಕೀಯ ವರ್ಗ ಎಂದು ಹೇಳುವುದು ಮಾತ್ರವೇ ಅಲ್ಲ, ಅವರನ್ನು ಏಕಾಂತವಾದಿಗಳು ಎಂದು ಹೇಳುತ್ತಿದ್ದರು. ಗ್ರಾಂಶಿಯು ಜಮೀನ್ದಾರಿ ವ್ಯವಸ್ಥೆಯಲ್ಲಿ ಜಮೀನ್ದಾರರು ಕೆಲವು ಸಾಮರ್ಥ್ಯವನ್ನು ಹೊಂದಿರುತ್ತಾರೆ. ಅದರಲ್ಲಿ ಸೇನೆಯ ಥರದ ಕೆಲಸವೂ ಸೇರಿದೆ.

ಪ್ರಜ್ಞೆ

ಪ್ರಜ್ಞೆಯನ್ನು ಗ್ರಾಂಶಿಯು ಎರಡು ರೀತಿಯಲ್ಲಿ ಗುರುತಿಸುತ್ತಾನೆ. ಒಂದು ಸುಳ್ಳಾದ ಮತ್ತು ತಪ್ಪಾದ ಪ್ರಜ್ಞೆ. ತಾತ್ವಿಕತೆಗೆ ಯಾವಾಗ ನಿಷೇಧಾತ್ಮಕವಾದ ಅರ್ಥವು ಬರುತ್ತದೆಯೋ ಆಗ ಅಲ್ಲಿ ಸುಳ್ಳು ಪ್ರಜ್ಞೆಗೆ ಅವಕಾಶವಾಗುತ್ತದೆ. ನಾವು

ಜಗತ್ತನ್ನು ಒಂದು ನಿರ್ದಿಷ್ಟವಾದ ಕ್ರಮದಲ್ಲಿ ನೋಡಲು ಹೊರಟರೆ ಆಗ ನಮಗೆ ಧನಾತ್ಮಕವಾದ ಪ್ರಜ್ಞೆಯು ಬರುತ್ತದೆ. ಆದರೆ ಯಾವುದು ಸಾಮಾನ್ಯವಾದ ಸಂವೇದನೆಯು ಇರುತ್ತದೆಯೋ ಅದರ ರೂಪೀಕರಣವು ಒಂದು ರೀತಿಯಲ್ಲಿ ಇರುತ್ತದೆ ಎಂದು ಗ್ರಾಂಶಿಯು ಭಾವಿಸುತ್ತಾನೆ. ಆದ್ದರಿಂದ ಬುದ್ಧಿಜೀವಿಗಳಿಗೆ ಕೆಲವು ನಿರ್ದಿಷ್ಟವಾದ ಜವಾಬ್ದಾರಿ ಇರುತ್ತದೆ. ಅದನ್ನು ಜ್ಞಾನ ಮತ್ತು ಅದರ ಹಂಚುವಿಕೆಯ ಕೆಲಸವೆಂದೂ ಹೇಳಬಹುದು. ನಮ್ಮ ಜ್ಞಾನಕ್ಕೆ ಮತ್ತು ನಮ್ಮ ಪ್ರಜ್ಞೆಗೆ ಹಾಗೂ ನಮ್ಮ ತಾತ್ವಿಕತೆಗೆ ಸಂಬಂಧವು ಇರುತ್ತದೆ., ನಮ್ಮ ಹೇಳಿಕೆಗಳು ನಮ್ಮ ವಾದವನ್ನು ಮತ್ತು ನಮ್ಮ ತಾತ್ವಿಕತೆಯನ್ನು ಹೇಳುತ್ತದೆ. ಹೊರಗಿನ ತಾತ್ವಿಕತೆಯು ನಮ್ಮ ಅಂತರಂಗದ ತಾತ್ವಿಕತೆಯನ್ನು ನಿರ್ದೇಶಿಸುತ್ತದೆ.

ಹಳೆಯದು ಮತ್ತು ಹೊಸತು

ಗ್ರಾಂಶಿಯು ಒಂದು ಮಾತನ್ನು ಹೇಳುತ್ತಾನೆ: ಹಳೆಯದು ಎನ್ನುವುದು ಈಗ ಇಲ್ಲವಾಗಿದೆ. ಹೊಸತು ಎನ್ನುವುದು ಇನ್ನೂ ಹುಟ್ಟಿಲ್ಲ. ಇದರ ಮಧ್ಯೆ ನಾವು ಇದ್ದೇವೆ. ಇದು ಒಂದು ಮಧ್ಯಮ ಅವಕಾಶ ಎಂದು ಇದನ್ನು ಗುರುತಿಸುತ್ತಾನೆ.

ಗ್ರಾಂಶಿಯು ಯಜಮಾನಿಕೆ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅದನ್ನು ಬೇರೆ ಅರ್ಥದಲ್ಲಿ ಬಳಸಿದ್ದಾನೆ. ಅವನಲ್ಲಿ ಪ್ರಭುತ್ವವು ಒಂದು ಭಾವನಾತ್ಮಕವಾದ ಸಂಗತಿಯು ಅಲ್ಲ. ಎರಡನೆಯದಾಗಿ ಅವನು ಯಜಮಾನಿಕೆಯನ್ನು ಹೇಳುವಾಗ ಅದರ ರೂಪೀಕರಣವನ್ನು ವಿವರಿಸಿದ್ದಾನೆ. ಬಹು ಸಂಸ್ಕೃತಿಯೆಂದು ಹೇಳುವಾಗಲೂ ನಮಗೆ ಒಂದು ಅರಿವು ಇರಬೇಕಾಗುತ್ತದೆ. ಅಧಿಕಾರ ಮತ್ತು ಹಣ ಎರಡೂ ಹೇಗೆ ವಸಾಹತು ಕಾಲದಲ್ಲಿ ನಿಯಂತ್ರಣವನ್ನು ರೂಪಿಸಿದವು ಎಂದೂ ನೋಡಬೇಕು. ವಾಸ್ತವವಾಗಿ ನಮಗೆ ಇವುಗಳು ಸಂವಾದಿಯಾದ ಅಥವಾ ಒಂದು ರೂಪಕದ ಭಾಷೆಯು ಅಲ್ಲ ಎಂದು ಮನದಟ್ಟು ಮಾಡಬೇಕಾಗುತ್ತದೆ. ವಿಶ್ವರಹಿತವಾದ ಒಂದು ಜಗತ್ತು ಎನ್ನುವುದನ್ನು ಗ್ರಹಿಸಿದರೆ ಈ ಮಾತು ಅರ್ಥವಾಗಲು ಸಾಧ್ಯ. ಯಾವುದೇ ತಾತ್ವಿಕತೆಯು ಇಲ್ಲದ ಮತ್ತು ಯಾವುದೇ ತಾಂತ್ರಿಕತೆ ಇಲ್ಲದ ಒಂದು ಜಗತ್ತನ್ನು ನಾವು ಈವತ್ತು ಕಲ್ಪಿಸಿಕೊಳ್ಳುವ ಸಾಧ್ಯತೆಯೇ ಕಡಿಮೆ. ಮತ್ತೊಂದು ಪ್ರಶ್ನೆಯು ಇದೆ: ಒಂದು ರಾಜಕಾರಣವು ಹೇಗೆ ವ್ಯಕ್ತಿಯನ್ನು ಮತ್ತು ಸಮಾಜವನ್ನು ನೋಡುತ್ತದೆ ಎಂದೂ ಗ್ರಹಿಸುವುದು ಅತ್ಯಂತ ಅಗತ್ಯ. ಮೌಲ್ಯವೇ ಇಲ್ಲದ ಒಂದು ರಾಜಕಾರಣವು ಇದ್ದರೆ ಸರಿ ಆದರೆ ಪರಿಸ್ಥಿತಿಯು ಹಾಗೆ ಇಲ್ಲ. ಬೇರೆ ಬೇರೆ ಸನ್ನಿವೇಶಗಳಲ್ಲಿ ವ್ಯಕ್ತಿಗಳು ಮತ್ತು ಸಮುದಾಯಗಳು ಬೇರೆ ಬೇರೆ ರೀತಿಯಲ್ಲಿ ಆಗುತ್ತಾರೆ ಎನ್ನುವುದೂ

ಅತ್ಯಂತ ಮುಖ್ಯ (ಬೆಂಜಮಿನ್, ಅಡರ್ನೊ, ಮೆಶಿಯರಿ ಮುಂತಾದವರು ಅತ್ಯಂತ ಪ್ರಬಲವಾಗಿ ಹೇಳಿದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು: ನೋಡಿ- ಬೆಂಜಮಿನ್ ಕೈಗಾರಿಕಾ ಯುಗದ ಬಗ್ಗೆ ಮಾತಾಡುವಾಗ ಇದನ್ನು ಸ್ಪಷ್ಟ ಪಡಿಸಿದ್ದ. ಮೆಶಿಯರಿಯು ಲಿಟರರಿ ಪ್ರಡಕ್ಷನ್ ಬಗ್ಗೆ ಹೇಳುವಾಗಲೂ ಇದನ್ನು ಹೇಳುತ್ತಾನೆ. ಅಡರ್ನೊನ ಕಲ್ಚರ್ ಇಂಡಸ್ಟ್ರಿಯಲ್ಲಿಯೂ ಇದರ ಪ್ರಸ್ತಾಪವಿದೆ. ಎರಿಕ್ ಪ್ರಾಂನ ಮಾರ್ಕ್ಸ್‌ನ ಕಾನ್ಸೆಪ್ಟ ಆಫ್ ಮ್ಯಾನ್‌ನಲ್ಲಿ ಕೂಡಾ ಬರುತ್ತದೆ) ರಾಜಕೀಯವಾದ ಕೆಲವು ನಿಯಮಗಳು ಹೇಗೆ ನಿರ್ವಚನಕ್ಕೆ ಗುರಿಯಾಗಿದೆ ಎಂದೂ ನೋಡಬೇಕಾಗುತ್ತದೆ. ಇರಲಿ. ಕೊಡು ಮತ್ತು ತೆಗೆದುಕೋ ಎನ್ನುವುದು ಈಗ ಚಾಲ್ತಿಯಲ್ಲಿದೆ.

ತಾತ್ವಿಕತೆ ಮತ್ತು ಸಾಮಾಜಿಕ ಆವಶ್ಯಕತೆ

ತಾತ್ವಿಕತೆಯು ಅನೇಕವನ್ನು ನಿರ್ಧಾರ ಮಾಡುತ್ತದೆ ಎಂದು ಮಾರ್ಕ್ಸವಾದಿಗಳು ನಂಬುತ್ತಾರೆ. ಆದರೆ ಆದರೆ ಮಾರ್ಕ್ಸವಾದವು ಬುದ್ಧಿಜೀವಿಗಳನ್ನು ಪ್ರತ್ಯೇಕವಾದ ಒಂದು ವರ್ಗ ಎಂದು ಭಾವಿಸುವುದೂ ಇಲ್ಲ. ಲೇಖಕರು ಯಾರನ್ನು ಉದ್ದೇಶಿಸಿಕೊಂಡು ಮಾತಾಡುತ್ತಾರೆ ಎನ್ನುವುದು ಇಲ್ಲಿ ಮುಖ್ಯ. ತಾತ್ವಿಕತೆಗೆ ಒಂದು ರಾಜಕೀಯವಾದ ಒಂದು ಆಯಾಮವು ಇದೆ. ತಾತ್ವಿಕ ಎನ್ನುವುದು ಭೌತಿಕವಾದ ಒಂದು ಅಗತ್ಯವಾಗಿದೆ. ಅದನ್ನು ಅದೇ ಅರ್ಥದಲ್ಲಿ ನೋಡಬೇಕಾಗುತ್ತದೆ. ತಾತ್ವಿಕ ಎನ್ನುವುದು ಒಂದು ಸಮಾಜದ ಅಗತ್ಯಕ್ಕಾಗಿ ಇರುತ್ತದೆ. ಅದನ್ನು ನಾವು ಮರೆಯಬಾರದು. ಗ್ರಾಂಶಿಯು ಇದನ್ನು ಒಂದು ಸಮಾಜದ ಆವಶ್ಯಕತೆ ಎಂದು ಭಾವಿಸುತ್ತಾನೆ.

ಹೋರಾಟಗಳು

ಆಧುನಿಕ ಜಗತ್ತಿನಮ್ಮ ಹೋರಾಟಗಳು ಮಾನವೀಯತೆಯನ್ನು ಮತ್ತು ವಿಶ್ವಾತ್ಮಕತೆಯನ್ನು ಗ್ರಹಿಸುವಾಗ ಬೇರೆ ರೀತಿಯಲ್ಲಿ ಹಂಚಿಹೋಗಿವೆ. ಸ್ತ್ರೀವಾದ, ಪರಿಸರವಾದ, ಕಾರ್ಮಿಕರ ಹೋರಾಟ, ಜಾತಿ ಹೋರಾಟಗಳು, ಜನಾಂಗವಾದಿ ಹೋರಾಟಗಳು ಹೀಗೆ ಹರಿಹಂಚಾಗಿ ಹೋಗಿವೆ. ಇದರಿಂದ ಸಮಸ್ಯೆಯೂ ಆಗಿದೆ. ಕೆಲವು ಹೋರಾಟಗಳು ಒಂದು ಹಂತದಲ್ಲಿ ನಿಂತು ಬಿಡುತ್ತವೆ. ಉದಾರವಾದ ಮತ್ತು ಅದರ ಹೋರಾಟಗಳು ಕೂಡಾ ಒಂದು ಹಂತದಲ್ಲಿ ವಿರಮಿಸಿವೆ. ಎಷ್ಟೋ ಹೋರಾಟಗಳಿಗೆ ರಾಜಕೀಯ ಮತ್ತು ಆರ್ಥಿಕ ಆಯಾಮಗಳೂ ಇಲ್ಲವಾಗಿವೆ. ಈ ದೃಷ್ಟಿಯಲ್ಲಿ ಒಂದು ನಿರ್ಣಾಯಕವಾದ ವಿಶ್ವಾತ್ಮಕತೆಯು ಅವಶ್ಯವಿದೆ, ಗ್ರಾಂಶಿಯು ಹೇಳುವ ಯಜಮಾನಿಕೆಯ ಕಲ್ಪನೆಯಿಂದ ಹುಟ್ಟುವುದು ಅಗತ್ಯವಿದೆ. ಪಶ್ಚಿಮದ ಲೇಖಕರು ಮತ್ತು ಪೂರ್ವದ ಲೇಖಕರು

ಎಂದು ವರ್ಗೀಕರಿಸಿಕೊಂಡು ಯುಜವಾನಿಕೆಯ ಧೋರಣೆಯನ್ನು ವಿರೋಧಿಸುವುದು ಸಾಧ್ಯವಾಗುತ್ತದೆಯೇ ಎನ್ನುವುದು ಮೂಲ ಪ್ರಶ್ನೆಯೂ ಆಗಿದೆ. ತಪ್ಪಾದ ವಿಶ್ವಾತ್ಮಕತೆಯು ನಮಗೆ ಯಾವುದೇ ದಾರಿಯನ್ನು ಕೊಡುವುದೂ ಇಲ್ಲ. ಜಾಗತಿಕ ಮಟ್ಟದಲ್ಲಿ ಮನುಷ್ಯ ಹಕ್ಕುಗಳು ಬೇರೆ ಬೇರೆ ಹೆಸಎನಲ್ಲಿ ದಮನಕ್ಕೆ ಗುರಿಯಾಗುತ್ತಿವೆ.

ಪ್ರಜ್ಞೆ

ಪ್ರಜ್ಞೆಯನ್ನು ಗ್ರಾಂಶಿಯು ಎರಡು ರೀತಿಯಲ್ಲಿ ಗುರುತಿಸುತ್ತಾನೆ. ಒಂದು ಸುಳ್ಳಾದ ಮತ್ತು ತಪ್ಪಾದ ಪ್ರಜ್ಞೆ. ತಾತ್ವಿಕತೆಗೆ ಯಾವಾಗ ನಿಷೇಧಾತ್ಮಕವಾದ ಅರ್ಥವು ಬರುತ್ತದೆಯೋ ಆಗ ಅಲ್ಲಿ ಸುಳ್ಳು ಪ್ರಜ್ಞೆಗೆ ಅವಕಾಶವಾಗುತ್ತದೆ. ನಾವು ಜಗತ್ತನ್ನು ಒಂದು ನಿರ್ದಿಷ್ಟವಾದ ಕ್ರಮದಲ್ಲಿ ನೋಡಲು ಹೊರಟರೆ ಆಗ ನಮಗೆ ಧನಾತ್ಮಕವಾದ ಪ್ರಜ್ಞೆಯು ಬರುತ್ತದೆ. ಆದರೆ ಯಾವುದು ಸಾಮಾನ್ಯವಾದ ಸಂವೇದನೆಯು ಇರುತ್ತದೆಯೋ ಅದರ ರೂಪೀಕರಣವು ಒಂದು ರೀತಿಯಲ್ಲಿ ಇರುತ್ತದೆ ಎಂದು ಗ್ರಾಂಶಿಯು ಭಾವಿಸುತ್ತಾನೆ. ಆದ್ದರಿಂದ ಬುದ್ಧಿಜೀವಿಗಳಿಗೆ ಕೆಲವು ನಿರ್ದಿಷ್ಟವಾದ ಜವಾಬ್ದಾರಿ ಇರುತ್ತದೆ. ಅದನ್ನು ಜ್ಞಾನ ಮತ್ತು ಅದರ ಹಂಚುವಿಕೆಯ ಕೆಲಸವೆಂದೂ ಹೇಳಬಹುದು. ನಮ್ಮ ಜ್ಞಾನಕ್ಕೆ ಮತ್ತು ನಮ್ಮ ಪ್ರಜ್ಞೆಗೆ ಹಾಗೂ ನಮ್ಮ ತಾತ್ವಿಕತೆಗೆ ಸಂಬಂಧವು ಇರುತ್ತದೆ., ನಮ್ಮ ಹೇಳಿಕೆಗಳು ನಮ್ಮ ವಾದವನ್ನು ಮತ್ತು ನಮ್ಮ ತಾತ್ವಿಕತೆಯನ್ನು ಹೇಳುತ್ತದೆ. ಹೊರಗಿನ ತಾತ್ವಿಕತೆಯು ನಮ್ಮ ಅಂತರಂಗದ ತಾತ್ವಿಕತೆಯನ್ನು ನಿರ್ದೇಶಿಸುತ್ತದೆ.

ಪರಕೀಯತೆ

ಅಡರ್ನೊನ ವಾದಗಳು ಬೇರೆ – ಮನುಷ್ಯ ಪರಕೀಯತೆಯಿಂದ ಅಥವಾ ಪ್ರತ್ಯೇಕತೆಯಿಂದ ನಿಯಂತ್ರಿಸಲ್ಪಡುತ್ತಾನೆ. ಕಲೆಯೆನ್ನುವುದು ವಾಸ್ತವದ ಅನುಭವ. ಹಾಗೂ ಕಲೆಗೆ ಸಾಹಿತ್ಯಕ ಅಥವಾ ಸಾಂಸ್ಕೃತಿಕ ಸೂಚನೆಗಳು ಇರುತ್ತವೆ. ಕಲೆಯು ವಸ್ತುವನ್ನು ಒಂದು ಸೂಚಕವಾಗಿ ಸೆರೆ ಹಿಡಿಯುತ್ತದೆ ಮತ್ತು ಕಲೆಯು ಒಂದಲ್ಲ ಒಂದು ಅರ್ಥದಲ್ಲಿ ಸ್ವಾಯತ್ತವಾದುದು. ಅಡರ್ನೊ ಇದನ್ನು ಎತ್ತಿ ಹಿಡಿಯುತ್ತಾನೆ. ಕಲೆಗೆ ಶಾಸ್ತ್ರೀಯವೆನ್ನಬಹುದಾದ ಕ್ರಿಯಾತ್ಮಕ ಗುಣವಿದೆ. ಹಾಗಾಗಿ ಯಾವುದೇ ಕಲೆಯು ಸಂಘರ್ಷಗಳನ್ನು ನೇರವಾಗಿ ಪ್ರತಿನಿಧಿಸುವುದಿಲ್ಲ. ಕಲೆಯಲ್ಲಿ ಸಂಘರ್ಷವೆನ್ನುವುದು ಪಾರ್ಶ್ವನೋಟ ಮಾತ್ರವೇ ಆಗಿರುತ್ತದೆ. ಲುಕಾಕ್ಸ್ ಮತ್ತು ಅಡರ್ನೊರಿಗೆ ಕೆಲವು ವಿಷಯಗಳಲ್ಲಿ ಭಿನ್ನತೆಯಿದೆ. ವಸ್ತುವಿನ ಆಯ್ಕೆ ಆಯಾ ಕಾಲದ ಚರಿತ್ರೆಗೆ ಸಂಬಂಧಿಸಿದ್ದು ಎನ್ನುವುದು ಲುಕಾಕ್ಸ್‌ನವಾದ. ಸಾಹಿತ್ಯವು

ವರ್ಗ ಸಂಘರ್ಷದ ಪರಿಕರ ಅಥವಾ ಉಪ ಉತ್ಪಾದನೆಯೆಂದು ಅವನು ಪ್ರತಿಪಾದಿಸುತ್ತಾನೆ. ಈ ವಿಷಯದಲ್ಲಿ ಅಡರ್ನೊ ಸ್ವಲ್ಪ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ಸಾಹಿತ್ಯವೆನ್ನುವುದು ಒಂದೇ ಒಂದು ರಾಜಕೀಯ ದೃಷ್ಟಿಕೋನ ಹೊಂದಿರಬೇಕೆಂದು ಇಲ್ಲ. ಸಾಹಿತ್ಯದ ಹೊರಗೆ ಒಂದು ಪದವು ಕೆಲಸ ಮಾಡುವ ರೀತಿಯಲ್ಲಿ; ಅಥವಾ ಅದು ಹೊಂದುವ ಅರ್ಥವಂತಿಕೆಯ ರೀತಿಯಲ್ಲಿ ಒಂದು ಪದವು ಒಂದು ಕೃತಿಯ ಒಳಗೆ ಕೆಲಸ ಮಾಡುವುದಿಲ್ಲ. ಒಂದು ಪದದ ಸಂವಹನದ ಅರ್ಥವು ಒಂದು ಸಂಸ್ಕೃತಿಯೊಳಗೆ ರೂಪುಗೊಳ್ಳುತ್ತದೆ. ಆದರೆ ಕೃತಿಯೊಳಗೆ ಪದದ ಸಂವಹನವು ತುಂಬಾ ಸರಳವಾದ ಸಂದೇಶವನ್ನು ಮಾತ್ರ ಓದುಗರಿಗೆ ಮುಟ್ಟಿಸುವುದಿಲ್ಲ. ಕಲೆಯೆನ್ನುವುದು ವಾಸ್ತವವನ್ನು ಪ್ರತಿನಿಧಿಸುತ್ತದೆ. ಅದು ಮನುಷ್ಯನ ಪ್ರಜ್ಞೆಯ ಪ್ರಾತಿನಿಧೀಕರಣ. ಆದುದರಿಂದ ಕಲೆಯಲ್ಲಿ ಮನುಷ್ಯನ ಆಂತರಿಕ ಜೀವನವೆನ್ನುವುದು ತುಂಬಾ ಮುಖ್ಯ. ಇದು ಅಡರ್ನೊ ಪ್ರತಿಪಾದಿಸುವ ನಿಲುವು.

ಕಲೆ ಮತ್ತು ಅದರ ಸ್ವಾಯತ್ತತೆ

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಲೆಯು ಸದ್ಯದ ಹಂಗನ್ನು ತೊರೆದು, ಸ್ವಾಯತ್ತವಾಗುತ್ತದೆಯೆಂಬ, ಅಡರ್ನೊೀ 'ಆಧುನಿಕತೆ'ಯನ್ನು ತಾತ್ತ್ವಿಕ ಪರಿಜ್ಞಾನದ ಜೊತೆಯಲ್ಲಿ ಗ್ರಹಿಸುತ್ತಾನೆ. ಆಧುನಿಕತೆಯು ಕೂಡಾ ಬಂಡವಾಳ ವ್ಯವಸ್ಥೆಯ ಗರ್ಭದಿಂದ ಹೊರಬಿದ್ದುದರಿಂದ ಅಸಾಂಗತ್ಯವೇ ಸಹಜ ಲಯವಾಗಿ ಬಿಟ್ಟಿದೆಯೆಂಬ ಅಡರ್ನೊೀನ ಮಾತು ಸಾಹಿತ್ಯ ಸಿದ್ಧಾಂತದಲ್ಲಿ ಬಹಳ ಮುಖ್ಯ ವಾಗ್ವಾದವನ್ನೇ ಎಬ್ಬಿಸಿದೆ. ಆಧುನಿಕ ಜಗತ್ತಿನ ಒಟ್ಟು ಪ್ರಕ್ರಿಯೆಯ ಜೊತೆ ವೈಜ್ಞಾನಿಕ ಮತ್ತು ತಾಂತ್ರಿಕ ಕಸುಬುಗಾರಿಕೆಯು ಬದಲಾವಣೆಯನ್ನು ಸೂಚಿಸುವಂತಿದ್ದರೆ ಅದರ ಜೊತೆಗೆ ಹುಟ್ಟಿಕೊಳ್ಳುವ ಸೃಜನಶೀಲತೆಯು ಈ ವ್ಯವಹಾರದ ಶಾಪದಿಂದ ಬಿಡುಗಡೆಯಾಗಲು ಸಾಧ್ಯವೇ ಇಲ್ಲವೆಂದು ನಂಬುವ ಹರ್ಬರ್ಟ್ ಮಾರ್ಕೂಸ್‌ಗಂತೂ ಹೊಸ ತಾಂತ್ರಿಕತೆ, ಹೊಸ ಸಂವೇದನೆ ಮತ್ತು ಹೊಸ ಸಂಸ್ಕೃತಿಯ ಕುರಿತ ಸಂಬಂಧ ಅನಿವಾರ್ಯವೆಂಬಂತೆ ಕಾಣಿಸಿಕೊಳ್ಳುತ್ತದೆ. ಈತನೂ ಕೂಡಾ ವೈಯಕ್ತಿಕ ನಂಬಿಕೆಯನ್ನೇ ಪ್ರಧಾನ ಭೂಮಿಕೆಯಾಗಿ ಇರಿಸಿಕೊಂಡ ಕಲಾಪ್ರಕಾರವು ಸ್ವಂತದ ಪ್ರೀತಿಯಿಂದಲೇ ಹುಟ್ಟುತ್ತದೆ ಎಂದು ಪ್ರತಿಪಾದಿಸುತ್ತಾನೆ. ಆಧುನಿಕತೆಯನ್ನು ನಾವು ಸಂಸ್ಕೃತಿ ಮತ್ತು ಅದರ ಪರಿಣಾಮದ ಹಿನ್ನೆಲೆಯಲ್ಲಿ ಗ್ರಹಿಸಲು ನೋಡಿದರೆ ಅದರ ಅರಿವು ನಮಗೆ ಉಂಟಾಗುತ್ತದೆ. ಆಧುನಿತೆಯನ್ನು ನಾವು ಗ್ರಹಿಸುವಾಗ ಅದರ ಮಹತ್ವ ಮತ್ತು ಅದು ಎದುರಿಸಿದ ಬಿಕ್ಕಟ್ಟು ಎರಡನ್ನು ನಾವು ಗಮನಿಸಬೇಕು. ನಮಗೆ ಅದು ಗೊತ್ತಿರಬೇಕು. ಅದು ಮನಸ್ಸಿನ ಸಂತೋಷವೆಂದು ಮಾತ್ರವೇ ಗ್ರಹಿಸಬೇಕಾಗಿಲ್ಲ. ಅದೇ ಕಾಲಕ್ಕೆ ಸಂಸ್ಕೃತಿ ಮತ್ತು

ಅದರ ಚಿಂತನೆಗಳನ್ನು ಮತ್ತೆ ಬೇರೆ ರೀತಿ ನೋಡುವ ಅವಕಾಶವೂ ಇದೇ ಕಾಲಕ್ಕೆ ಬಂತು. ಸಂಸ್ಕೃತಿ ಮತ್ತು ಮನುಷ್ಯರ ನಡುವೆ ಉಂಟಾದ ಬಿಕ್ಕಟ್ಟನ್ನು ಹೊಸದಾದ ಸಂಗತಿಯೆಂದು ಹೇಳಲಾಯಿತು. ಸಂಸ್ಕೃತಿಯೇ ಬಹಳ ಮುಖ್ಯವಾದುದು ಎಂದು ಬಂದ ಅಭಿಪ್ರಾಯವನ್ನು ಇದೇ ಹಿನ್ನೆಲೆಯಿಂದಲೂ ಪರಿಶೀಲಿಸಬಹುದು. ಬಂಡವಾಳವಾದಿ ರೂಪದ ಹೊಸ ಮೌಲ್ಯಗಳಂತೂ ಇದನ್ನೇ ಸೂಚಿಸುತ್ತದೆ. ಹೊಸ ನೈತಿಕ ರೂಪಗಳು ಇದೇ ಕಾಲಕ್ಕೆ ಚಾಲ್ತಿಗೆ ಬಂದವು. ಅದನ್ನು ಹೊಸ ಸಾಮಾಜಿಕ ರೂಪಗಳು ಎಂದೂ ಹೇಳಬಹುದು. 1960ರ ಅನಂತರ ಸಂಸ್ಕೃತಿ ಮತ್ತು ಅದರ ಚರ್ಚೆಗಳಲ್ಲಿ ಕಂಡು ಬಂದ ಮೊದಲ ಸಮಸ್ಯೆಯೆಂದರೆ ಅದು ಹೊಸ ಪರಿಭಾಷೆಯನ್ನು ಕಟ್ಟಿಕೊಂಡದ್ದು. ಅದು ಅದಕ್ಕೆ ಅಗತ್ಯವಾಗಿತ್ತು. ಸಿನಿಮಾ, ಪ್ರತೀಕ, ಫ್ಯಾಷನ್, ಜೀವನದ ಕ್ರಮ, ಮಾರುಕಟ್ಟೆ, ಜಾಹೀರಾತುಗಳು ಸಂಸ್ಕೃತಿಯ ಪ್ರಶ್ನೆಯಲ್ಲಿ ಬಂದವು. ಹೊಸ ಸಾಂಸ್ಕೃತಿಕ ನಿರೂಪಣೆಗಳು ಬಂದವು. ಇಂಥಾ ಸಂದರ್ಭದಲ್ಲಿಯೇ ವಾಸ್ತವವಾಗಿ ಸಂಸ್ಕೃತಿ ಮತ್ತು ಅದರ ಸ್ವರೂಪಗಳನ್ನು ಜೀವನ ಮತ್ತು ಅದರ ಗುಣಾತ್ಮಕ ಮೌಲ್ಯ ಎನ್ನುವ ರೀತಿಯಲ್ಲಿ ಚರ್ಚಿಸಲಾಯಿತು. ಮತ್ತು ಇದೇ ಸಂದರ್ಭದಲ್ಲಿ ಹೊಸ ರೀತಿಯ ವಾಗ್ವಾದಗಳು ಚಾಲ್ತಿಗೆ ಬಂದವು. ಉನ್ನತ ಶಿಕ್ಷಣ ಮತ್ತು ಸಾಂಸ್ಕೃತಿಕ ವಾಗ್ವಾದಗಳು ಒಟ್ಟಿಗೆ ಜರುಗಿದವು. ಸಂಸ್ಕೃತಿಯೆಂದರೆ ಅದು ಸಂವೇದನೆ ಮತ್ತು ಮೌಲ್ಯಗಳ ಪ್ರಶ್ನೆ ಎಂದು ಭಾವಿಸಲಾಯಿತು. ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಸಂಸ್ಕೃತಿಯ ಅಧ್ಯಯನಗಳು ಹೊಸ ಮಾದರಿಗಳನ್ನು ಹುಟ್ಟು ಹಾಕಿದವು. ವಿಶ್ವವಿದ್ಯಾನಿಲಯದ ಅನೇಕ ಪಂಡಿತರು ಸಾಂಸ್ಕೃತಿಕ ವಾಗ್ವಾದಗಳನ್ನು ತಾವೇ ರೂಪಿಸಿದ್ದೇವೆ ಎಂದು ಹುಲಿಯು ಗಾಯವನ್ನು ನೆಕ್ಕುವಂತೆ ನೆಕ್ಕುತ್ತಾ ಕೂತರು. ಅವರು ಎತ್ತಿಕೊಂಡ ಅನೇಕ ಸಾಂಸ್ಕೃತಿಕ ಅಧ್ಯಯನಗಳು ತಲೆ ಬುಡವಿಲ್ಲದ ಅಧ್ಯಯನಗಳಾದವು. ಅವರು ಚರ್ಚಿಸಿದ ಸಾಂಸ್ಕೃತಿಕ ಸಿದ್ಧಾಂತಗಳಿಗೆ ಯಾವುದೇ ರೀತಿಯ ಒಂದು ಉದ್ದೇಶವಿದ್ದಂತೆ ಕಾಣಲಿಲ್ಲ. ಅವರ ಸಿದ್ಧಾಂತಗಳಲ್ಲಿ ಮನುಷ್ಯರೇ ಇರಲಿಲ್ಲ. ಮನುಷ್ಯರನ್ನು ಕಳೆದುಕೊಂಡ ಸಂಸ್ಕೃತಿ ಸಿದ್ಧಾಂತಗಳು ಜೋತಾಡತೊಡಗಿದ್ದು ಹಳೆಯ ನೆನಪುಗಳಿಗೆ ಮತ್ತು ಅವು ರೂಪಿಸಿದ ಸಂಪ್ರದಾಯಗಳಿಗೆ. ಆದರೆ ಸಂಸ್ಕೃತಿ ಸಿದ್ಧಾಂತದಲ್ಲಿ ಸ್ವ ಅನನ್ಯತೆ ಮತ್ತು ಅದರ ಪರಿಣಾಮಗಳನ್ನು ಅನೇಕರು ಯೋಚಿಸಲು ಹೋಗಲಿಲ್ಲ. ಸಂಸ್ಕೃತಿ ಸಿದ್ಧಾಂತದಲ್ಲಿ ಇರುವ ಅನೇಕ ಧೋರಣೆಗಳಿಗೆ ಮಾನವೀಯವಾದ ಯಾವುದೇ ಸಂಪರ್ಕವಿದ್ದಂತೆ ಕಾಣಿಸುವುದಿಲ್ಲ. ತಪ್ಪಿದ್ದು ಎಲ್ಲಿ ಎನ್ನುವುದು ಸ್ಪಷ್ಟ: ಈ ಮಾದರಿಯ ಯಾವುದೇ ಸಂಗತಿಗಳು ವಿಶ್ವವಿದ್ಯಾನಿಲಯಗಳಲ್ಲಿ ಜರುಗಿದಾಗ ಅದರ ಸಂಭ್ರಮ ಕಾಣಿಸುತ್ತದೆ. ಅದರ ರೆಟ್ಟಾರಿಸಿಟಿ ಕಾಣಿಸುತ್ತದೆ. ಆದರೆ ಬುದ್ಧಿಜೀವಿಗಳು ಇದನ್ನು ಹೇಳುತ್ತಾ

ಹೋಗಿ ಮತ್ತೆ ಅವರೇ ಒಂದು ಟ್ರಾಪಿಗೆ ಸಿಕ್ಕಿ ಬೀಳುತ್ತಾರೆ. ಆದ ಕತೆಯಿಷ್ಟು, ಗೊತ್ತಿರಬೇಕಾದ ಅಂಶವೆಂದರೆ ಯಾವುದೇ ಸಾಂಸ್ಕೃತಿಕ ಸಿದ್ಧಾಂತಗಳಿಗೆ ಅವುಗಳದೇ ಆದ ಸಾಮಾಜಿಕ ಒತ್ತಡವಿರುತ್ತದೆ. ಆದರೆ ಅದನ್ನು ಬುದ್ಧಿಜೀವಿಗಳು ಗಮನಿಸಲು ಹೋಗುವುದೂ ಇಲ್ಲ. ಸಂಸ್ಕೃತಿ ಸಿದ್ಧಾಂತಗಳ ಮಣ ಭಾರವನ್ನು ಹೊತ್ತು ಕೊಂಡು ಹೋಗುತ್ತಿರುತ್ತಾರೆ. ಮತ್ತು ಅದಕ್ಕೆ ಬೇಕಾದ ಪ್ರದರ್ಶನವನ್ನೂ ಮಾಡುತ್ತಾರೆ. ಅಥವಾ ಅಣಕು ಪ್ರದರ್ಶನದಲ್ಲಿ ಅವರೇ ಸುಸ್ತು ಹೋಗಿರುತ್ತಾರೆ.

ವ್ಯಕ್ತಿ ಮತ್ತು ಅವನ ಸ್ವಾತಂತ್ರ್ಯ

ಅಡರ್ನೊ ಇದನ್ನು ಮತ್ತೆ ಬೇರೆ ಮಾತಿನಲ್ಲಿ ಹೀಗೆ ಹೇಳುತ್ತಾನೆ: ವ್ಯಕ್ತಿಯ ಸ್ವಾಯತ್ತತೆ ಎಂದರೆ ಅದು ಕೇವಲ ನೈತಿಕ ಪ್ರಶ್ನೆಯಲ್ಲ. ಅದರ ಮೂಲಕ ಅದು ರಾಜಕೀಯ ತತ್ವಜ್ಞಾನವೂ ಹೌದು. ಬಂಡವಾಳವಾದದಲ್ಲಿ ವ್ಯಕ್ತಿಯ ತಾತ್ವಿಕತೆಯೆಂದರೆ ಅದೊಂದು ವರ್ಗದ ಪ್ರಶ್ನೆ ಮಾತ್ರವೇ ಆಗಿದೆ. ಬಂಡವಾಳವಾದವು ವ್ಯಕ್ತಿಯನ್ನು ನೋಡುವಾಗಲೇ ಆಯಾ ವ್ಯಕ್ತಿಯ ಅಸ್ತಿತ್ವ ಮತ್ತು ಸಂಸ್ಕೃತಿಯ ಅಸ್ತಿತ್ವವನ್ನು ಗಮನಿಸಲೇ ಬೇಕಾಗುತ್ತದೆ. ಮತ್ತು ಅದಕ್ಕೆ ಒಂದು ಕಾರಣವೂ ಇರುತ್ತದೆ. ಬಂಡವಾಳವಾದವು ವ್ಯಕ್ತಿಯನ್ನು ಅಸ್ಥಿರಗೊಳಿಸುವುದೂ ನಿಜ.

ಜ್ಞಾನ

ತತ್ವಜ್ಞಾನಕ್ಕೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ವರೂಪಕ್ಕೂ ಒಂದು ಸಂಬಂಧವಿದೆ. ಪುನರುಜ್ಜೀವನ ಕಾಲಘಟ್ಟದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಬೆಳವಣಿಗೆಯನ್ನು ಕಂಡುಕೊಂಡಿತು. ಇದರ ಪರಿಣಾಮವಾಗಿ ಆಗ ವ್ಯಕ್ತಿಯನ್ನು ಸ್ವತಂತ್ರ ಮತ್ತು ಮುಕ್ತಜೀವಿ ಎಂದು ಪರಿಗಣಿಸಲಾಯಿತು. ವ್ಯಕ್ತಿಯನ್ನು ದೇವರ ಸೃಷ್ಟಿಯೆಂಬ ನಂಬಿಕೆಯು ಹೊರಟುಹೋಯಿತು. ಅದರ ಬದಲು ವ್ಯಕ್ತಿಯನ್ನು ಮತ್ತು ಅವನ ಅಸ್ತಿತ್ವವನ್ನು ಮುಖ್ಯವಾದ ಸಂಗತಿಯೆಂದು ಹೇಳಲಾಯಿತು. ವಸ್ತು ನಿಷ್ಟತೆಗೆ ಹೆಚ್ಚಿನ ಪ್ರಾಶಸ್ತ್ಯವು ಬಂದಿರುವುದರಿಂದ ಉಳಿದವುಗಳನ್ನು ಗೌಣವೆಂದು ಪರಿಗಣಿಸಲಾಯಿತು. ಇದರಿಂದ ಜ್ಞಾನವನ್ನು ಮತ್ತೆ ಭಿನ್ನವಾದ ರೀತಿಯಲ್ಲಿ ಪರಿಶೀಲಿಸಲಾಯಿತು. ಪುನರುಜ್ಜೀವನ ಕಾಲಘಟ್ಟದ ಚಿಂತನೆಯನ್ನು ಜ್ಞಾನ ಯುಗವೆಂದು ಹೇಳಿದರು ಹಾಗೂ ಇದನ್ನು ಹೇಳುವಾಗ ಕಾರ್ಯ ಮತ್ತು ಕಾರಣದ ಚರ್ಚೆಯು ಬೇರೆಯಾಯಿತು. ಇದನ್ನು ಹೀಗೆಂದು ಹೇಳಿದಾಗ ಮುಖ್ಯವಾದ ಪ್ರಶ್ನೆಯು ಎದುರಾಯಿತು. ಪುನರುಜ್ಜೀವನ ಕಾಲಘಟ್ಟದ ಜ್ಞಾನವನ್ನು ಮುಖ್ಯವಾಗಿ ಭೌತಿಕ ಸತ್ಯವನ್ನು ಮತ್ತು ಅದರ ಪ್ರಮಾಣಗಳೇ ಮುಖ್ಯವಾಯಿತು.

ಮೂರ್ತ ರೂಪದ ಸತ್ಯವೆನ್ನುವುದಕ್ಕೆ ವಿಶೇಷ ಅರ್ಥವು ಬಂದಿತು. ಅದೇ ವೇಳೆಗೆ ಬಂಡವಾಳವಾದವು ಕೆಲವು ರೀತಿಯ ಭ್ರಮೆಯನ್ನು ಕೂಡಾ ರೂಪಿಸಿತು. ನೈತಿಕ ವ್ಯಾಖ್ಯಾನವೂ ಭಿನ್ನವಾಯಿತು. ಆಧುನಿಕ ಸಮಾಜದಲ್ಲಿ ನೈತಿಕತೆಯೇ ಭಿನ್ನವಾದ ರೀತಿಯದು. ಇವುಗಳ ಪರಿಣಾಮ ಸಂಸ್ಕೃತಿಯ ಮೇಲೂ ಆಯಿತು. ಆಧುನಿಕ ಸಮಾಜದಲ್ಲಿ ವಸ್ತುನಿಷ್ಠ ಜ್ಞಾನ ಮತ್ತು ವಿಷಯನಿಷ್ಠ ಜ್ಞಾನದ ಪ್ರಶ್ನೆಯು ಬೇರೆಯಾಗಿದೆ. ಅಡರ್ನೊ ಒಂದು ಕಡೆಗೆ ಹೇಳಿದ ವಿಷಯವೆಂದರೆ ತತ್ವ ಜ್ಞಾನಕ್ಕೂ ಒಂದು ನಿಯಮವೆನ್ನವುದು ಇದೆ.

ಸಾಂಸ್ಕೃತಿಕ ಪ್ರಾಬಲ್ಯ

ಗ್ರಾಂಶಿಯು ಇದನ್ನು ಅತ್ಯಂತ ವಿಸ್ತಾರವಾಗಿ ಚರ್ಚೆಯನ್ನು ಮಾಡಿದ್ದಾನೆ. ನಮ್ಮ ಅನೇಕ ಲೋಕ ಗ್ರಹಿಕೆಗಳನ್ನು ಆಧುನಿಕ ಮಾಧ್ಯಮಗಳು ರೂಪಿಸುತ್ತವೆ. ಸಂಸ್ಕೃತಿ ಮತ್ತು ಅದರ ಕುರಿತಾದ ಅನೇಕ ಚಿಂತನೆಗಳು ಭಿನ್ನವೂ ಆಗಿದೆ. ಯಾವಾಗ ಸಮಾಜವು ಬದಲಾಗುತ್ತಾ ಹೋಗಿದೆಯೋ ಆಗ ಕಲೆಯ ಅರ್ಥವೂ ಬದಲಾಗಿದೆ ಎನ್ನವುದು ಪ್ರಾಥಮಿಕವಾದ ತಿಳುವಳಿಕೆ. ಆದ್ದರಿಂದ ನಾವು ಈಗ ಹೇಳಬೇಕಾದ್ದು ಯಾವುದನ್ನು ಎನ್ನುವುದರ ಅರಿವು ನಮಗೆ ಇರಬೇಕಾಗುತ್ತದೆ. ಅದೇ ರೀತಿಯಲ್ಲಿ ಆಧುನಿಕ ಬಂಡವಾಳವಾದವು ವ್ಯಕ್ತಿ ಅವನ ಹಿತಾಸಕ್ತಿಯನ್ನು ಮಾತ್ರವೇ ಮುಖ್ಯವೆಂದು ಹೇಳುತ್ತದೆ. ಅದರ ಸಾಂಸ್ಕೃತಿಕವಾದ ನಂಬಿಕೆಯು ಬೇರೆಯೂ ಆಗಿದೆ. ಮೂಲಭೂತವಾದವು ಸಂಸ್ಕೃತಿಯನ್ನು ಹೀಗೆ ಇರಬೇಕೆಂದು ನಿರ್ದೇಶಿಸಿದರೆ ಆಧುನಿಕತಾವಾದವು ವ್ಯಕ್ತಿ ಮತ್ತು ಅವನ ವೈಯಕ್ತಿಕ ನಂಬಿಕೆಯನ್ನು ಮಾತ್ರವೇ ಕೇಂದ್ರವಾಗಿರಿಸಿಕೊಂಡಿದೆ. ಸಂಸ್ಕೃತಿ ಮತ್ತು ಅದರ ಕುರಿತಾದ ನಂಬಿಕೆಗಳು ಕಾಲ ಕಾಲಕ್ಕೆ ಬದಲಾಗಿದೆ. ಮತ್ತು ಅದನ್ನು ನಾವು ಹೇಗೆ ಗ್ರಹಿಸಬೇಕು ಎನ್ನುವುದು ದೊಡ್ಡ ಪ್ರಶ್ನೆಯೂ ಹೌದು. ಮಾರ್ಕ್ಸವಾದಿ ಚಿಂತನೆಯು ಭಿನ್ನವಾದ ಬಗೆಯನ್ನು ಹುಟ್ಟು ಹಾಕಿದೆ. ಸತ್ಯ ಮತ್ತು ಅದರ ಹಿನ್ನೆಲೆಯಲ್ಲಿ ಇರುವ ತಾತ್ವಿಕ ಗ್ರಹಿಕೆಗಳನ್ನು ಮಾತ್ರವೇ ಮಂಡಿಸುವುದು ಅಗತ್ಯವೆಂದು ಅದು ನಂಬುತ್ತದೆ. ಸತ್ಯ, ಕಾರ್ಯ ಕಾರಣ ಸಂಬಂಧ, ಅನನ್ಯತೆ, ವಸ್ತು ನಿಷ್ಠತೆ ಮುಂತಾದವುಗಳು ಬಹಳ ಮುಖ್ಯವಾದ ಸಂಗತಿಯಾಗಿದೆ. ವಿಶ್ವಾತ್ಮಕ ಪ್ರಗತಿ ಮತ್ತು ಅದರ ಸಾಧ್ಯತೆಯನ್ನು ಮಾರ್ಕ್ಸವಾದವು ಗ್ರಹಿಸುವ ಕ್ರಮಗಳು ಭಿನ್ನ. ಜೀವನದ ಸರಿಯಾದ ನಿರೂಪಣೆಯೂ ಬಹಳ ಮುಖ್ಯ. ಅನೇಕರು ಇದನ್ನು ಗ್ರಹಿಸುವಾಗ ತಪ್ಪನ್ನು ಮಾಡುತ್ತಾರೆ. ಅವರು ಜೀವನವೆಂದರೆ ನನ್ನ ನಿಲುವು ಮಾತ್ರವೇ ಆಗಿದೆ. ಅದಕ್ಕಿಂತ ಹೊರತಾದುದು ಅಲ್ಲವೆಂದು ಅವರು ಹೇಳುತ್ತಾರೆ. ಅದು ಹಾಗಲ್ಲ. ಆದರೆ ಅನೇಕರು ಮತ್ತೊಂದು ವಿವರವನ್ನು ಮಂಡಿಸುತ್ತಾರೆ. ಅದೆಂದರೆ ಜೀವನವೆಂದರೆ ಅಸಂಗತವೆಂದು ಅವರ

ಅಭಿಪ್ರಾಯವಾಗಿದೆ. ಆದರೆ ವಿಷಯವು ಹಾಗಲ್ಲ. ಪುನರುಜ್ಜೀವನದ ಅನಂತರ ಬಂದ ಅನೇಕ ವಾಗ್ವಾದಗಳಲ್ಲಿ ಇವುಗಳೂ ಸೇರಿಕೊಂಡಿವೆ. ಆಗ ಉದಯವಾದ ಬಂಡವಾಳವಾದಿ ವ್ಯವಸ್ಥೆಯೇ ಈ ಮಾತುಗಳಿಗೆ ಕಾರಣವಾಗಿವೆ. ಅನನ್ಯತೆ ಮತ್ತು ಅದರ ಚಹರೆಗಳಿಗೂ ಆಗಿನ ಇತಿಹಾಸಕ್ಕೂ ಒಂದು ಸಂಬಂಧವಿದೆ.ಹಾಗೆ ನೋಡುವುದಿದ್ದರೆ ಸಂಸ್ಕೃತಿಯ ಸಿದ್ಧಾಂತಗಳು ಈಗ ಮಾರುಕಟ್ಟೆಗೆ ಬಂದಿವೆ, ಯಾರು ಯಾವ ಸಿದ್ಧಾಂತವನ್ನು ಕೊಂಡುಕೊಳ್ಳಬಹುದು. ಮತ್ತು ಅದನ್ನು ಸ್ವಂತದ ಸಿದ್ಧಾಂತ ಎನ್ನುವ ರೀತಿಯಲ್ಲಿ ಮಾತಾಡಲೂಬಹುದು. ಆದರೆ ಯಾವುದೇ ಸಿದ್ಧಾಂತಗಳು ನಮ್ಮನ್ನು ಮತ್ತು ನಮ್ಮ ಆಸಕ್ತಿಯನ್ನು ರೂಪಿಸುತ್ತದೆ. ಅವುಗಳು ಮಾರುಕಟ್ಟೆಗೆ ಬಂದಾಗ ನಾವು ಬರೀ ಗಿರಾಕಿಗಳು ಎನ್ನುವ ಥರ ಕೃತಿಯನ್ನು ಓದುತ್ತೇವೆ. ಆದರೆ ಸಂಸ್ಕೃತಿಯ ಸಿದ್ಧಾಂತಕ್ಕೂ ಒಂದು ಚರಿತ್ರೆಯು ಇದೆ. ಸಂಸ್ಕೃತಿಯ ಅಧ್ಯಯನವು ಈಗ ವಿಶ್ವವನ್ನು ನೋಡುವ ಕ್ರಮವನ್ನು ನಿರ್ದೇಶಿಸುತ್ತದೆ. ಮತ್ತು ಅವುಗಳನ್ನು ನಾವು ಗ್ರಹಿಸುವಾಗ ಅದರ ಅಗತ್ಯ ಮತ್ತು ಅದರ ತಾತ್ವಿಕತೆಯನ್ನು ಅನೇಕರು ಗ್ರಹಿಸಲು ಹೋಗುವುದೂ ಇಲ್ಲ. ಸಂಸ್ಕೃತಿ ಚಿಂತನೆಗೂ ಅದರ ಹಿಂದೆ ಇರುವ ಸನ್ನಿವೇಶಕ್ಕೂ ಒಂದು ಸಂಬಂಧವಿದೆ. ಅದು ಅದರಿಂದ ಹೊರತಾಗಿ ಇರವುದು ಸಾಧ್ಯವಿಲ್ಲ. ಬರೆದಿರುವುದು ಮಾತ್ರವೇ ಸಂಸ್ಕೃತಿಯಲ್ಲ. ಅದರಾಚೆಗೂ ಸಂಸ್ಕೃತಿಯು ಇರುತ್ತದೆ. ಒಂದು ಸಾಂಸ್ಕೃತಿಕ ಸನ್ನಿವೇಶವು ಸಾಮಾಜಿಕ ಮತ್ತು ಆರ್ಥಿಕ ನೆಲೆಗೆ ಅನುಸಾರವಾಗಿ ರೂಪುಗೊಂಡಿರುತ್ತದೆ. ಆದರೆ ಅದು ಅದರ ಪಾಡಿಗೆ ಸ್ವತಂತ್ರವಲ್ಲ. ಅದನ್ನು ಅವುಗಳನ್ನು ಗ್ರಹಿಸಲು ನಮಗೆ ಬೇರೆ ಅನ್ವಯಗಳ ಕ್ರಮಗಳು ಗೊತ್ತಿರಬೇಕಾಗುತ್ತದೆ. ಮತ್ತು ಜನರ ನಂಬಿಕೆಗೂ ಸಂಸ್ಕೃತಿಗೂ ಇರುವ ಸಂಬಂಧವನ್ನು ನಾವು ಗ್ರಹಿಸಲು ಬೇರೆ ಆನ್ವಯಿಕ ಕ್ರಮವನ್ನೂ ಇಟ್ಟುಕೊಳ್ಳಬೇಕಾಗುತ್ತದೆ. ಆದರೆ ಅದು ಯಾವುದು ಎನ್ನವುದೇ ಬಹಳ ದೊಡ್ಡ ಪ್ರಶ್ನೆಯೂ ಆಗಿದೆ. ಜನರ ನಂಬಿಕೆಯನ್ನು ನಾವು ಹೇಗೆ ಅನ್ವಯಿಸಬೇಕು ಎನ್ನುವುದೇ ತಾತ್ವಿಕ ಪ್ರಶ್ನೆಯಾಗಿದೆ. ಇದನ್ನು ಮಾರ್ಕ್ಸವಾದವು ಹೇಳುತ್ತದೆ. ನಮಗೆ ಗೊತ್ತಿರುವ ಪರಿಕರವು ಯಾವ ಬಗೆಯದು ಎನ್ನುವುದೇ ಮುಖ್ಯ. ಈ ದೃಷ್ಟಿಯಿಂದಲೇ ಸಂಸ್ಕೃತಿಯನ್ನು ನಾವು ಆನ್ವಯಿಕವಾಗಿ ನೋಡುವಾಗ ಚರಿತ್ರೆ ಮತ್ತು ಅದರ ನೆಲೆಯನ್ನು ಗ್ರಹಿಸಬೇಕಾಗುತ್ತದೆ. ದ್ವಿತೀಯ ಮಹಾಯುದ್ಧದ ತರುವಾಯ ಸಂಸ್ಕೃತಿ ಮತ್ತು ಅದರ ಕುರಿತಾದ ಚರ್ಚೆಗಳಿಗೆ ಹೆಚ್ಚಿನ ಮಹತ್ವವು ಬಂದಿತು. ಆಗ ಪ್ರಾರಂಭವಾದ ಅನೇಕ ಹೊಸ ಸಾಂಸ್ಕೃತಿಕ ಸಿದ್ಧಾಂತಗಳಿಗೂ ನಾಗರಿಕ ಹಕ್ಕುಗಳಿಗೂ ಸಂಬಂಧವಿದೆ. ರಾಷ್ಟ್ರೀಯತೆ, ಅಣುಬಾಂಬ್ ನಿರೋಧ, ಹಿಂಸೆಯ ಕುರಿತಾದ ಪ್ರತಿರೋಧ ಎಲ್ಲವೂ ಆಗ ಅಗತ್ಯವಾಗಿತ್ತು. ಇದಕ್ಕೂ ಆಗಿನ ಸಾಂಸ್ಕೃತಿಕ ಚಟುವಟಿಕೆಗೂ ಒಂದು ಸಂಬಂಧವಿದೆ. ಮಾಧ್ಯಮಗಳಿಂದಾಗಿ ಆಗ ಜನಪ್ರಿಯ

ಸಂಸ್ಕೃತಿ ಮತ್ತು ಉಪಸಂಸ್ಕೃತಿ, ಯುವ ಸಂಸ್ಕೃತಿಯ ಪರಿಕಲ್ಪನೆಗಳು ಬಂದವು. ಇವುಗಳು ಆಗ ಹೊಸ ರೀತಿಯ ಸಂವಾದವನ್ನು ರೂಪಿಸಿದ್ದು ನಿಜ. ಆಗ ಸಾಮಾಜಿಕ ಶ್ರೇಣೀಕರಣವೂ ಬದಲಾದವು. ಹೊಸ ಪರಿವರ್ತನೆಗಳು ಕಾಣಿಸಿಕೊಂಡವು. ಸ್ವಯಂನಿಗ್ರಹವನ್ನು ಪ್ರತಿಪಾದಿಸಲಾಯಿತು. ಪರಿವರ್ತನೆಗೂ ಸಾಹಿತ್ಯದ ಮೀಮಾಂಸೆಗೂ ಒಂದು ಸಂಬಂಧವಿದೆ. ಅಗತ್ಯಗಳು ಬದಲಾದವು. ಇವುಗಳನ್ನು ನಾವು ಸಾಹಿತ್ಯೇತರ ಕಾರಣಕ್ಕೂ ಪರಿಶೀಲಿಸಬೇಕು. ಆಗಿನ ಸಂದರ್ಭವು ಹೇಗಿತ್ತೆಂದರೆ ಮನುಷ್ಯರ ಸಾಧ್ಯತೆಗಳೇ ಭಿನ್ನವಾದವು. ಬಂಡವಾಳವಾದ ಮತ್ತು ಸಾಂಸ್ಕೃತಿಕ ನಿಲುವುಗಳ ನಡುವೆ ಒಂದು ಸಂಘರ್ಷವುಂಟಾಯಿತು. ಇದನ್ನು ಆಗಿನ ಬುದ್ಧಿಜೀವಿಗಳನ್ನು ಗಮನಿಸಬಹುದು. ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ಕೇವಲ ಬಾಹ್ಯವೆಂದು ಹೇಳಬಾರದು. ಮನುಷ್ಯ ಮತ್ತು ಅವನ ಹಿನ್ನಲೆಗಳಿಗೂ ಅವನ ಆಲೋಚನಾಕ್ರಮಕ್ಕೂ ಆಂತರಿಕ ಸಂಬಂಧವಿದೆ. ಮಹಾಯುದ್ಧದ ತರುವಾಯ ಸಂಸ್ಕೃತಿಯ ಚಿಂತನೆ ಮತ್ತು ಆಗ ಉದಯವಾದ ಮಧ್ಯಮವರ್ಗಕ್ಕೂ ಒಂದು ಸಂಬಂಧವಿದೆ. ಸಂಸ್ಕೃತಿಯ ಚರ್ಚೆಗೆ ಒದಗಿ ಬಂದ ಮಹತ್ವದ ತಿರುವು ಇದು. ಸಾಂಸ್ಕೃತಿಕ ಆಲೋಚನೆ ಮತ್ತು ಅದರ ಮಹತ್ವವೇ ಬೇರೆಯಾಯಿತು. ಬಂಡವಾಳವಾದ, ಪ್ರಭುತ್ವಕ್ಕೆ ಬೂರ್ಜ್ವಾವರ್ಗಗಳಿಗೆ; ಸಾಂಸ್ಕೃತಿಕ ಸಂಸ್ಥೆಗಳಿಗೆ ಕೆಲವು ಶಕ್ತಿಗಳು ಇರುತ್ತವೆ. ಅದರ ಆಧಾರದ ಮೇಲೆ ಸಂಸ್ಕೃತಿಯನ್ನು ನಿರ್ದೇಶಿಸುತ್ತವೆ. ಇದನ್ನು ನಾವು ಅಧಿಪತ್ಯದ ಸಂಸ್ಕೃತಿ ಎಂದೂ ಹೇಳಬಹುದು. ಅದು ಕೆಲವನ್ನು ಹೆಚ್ಚು ಪ್ರಚಾರ ಮಾಡುತ್ತವೆ. ಅದರ ಮುಖೇನ ಕೆಲವು ಹಿತಾಸಕ್ತಿಯು ಮುಖ್ಯವಾಗುತ್ತವೆ. ಅಧಿಪತ್ಯ ಎನ್ನುವುದೇ ಕ್ರಮೇಣ ಒಂದು ಸಿದ್ಧಾಂತವಾಗಿ ರೂಪುಗೊಳ್ಳುತ್ತವೆ. ಜನರು ಅದನ್ನು ಸತ್ಯ ಎಂದು ಭಾವಿಸುತ್ತಾರೆ. ಪ್ರಭುತ್ವ ಎನ್ನುವುದು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ ಯಾವುದನ್ನು ನಾವು ಎಲ್ಲರ ಜ್ಞಾನ ಎಂದು ಹೇಳುತ್ತೇವೆಯೋ ಅದು ಕೂಡಾ ಇದರಿಂದ ನಿರ್ಧರಿತವಾಗುತ್ತದೆ ಎಂದು ಅರ್ಥ ಮಾಡಿಕೊಳ್ಳುವುದು.

ಪ್ರತಿ ಪ್ರಾಬಲ್ಯ

ಸಾಂಸ್ಕೃತಿಕ ಪ್ರಶ್ನೆಯೆಂದರೆ ಅದರ ಸ್ವರೂಪವನ್ನು ನಾವು ಹೇಗೆ ಬೇಕಾದರೂ ಮಾತಾಡುವ ಸಂಗತಿಯೆಂದು ಅನೇಕರು ಭಾವಿಸಿದ್ದಾರೆ. ಆದರೆ ಅದನ್ನು ಹಾಗೆ ಭಾವಿಸುವುದು ಸರಿಯೇ ಎನ್ನುವುದು ಮಾರ್ಕ್ಸವಾದವು ಎತ್ತಿಕೊಳ್ಳುವ ಪ್ರಶ್ನೆಯಾಗಿದೆ. ಇದರಿಂದ ಮಾರ್ಕ್ಸವಾದವು ಹೇಳುವ ಸಂಗತಿಯು ಭಿನ್ನವಾಗಿದೆ. ರಾಜಕಾರಣ, ಆರ್ಥಿಕತೆ, ಮಾರುಕಟ್ಟೆ, ಸಮಾಜ, ಸಾಮಾಜಿಕ ಸಂಬಂಧಗಳನ್ನು ಚರಿತ್ರೆಯು ಸಂಸ್ಕೃತಿಯನ್ನು ಬದಲಿಸುತ್ತದೆ. ಸಮೂಹ ಕೇಂದ್ರಿತ ರಾಜಕಾರಣವು ಸಂಸ್ಕೃತಿಯನ್ನು

ಬದಲಿಸುತ್ತದೆ. ಗ್ರಾಹಕ ಕೇಂದ್ರಿತ ಸಂಸ್ಕೃತಿಯು ಭಿನ್ನವಾದ ಚಹರೆಯನ್ನು ಹೊಂದಿದೆ. ಆಧುನಿಕ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಅದು ಸಂಕೇತದ ಸ್ವರೂಪವನ್ನು ನಾವು ಅರ್ಥಮಾಡಿಕೊಳ್ಳಬೇಕು. ಆಧುನಿಕ ಸಾಂಸ್ಕೃತಿಕ ಚಿನ್ಹೆಗಳು ಬದಲಾಗಿವೆ. ಹೊಸ ರೀತಿಯ ಅಲೋಚನೆಗಳು ಬಂದಿವೆ. ಹೊಸ ಸಂವಹನ ಮಾಧ್ಯಮಗಳು ಬಂದಿವೆ. ನಮ್ಮ ಧ್ವನಿಯನ್ನು ನಾವು ಮತ್ತೆ ಮತ್ತೆ ಟೇಪ್ ರೆಕಾರ್ಡರ್‌ನಲ್ಲಿ ಕೇಳಬಹುದು. ನಮ್ಮ ಚಿತ್ರಗಳನ್ನು ನಾವೇ ಮುದ್ರಿಸಿಕೊಳ್ಳಬಹುದು. ರೆಕಾರ್ಡ ಮಾಡಿಕೊಳ್ಳುವಾಗ ನಮ್ಮ ಧ್ವನಿಯನ್ನು ಕಲಬೆರೆಕೆಯನ್ನು ಮಾಡಬಹುದು. ಆದ್ದರಿಂದ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವಾಗ ಎಲ್ಲವೂ ವಿಸ್ಮೃತಿಗೆ ಒಳಗಾಗಿದೆ ಎಂದು ಭಾವಿಸಬೇಕಾಗಿಲ್ಲ. ಮತ್ತು ಈಗ ಸಂಸ್ಸೃತಿಯ ಪ್ರಶ್ನೆಯು ಮೂಲಭೂತವಾಗಿಅನೇಕ ಪ್ರಶ್ನೆಗಳನ್ನು ಎತ್ತಿಕೊಂಡಿವೆ. ಅದರನ್ನು ನಾವು ವ್ಯಾಖ್ಯಾನಿಸುವಾಗ ಅದರ ಸ್ವರೂಪವನ್ನು ಮತ್ತು ಅದರ ಹಿಂದಿರುವ ಒತ್ತಾಯಗಳನ್ನು ನಾವು ಕಾಣಬಹುದು. ಕಲೆ. ಗಂಡು ಹೆಣ್ಣು, ಸಿನಿಮಾ, ಕಂಪ್ಯೂಟರ್, ಕುಟುಂಬ, ಅಧಿಕಾರ, ಭಾಷೆ, ಹುಚ್ಚು, ಉನ್ಮಾದ, ಜನಾಂಗ ಹೀಗೆ ಅನೇಕ ಪ್ರಶ್ನೆಗಳನ್ನು ಸಂಸ್ಕೃತಿಯು ಎತ್ತಿಕೊಳ್ಳಬೇಕಾಗುತ್ತದೆ. ಮಾರ್ಕ್ಸವಾದಿ ಸಿದ್ಧಾಂತದಲ್ಲಿ ಬರೀ ಬುದ್ಧಿಜೀವಿಗಳು ಮಾತ್ರವೇ ಇಲ್ಲ. ಅದರ ಹಿಂದೆ ಜನಸಾಮಾನ್ಯರು ಇದ್ದಾರೆ ಎನ್ನವುದರ ಅರಿವು ಮಾರ್ಕ್ಸ್‌ವಾಕ್ಕೆ ಇದೆ. ಆದರೆ ಈ ಚರ್ಚೆಗಳನ್ನು ನಾವು ಯಾವ ರೀತಿಯಲ್ಲಿ ಮಾಡುತ್ತೇವೆ ಎನ್ನವುದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಅನೇಕರು ಇದನ್ನು ಚರ್ಚಿಸುವಾಗ ಸಂಸ್ಸೃತಿಯನ್ನು ಕೇವಲ ನಿರ್ಲಿಪ್ತವಾದುದು ಎಂದು ಭಾವಿಸಿಕೊಳ್ಳುವುದೂ ಇದೆ. ಆದರೆ ಅದು ಸಾಧ್ಯವಾಗದ ವಿಚಾರ. ಟಿ.ವಿ., ಕಂಪ್ಯೂಟರ್. ದೂರವಾಣಿಗಳು ನಮ್ಮ ಲೋಕ ಗ್ರಹಿಕೆಯನ್ನು ಮಂಡಿಸುತ್ತದೆ. ಇವುಗಳು ಆಧುನಿಕತೆಯನ್ನು ಸೂಚಿಸುತ್ತದೆ. ಆದರೆ ಯಾವುದನ್ನು ಆಧುನಿಕತೆ ಮತ್ತು ಆದರ ಪರಿಣಾಮಗಳು ಎಂದು ಕರೆಯುತ್ತೇವೆಯೋ ಅದರಲ್ಲಿ ಅನೇಕ ಸಂಗತಿಗಳು ಇವೆ. ಇದರ ಮೂಲಕ ನಾವು ಅರ್ಥ ಮಾಡಿಕೊಳ್ಳಬೇಕಾದ ಅನೇಕ ಅಂಶಗಳಿವೆ. ಸಂಸ್ಕೃತಿಯೆಂದರೆ ಅದು ಬಿಳಿಯ ಹಾಳೆಯೂ ಅಲ್ಲ. ಕಪ್ಪು ಪರದೆಯೂ ಅಲ್ಲ. ಆಧುನಿಕತೆಯ ಪ್ರಭಾವವು ಒಂದು ದೇಶದಲ್ಲಿ ಒಂದು ರೀತಿಯಲ್ಲಿ ಇದ್ದರೆ ಮತ್ತೊಂದು ದೇಶದಲ್ಲಿ ಮತ್ತೊಂದು ರೀತಿಯಲ್ಲಿ ಇರುತ್ತದೆ. ಮತ್ತು ಅದರೆ ಸಾಧ್ಯತೆಯು ಭಿನ್ನವೂ ಆಗಿತ್ತು. ಆಧುನಿಕತೆಯನ್ನು ತುಂಬಾ ಕ್ಯಾಶುವಲ್ ಅನ್ನುವ ರೀತಿಯಲ್ಲಿ ನಾವು ಬಳಸುವಂತೆ ಇಲ್ಲ. ಅದರ ಹಿನ್ನೆಲೆಯಲ್ಲಿ ಬಹುತ್ವ ಮತ್ತು ವ್ಯಕ್ತಿವಾದವು ಜೊತೆಗೆ ಸೇರಿತ್ತು. ಬಹುತ್ವ ಎನ್ನುವುದು ಅದರ ಒಂದು ದೃಷ್ಟಿಕೋನವೂ ಹೌದು. ಆದರೆ ಆಧುನಿಕ ಸಾಹಿತ್ಯದ ಸಿದ್ಧಾಂತಗಳು ಬಹತ್ವವನ್ನು ವ್ಯಾಪಕವಾಗಿ ಚಾಲ್ತಿಗೆ ತರುತ್ತಿವೆ.

ವಿಪತ್ತು ಮತ್ತು ವಿಜಯ

ಯಾವುದು ದ್ವಂದ್ವಾತ್ಮಕ ಮತ್ತು ಯಾವುದು ಪುನರುಜ್ಜೀವನ ಎನ್ನುವ ಪ್ರಶ್ನೆಯನ್ನು ಅಡರ್ನೋ ಮತ್ತು ಹೊರ್ಕೆಮಾರ್ ಕೇಳುತ್ತಾರೆ. ಮೇಲು ನೋಟಕ್ಕೆ ಇದು ಅತ್ಯಂತ ತದ್ವಿರುದ್ಧವಾದ ಪದಗಳಂತೆ ಭಾಸವಾಗುತ್ತವೆ. ಅವರ ಪ್ರಕಾರ ಇದು ಅತ್ಯಂತ ಮುಖ್ಯವಾದ್ದು. ಪುನರುಜ್ಜೀವನ ಎನ್ನುವುದು ಪ್ರಾರಂಭವಾದ್ದು ಬುದ್ಧಿಜೀವಿಗಳನ್ನು ಗಮನಿಸಿಕೊಂಡು. ಆದ್ದರಿಂದ ಇದನ್ನು ಅವರಿಬ್ಬರೂ ಸಂಸ್ಕೃತಿಯ ಹಿನ್ನೆಲೆಯಲ್ಲಿ ಗಮನಿಸಿದ್ದಾರೆ ಎನ್ನುವುದು ಅತ್ಯಂತ ಮುಖ್ಯವಾದ ಅಂಶ. ಪುನರುಜ್ಜೀವನ ಮತ್ತು ಅದರ ಪರಿಣಾಮವನ್ನು ನಾವು ಒಂದು ನಿಯಮದ ಒಳಗೆ ತರಲು ಸಾಧ್ಯವಿಲ್ಲ ಆದಕ್ಕೂ ಹಿಂದೆ ಸಮಾಜ ಇನ್ನೊಂದು ಥರ ಇತ್ತು ಎಂದು ಅಡರ್ನೋ ಭಾವಿಸುತ್ತಾನೆ. ಅದಕ್ಕೂ ಹಿಂದೆ ಇದ್ದ ಸಮಾಜವು ಆದಿಭೌತಿಕವಾದ ಸಂಗತಿಯನ್ನು ನಂಬಿತ್ತು. ಇದು ಒಂದು ಅಂಶ. ಎರಡನೆಯದಾಗಿ ಅದು ವೈಚಾರಿಕವಾದ ತಳಹದಿಯನ್ನು ಹೊಂದಿರಲಿಲ್ಲ. ಹೆಚ್ಚು ಕಡಿಮೆ ಇದು ಮಧ್ಯಕಾಲದ ತನಕ ಮುಂದುವರಿದಿತ್ತು ಹದಿನೆಂಟನೆಯ ಶತಮಾನದ ವರೆಗೆ ಇದೇ ಕಲ್ಪನೆಯು ಇದ್ದುದು ಸತ್ಯ.

ವ್ಯಕ್ತಿ ಮತ್ತು ಸಂಬಂಧಗಳು

ಗ್ರಾಂಶಿಯು ವ್ಯಕ್ತಿಯನ್ನು ನೋಡುವಾಗ ಅದರಲ್ಲಿ ಸಮೂಹವೂ ಇರುತ್ತದೆ ಎಂದು ಹೇಳುತ್ತಾನೆ. ಸಾಮಾಜಿಕ ರಚನೆಗಳು ಮತ್ತು ವ್ಯಕ್ತಿತ್ವಕ್ಕೆ ಒಂದು ಸಂಬಂಧವು ಇದೆ ಎಂದು ಅವನು ಭಾವಿಸುತ್ತಾನೆ. ಸಾಮಾಜಿಕ ವ್ಯಕ್ತಿತ್ವ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅವನು ಅದಕ್ಕೆ ಒಂದು ನಿಯಮವು ಇರುತ್ತದೆ ಎಂದು ಹೇಳುತ್ತಾನೆ. ಚರಿತ್ರೆಯೊಂದಿಗೆ ನಾವು ಮುಖಾಮುಖಿ ಆಗುವುದರ ಮೂಲಕವೇ ವ್ಯಕ್ತಿತ್ವವು ಆಗುತ್ತದೆ. ಬಾಹ್ಯ ಮತ್ತು ಅದರ ಜೊತೆಗೆ ನಾವು ಇಟ್ಟುಕೊಳ್ಳುವ ಸಂಬಂಧವೇ ಅತ್ಯಂತ ಮುಖ್ಯವಾಗುತ್ತದೆ. ಮನುಷ್ಯ ಮತ್ತು ಅವನ ಸ್ವಭಾವದಲ್ಲಿ ಎರಡು ಅಂಶಗಳು ಅತ್ಯಂತ ಮುಖ್ಯ. ಒಂದು ಅವನು ಸಮಾಜದ ಜೊತೆಗೆ ಹೇಗೆ ಬೆರೆಯುತ್ತಾನೆ ಎನ್ನುವುದು ಒಂದು ಪ್ರಮುಖವಾದ ವಿಚಾರವು ಆಗಿದೆ. ಮೊದಲು ಇದ್ದ ರೀತಿಯಲ್ಲಿ ಅನಂತರ ಇರುವುದಿಲ್ಲ. ಸಮೂಹ ಮತ್ತು ನಮ್ಮ ವ್ಯಕ್ತಿತ್ವವು ಪರಸ್ಪರ ಬೆರೆಯುವುದರಿಂದ ವ್ಯಕ್ತಿತ್ವವು ವ್ಯತ್ಯಾಸವಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ನಮ್ಮ ಸಂವಾದಗಳು ಮತ್ತು ನಾವು ಸಮಾಜದಲ್ಲಿ ಬೆರೆಯುವ ಗುಣಗಳು ನಮಗೆ ಜೀವನದಲ್ಲಿ ವಿಶಿಷ್ಟವಾದ ನಿಲುವನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಅವನು ಹೇಳುತ್ತಾನೆ.

ವ್ಯಕ್ತಿ

ಗ್ರಾಂಶಿಯು ವ್ಯಕ್ತಿಯನ್ನು ನೋಡುವಾಗ ಅದರಲ್ಲಿ ಸಮೂಹವೂ ಇರುತ್ತದೆ ಎಂದು ಹೇಳುತ್ತಾನೆ. ಸಾಮಾಜಿಕ ರಚನೆಗಳು ಮತ್ತು ವ್ಯಕ್ತಿತ್ವಕ್ಕೆ ಒಂದು ಸಂಬಂಧವು ಇದೆ ಎಂದು ಅವನು ಭಾವಿಸುತ್ತಾನೆ. ಸಾಮಾಜಿಕ ವ್ಯಕ್ತಿತ್ವ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅವನು ಅದಕ್ಕೆ ಒಂದು ನಿಯಮವು ಇರುತ್ತದೆ ಎಂದು ಹೇಳುತ್ತಾನೆ. ಚರಿತ್ರೆಯೊಂದಿಗೆ ನಾವು ಮುಖಾಮುಖಿ ಆಗುವುದರ ಮೂಲಕವೇ ವ್ಯಕ್ತಿತ್ವವು ಆಗುತ್ತದೆ. ಬಾಹ್ಯ ಮತ್ತು ಅದರ ಜೊತೆಗೆ ನಾವು ಇಟ್ಟುಕೊಳ್ಳುವ ಸಂಬಂಧವೇ ಅತ್ಯಂತ ಮುಖ್ಯವಾಗುತ್ತದೆ. ಮನುಷ್ಯ ಮತ್ತು ಅವನ ಸ್ವಭಾವದಲ್ಲಿ ಎರಡು ಅಂಶಗಳು ಅತ್ಯಂತ ಮುಖ್ಯ. ಒಂದು ಅವನು ಸಮಾಜದ ಜೊತೆಗೆ ಹೇಗೆ ಬೆರೆಯುತ್ತಾನೆ ಎನ್ನುವುದು. ಮತ್ತೊಂದು ಜೀವನದ ಬೆಳವಣಿಗೆ.

ಮನುಷ್ಯ ಮತ್ತು ಮನುಷ್ಯತ್ವ

ಗ್ರಾಂಶಿಯು ನಮಗೆ ಇನ್ನೊಂದು ವಿಚಾರವನ್ನು ಹೇಳುತ್ತಾನೆ: ಮನುಷ್ಯ, ಮನುಷ್ಯತ್ವ, ವ್ಯಕ್ತಿತ್ವ, ವೈಯಕ್ತಿಕತೆಗಳು ನಮ್ಮ ಮೇಲೆ ಬೇರೆ ಬೇರೆ ಪ್ರಭಾವವನ್ನು ಬೀರುತ್ತದೆ. ಇದನ್ನು ನಾವು ನಮ್ಮ ಸಂಕಥನಗಳಲ್ಲಿ ಕಾಣಬಹುದು. ಆದರೆ ನಾವು ಯಾರ ಜೊತೆಗೆ ಮಾತಾಡುತ್ತೇವೆ ಮತ್ತು ಯಾರ ಜೊತೆಗೆ ಮಾತಾಡುವುದಿಲ್ಲ ಎನ್ನುವುದು ನಮ್ಮ ನಮ್ಮ ಆಯ್ಕೆಗೆ ಸಂಬಂಧಪಟ್ಟಿದೆ. ಯಾವುದೇ ಸಂಕಥನಗಳು ನಮಗೆ ಈವತ್ತು ವ್ಯಕ್ತಿಯನ್ನು; ಅವನ ಚಹರೆಗಳನ್ನು ಹೆಚ್ಚು ನಿರ್ಧಾರ ಮಾಡುತ್ತದೆ. ನಿಜ. ಬಾಹ್ಯದಲ್ಲಿ ಒಂದು ಕ್ರಿಯಾತ್ಮಕವಾದ ಸಂಬಂಧವು ಉಂಟಾಗುವುದು ನಮಗೆ ನಮ್ಮ ಮಾತು ಮತ್ತು ಅದರ ಚಟುವಟಿಕೆಯಿಂದ. ಆಧುನಿಕ ಮನುಷ್ಯ ಮತ್ತು ಅವನ ಚಹರೆಗಳು ಹೇಗೆ ಬೇರೆಯಾಗುತ್ತವೆ ಎಂದು ಅವನು ವಿವರಿಸುತ್ತಾನೆ. ಆದರೆ ಒಂದು ವ್ಯವಸ್ಥೆಯು ಹೇಗೆ ಮನುಷ್ಯರ ಸಂಬಂಧವನ್ನು ರೂಪಿಸುತ್ತದೆ ಎನ್ನುವುದು ಇಲ್ಲಿ ಮುಖ್ಯವಾಗಿದೆ. ಕೈಗಾರಿಕೆಗಳು ಒಂದು ಬಗೆಯ ಸಂಬಂಧವನ್ನು ಹೇಳುತ್ತದೆ. ಗ್ರಾಮ ಸಮಾಜವು ಮತ್ತೊಂದು ಬಗೆಯ ಸಂಬಂಧವನ್ನು ರೂಪಿಸುತ್ತದೆ. ಅದರಲ್ಲಿ ವಸ್ತುನಿಷ್ಟ ಸಂಬಂಧ ಮತ್ತು ಭಾವನಿಷ್ಟವಾದ ಸಂಬಂಧವೆನ್ನುವುದು ಇರುತ್ತದೆ. ನಾವು ಯಾವ ಸಂಬಂಧವನ್ನು ರೂಪಿಸುತ್ತೇವೆ ಮತ್ತು ಅದರಲ್ಲಿ ಯಾವುದು ಹೆಚ್ಚು ಮುಖ್ಯವಾಗುತ್ತದೆ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ನಮ್ಮ ಮಾತುಕತೆಗಳ ಕೇಂದ್ರವು ಯಾವುದು ಎನ್ನುವುದು ಅತ್ಯಂತ ಮುಖ್ಯ. ನಮ್ಮ ಸಂವಹನದಲ್ಲಿ ಕೆಲವು ಕೇಂದ್ರಗಳು ಇರುತ್ತವೆ. ಹೊರಗಿನ ಸನ್ನಿವೇಶಕ್ಕೂ ನಮ್ಮ ಸಂವಾದಗಳಿಗೂ ಸಂಬಂಧವು ಇರುತ್ತದೆ. ಸಮಾಜ ಮತ್ತು ಅದರ

ಸಂಬಂಧದಲ್ಲಿ ಮಾತುಕತೆಯು ಅತ್ಯಂತ ಮಹತ್ವದ್ದೂ ಆಗಿದೆ. ಅದನ್ನು ನಾವು ಮರೆಯಲು ಆಗುವುದೂ ಇಲ್ಲ. ಅದು ಹೆಚ್ಚು ಕ್ರಿಯಾಶೀಲವಾದ ಸಂಗತಿಯೂ ಆಗಿದೆ. ಮಾತುಕತೆಯು ಪರಸ್ಪರವಾದ ಸಂಬಂಧವನ್ನು ಹೇಳುತ್ತದೆ. ಆದರೆ ಇದನ್ನು ನಾವು ತಾತ್ವಿಕವಾಗಿಯೂ ಗಮನಿಸಬೇಕಾಗುತ್ತದೆ. ವ್ಯಕ್ತಿ ಮತ್ತು ಅವನ ಸಂಕಥನಗಳ ರೂಪಗಳನ್ನು ಅವನಲ್ಲಿ ಮಾತ್ರವೇ ನೋಡಬೇಕೆ ಅಥವಾ ಅದನ್ನು ಒಂದು ಸಮಾಜದ ರೂಪವಾಗಿ ನೋಡಬೇಕೆ ಎನ್ನುವುದು ತತ್ವಜ್ಞಾನದ ಪ್ರಶ್ನೆಯೂ ಹೌದು. ಮನುಷ್ಯ ಮತ್ತು ಅವನ ಭಾಷೆಯನ್ನು ನಾವು ಪವಿತ್ರವಾಗಿ ನೋಡಬೇಕೆ ಅಥವಾ ಧಾರ್ಮಿಕವಾಗುವಂತೆ ನೋಡುತ್ತೇವೆಯೇ ಅಥವಾ ಅದನ್ನು ವ್ಯಕ್ತಿಗತವಾಗಿ ನೋಡುವುದೇ ಅಥವಾ ಭಾಷೆಯನ್ನು ಎಲ್ಲರ ನಡುವೆ ಇರುವ ಒಂದು ಸಾಮಾನ್ಯವಾದ ಪ್ರಕ್ರಿಯೆಯಂತೆ ನೋಡುವುದೇ ಎನ್ನುವುದು ಅತ್ಯಂತ ಮುಖ್ಯವಾದ ಅದನ್ನು ಗ್ರಾಂಶಿಯು ಮಾತ್ರ ಸಾಮಾನ್ಯವಾದ ಒಂದು ಸಂಕಥನವೆನ್ನುವಂತೆ ನೋಡುತ್ತಾನೆ. ಮಾತು ಮತ್ತು ಅದರ ಭವ್ಯತೆಯನ್ನು ಕ್ರೋಚೆಯು ಹೇಳಿದ್ದ. ವ್ಯಕ್ತಿಯ ಮಾತುಗಳನ್ನು ನಾವು ಮನುಷ್ಯನ ಒಂದು ಭಾಗವಾಗಿಯೇ ನಾವು ನೋಡಬೇಕು ಎಂದು ಗ್ರಾಂಶಿಯು ಹೇಳುತ್ತಾನೆ. ಮನುಷ್ಯತ್ವ ಎನ್ನುವುದು ಅವನ ವ್ಯಕ್ತಿತ್ವದ ಭಾಗವಾಗಿಯೇ ನೋಡಬೇಕಾಗುತ್ತದೆ ಎಂದು ಅವನು ಭಾವಿಸುತ್ತಾನೆ. ವ್ಯಕ್ತಿಗಳು ಮತ್ತು ಅವರ ಸಂಬಂಧವನ್ನು ಗ್ರಾಂಶಿಯು ಕ್ರಿಯಾಶೀಲವಾದದ್ದು ಮತ್ತು ಪ್ರಜ್ಞಾಪೂರ್ವಕವಾದದ್ದು ಎಂದು ಎಂದು ಹೇಳುತ್ತಾನೆ. ಅದರಲ್ಲಿ ಸಾಮೂಹಿಕವಾದ ಅರ್ಥವೂ ಇದೆ. ಅದರಲ್ಲಿ ನಮಗೆ ಕೆಲವು ಮಾದರಿಯ ಎಚ್ಚರವೂ ಇರುತ್ತದೆ. ಯಾರನ್ನು ನಾವು ವ್ಯಕ್ತಿಗಳು ಎಂದು ಹೇಳುತ್ತೇವೆಯೋ ಅವರು ವಾಸ್ತವವಾಗಿ ಸಾಮಾಜೀಕರಣದ ಒಂದು ಭಾಗವೂ ಆಗಿರುತ್ತಾನೆ. ಆದ್ದರಿಂದ ವ್ಯಕ್ತಿತ್ವ ಎನ್ನುವುದು ಆಗುತ್ತದೆ. ಅದರಲ್ಲಿ ವಿಶಿಷ್ಟತೆಯು ಇರುವುದು ಆಯಾ ಸಮಾಜ ಮತ್ತು ಅದರ ಅರ್ಥದಲ್ಲಿ ಎನ್ನುವುದು ಗ್ರಾಂಶಿಯ ವಾದ.

ಹೆಜೆಮನಿ

ಸಂಸ್ಕೃತಿಯ ಅಧ್ಯಯನದಲ್ಲಿ ಗ್ರಾಂಶಿಯು ಬಳಸಿದ ಪರಿಭಾಷೆಯೆಂದರೆ ಹೆಜೆಮನಿ. ಯಜಮಾನಿಕೆಯು ನಮ್ಮನ್ನು ಆಳಲು ಕೆಲವು ಸಂಸ್ಥೆಗಳನ್ನು ಹುಟ್ಟು ಹಾಕುತ್ತದೆ. ಅದರಲ್ಲಿ ಪೋಲಿಸ್ ವ್ಯವಸ್ಥೆ, ಕೋರ್ಟ್, ಮಿಲಿಟರಿ ಮುಂತಾದವುಗಳು ಇರುತ್ತವೆ. ಮತ್ತು ಪರೋಕ್ಷವಾಗಿ ಕೆಲವನ್ನು ಅದು ಶ್ರೇಷ್ಟವೆಂದು ಹೇಳುತ್ತದೆ. ಹಾಗೂ ಯಜಮಾನಿಕೆಯು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಯತ್ನಿಸುತ್ತದೆ. ಕೆಲವು ಬೌಂಡರಿಗಳನ್ನು ಕೂಡಾ ಅದು ರೂಪಿಸುತ್ತದೆ. ಅಧಿಕಾರ ರಚನೆಗೆ ಯಾವುದು ಶ್ರೇಷ್ಟ, ಯಾವುದು ಕನಿಷ್ಟವೆಂಬ ವರ್ಗೀಕರಣಗಳು ತುಂಬಾ

ಅಗತ್ಯವಿರುತ್ತದೆ. ಯಾವುದು ಯಜಮಾನಿಕೆಯ ಪ್ರಾತಿನಿಧಿಕ ರೂಪವಾಗಿದೆಯೋ ಅದು ಸಾಂಸ್ಕೃತಿಕ ರೂಪಗಳ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಯಾವುದು ಸಾಮಾಜಿಕ ರಚನೆಯ ಭಾಗವಾಗಿದೆಯೋ ಅದನ್ನು ನಿರೂಪಿಸುವ ಸಂಸ್ಥೆಗಳನ್ನು ಸಾಮಾಜಿಕ ಸಿಮೆಂಟ್ ಎಂದು ಗ್ರಾಂಶಿಯು ಹೇಳುತ್ತಾನೆ. ಯಜಮಾನಿಕೆಯನ್ನು ವಹಿಸುವ ವರ್ಗಗಳು ರೂಪಿಸುವ ನೀತಿ ಸಂಹಿತೆಗಳು ನಮ್ಮ ಸಂಸ್ಕೃತಿಯ ಭಾಗಗಳು ಎಂದೇ ನಾವು ಭಾವಿಸುತ್ತೇವೆ. ಅನೇಕ ಸಂದರ್ಭಗಳಲ್ಲಿ ಬುದ್ಧಿಜೀವಿಗಳು ಸಾಂಸ್ಥಿಕವಾದ ಮೌಲ್ಯಗಳನ್ನು ಪ್ರಚುರ ಪಡಿಸುವಂತೆಯೇ ಮಾತಾಡುತ್ತಾರೆ.

ಯಜಮಾನಿಕೆ

ಫುಕೋ 'ಸಂಕಥನ'ಗಳ ಬಗ್ಗೆ ಮಾತಾಡುತ್ತಾನೆ. "ಯಾವುದೇ ದೇಶದ ಇತಿಹಾಸವನ್ನು ತೆಗೆದುಕೊಂಡರೂ ಅಲ್ಲಿ ಒಂದೊಂದು ನಿರ್ದಿಷ್ಟ ಕಾಲಾವಧಿಗೆ ಸಲ್ಲುವ ನಿರ್ದಿಷ್ಟ ಸಂಕಥನಗಳು ಮತ್ತು ನಿರ್ದಿಷ್ಟ ನೀತಿ ನಿಯಮಗಳು ಅಥವಾ ರೂಢಿಗಳು ಇದ್ದೇ ಇರುತ್ತವೆ. ಇಂಥಾ ಸಂಕಥನ ಮತ್ತು ರೂಢಿಗಳೇ ಆಯಾ ಸಮಾಜದ ನಡಾವಳಿಗಳನ್ನು ನಿಯಂತ್ರಿಸುತ್ತಿರುತ್ತವೆ. ಈ ರೂಢಿ ನಡಾವಳಿಗಳನ್ನು ಚಲಾಯಿಸಲು ಇರುವ ಏಜನ್ಸಿಗಳಂತೆ ಆಯಾ ಕಾಲದ ಕೆಲ ಜ್ಞಾನಶಿಸ್ತುಗಳು ಮತ್ತು ಸಂಸ್ಥೆಗಳು ವರ್ತಿಸುತ್ತಿರುತ್ತವೆ. ಈ ಶಿಸ್ತುಗಳು ಮತ್ತು ಸಂಸ್ಥೆಗಳು ಆಯಾಕಾಲದ ಸಂಕಥನ ಸ್ವರೂಪವನ್ನು ಯಾವಾಗಲೂ ನಿಯಂತ್ರಿಸುವ ಮತ್ತು ರೂಪಿಸುವ ಕೆಲಸವನ್ನು ಮಾಡುತ್ತಿರುತ್ತವೆ. ಈ ಸಂಕಥನಗಳಾದರೆ ಸದಾ ಸಮಾಜದ ಮೇಲೆ ಪ್ರಬಲ ನಿಯಂತ್ರಣ ಸಾಧಿಸಲು ಅಧಿಕಾರಕ್ಕೆ ಸಹಕಾರಿಯಾಗುವಂತಹ ಶಕ್ತ ಆಲೋಚನೆಗಳನ್ನು ಹುಟ್ಟು ಹಾಕುತ್ತಿರುತ್ತವೆ. ಈ ಸಂಕಥನಗಳು ಹೆಚ್ಚು ಕಡಿಮೆ ಸಮಾಜವೊಂದು ದೊಡ್ಡವರ ಗೌಡಿಕೆಗಳ ಪ್ರಕಾರವೇ ಬದುಕುಳಿಯಲು ಸಾಧ್ಯವೆಂಬಂಥ ಪರಿಸ್ಥಿತಿ ನಿರ್ಮಿಸುವ 'ಗೋಲ ಬಂಧಿಖಾನೆ' ರೀತಿಯೇ ಇರುತ್ತದೆ." ಈ ಸಂಕಥನಗಳು ಪರಸ್ಪರ ಸಹಮತವುಳ್ಳ ಮತ್ತು ಸಮಾಜವನ್ನು ಇಡಿಯಾಗಿ ನಿಯಂತ್ರಿಸಬಲ್ಲ ಶಕ್ತಿಯುಳ್ಳ ಕೆಲವು ಹೇಳಿಕೆಗಳ ನಿರ್ದಿಷ್ಟ ಒಕ್ಕೂಟವೆಂದು ಫುಕೋ ಹೇಳುತ್ತಾನೆ.

ಈ ಎಲ್ಲಾ ಚರ್ಚೆಗಳ ಮೂಲಕ ಫುಕೋನ ಅಭಿಪ್ರಾಯವೆಂದರೆ ಅಧಿಕಾರ ಮತ್ತು ಜ್ಞಾನ ಪರಸ್ಪರವಾದವುಗಳು. ಅವು ಒಂದನ್ನೊಂದು ಪ್ರೋತ್ಸಾಹಿಸುತ್ತವೆ ಮತ್ತು ಹಿಂಬಾಲಿಸುತ್ತವೆ. (ಉದ್ಧೃತ–ಮೂಲ: ಶೆಲ್ಲಿವಾಲಿಯ, ಎಡ್ವರ್ಡ್‌ಸೈದ್, ಅನು: ರಾಮಲಿಂಗಪ್ಪ. ಟಿ. ಬೇಗೂರು, ಪುಟ–೨೪, ೨೦೦೩) ಮತ್ತು ಅಧಿಕಾರ ಪಡೆದ ಅಲ್ಪಸಂಖ್ಯಾತ ಗುಂಪು ಲೋಕದೃಷ್ಟಿಯನ್ನೆ ಬದಲಿಸಬಲ್ಲಂತಹ ಸಂಕಥನಗಳನ್ನು ರೂಪಿಸುತ್ತದೆ. ಈ ಸಂಕಥನಗಳು ಆಳುವ ಮತ್ತು ಆಳಿಸಿಕೊಳ್ಳುವ

ಮನೋಸ್ಥಿತಿಯನ್ನು ಸೃಷ್ಟಿಸಿ ಅದನ್ನೇ ನಂಬುವಂತೆ ಮಾಡುತ್ತವೆ. ಹೀಗಿರುವುದರಿಂದಲೇ ಅಧಿಕಾರ ಹಾಗೂ ನಿಯಂತ್ರಣ ಸಾಧ್ಯ ಮತ್ತು ಅದು ನಿರಂತರವಾಗುವುದೂ ಕೂಡ ಸಾಧ್ಯ.

ವಾಸ್ತವವಾಗಿ 'ಯಾಜಮಾನ್ಯ' ಅಥವಾ 'ಹೆಜೆಮನಿ' ಎಂಬ ಮಹತ್ವಪೂರ್ಣ ಪರಿಕಲ್ಪನೆ ಕೊಟ್ಟವನು ಇಟಲಿ ದೇಶದ 'ಆಂಟೋನಿಯೋ ಗ್ರಾಮ್ಷಿ'. ಇಟಾಲಿಯನ್ ಭಾಷೆಯಲ್ಲಿ ಜೆಜೆಮೊನಿಯ (Gegemonia) ಎಂಬುದು ಇಂಗ್ಲಿಷ್‌ನಲ್ಲಿ 'ಹೆಜೆಮನಿ' (Hegemony) ಎಂದಾಗಿದೆ. ಗ್ರಾಮ್ಷಿಯ ಪ್ರಕಾರ ಯಜಮಾನಿಕೆಯು ಎರಡು ರೀತಿಯಲ್ಲಿ ಪ್ರಕಟವಾಗುತ್ತದೆ.

೧. ನೇರ ಬಲ ಪ್ರಯೋಗದ ಮೂಲಕ ಆಳುವುದು

೨. ಜನಸಮ್ಮತಿಯನ್ನು ಹುಟ್ಟು ಹಾಕುವುದರ ಮೂಲಕ ಆಳುವುದು

ಎರಡನೆಯ ಬಗೆ ಹೆಚ್ಚು ಪರಿಣಾಮಕಾರಿ ಮತ್ತು ಪ್ರಭಾವಶಾಲಿಯಾದುದು. ಆಡಳಿತ ವರ್ಗವು ತನ್ನ ಅಧಿಕಾರದ ಶಾಶ್ವತತೆಗಾಗಿ ಸಂಚುಗಳನ್ನು ರೂಪಿಸುತ್ತಾ ಅಧೀನರಾದವರೇ ಸ್ವಯಂ ತಮ್ಮನ್ನಾಳಲು ಒಪ್ಪಿಗೆ ನೀಡುವಂತೆ ಅವರ ಆಲೋಚನಾ ಕ್ರಮವನ್ನು ನಿಯಂತ್ರಿಸುವುದನ್ನು ಈ ಹೆಜೆಮನಿ ಪರಿಕಲ್ಪನೆಯು ಹೇಳುತ್ತದೆ. "ಈ ಸಂದರ್ಭದಲ್ಲಿ ಸಮಾಜದ ಕೆಲವು ಪ್ರಬಲ ಸಮುದಾಯಗಳ / ವರ್ಗಗಳ ಸಾಂಸ್ಕೃತಿಕ-ವೈಚಾರಿಕ ರಚನೆಗಳಿಗೆ (Cultural-Ideological-Structures) ಅವು ಇತರ ರಚನೆಗಳಿಗಿಂತ ಶ್ರೇಷ್ಠವೆಂದು ಇಡೀ ಸಮಾಜದ ಅವ್ಯಕ್ತ ಮಾನ್ಯತೆ ಇರುತ್ತದೆ. ಈ ಕಾರಣದಿಂದಾಗಿ ಯಾವುದೇ ಬಗೆಯ ಶಕ್ತಿಯ ಅಥವಾ ಅಧಿಕಾರದ ಉಪಯೋಗವಿಲ್ಲದೆಯೂ ಒಂದು ವರ್ಗ-ಸಮುದಾಯ-ರಾಷ್ಟ್ರ ಇನ್ನೊಂದು ವರ್ಗವನ್ನು-ಸಮುದಾಯವನ್ನು-ರಾಷ್ಟ್ರವನ್ನು ವೈಚಾರಿಕ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ನಿಯಂತ್ರಿಸಬಹುದು." (ಸಿ. ಎನ್. ರಾಮಚಂದ್ರನ್, ಎಡ್ವರ್ಡ್ ಸೈದ್, ಪುಟ-೧೬, ೨೦೦೩)

"ಗ್ರಾಮ್ಷಿಯ ಪ್ರಕಾರ ಯಜಮಾನ್ಯವು ಕೆಲವೇಳೆ ತುಂಬಾ ಸೂಕ್ಷ್ಮವಾದ ಪ್ರಭಾವಗಳ ಬಳಕೆಯಿಂದ ಮತ್ತು ಕೆಲವೇಳೆ ಅಪ್ರಜ್ಞಾಪೂರ್ವಕ ನೆಲೆಯ ಪ್ರೇರಣೆಯಿಂದ ಜನಾಭಿಪ್ರಾಯವನ್ನೇ ರೂಪಿಸುತ್ತಿರುತ್ತದೆ. ಇದನ್ನು ಸಾಧಿಸಲು ಕೆಲವೇಳೆ ಭಾಷೆಯನ್ನು ಇದು ಹತಾರವನ್ನಾಗಿ ಬಳಸಿಕೊಳ್ಳುತ್ತದೆ. ಈ ಭಾಷಿಕ ಹತಾರದ ಮೂಲಕವೇ ಬರೆಯಲ್ಪಡುವ ಸಾಹಿತ್ಯ ಮತ್ತು ಇತಿಹಾಸಗಳು ಸಾಮಾಜಿಕ ವ್ಯವಸ್ಥೆಗಳ ಮತ್ತು ಸಂಸ್ಥೆಗಳ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಈ ವ್ಯವಸ್ಥೆ ಮತ್ತು ಸಂಸ್ಥೆಗಳೇ ಬಲಾಢ್ಯವರ್ಗದ ಹಿತಾಸಕ್ತಿಗಳನ್ನು ಕಾಪಾಡುವ

ಐಡಿಯಾಲಜಿಯನ್ನು ಪೋಷಿಸುವ ಮತ್ತು ಪ್ರತಿಷ್ಠಾಪಿಸುವ ಕೆಲಸವನ್ನು ಮಾಡುತ್ತಿರುತ್ತದೆ. ಇದಕ್ಕೆ ಉದಾಹರಣೆ ಎಂಬಂತೆ ಬ್ರಿಟೀಷ್ ಇತಿಹಾಸ ಮತ್ತು ಸಾಹಿತ್ಯಗಳನ್ನು ನೋಡಬಹುದು. ಇಂಗ್ಲಿಷ್‌ತನದ ವಾಹಕವಾದ ಇಂಗ್ಲಿಷ್ ಭಾಷೆ ಕೂಡ ಇದಕ್ಕೆ ಒಂದು ಉದಾಹರಣೆ." ಎನ್ನುವ ಶೆಲ್ಲಿವಾಲಿಯಾರ ಅಭಿಪ್ರಾಯವು ಸಾಂಸ್ಕೃತಿಕ ಯಜಮಾನಿಕೆಯ ಹಿಂದಿನ ತಾತ್ವಿಕತೆಯನ್ನು ವಿಷದಪಡಿಸುತ್ತದೆ.

ಗ್ರಾಮ್ಷಿಯು ಪ್ರಕಾರ ಆಳುವ ವರ್ಗದ ಶಕ್ತಿಯಿರುವುದು ಅವರ ವರ್ಗಪ್ರಾಬಲ್ಯದಲ್ಲಿ. ಈ ವರ್ಗ ಪ್ರಾಬಲ್ಯಕ್ಕೆ ಪ್ರಭುತ್ವವೇ ಶ್ರೀರಕ್ಷೆ. ಪ್ರಭುತ್ವದ ಮೇಲೆ ಆಳುವ ವರ್ಗ ಹಿಡಿತ ಸಾಧಿಸುವುದು ಕೇವಲ ಬಲಪ್ರಯೋಗದಿಂದಷ್ಟೇ ಅಲ್ಲ. ಉತ್ಪಾದನೆಯ ಮೇಲಿನ ಒಡೆತನ ಮತ್ತು ಪ್ರಭುತ್ವದ ಹತೋಟಿಯನ್ನು ರಕ್ಷಿಸಿಕೊಳ್ಳಲು ಮತ್ತು ಬಲಪ್ರಯೋಗವಿಲ್ಲದೆ ಜನರನ್ನು ನಿಯಂತ್ರಿಸಲು ನಾಗರಿಕ ಸಮಾಜದಲ್ಲಿ ಜನಜನಿತವಾದ ಕೆಲ ನಂಬಿಕೆ, ಮೌಲ್ಯಗಳು ಭೂಮಿಕೆಯನ್ನು ಒದಗಿಸುತ್ತವೆ. ಇವುಗಳನ್ನು ಆಳುವ ವರ್ಗ ಜತನವಾಗಿ ಪೋಷಿಸುತ್ತದೆ. (ಮೂಲ: ಶೆಲ್ಲಿವಾಲಿಯ, ಎಡ್ವರ್ಡ್‌ಸ್ಯೆದ್, ಅನು: ರಾಮಲಿಂಗಪ್ಪ. ಟಿ. ಬೇಗೂರು, ಪುಟ-೨೨, ೨೦೦೩) ಆಳರಸರು ಜಮೀನುದಾರರು ಧಾರ್ಮಿಕ ಸಂಸ್ಥೆಗಳಿಗೆ ಯಥೇಚ್ಚವಾದ ಪೋಷಣೆ ನೀಡಿದರು. ಆ ಮೂಲಕ ಸಾಮಾನ್ಯರ ಮತ್ತು ಧಾರ್ಮಿಕ ಸಂಸ್ಥೆಗಳ ವಿಶ್ವಾಸಗಳಿಸಿಕೊಂಡರು. ಸಾಮಾಜಿಕ ಶ್ರೇಣೀಕರಣ ನಿಯಾಮಕವಾದದ್ದು, ಹೆಂಗಸರು ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲರು, ಅವರು ದುಡಿಯಲು ಸಮರ್ಥರಲ್ಲ, ಅವರು ಕೇವಲ ಗಂಡಸಿನ ಸಾಧನೆಯ ಕಾರ್ಯಕ್ಕೆ ಸಾಥಿಯಾಗಬೇಕು ಅಷ್ಟೇ ಜನರೆಲ್ಲಾ ರೀತಿಯ ನಂಬಿಕೆಗಳು ಜಾರಿಯಲ್ಲಿರುವುದನ್ನು ಆಳುವ ವರ್ಗ ಅಳಿಸಲು ಯತ್ನಿಸುವುದಿಲ್ಲ. ಅಧಿಕಾರ ಚಲಾವಣೆಗೆ ಅನುಕೂಲವಾಗಿರುವ ಲಿಂಗಭೇದ, ಅಸಮಾನತೆ, ತಾರತಮ್ಯದ ಸಂಗತಿಗಳನ್ನು ಯಾವತ್ತೂ ಆಳುವ ವರ್ಗ ವಿರೋಧಿಸುವುದಿಲ್ಲ. ಇವುಗಳನ್ನು ಮಾಡಿಕೊಳ್ಳುವುದರ ಮೂಲಕ ಹೊಸ ಬಗೆಯ ತಾರತಮ್ಯಗಳಿಗೆ ಸಮರ್ಥನೆ ನೀಡಲು ಮುಂದಾಗುತ್ತದೆ. ಇದು ಆಳುವ ವರ್ಗದ ಅಧಿಕಾರವನ್ನು ಭದ್ರಗೊಳಿಸುತ್ತಲೇ ಹೋಗುತ್ತದೆ.

ಒಂದೆಡೆ ತೋಳ್ಬಲದ ಮೂಲಕ ಆಳುವ ವರ್ಗ ಪ್ರಾಬಲ್ಯ ಪಡೆದರೆ ಇನ್ನೊಂದೆಡೆ ಸಮ್ಮತಿಯನ್ನು ರೂಪಿಸುವುದರ ಮೂಲಕ ಯಜಮಾನಿಕೆಯನ್ನು ಸ್ಥಾಪಿಸುತ್ತದೆ. ಮೌನಸಮ್ಮತಿಯನ್ನು ಪ್ರಸಂಗ ಬಂದಾಗ ತೋಳ್ಬಲದ ಪ್ರದರ್ಶನಕ್ಕೆ ಸಮರ್ಥನೆಯಾಗಿ ಬಳಸಿಕೊಳ್ಳಬಹುದು; ತೋಳ್ಬಲವೇ ಆಳುವ ವರ್ಗದ ನಾಯಕತ್ವಕ್ಕೆ ಜನಸಮ್ಮತಿಯನ್ನು ದೊರಕಿಸಿಕೊಡುವ ಸಾಧನವೂ ಆಗಬಹುದು. ಯಾವುದೇ ವರ್ಗದ ಶಕ್ತಿ ಸಮಾಜದಲ್ಲಿ ಅದು ಕಾಣಿಸಿಕೊಂಡಿರುವ ಯಜಮಾನಿಕೆಯನ್ನು

ಅವಲಂಬಿಸಿರುತ್ತದೆ. ಪ್ರಭುತ್ವವನ್ನು ವಶಪಡಿಸಿಕೊಂಡು, ಉತ್ಪಾದನಾ ವ್ಯವಸ್ಥೆಯನ್ನು ಬದಲಿಸುವ ಮೂಲಕ ಆಳುವ ವರ್ಗದ ತೋಳ್ಬಲವನನು ಏನೋ ಸ್ಪಂದಿಸಬಹುದು; ಅಷ್ಟು ಮಾತ್ರಕ್ಕೆ ಆ ವರ್ಗದ ಯಜಮಾನಿಕೆ ಸಂಪೂರ್ಣವಾಗಿ ನಾಶವಾಗುವುದಿಲ್ಲ. ಆಳುವ ವರ್ಗಕ್ಕೆ ದಕ್ಕುವ ಜನಸಮ್ಮತಿಯ ಹಿಂದೆ ಹಲವು ನಮೂನೆಯ ಮೌಲ್ಯಗಳು, ಬಲಾಬಾಧಿತವಾಗಿರುವಂತೆ ತೋರುವ ಸಂಸ್ಥೆಗಳು ಕೆಲಸ ಮಾಡುತ್ತಿರುತ್ತವೆ." ಇವುಗಳೇ ಯಜಮಾನಿಕೆಯನ್ನು ಒಪ್ಪುವಂತೆ ಮಾಡುತ್ತಿರುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದು ಗ್ರಾಮ್ಷಿ ಹೇಳುತ್ತಾನೆ. (ಅದೇ)

ಸಾಮಾನ್ಯ ಸಂವೇದನೆ

ಗ್ರಾಮ್ಷಿಯು ಕಾಮನ್‌ಸೆನ್ಸ್ ಅಥವಾ ಸಾಮಾನ್ಯ ಗ್ರಹಿಕೆಯ ಬಗ್ಗೆ ಮಾತಾಡುತ್ತಾನೆ. ಒಂದು ಕಾಲದಲ್ಲಿ ನಿರ್ದಿಷ್ಟ ಉದ್ದೇಶ ಇಟ್ಟುಕೊಂಡು ಕಟ್ಟಿರುವ ಪರಿಕಲ್ಪನೆ ಮುಂದೆ ಸಹಜ ಸಾಮಾಜಿಕ ನಂಬಿಕೆಯಾಗಿ ಜನಪ್ರಿಯವಾಗಿ ಬೇರು ಬಿಡುವುದನ್ನೇ ಗ್ರಾಮ್ಷಿ 'ಸಾಮಾನ್ಯ ಗ್ರಹಿಕೆ' (ಕಾಮನ್‌ಸೆನ್ಸ) ಎನ್ನುತ್ತಾನೆ. (ಕೆ. ಫಣಿರಾಜ್, ಅಂಟೋನಿಯಾ ಗ್ರಾಮ್ಷಿ, ಪುಟ-೪೫, ೨೦೦೩) ಇವುಗಳಿಗೆ ಸಾಕ್ಷಿ, ಪುರಾವೆಗಳ ಅಗತ್ಯವಿರುವುದಿಲ್ಲ. "ಕನ್ನಡಿಗರು ತಮ್ಮ ಭಾಷೆ-ಸಂಸ್ಕೃತಿಗಳ ಬಗ್ಗೆ ಅಭಿಮಾನವಿಲ್ಲದ ಜನ. ಅದೇ ಅನ್ಯ ಭಾಷಿಕರು ದುರಭಿಮಾನಿಗಳು; ಹೆಂಗಸರ ಬುದ್ಧಿ ಮೊಳಕಾಲ ಕೆಳಗೆ; ಬ್ರಾಹ್ಮಣರು ಬೌದ್ಧಿಕ ಕೆಲಸಕ್ಕೆ, ಶೂದ್ರರು ದೈಹಿಕ ಕೆಲಸಕ್ಕೆ ಲಾಯಖು; ಮುಸ್ಲಿಮರು ಡಜನ್ ಗಟ್ಟಲೆ ಮಕ್ಕಳನ್ನು ಹಡೆಯುತ್ತಾರೆ; ಕೆಳಜಾತಿಯ ಜನರಿಗೆ ಮೀಸಲಾತಿ ಕೊಟ್ಟಿರುವುದರಿಂದ ಸರ್ಕಾರಿ ಸಂಸ್ಥೆಗಳಲ್ಲಿ ಶಿಸ್ತು, ದಕ್ಷತೆ ಕಡಿಮೆಯಾಗಿದೆ ಇತ್ಯಾದಿ." ಈ ಬಗೆಯ ನಂಬಿಕೆಗಳು ಅಥವಾ ತೀರ್ಮಾನಗಳು ಜನರಲ್ಲಿ ಸಹಜವಾಗಿ ಒಳ ಬಂದಿರುತ್ತವೆ. ಪ್ರತಿಯೊಂದು ಸಮಾಜದಲ್ಲಿಯೂ ಇಂತಹ ಕಾಮನ್‌ಸೆನ್ಸ್ ಇರುತ್ತವೆ ಮತ್ತು ಅವೆಲ್ಲವೂ ಒಂದೇ ಬಗೆಯಾಗಿರುವುದಿಲ್ಲ. ಗ್ರಾಮ್ಷಿ ಇಂತಹ ಸಾಮಾನ್ಯ ಗ್ರಹಿಕೆಗಳಲ್ಲಿ ಆಳುವ ವರ್ಗದ ಹಿತಕಾಯುವಂತಹುಗಳ ಬಗ್ಗೆ ಗಮನ ಹರಿಸುತ್ತಾನೆ. "ಒಂದು ಸಾರಿ ಅಧಿಕಾರಸ್ಥರ ವಿಚಾರಗಳು ಸಾಮಾನ್ಯ ಗ್ರಹಿಕೆಗಳಾಗಿ ಪರಿವರ್ತನೆಯಾದರೆ ಆ ವಿಚಾರಗಳ ಚಲಾವಣೆ ಸುಲಲಿತವಾಗಿ ಬಿಡುತ್ತದೆ. ಈ ವಿಚಾರಗಳಿಂದ ಪ್ರೇರಿತವಾದ ಮೌಲ್ಯಗಳಿಗೆ ಜನಮನ್ನಣೆ ನಿರಾಯಾಸವಾಗಿ ದಕ್ಕಿಬಿಡುತ್ತದೆ; ಈ ಮೌಲ್ಯಗಳನ್ನು ಆಳುವ ಮಂದಿ ಬೇರೆ ಯಾವ ಸಮರ್ಥನೆಯನ್ನೂ ನೀಡದೆ ಚಲಾಯಿಸಬಹುದು! ಇಂತಹ ಸಾಮಾನ್ಯ ಗ್ರಹಿಕೆಗಳು ಆಳುವ ಮಂದಿ ತಮ್ಮ ಯಜಮಾನಿಕೆಯನ್ನು ಜಮಾ ಮಾಡಿ, ಬಡ್ಡಿ ಸಹಿತ ಲಾಭಗಳಿಸುವ ರಾಷ್ಟ್ರೀಯ ಬ್ಯಾಂಕುಗಳು ಎಂದು ಗ್ರಾಮ್ಷಿ ಹೇಳುತ್ತಾನೆ." ಇಂತಹ ಗ್ರಹಿಕೆಗಳು ಅಸಮಾನತೆ ಮತ್ತು ಶೋಷಣೆ

ತುಂಬಾ ಸಹಜ ಮತ್ತು ಬದಲಿಸಲು ಆಗದವು ಎಂಬುದನ್ನು ಒಪ್ಪಿಕೊಳ್ಳುವಂತೆ ಮಾಡುವುದರ ಮೂಲಕ ತಮ್ಮ ನಂಬಿಕೆಗಳನ್ನು ಅನುಕರಿಸಿ ಸ್ವೀಕರಿಸುವಾಗಲೇ ಸಾಮಾನ್ಯ ಜನಸಮುದಾಯದ ಮನಸ್ಸಿನಲ್ಲಿ ದ್ವಂದ್ವಾತ್ಮಕ ಐಡಿಯಾಗಳ ಗೊಂದಲವನ್ನು ಬಿತ್ತುವ ಮೂಲಕ ಯಾಜಮಾನ್ಯವು ಬಹಳ ಚೆನ್ನಾಗಿ ಬೇಳೆ ಬೇಯಿಸಿಕೊಳ್ಳುತ್ತದೆ ಎಂಬುದು ಗಮನಿಸಬೇಕಾದುದು.(ಕೆ. ಫಣಿರಾಜ್ ಆಂಟೋನಿಯಾ ಗ್ರಾಮ್ಷಿ, ೨೦೦೩ ಪುಟ-೪೮,-೪೯, ೨೦೦೩) ವರ್ಗ, ಜಾತಿ, ಮತ, ಲಿಂಗ, ದೇಶ, ವಿಚಾರ, ಸಂಸ್ಕೃತಿ, ಭಾಷೆ ಹೀಗೆ ಇಂಥಾ ಅನೇಕ ಭಿನ್ನಭಿನ್ನ ನೆಲೆಗಳಲ್ಲಿ ಯಾವುದು ಶೋಷಣೆಗೆ ಗುರಿಯಾಗಿರುತ್ತದೊ ಅಥವಾ ಅಲಕ್ಷ್ಯಕ್ಕೆ ಈಡಾಗಿರುತ್ತದೊ ಅದೆಲ್ಲವನ್ನು ಕುರಿತು ನಡೆಸಿದ ಅಧ್ಯಯನಗಳೇ 'ಸಬಾಲ್ಟ್ರನ್ ಸ್ಟಡೀಸ್' ಅಥವಾ 'ಪರ್ಯಾಯವಾದಿ ಅಧ್ಯಯನ ಕ್ರಮಗಳು' ಎಂದು ಗುರುತಿಸಲಾಗುತ್ತದೆ. ಜ್ಞಾನ ಹಾಗು ಅಧಿಕಾರದ ನೆಲೆಯಿಂದ ಯಾಜಮಾನ್ಯ ಸ್ಥಾಪಿಸಿದ ಪ್ರಬಲ ವರ್ಗ ಅಥವಾ ಗುಂಪು ರಚಿಸಿರುವ ಮಹಾ ಕಥನಗಳನ್ನು ಕೆಡವಿ ಹಾಕುವ ಉದ್ದೇಶದಿಂದ ಯಾವಾಗಲೂ ಸ್ವಯಂ ಪ್ರತಿನಿಧೀಕರಣ ಕ್ರಿಯೆಯಲ್ಲಿ ಈ ಅಧ್ಯಯನ ಕ್ರಮಗಳು ತೊಡಗಿರುತ್ತವೆ. ಗ್ರಾಮ್ಷಿ ಇದನ್ನೇ 'ಪ್ರತಿ ಯಜಮಾನಿಕೆ' ಎಂದು ಕರೆಯುತ್ತಾನೆ. ಸೈದ್ ಕೂಡಾ ಗ್ರಾಮ್ಷಿಯನ್ನೇ ಅನುಸರಿಸಿ ತನ್ನ ಓರಿಯಂಟಲಿಸಂನ್ನು ಕಟ್ಟುತ್ತಾನೆ. ಸರಳವಾದ ಮತ್ತು ಏಕಮುಖೀ ನೆಲೆಯಿಂದ ನಿರ್ಮಾಣಗೊಳ್ಳುವ ಚರಿತ್ರೆಯನ್ನು ವಿರೋಧಿಸುತ್ತಲೇ ಅದನ್ನು ಮುರಿದು ಕಟ್ಟುವ ಕ್ರಿಯೆಯಲ್ಲಿ ತೊಡಗಬೇಕೆಂದು ಈ ಅಧ್ಯಯನ ಕ್ರಮಗಳು ಹೇಳುತ್ತವೆ. ಇದುವರೆಗೆ ಯಾವುದು ಅಲಕ್ಷ್ಯಕ್ಕೆ ಅಥವಾ ನಿರ್ಲಕ್ಷ್ಯಕ್ಕೆ ಗುರಿಯಾಗಿತ್ತೋ ಅದನ್ನು ಮುಖ್ಯವಾಹಿನಿಯಲ್ಲಿ ತಂದು ಅಲ್ಲಿನ ಅನನ್ಯತೆ ಮತ್ತು ಜ್ಞಾನ ಪರಂಪರೆಗಳನ್ನು ಆಳುವ ವರ್ಗದ ಸಂಕಥನಗಳೊಂದಿಗೆ ಮುಖಾಮುಖಿಯಾಸಬೇಕೆಂಬುದು ಈ ಅಧ್ಯಯನ ಕ್ರಮಗಳ ತಾತ್ವಿಕ ನಿಲುವು. "ಭಾರತದಲ್ಲಿ ಕೆಳಸ್ತರದ ವರ್ಗಗಳ ಇತಿಹಾಸವನ್ನು ಭಾರತದ ರಾಷ್ಟ್ರೀಯ ಯಜಮಾನ ಪರಿಕಲ್ಪನೆಗಳಿಗೆ ವಿರುದ್ಧವಾಗಿ ರಂಜಿತ್‌ಗುಹಾ, ಪಾರ್ಥಚಟರ್ಜಿ, ಜ್ಞಾನೇಂದ್ರಪಾಂಡೆ ಮುಂತಾದವರ ಸಂಪಾದಕತ್ವದಲ್ಲಿ ಬರುತ್ತಿರುವ ಸಬಾಲ್ಟ್ರನ್ ಸ್ಟಡೀಸ್ ಸಂಪುಟಗಳಲ್ಲಿ ಗ್ರಾಮ್ಷಿ ದೃಷ್ಟಿಕೋನದಿಂದ ದಾಖಲಿಸಲಾಗಿದೆ."

ಆಳುವವರ ಮತ್ತು ಆಳಿಸಿಕೊಳ್ಳುವವರ ನಡುವೆ ಪರಸ್ಪರ ಸಂವಾದವಿರುತ್ತದೆ. ಈ ಸಂವಾದವೆನ್ನುವುದು ತುಂಬಾ ಸಂಕೀರ್ಣವಾಗಿರುತ್ತದೆ. ಇಲ್ಲಿಂದಲೇ ಯಜಮಾನಿಕೆ ರೂಪುಗೊಳ್ಳುತ್ತದೆ. ಯಜಮಾನಿಕೆ ರೂಪುಗೊಳ್ಳುವುದೇ ಆಳಿಸಿಕೊಳ್ಳುವ ವರ್ಗವನ್ನು ಹಿಡಿತದಲ್ಲಿ ಇರಿಸಿಕೊಳ್ಳುವ ಮೂಲಕ. (ಕೆ. ಫಣಿರಾಜ್.

ಆಂಟೋನಿಯೋ ಗ್ರಾಮ್ಷಿ, ಪುಟ–೫೫, ೨೦೦೩) ಇದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಇದರಿಂದ ಬಿಡಿಸಿಕೊಂಡು ಪ್ರತಿ ಯಜಮಾನಿಕೆಯನ್ನು ಕಟ್ಟಬೇಕಾದುದು ಅಗತ್ಯ. ರಾಷ್ಟ್ರೀಯ ಆಂದೋಲನದ ಕುರಿತು ಚರ್ಚಿಸುವಾಗ ರಣಜಿತ್ ಗುಹಾ ಅವರು ಹೇಳುವ ಮಾತು ಗಮನಿಸಬೇಕಾದುದು. "ರಾಷ್ಟ್ರೀಯತೆ ಎನ್ನುವುದು ಭಾರತೀಯ ಏಕಾಂತವಾದಿಗಳಿಗೆ ಕಲಿಕೆಯ ಒಂದು ಭಾಗವಾಗಿತ್ತು. ಹೀಗಾಗಿ ವಸಾಹತು ಕಾಲದ ಆಡಳಿತ, ಅದರ ಅಧಿಕಾರ ಮತ್ತು ದೇಶೀಯ ಬೌದ್ಧಿಕ ಏಕಾಂತವಾದಿಗಳ ನಡುವೆ ಸ್ಪರ್ದೆ ಮತ್ತು ಸಹಕಾರ ಎರಡೂ ಕಾಣಿಸಿಕೊಂಡಿತು. ಇದು ಹೊಸ ರೀತಿಯ ಸಂವಾದಕ್ಕೆ ಕಾರಣವಾಯಿತು." ಅವರೇ ಹೇಳುವಂತೆ ವಸಾಹತು ಅನುಭವದ ಪರಿಣಾಮಗಳು ಸರಳರೇಖಾತ್ಮಕವಲ್ಲ ಮತ್ತು ಶುದ್ಧ ತಾರ್ಕಿಕವೂ ಅಲ್ಲ. ಈ ಅನುಭವವು ಪರ್ಯಾಯವಾದ ಅನೇಕ ಸಂಗತಿಗಳ ಅನಾವರಣವು ಕೂಡ ಆಗಿದೆ. ಹೀಗಾಗಿ ವಸಾಹತು ಅನುಭವದ ನಿರೂಪಣೆಗಳು ಸ್ಥಳೀಯ ಸಮಾಜದ, ಪ್ರಾದೇಶಿಕತೆಯ, ಕೆಳಸ್ತರದ ಸಂಸ್ಕೃತಿ, ಭಾಷೆಯ ಅನೇಕ ನಿರೂಪಣೆಗಳು ಸೇರಬೇಕಾಗುತ್ತದೆ.

ವಸ್ತ್ರಗಳು

ಗ್ರಾಮ್ಷಿಯು ಒಂದು ಸಂದರ್ಭದಲ್ಲಿ ಹೇಳಿರುವ ಮಾತು ಉಲ್ಲೇಖನೀಯ: ಮನುಷ್ಯರ ವೇಷಭೂಷಣವೇ ಪರಸ್ಪರ ಭಿನ್ನತೆಗೆ ಕಾರಣವಾಗುತ್ತದೆ. ಮುಂಡಾಸು; ಕಿರೀಟ; ಇತ್ಯಾದಿ ಕಾರ್ಮಿಕರಿಗೆಲ್ಲ ಸ್ಥಳೀಯ ಜಮಿನುದಾರರು ದಂಡದ ಪರಿಭಾಷೆಯನ್ನು ಬಳಸಿಕೊಂಡರು. ಕೈಗಾರೀಕರಣದ ಪೂರ್ವದಲ್ಲಿ ಸ್ಥಳೀಯ ಏಕಾಂತವಾದಿಗಳಿಗೆ ಅಧಿಕಾರಗಳಿದ್ದವು. ಆದರೆ ಕೈಗಾರೀಕರಣದ ಅನಂತರ ಬಂಡವಾಳಶಾಹಿಗಳಿಗೆ ಅಧಿಕಾರಗಳು ಬಂದವು. ಆದುದರಿಂದ ನಿರಾಕರಣೆಗೆ ಬೇರೆ ಬೇರೆ ಮುಖಗಳಿವೆ.

ಯುದ್ಧ ಮತ್ತು ಅದರ ಕೌಶಲಗಳು ಹಾಗೂ ನಾವು ತೆಗೆದುಕೊಳ್ಳಬೇಕಾದ ನಿಲುವುಗಳು:

ಸೇನೆಯು ಯದ್ಧದ ಸನ್ನಿವೇಶದಲ್ಲಿ ತೆಗೆದುಕೊಳ್ಳಬೇಕಾದ ನಿಲುವು ಮತ್ತು ಬಳಸಿಕೊಳ್ಳುವ ತಂತ್ರಗಳನ್ನು ಗ್ರಾಂಶಿಯು ಅತ್ಯಂತ ಚೆನ್ನಾಗಿ ವಿವರಿಸಿದ್ದಾನೆ. ಇದು ಅವನ ವಾದದಲ್ಲಿ ಅತ್ಯಂತ ಮುಖ್ಯವಾದ್ದು ಎಂದು ಅನೇಕ ವಿದ್ವಾಂಸರು ಹೇಳುತ್ತಾರೆ. ಇದನ್ನು ಹೇಳುವಾಗ ಗ್ರಾಂಶಿಯು ಮಾನೋವರೆ (ಮನೋವರ್ ಎಂದೂ ಹೇಳುತ್ತಾರೆ) ಎನ್ನುವುದನ್ನು ಬಳಸುತ್ತಾನೆ. ಅದು ಒಂದು ಬಗೆಯ ಕೌಶಲವೂ ಹೌದು. ನಾವು ಯುದ್ಧದ ಸನ್ನಿವೇಶದಲ್ಲಿ ಯಾವ ನಿಲುವನ್ನು

ಹೊಂದಿರುತ್ತೇವೆಯೋ ಅದರ ಸ್ವರೂಪವು ನಮಗೆ ಮಾತ್ರವೇ ತಿಳಿಯುತ್ತವೆ. ಅದನ್ನು ಅತ್ಯಂತ ವಿಶಾಲವಾದ ಅರ್ಥದಲ್ಲಿ ತಂತ್ರ ಎಂದೂ ಕರೆಯಬಹುದು. ಯುದ್ಧ ಮತ್ತು ಅದರ ತಂತ್ರಗಳು ಹಾಗೂ ಪ್ರತಿವ್ಯೂಹಗಳು ಹೇಗೆ ಇರುತ್ತವೆ ಎನ್ನುವುದು ವಿವರಿಸಲು ಗ್ರಾಂಶಿಯು ಈ ಪದವನ್ನು ಬಳಸಿದ್ದಾನೆ. ಮಾರ್ಕ್ಸವಾದದ ಅತ್ಯಂತ ಮುಖ್ಯವಾದ ಕೆಲವು ಸಂಗತಿಗಳನ್ನು ನಾವು ಇಲ್ಲಿ ಹೇಳಬಹುದು. ಸಮಾಜವಾದ ಮತ್ತು ಅದರ ಹೋರಾಟಗಳನ್ನು ನಾವು ಒಂದು ಹಿಡಿಯಾದ ರೂಪದಲ್ಲಿ ಹೇಳಲು ಬರುವುದಿಲ್ಲ. ಇದನ್ನು ದೈಹಿಕವಾದ ರೂಪ ಎಂದೂ ಹೇಳುತ್ತಾರೆ. ಮಿಲಿಟರಿಯಲ್ಲಿ ಯಾವಾಗಲೂ ಒಂದು ಯುದ್ಧ ಮತ್ತು ಅದರ ತಂತ್ರಗಳು ಇರುತ್ತವೆ. ಅತ್ಯಂತ ಹೆಚ್ಚು ಕೌಶಲವನ್ನು ಹೊಂದಿರುವ ಹೋರಾಟಗಳು ನಿಜವಾಗಿಯೂ ಯಶಸ್ವಿಯಾಗುತ್ತವೆ ಎಂದು ಗ್ರಾಂಶಿಯು ಹೇಳುತ್ತಾನೆ.. ಅವನು ಕ್ರಾಂತಿ ಮತ್ತು ಅದರ ಚಟುವಟಿಕೆಯನ್ನು ಬೇರೆ ಥರ ನೋಡುತ್ತಾನೆ. ಅವನ ದೃಷ್ಟಿಯಲ್ಲಿ ಯುದ್ಧದ ಕೌಶಲ ಮತ್ತು ಯುದ್ಧದ ಪ್ರತಿವ್ಯೂಹಗಳು ಬೇರೆಯಾಗುತ್ತವೆ. ಅದರ ಜೊತೆಗೆ ಅವನು ಯುದ್ಧಕ್ಕಾಗಿ ನಾವು ತೆಗೆದುಕೊಳ್ಳುವ ನಿಲುವುಗಳು ಮತ್ತು ಅದರ ತಂತ್ರಗಳು ಯಾವತ್ತೂ ಬೇರೆಯಾಗುತ್ತವೆ. ಯುದ್ಧ ಮತ್ತು ಅದರ ನಿಲುವುಗಳು ಒಂದು ಥರ ಇರುತ್ತವೆ. ಆದರೆ ನಮ್ಮ ಕೆಲವು ಸಂಘರ್ಷಗಳು ತಾತ್ವಿಕವಾದ ಒಂದು ಅಭಿವ್ಯಕ್ತಿಯೂ ಹೌದು. ಒಂದು ರಾಜಕೀಯ ಪಕ್ಷವೂ ಕೆಲವು ಹೋರಾಟಗಳನ್ನು ಮಾಡುತ್ತವೆ ಎನ್ನುವುದರ ಅರಿವು ಅವನಿಗೆ ಇದೆ. ಅವುಗಳೂ ಕೂಡಾ ಕೆಲವು ತಂತ್ರಗಳನ್ನು ಬಳಸುತ್ತವೆ. ಪ್ರತಿವ್ಯೂಹದ ಮೂಲಕ ಮತ್ತೊಂದು ಸಂಗತಿಯನ್ನು ತನ್ನ ಅಸ್ತಿತ್ವದೊಳಗೆ ಸೇರಿಸುತ್ತದೆ. ರಾಜಕೀಯ ಪಕ್ಷಗಳು ಅತ್ಯಂತ ಜಾಗರೂಕತೆಯಿಂದ ನಿರ್ಧಾರವನ್ನು ಮಾಡುತ್ತವೆ.

ನಾಗರಿಕ ಸಮಾಜ

ರಾಜಕೀಯ ವಾಸ್ತವದಲ್ಲಿ ಇದು ಚರ್ಚೆಗೆ ಅತ್ಯಂತ ಅಗತ್ಯವಾದ ಒಂದು ಪದವಾಗಿದೆ. ಇದನ್ನು ನಾವು ಕಾರ್ಮಿಕ ಸಂಘಟನೆ ಮತ್ತು ಅದರ ಮುಷ್ಕರಗಳು ಎಂದು ಭಾವಿಸುವುದು ಬೇಕಾಗಿಲ್ಲ ಎನ್ನುವುದು ಗ್ರಾಂಶಿಯ ವಾದ. ಸಮಾಜವಾದಿ ದೃಷ್ಟಿಕೋನದ ಪಕ್ಷಗಳು ಬೇರೆ ವಾದಗಳನ್ನು ಮಂಡಿಸುತ್ತವೆ. ಸಮಾಜವಾದವು ನಿಜವಾದ ಅರ್ಥದಲ್ಲಿ ರಾಜಕೀಯ ಸಂಗತಿಗಳನ್ನು ಮೇಲು ರಚನೆ ಎಂದು ಕರೆಯುತ್ತವೆ. ಅದುವೇ ತನ್ನ ಪಾಡಿಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳುವುದಿಲ್ಲ. ನಾಗರಿಕ ಸಮಾಜವು ತನ್ನ ತೆಕ್ಕೆಯಲ್ಲಿ ಶಾಲೆಗಳು, ಸಂವಿಧಾನ, ಆಟದ ಗುಂಪುಗಳು , ಮಾಧ್ಯಮಗಳು, ಕುಟುಂಬ ಪದ್ಧತಿಗಳು ಮುಂತಾದವುಗಳನ್ನು ನಿರ್ದಿಷ್ಟವಾದ ರೀತಿಯಲ್ಲಿ ರಚನೆ ಮಾಡುತ್ತದೆ. ಒಂದು ಶಿಸ್ತನ್ನು ತರಲು ಯತ್ನವನ್ನು ಮಾಡುತ್ತವೆ.

ಗ್ರಾಂಶಿಯು ಇದನ್ನು ಹೇಳುವಾಗ ನಾಗರಿಕ ಹೇಗೆ ಇರುತ್ತದೆ ಎಂದು ವಿವರಿಸುತ್ತಾನೆ. ಪ್ರಭುತ್ವವು ಅತ್ಯಂತ ಅಚ್ಚುಕಟ್ಟಾಗಿ ಸಮಾಜ ಮತ್ತು ಆರ್ಥಿಕತೆಯನ್ನು ಸಂಯೋಜನೆ ಮಾಡಿ ಅದರ ಮೂಲಕವೇ ಒಂದು ನಾಗರಿಕವಾದ ಸಮಾಜವನ್ನು ನಿರ್ಮಿಸುತ್ತದೆ. ಅಷ್ಟೇ ಅಲ್ಲ ಅದು ಒಂದು ಹಂತದಲ್ಲಿ ಖಾಸಗಿ ಎನ್ನುವುದನ್ನು ಹೆಚ್ಚು ಚಾಲ್ತಿಗೆ ತರುತ್ತದೆ. ಗ್ರಾಂಶಿಯು ಇದನ್ನು ಅತ್ಯಂತ ವಿಸ್ತಾರವಾದ ಅರ್ಥದಲ್ಲಿ ಬಳಸಿದ್ದಾನೆ. ನಾಗರಿಕ ಸಮಾಜವು ನಾಗರಿಕವಾದ ವ್ಯಕ್ತಿಗಳಿಗೆ ಹೆಚ್ಚು ಮನ್ನಣೆಯನ್ನು ಕೊಡುತ್ತದೆ. ವ್ಯಕ್ತಿ ಮತ್ತು ಅವನ ಗುಣಗಳು, ಅವನ ನಡವಳಿಕೆಗಳು, ಅವನ ಅಭಿರುಚಿಗಳನ್ನು ತಿದ್ದಲು ಯತ್ನವನ್ನು ಮಾಡುತ್ತದೆ. ಸಾಂಸ್ಥಿಕವಾದ ಮೌಲ್ಯಗಳು ಕೂಡಾ ಬದಲಾಗುತ್ತದೆ. ನಾಗರಿಕ ಸಮಾಜವು ತನ್ನದೇ ಆದ ಒಂದು ಕಾನೂನು ಸಂಗತಿಗಳನ್ನು ಅನ್ವಯ ಮಾಡುತ್ತದೆ. ಇದರಿಂದ ಮನುಷ್ಯ ಮನುಷ್ಯರ ನಡುವೆ ಒಂದು ಕಂದರ ಶುರುವಾಗಿದೆ. ನಾಗರಿಕರು ಮತ್ತು ಅನಾಗರಿಕರು ಎನ್ನುವುದು ನಮಗೆ ಭಿನ್ನವಾದ ವರ್ಗಗಳಂತೆ ಕಾಣುವುದು ಕೂಡಾ ಇದೇ ಕಾರಣಕ್ಕೆ. ನಾಗರಿಕ ಸಮಾಜ ಮತ್ತು ಅದರ ಸಾಧ್ಯತೆಯು ಇರುವುದು ಪ್ರಭುತ್ವ ಮತ್ತು ಅದರ ಅಧಿಕಾರದ ಸಂಬಂಧದಲ್ಲಿ. ಆಧುನಿಕ ಸಮಾಜ ಮತ್ತು ಅದರ ರೂಪವು ರಾಷ್ಟ್ರೀಯತೆಯ ಜೊತೆಗೆ ಸಂಬಂಧವನ್ನು ಇಟ್ಟುಕೊಳುತ್ತದೆ. ಅದಕ್ಕೂ ಗಿರಾಕಿತನಕ್ಕೂ ಒಂದು ಸಂಬಂಧವು ಇದೆ. ನಾಗರಿಕತೆ ಮತ್ತು ಆಧುನಿಕ ಸಮಾಜದೊಳಗೆ ಇರುವ ವರ್ಗಗಳು ಇಲ್ಲಿ ಗಮನಾರ್ಹ..ಹಾಗೆಂದು ಇದು ಶಾಶ್ವತವಾದ ಒಂದು ಚರ್ಚೆಯೂ ಅಲ್ಲ. ಅದರ ರೂಪಗಳು ಬದಲಾಗುತ್ತವೆ. ಅದಕ್ಕೆ ತಕ್ಕಂತೆ ವ್ಯಕ್ತಿ ಮತ್ತು ಅವರ ದೃಷ್ಟಿಕೋನಗಳು ಇಲ್ಲಿ ಬದಲಾಗುತ್ತವೆ. ಅದರ ಜೊತೆಗೆ ಇಲ್ಲಿ ಇನ್ನೊಂದು ಅಂಶವನ್ನು ನಾವು ಕಾಣಬಹುದು: ನಾಗರಿಕ ಸಾಮಾಜಿಕ ಜೀವನ ಎನ್ನುವುದು ನಮಗೆ ಇನ್ನೊಂದು ದೃಷ್ಟಿಕೋನವನ್ನು ಪ್ರಸ್ತುತ ಪಡಿಸುತ್ತದೆ. ನಾಗರಿಕ ಸಮಾಜದಲ್ಲಿ ವರ್ಗ ಎನ್ನುವುದು ಅತ್ಯಂತ ಮುಖ್ಯವಲ್ಲ. ಅದರ ಬದಲಿಗೆ ಅದರಲ್ಲಿ ಅತ್ಯಂತ ಸಂಕೀರ್ಣವಾದ ಸಾಮಾಜಿಕ ರೂಪವನ್ನು ಕಾಣುತ್ತೇವೆ.

ಮೇಲ್‌ರಚನೆ:

ಗ್ರಾಂಶಿಯು ನಮಗೆ ಇನ್ನೊಂದು ಬಗೆಯ ದೃಷ್ಟಿಕೋನವನ್ನು ಮೇಲ್ ರಚನೆಯ ಬಗ್ಗೆ ಕೊಡುತ್ತಾನೆ. ತಳಹದಿ ರಚನೆ ಮತ್ತು ಮೇಲ್ ಪದರಕ್ಕೆ ಒಂದು ಸಂಬಂಧವು ಇದೆ.ಮಾರ್ಕ್ಸವಾದವು ಇದನ್ನು ಹೆಚ್ಚು ಚಾಲ್ತಿಗೆ ತಂದಿತು. ಆದರೆ ಇದನ್ನು ಗ್ರಾಂಶಿಯು ಹೇಳುವಾಗ ನಾಗರಿಕ ಸಮಾಜ ಮತ್ತು ಮೇಲ್ ರಚನೆಗೆ ಯಾವ ಬಗೆಯ ಸಂಬಂಧವು ಇದೆ ಎಂದು ವಿವರಿಸುತ್ತಾನೆ. ಮೇಲು ರಚನೆ ಎನ್ನುವುದು ಬರೀ ಅರ್ಥಶಾಸ್ತ್ರವನ್ನು ಹೇಳುತ್ತಾನೆ ಎಂದು ಭಾವಿಸಲು ಸಾಧ್ಯವಿಲ್ಲ.

ಅದು ಚರಿತ್ರೆಯ ಜೊತೆಗೆ ಒಂದು ಸಂಬಂಧವನ್ನು ಇಟ್ಟುಕೊಳ್ಳುತ್ತದೆ. ಸಾಮಾಜಿಕ ಸಂಬಂಧವನ್ನು ಅದು ಹೇಳುತ್ತದೆ. ಇಟಲಿಯ ಅತ್ಯಂತ ಪ್ರಸಿದ್ಧ ಲೇಖಕ ಬಾಬಿಯೋ ಆಳಿಸಿಕೊಳ್ಳುವುದು ಎನ್ನುವುದು ಕೂಡಾ ಚರಿತ್ರೆಯಲ್ಲಿ ಬದಲಾಗುತ್ತದೆ ಎಂದು ಹೇಳುತ್ತಾನೆ. ಆದರೆ ಗ್ರಾಂಶಿಯು ನಮಗೆ ತಳಹದಿ ರಚನೆಯು ಮಾತ್ರವೇ ಮುಖ್ಯವಲ್ಲ ಎಂದು ಹೇಳುತ್ತಾನೆ. ಅವನು ಅಸಮತೆಯು ಹೇಗೆ ಇರುತ್ತದೆ ಎಂದು ಹೇಳುತ್ತಾನೆ. ಅದನ್ನು ಬಿಟ್ಟು ಸಮಾಜ ಮತ್ತು ಸಂಸ್ಕೃತಿಯನ್ನು ನಾವು ಚರ್ಚೆ ಮಾಡಲು ಸಾಧ್ಯವಿಲ್ಲ., ಮತ್ತೊಂದು ದೃಷ್ಟಿಯಿಂದ ಯಾವುದು ಮೇಲ್ ರಚನೆಯು ಇದೆಯೋ ಅದರ ಬಗ್ಗೆ ಗ್ರಾಂಶಿಯು ಹೆಚ್ಚು ಹೇಳುತ್ತಾನೆ. ಆದ್ದರಿಂದಲೇ ಅವನನ್ನು ಮೇಲ್ ರಚನೆಗಳ ವಿದ್ವಾಂಸ ಎಂದು ಕರೆಯುತ್ತಾರೆ. ಅವನು ಹೇಗೆ ಆಧುನಿಕ ಸಂಸ್ಥೆಗಳು ರಚನೆಯಾಗುತ್ತವೆ ಮತ್ತು ಅದರ ಪರಿಣಾಮವು ಯಾವ ಬಗೆಯಲ್ಲಿ ಇರುತ್ತದೆ ಎಂದು ವಿವರಿಸುತ್ತಾನೆ. ಆರ್ಥಿಕತೆ ಎನ್ನುವುದು ಅನೇಕ ಮಾದರಿಯ ಸಂಸ್ಥೆಗಳನ್ನು ಹುಟ್ಟು ಹಾಕುತ್ತದೆ ಎನ್ನುವುದು ಅವನ ಗ್ರಹಿಕೆ. ಅದು ಮೂಲಭೂತವಾದ್ದು ಎನ್ನುವುದರಲ್ಲಿ ಅವನಿಗೆ ತಕರಾರು ಇಲ್ಲ. ಮನುಷ್ಯ ಅನೇಕವನ್ನು ಸೃಷ್ಟಿಮಾಡಿದ್ದಾನೆ. ಅದರಲ್ಲಿ ಧಾರ್ಮಿಕ ಸಂಕೇತಗಳು ಇವೆ. ಶಾಲೆಗಳು, ಕಾನೂನುಗಳು, ಕೋರ್ಟ್‌ಗಳು ಇವೆ., ಆದ್ದರಿಂದ ನಮ್ಮ ನಡುವೆ ಹುಟ್ಟುವ ಸಮಸ್ಯೆ ಮತ್ತು ಅದರ ಪರಿಹಾರಗಳು ನಮ್ಮ ನಡುವೆಯೇ ಇರುತ್ತದೆ. ರಾಜಕಾರಣ, ಧರ್ಮ, ಸಂಸ್ಕೃತಿ, ಸೌಂದರ್ಯ ಮೀಮಾಂಸೆಗಳು ಇರುತ್ತವೆ. ನಮ್ಮ ಪ್ರಜ್ಞೆಯು ಇವುಗಳ ನಡುವೆ ಸಹಯೋಗವನ್ನು ಇಟ್ಟುಕೊಂಡಿರುತ್ತದೆ. ಅವುಗಳ ಜೊತೆಗೆ ಸಂಘರ್ಷವನ್ನು ಇಟ್ಟುಕೊಂಡಿರುತ್ತವೆ. ಬಾಬಿಯೋ ಆರ್ಥಿಕತೆಯು ಕೆಲವು ಮಿತಿಗಳನ್ನು ಹೊಂದಿವೆ ಎಂದು ಹೇಳುತ್ತಾನೆ. ಉತ್ಪಾದನೆಗಳೂ ಕೂಡಾ ತನ್ನದೇ ಸಾಂಸ್ಕೃತಿಕ ಸಂಗತಿಗಳನ್ನು ಹೇಳುತ್ತವೆ. ಅದರಲ್ಲಿ ಅನುಮಾನವಿಲ್ಲ. ಇದನ್ನು ಹೇಳುವಾಗ ಚರಿತ್ರೆ ಮತ್ತು ಅದು ಸೃಷ್ಟಿಸುವ ಚರಿತ್ರೆಯ ಪ್ರತ್ಯೇಕ ವಿನ್ಯಾಸವನ್ನು ನೋಡಬೇಕಾಗುತ್ತದೆ. ಅದು ಚರಿತ್ರೆಯಲ್ಲಿ ದ್ವಂದ್ವಾತ್ಮಕವೂ ಆಗಿರುತ್ತದೆ. ಆದರೆ ಆರ್ಥಿಕ ಎನ್ನುವುದು ಮೂಲಭೂತವಾದ್ದು. ಹಾಗೆಂದು ಅದುವೇ ಸಂಸ್ಕೃತಿಯ ಮೇಲೆ ಯಾವ ಪ್ರಭಾವವನ್ನು ಬೀರುತ್ತದೆ. ಒಂದು ಮಾತನ್ನು ಹೇಳಬಹುದು ಎನ್ನುವುದು ಪ್ರಶ್ನೆ. ನಮಗೆ ಅನೇಕವು ಸಂವಾದಿಯಾಗಿರುತ್ತವೆ.

ರಾಷ್ಟ್ರ – ಜನಪ್ರಿಯತೆ

ಮಾರ್ಕ್ಸವಾದವು ಅಂತರಾಷ್ಟ್ರೀಯ ಚರ್ಚೆಗಳನ್ನು ಎತ್ತುತ್ತದೆ. ಅದಕ್ಕೆ ಬರೀ ಒಂದು ಸ್ಥಳ ಮತ್ತು ಒಂದು ಕಾಲ ಎನ್ನುವುದು ಮುಖ್ಯವಲ್ಲ. ಗ್ರಾಂಶಿಯು ಅದಕ್ಕೆ ಮತ್ತೆ ಮತ್ತೆ ಬೇರೆ ವಿವರಗಳನ್ನು ಜೋಡಿಸುತ್ತಾನೆ. ರಾಷ್ಟ ಮತ್ತು ಅದರ

ಪ್ರಶ್ನೆಗಳು, ಪ್ರದೇಶ ಮತ್ತು ಅದರ ಸ್ವರೂಪ ಹಾಗೂ ಕೆಳಗಿನ ಸಂಸ್ಕೃತಿ ಮತ್ತು ಉಚ್ಚತರವ ಸಂಸ್ಕೃತಿಗಳು ಹೇಗೆ ಪರಸ್ಪರ ಕೊಡುವುದು ಮತ್ತು ತೆಗೆದು ಕೊಳ್ಳುವುದು ಎನ್ನುವ ಅಂಶಗಳನ್ನು ಸೂಚಿಸುತ್ತವೆ ಎನ್ನುವುದು ಅವನಿಗೆ ಅತ್ಯಂತ ಮುಖ್ಯ. ಒಂದು ರಾಷ್ಟ್ರ ಎನ್ನುವುದು ಹೇಗೆ ಇರುತ್ತದೆ ಮತ್ತು ಅದರ ಜೊತೆಗೆ ಯಾವ ಬಗೆಯ ರಾಜಕಾರಣವು ಇರುತ್ತದೆ ಎನ್ನುವುದು ಅವನಿಗೆ ಮುಖ್ಯ ಪ್ರಶ್ನೆಯಾಗುತ್ತದೆ. ಇಲ್ಲಿ ಅವನು ಮತ್ತೊಂದು ಮಹತ್ವದ ಪ್ರಶ್ನೆಯನ್ನು ಕೇಳುತ್ತಾನೆ. ಅತ್ಯಂತ ಬಲಾಢ್ಯವಾದ ರಾಷ್ಟ್ರವು ಇನ್ನೊಂದು ರಾಷ್ಟ್ರವನ್ನು ನಿಯಂತ್ರಣ ಮಾಡಲು ಯತ್ನವನ್ನು ಮಾಡುತ್ತದೆ. ಒಂದು ಸಂಸ್ಕೃತಿಯು ಇನ್ನೊಂದು ಸಂಸ್ಕೃತಿಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಯತ್ನವನ್ನು ಮಾಡಲು ತಂತ್ರಗಳನ್ನು ಬಳಸುತ್ತದೆ. ನಮಗೆ ಹೇಗೆ ಅಭಿರುಚಿಯು ಇರುತ್ತದೆಯೋ ಅದೇ ರೀತಿಯಲ್ಲಿ ಒಂದು ಸಾಮಾಜಕ್ಕೆ ಮತ್ತು ಒಂದು ರಾಷ್ಟ್ರಕ್ಕೆ ಇರಲು ಸಾಧ್ಯ. ರಾಷ್ಟ್ರ ಮತ್ತು ಅದರ ಸ್ವಭಾವವನ್ನು ಒಂದು ಮಾತಿನಲ್ಲಿ ಹೇಳುವುದಿದ್ದರೆ ರಾಷ್ಟ್ರೀಯತ. ರಾಷ್ಟ್ರ ಮತ್ತು ಅದರ ಸಂಸ್ಕೃತಿಯ ಒಳಗೆ ಪ್ರಾದೇಶಿಕತೆಯು ಇರುತ್ತದೆ. ಪ್ರದೇಶ ಮತ್ತು ಅದರ ಭಾಷೆಯು ಹೇಗೆ ಇರುತ್ತದೆ ಅದನ್ನು ರಾಷ್ಟ್ರ ಭಾಷೆಯು ಹೇಗೆ ನೋಡುತ್ತದೆ ಎನ್ನುವುದಕ್ಕೆ ಅನೇಕ ಕಾರಣಗಳು ಇರಬೇಕಾಗಿಲ್ಲ. ಆಧುನಿಕ ಚರ್ಚೆಯು ಹೇಗೆ ಮುಂದುವರಿದಿದೆ ಎಂದರೆ ಒಂದು ಭಾಷೆಯನ್ನು ಮತ್ತೊಂದು ಭಾಷೆಯು ಆಳುತ್ತದೆ. ನಾಗರಿಕರ ಮಾತು ಒಂದು ಥರ ಇರುತ್ತದೆ. ನಗರದ ಜನರು ಮಾತಾಡುವ ಕ್ರಮವು ಶಿಷ್ಟವಾಗಿ ಇರುತ್ತದೆ. ಆದರೆ ಹಳ್ಳಿಯವರ ಮಾತು ಮತ್ತೊಂದು ಮಾದರಿಯಲ್ಲಿ ಇರುತ್ತದೆ. ಮಾತು ಮತ್ತು ಅದರ ಚಹರೆಗಳು ಹೇಗೆ ಬದಲಾವಣೆ ಆಗುತ್ತದೆ ಎಂದರೆ ಅದರಲ್ಲಿ ಅನೇಕ ಭಾಷಿಕರು ಒಂದು ಸ್ಥಳದಲ್ಲಿ ಇದ್ದರೆ ಅವರು ಮಾತಾಡುವ ಕ್ರಮಗಳು ಭಿನ್ನ. ಅದರ ಜೊತೆಗೆ ಎರಡು ಮೂರು ಭಾಷೆಗಳ ಹಿಡಿತವನ್ನು ಹೊಂದಿರುತ್ತದೆ. ಭಾಷೆಯಲ್ಲಿನ ಯಜಮಾನಿಕೆಯು ಗ್ರಾಂಶಿಗೆ ಹೆಚ್ಚು ಮುಖ್ಯ ಮಾತುಗಳಿಗೆ ಮತ್ತು ಜನಾಂಗಗಳಿಗೆ ಇರುವ ಸಂಬಂಧಗಳನ್ನು ಕೂಡಾ ಅವನು ಚರ್ಚೆ ಮಾಡುತ್ತಾನೆ. ಅದನ್ನು ನಾವು ಭಾಷೆಯ ಚರ್ಚೆಯಲ್ಲ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಒಂದು ಭಾಷೆಯ ಅತ್ಯಂತ ಸಣ್ಣ ಘಟಕವೂ ಬದಲಾಗುತ್ತದೆ. ಅದು ಬದಾಗಲೂ ಕೂಡಾ ಬೇರೆ ಕಾರಣಗಳು ಇರುತ್ತವೆ. ಅಷ್ಟೇ ಅಲ್ಲ ಭಾಷೆಯಲ್ಲಿ ಬೇರೆ ಬೇರೆ ಭಾಷೆಗಳು ಮತ್ತು ಅವುಗಳ ಸ್ವರೂಪವು ಮಿಳಿತವಾಗುತ್ತವೆ. ಆಧುನಿಕ ಶಿಕ್ಷಣ ಪದ್ಧತಿಯು ಭಾಷೆಯನ್ನು ಎರಡು ಥರ ನೋಡುತ್ತದೆ. ಒಂದು ಭಾಷೆಗೆ ಒಂದು ಪ್ರಮಾಣವನ್ನು ನಿಗದಿ ಮಾಡಿಬಿಡುತ್ತವೆ. ಮತ್ತೊಂದು ಅದು ಅಧಿಕಾರ ಮತ್ತು ಅದರ ವಲಯವನ್ನು ನಿರ್ಮಾಣ ಮಾಡುತ್ತದೆ. ಭಾಷೆ ಮತ್ತು ಅದರ ಪ್ರಮಾಣೀಕರಣಕ್ಕೆ ಸಮೂಹ ಮಾಧ್ಯಮಗಳೂ ಕೊಡುಗೆಯನ್ನು

ನೀಡುತ್ತವೆ. ಅವನಿಗೆ ಅನೇಕ ಭಾಷೆಗಳು ಮತ್ತು ಅನೇಕ ನುಡಿಗಟ್ಟುಗಳು ಇರುತ್ತವೆ ಎನ್ನುವುದು ಅತ್ಯಂತ ಮುಖ್ಯ. ಹಾಗೆ ಇದ್ದರೂ ಗ್ರಾಂಶಿಯು ನಮಗೆ ಒಂದು ಮಾತನ್ನು ನೆನಪುಮಾಡುತ್ತಾನೆ. ಅನೇಕ ಗುಂಪುಗಳು ಅನೇಕ ರೀತಿಯ ಮಾತುಗಳನ್ನು ಹೇಳುವುದು ಸತ್ಯ. ಇಟೆಲಿಯಲ್ಲಿ ನಡೆದ ಸನ್ನಿವೇಶವನ್ನು ಗ್ರಾಂಶಿಯು ವಿವರಿಸುತ್ತಾನೆ: ಇಟೆಲಿಯಲ್ಲಿ ನಮ್ಮ ಸಾಹಿತ್ಯದ ವಲಯದಲ್ಲಿ ಏನೇನು ನಡೆದಿದೆಯೋ ಅದೆಲ್ಲವೂ ಇಟಲಿಯಲ್ಲಿ ನಡೆಯಲಿಲ್ಲ. ಆಗ ಫ್ರೆಂಚ್ ಭಾಷೆಯಲ್ಲಿ ಮತ್ತು ಇಂಗ್ಲೆಂಡಿನಲ್ಲಿ ಬೇರೆ ಬೇರೆ ಸಾಹಿತ್ಯದ ಪ್ರಕಾರಗಳು ಚಾಲ್ತಿಯಲ್ಲಿ ಇದ್ದವು. ಅದನ್ನು ಇಟಾಲಿಯನ್ ಭಾಷೆಗೆ ತಜ್ಞರು ಅನುವಾದ ಮಾಡಿದರು, ಆದರೆ ಅದರಿಂದ ಆಚೆಗೆ ಅದು ಹೋಗಲಿಲ್ಲ. ಇದರಿಂದ ಭಾಷೆಯಲ್ಲಿ ಹೊಸತನವೂ ಬಂದಿತು. ಇಟಾಲಿಯನ್ ಸಂಸ್ಕೃತಿಗೆ ಗೊತ್ತಿಲ್ಲದ ಸಾಹಿತ್ಯವು ಒಂದು ಪರಿಣಾಮವನ್ನು ಉಂಟುಮಾಡಿತು. ಆದರೆ ಸಾಂಸ್ಕೃತಿಕ ಚರಿತ್ರೆಗೂ ರಾಷ್ಟ್ರೀಯತೆಯ ಪರಿಕಲ್ಪನೆಗೂ ಒಂದು ಸಂಬಂಧವಿದೆ. ಇವರ ಕುರಿತು ಹೇಳುವಾಗ ಗ್ರಾಂಶಿಯು ಷೇಕ್ಸ್‌ಪಿಯರ್ ರಾಷ್ಟ್ರ ಮತ್ತು ಅದರ ರಾಜಕಾರಣವನ್ನು ನಾಟಕಗಳಲ್ಲಿ ವಸ್ತುವನ್ನಾಗಿ ತಂದ ಎಂದು ಹೇಳುತ್ತಾನೆ. ಅದು ಜನಪ್ರಿಯವಾಗಿತ್ತು. ಇದೇ ರೀತಿಯ ಪ್ರಶ್ನೆಯು ನಮಗೆ ದಾಸ್ತೋವಸ್ಕಿಯಲ್ಲಿಯೂ ಕಾಣುತ್ತೇವೆ. ಇವರ ಕೃತಿಗಳು ನಮಗೆ ಯಾಕೆ ಅತ್ಯಂತ ಮುಖ್ಯವೆಂದು ಅನಿಸುತ್ತದೆ ಎಂದು ಗ್ರಾಂಶಿಯು ಕೇಳುತ್ತಾನೆ. ಯುರೋಪಿನ ದೇಶಗಳ ಲೇಖಕರಿಗೆ ಮನ್ನಣೆಯನ್ನು ಪಡೆಯುವುದು ಸುಲಭವಾಯಿತು. ಅವರು ಅವರ ಭಾವನೆಗಳನ್ನು ಹೇಳಿದರು. ಅದರಲ್ಲಿ ಜನರ ಭಾವನೆಗಳೂ ಇದ್ದವು ಆದ್ದರಿಂದ ಅವರು ಜನಪ್ರಿಯರಾದರು. ಅದಕ್ಕೆ ಸಾಂಸ್ಕೃತಿಕ ರೂಪಗಳೂ ಇವೆ ಎನ್ನುವುದು ಗ್ರಾಂಶಿಯ ನಿಲುವು.

ಗ್ರಾಂಶಿಯು ಜಾನಪದವನ್ನು ಕುರಿತು ಹೇಳುತ್ತಾನೆ. ಅದು ಜನಪ್ರಿಯವಾದ ಒಂದು ಅಭಿವ್ಯಕ್ತಿಯ ಕ್ರಮ. ಅನೇಕ ಬುದ್ಧಿಜೀವಿಗಳು ಜಾನಪದವನ್ನು ಹಳೆಯ ಮಾದರಿಯ ಫ್ಯಾಶನ್ ಥರ ಇದೆ ಎಂದು ಭಾವಿಸುತ್ತಾರೆ. ಅದನ್ನು ಅವರು ಅಧಿಕೃತವಲ್ಲ ಎಂದೂ ತಿಳಿದಿರುವುದೂ ಸತ್ಯ. ಅದನ್ನು ಸಾಂಪ್ರದಾಯಿಕವಾದ ಸಾಹಿತ್ಯ ಎಂದೂ ಭಾವಿಸಿದವರು ತುಂಬಾ ಜನರು ಇದ್ದಾರೆ ಆದರೆ ವಿಷಯವು ಅಷ್ಟು ಸರಳವಲ್ಲ. ಅದು ಜನ ಜೀವನದ ಅತ್ಯಂತ ಮುಖ್ಯವಾದ ಒಂದು ಅಭಿವ್ಯಕ್ತಿ ಎಂದು ಗ್ರಾಂಶಿಯು ಹೇಳುತ್ತಾನೆ. ಜಾನಪದದಲ್ಲಿ ಇರುವ ಭಾವನೆಗಳು ಮತ್ತು ಅದರ ಸ್ವರೂಪಕ್ಕೆ ಒಂದು ಆಳವಾದ ಚಹರೆಯು ಇದೆ. ಅದು ಸಂಸ್ಕೃತಿಯ ಭಾಗವೂ ಹೌದು. ಆಳಿಸಿಕೊಳ್ಳುವ ಜನ ವರ್ಗವನ್ನು ಅದು ಸಾದರ ಪಡಿಸುತ್ತದೆ. ಜಾನಪದವು ರೈತರನ್ನು ಕುರಿತು ಹೇಳುತ್ತದೆ. ಆದ್ದರಿಂದ ರಾಷ್ಟ್ರೀಯ ಮತ್ತು

ಜನಪ್ರಿಯ ಎನ್ನುವುದು ಅತ್ಯಂತ ಸರಳವಾದ ವರ್ಗೀಕರಣವು ಆಗಬಾರದು. ಜನಪ್ರಿಯ ಎನ್ನುವುದರ ಆಳದಲ್ಲಿ ಅಭಿರುಚಿ ಮತ್ತು ನೈತಿಕತೆ ಹಾಗೂ ಬೌದ್ಧಿಕ ವಲಯಗಳು ಕೆಲಸವನ್ನು ಮಾಡುತ್ತವೆ.

ರಾಷ್ಟ್ರೀಯ ಮತ್ತು ಜನಪ್ರಿಯತೆ ಕುರಿತಾದ ಕೆಲವು ಪ್ರಶ್ನೆಗಳು

ಗ್ರಾಂಶಿಯು ರಾಷ್ಟ್ರೀಯ ಮತ್ತು ಜನಪ್ರಿಯ ಎನ್ನುವುದರ ಕುರಿತು ತನ್ನದೇ ಆದ ನಿಲುವನ್ನು ಹೊಂದಿದ್ದ.ಆದರೆ ರಾಷ್ಟ್ರೀಯ ಮತ್ತು ಜನಪ್ರಿಯ ಸಂಸ್ಕೃತಿಗಳ ಬಹಳಷ್ಟು ಚರ್ಚೆಗಳು ನಡೆದಿವೆ. ಅನೇಕರು ಇವುಗಳ ಬಗ್ಗೆ ಬಹಳ ವಿಸ್ತಾರವಾದ ಟೀಕೆಗಳನ್ನು ಮಾಡಿದ್ದಾರೆ.. ರಾಷ್ಟ್ರೀಯತೆ ಎನ್ನುವುದು ಒಂದು ಪರಿಕಲ್ಪನೆಯೂ ಹೌದು. ಹಾಗೆ ನೋಡಿದರೆ ರಾಷ್ಟ್ರ ಎನ್ನುವುದು ಒಂದು ಪರಿಕಲ್ಪನೆಯೂ ಆಗಿರುತ್ತದೆ. ರಾಷ್ಟ್ರ ಎನ್ನುವುದು ಒಂದು ಭಾವನಾತ್ಮಕ ಮತ್ತು ಪರಿಕಲ್ಪನಾತ್ಮಕವಾದ ಸಂಗತಿಯೂ ಆಗಿದೆ. ಇದನ್ನು ಗ್ರಾಂಶಿಯು ಹೇಳುತ್ತಾನೆ. ರಾಷ್ಟ್ರ ಎನ್ನುವುದನ್ನು ನಾವು ಅತ್ಯಂತ ಶ್ರೇಷ್ಠವಾದ್ದು ಎನ್ನುವ ಕಲ್ಪನೆಯು ನಮಗೆ ಇರುತ್ತದೆ. ಅದು ಒಂದು ಕಲ್ಪಿತವಾದ ರೂಪವೂ ಹೌದು. ಆದರೆ ಬರೀ ರಾಷ್ಟ್ರದ ಪ್ರಶ್ನೆಯು ಮಾತ್ರವೇ ಯಶಸ್ವಿಯಾಗುವುದಿಲ್ಲ. ರಾಷ್ಟ್ರ ಎನ್ನುವುದು ತಾತ್ವಿಕ ಮತ್ತು ಭಾವನಾತ್ಮಕವಾದ ಸಂಗತಿಯು ಆಗುತ್ತದೆ ಎನ್ನುವುದನ್ನು ಗ್ರಾಂಶಿಯು ಹೇಳುತ್ತಾನೆ. ಅದು ಸಾಂಸ್ಕೃತಿಕ ಮತ್ತು ಭಾವನಾತ್ಮಕವಾದ್ದರಿಂದ ಅದನ್ನು ನಾವು ವಿಮರ್ಶಾತ್ಮಕವಾಗಿಯೂ ನೋಡಬೇಕಾಗುತ್ತದೆ.

ಹೆಜಮನಿ

ಹೆಜಮಿನಿ ಎನ್ನುವುದು ಒಂದು ಅರ್ಥದಲ್ಲಿ ಸಾಂಸ್ಕೃತಿಕ ಮತ್ತು ರಾಜಕೀಯವಾದ ಆಯಾಮವನ್ನು ಹೊಂದಿರುತ್ತದೆ. ಇದನ್ನು ಗ್ರಾಂಶಿಯು ಒಂದು ಅತ್ಯಂತ ಮುಖ್ಯವಾದ ಒಂದು ನೋಟ ಎನ್ನುವ ಥರ ನೋಡುತ್ತಾನೆ. ಇದು ಆಳ್ವಿಕೆ ಎನ್ನುವುದನ್ನು ಸೂಚಿಸುತ್ತದೆ. ಆದರೆ ಯಜಮಾನಿಕೆ ಎನ್ನುವುದನ್ನು ಹೇಗೆ ಬೇರೆ ಬೇರೆ ಸನ್ನಿವೇಶದಲ್ಲಿ ಬೇರೆ ಬೇರೆ ಅರ್ಥವನ್ನು ಹೊಂದಿರುತ್ತದೆ ಎನ್ನುವುದನ್ನು ಗ್ರಾಂಶಿ ನಿಲುವು ಹೇಳುತ್ತದೆ. ಒಪ್ಪಿಗೆ, ನಾಯಕತ್ವ, ವಿಸ್ತರಣೆ ಎನ್ನುವುದು ಇದು ಸೂಚಿಸುತ್ತದೆ. ಗ್ರಾಂಶಿಯ ಚಿಂತನೆಯಲ್ಲಿ ಇದು ಅತ್ಯಂತ ಮಹತ್ವದ್ದೂ ಹೌದು. ಸಮಾಜದಲ್ಲಿ ಹೇಗೆ ಭಿನ್ನತೆಗಳು ಸೃಷ್ಟಿಯಾಗುತ್ತವೆ ಎಂದು ಹೇಳಲು ಗ್ರಾಂಶಿಯು ಇದನ್ನು ಬಳಸುತ್ತಾನೆ., ಇದು ಮಾನವಿಕ ವಿಜ್ಞಾನಗಳಲ್ಲಿ ಹೆಚ್ಚು ಮಹತ್ವದ ಪ್ರಭಾವವನ್ನು ಬೀರಿದ್ದು ಕೂಡಾ ಸತ್ಯವಾಗಿದೆ. ಇದರಲ್ಲಿ ಸಮಾಜ ಮತ್ತು ಅದರ ವರ್ಗೀಕರಣದ ಪ್ರಶ್ನೆಯೂ ಇದೆ. ಅಷ್ಟೇ ಅಲ್ಲದೆ ಇದು ಲಿಂಗ ತಾರತಮ್ಯ,

ಸಮಾಜ ಮತ್ತು ಅದರ ವರ್ಗೀಕರಣ ಮುಂತಾದ ಸಂಗತಿಗಳನ್ನು ಅಧ್ಯಯನ ಮಾಡಲು ಅತ್ಯಂತ ಉಪಯುಕ್ತವಾಗಿರುವ ಪರಿಭಾಷೆಯೂ ಹೌದು.

ಹೆಜೆಮನಿ ಮತ್ತು ಅದರ ಸ್ವರೂಪ:

ಇದನ್ನು ಅತ್ಯಂತ ಸರಳವಾದ ಅರ್ಥದಲ್ಲಿ ಗ್ರಾಂಶಿಯು ಹೇಳುತ್ತಾನೆ. ಇಟಲಿಯಲ್ಲಿ ಮುಸ್ಸಲೋನಿಯ ಆಡಳಿತ ಮತ್ತು ಅದರ ಸ್ವರೂಪ ನೋಡಿದ ಅವನು ಕಾರ್ಮಿಕರು ಮತ್ತು ಸಾಮಾನ್ಯ ಮನುಷ್ಯರು ಯಾಕೆ ದಂಗೆ ಎದ್ದಿಲ್ಲ ಎಂದು ಭಾವಿಸುತ್ತಾನೆ. ಅವನ ಈ ಪ್ರಶ್ನೆಯಲ್ಲಿ ಬುದ್ಧಿಜೀವಿಗಳೂ ಇದ್ದಾರೆ ಎನ್ನುವುದು ಅತ್ಯಂತ ಮುಖ್ಯ. ಈ ಗುಂಪುಗಳು ಪ್ರತ್ಯೇಕವಾಗಿದ್ದವು ಎನ್ನುವುದು ಅತ್ಯಂತ ಮುಖ್ಯವಾದ ಒಂದು ಪ್ರಶ್ನೆಯೂ ಹೌದು. ಈ ಪ್ರಶ್ನೆಗಳು ಗ್ರಾಂಶಿಗೆ ಹೆಚ್ಚು ಕಾಡಿದ್ದವು ಎನ್ನುವುದು ನಿಜ. ಇವು ಪ್ರತ್ಯೇಕ ಗುಂಪುಗಳೂ ಹೌದು. ಲೇಖಕರು, ಕಾರ್ಮಿಕರು, ರೈತರು, ಅಲ್ಪಸಂಖ್ಯಾತರು ಒಂದು ಕಡೆಗೆ ಬಂದು ಹೋರಾಟವನ್ನು ಮಾಡದೇ ಹೋದರೆ ಪ್ರಭುತ್ವಕ್ಕೆ ಅತ್ಯಂತ ಸುಲಭವಾಗುತ್ತದೆ ಎನ್ನುವುದು ಗ್ರಾಂಶಿಗೆ ಗೊತ್ತಿತ್ತು. ಆದರೆ ಹೆಜೆಮನಿ ಎನ್ನುವುದಕ್ಕೆ ಅತ್ಯಂತ ಸುದೀರ್ಘವಾದ ಒಂದು ಇತಿಹಾಸವೂ ಇದೆ. ಲೆನಿನ್ ಇದನ್ನು ಬಳಸಿದ್ದ. ಯಾವುದೇ ಕ್ರಾಂತಿಯು ಅತ್ಯಂತ ಸುಲಭವಾಗಿ ಉಂಟಾಗುವುದಿಲ್ಲ ಎನ್ನುವುದು ಅವನ ಅರಿವಿನಲ್ಲಿ ಇದೆ. ಎಲ್ಲಾ ವೈರುಧ್ಯಗಳ ನಡುವೆ ಉಂಟಾಗುವ ಹೋರಾಟಗಳು ಮತ್ತು ಅದರ ಕುರಿತಾದ ನಿಲುವು ಅತ್ಯಂತ ಮುಖ್ಯ ಎಂದು ಅದು ತಾತ್ವಿಕವೂ ಆಗಿರುತ್ತದೆ. ಲೆನಿನ್ ಯಾವೆಲ್ಲಾ ರೀತಿಯಲ್ಲಿ ಮನುಷ್ಯರು ಶೋಷಣೆಗೆ ಒಳಗಾಗಿದ್ದಾರೆಯೋ ಅವರನ್ನು ಹೋರಾಟವು ತನ್ನ ಪರಿಧಿಯ ಒಳಗೆ ತರಬೇಕಾಗುತ್ತದೆ. ಬೇರೆ ಬೇರೆ ವರ್ಗಗಳು ಮತ್ತು ಅವುಗಳ ಸಂಬಂಧವನ್ನು ಮಾತಾಡುವಾಗ ಅವುಗಳು ಸಂಬಂಧವನ್ನು ಇಟ್ಟುಕೊಳ್ಳುವುದು ಅತ್ಯಂತ ಅನಿವಾರ್ಯ ಎಂದು ಲೆನಿನ್ ಹೇಳುತ್ತಾನೆ. ಸ್ವಲ್ಪ ಮಟ್ಟಿಗೆ ಇದನ್ನು ಗ್ರಾಂಶಿಯು ಒಪ್ಪುತ್ತಾನೆ. ಆದ್ದರಿಂದ ಪ್ರಭುತ್ವವು ಒಂದು ಹಂತದಲ್ಲಿ ತನ್ನ ಕೆಳಗೆ ಇರುವವರನ್ನು ಒಪ್ಪುವಂತೆ ಮಾಡುತ್ತದೆ. ಇದು ರಾಜಕೀಯ ಪರಿಕರವೂ ಹೌದು.

ಹೆಜೆಮನಿಯ ರಾಜಕೀಯ ಮತ್ತು ತಾತ್ವಿಕ ಆಯಾಮಗಳು:

ಹೆಜೆಮನಿ ಎನ್ನುವುದಕ್ಕೆ ರಾಜಕೀಯ ಮತ್ತು ಚಾರಿತ್ರಿಕವಾದ ಒಂದು ಆಯಾಮವೂ ಇದೆ. ಅಷ್ಟೇ ಅಲ್ಲ ಅದು ಸಂಬಂಧಗಳ ಬದಲಾವಣೆಯನ್ನು ಹೇಳುತ್ತದೆ. ಇದನ್ನು ಅವನು ಹೇಳುವಾಗ ಅವನ ಮನಸ್ಸಿನಲ್ಲಿ ಇಟಲಿಯ ಗ್ರಾಮೀಣ ಜಗತ್ತು ಮತ್ತು ಅದರ ಸಮಸ್ಯೆಗಳ ತಿಳುವಳಿಕೆಗಳು ಇದ್ದವು. ಕಾರ್ಮಿಕವರ್ಗವು

ಜನರನ್ನು ಕರೆದೊಯ್ಯುವ ಸ್ಥಿತಿಯು ಇರಬೇಕೆ ಹೊರತು ಬಂಡವಾಳವಾದವು ಜನರನ್ನು ಕರೆದುಕೊಂಡು ಹೋಗುವ ಸ್ಥಿತಿಯು ಬರುವುದು ಸರಿಯಾದ ಕ್ರಮವಲ್ಲ ಎಂದು ಗ್ರಾಂಶಿಯು ನಂಬಿದ್ದ. ಕಾರ್ಮಿಕರು ಮತ್ತು ಅವರ ಅನುಭವವವು ಒಂದು ಪ್ರಮಾಣದಲ್ಲಿ ಇರುತ್ತದೆ. ಆದರೆ ಬಂಡವಾಳಶಾಹಿಗಳ ಅನುಭವ ಬೇರೆ ಮಾದರಿಯದು. ಕಾರ್ಮಿಕರು ತಾವು ನಿಜವಾದ ಅರ್ಥದಲ್ಲಿ ಒಂದು ವರ್ಗದ ಪ್ರತಿನಿಧಿಗಳಾಗಬೇಕು ಎಂದು ತಿಳಿಯಬೇಕೇ ಹೊರತು ಮತ್ತೇನೂ ಅಲ್ಲ. ಅದರ ಜೊತೆಗೆ ಕಾರ್ಮಿಕರು , ರೈತರು ಹಾಗೂ ಬುದ್ಧಿಜೀವಿಗಳು ಜೊತೆಗೆ ಹೋದರೆ ಮಾತ್ರವೇ ನಮಗೆ ಸಮಾಜವಾದ ಮತ್ತು ಅದರ ಅರಿವು ಸಿಗಲು ಸಾಧ್ಯ. ಯಾವುದೇ ಗುಂಪನ್ನು ಒಬ್ಬ ವ್ಯಕ್ತಿ ಅಥವಾ ಮತ್ತೊಂದು ಗುಂಪನ್ನು ನಿಯತ್ರಣ ಮಾಡಿದರೆ ಆಗ ಅದರ ಸ್ವರೂಪವನ್ನು ನಾವು ಭಿನ್ನವಾದ ರೀತಿಯಲ್ಲಿ ಗಮನಿಸಬೇಕಾದ ಅಗತ್ಯವಿರುತ್ತದೆ. ಅಧಿಕಾರವು ಒಂದು ಮಧ್ಯಸ್ತಿಕೆಯನ್ನು ಬಯಸುತ್ತದೆ. ಅದನ್ನು ನಾವು ಮಧ್ಯವರ್ತಿ ಗುಂಪು ಎಂದೂ ಹೇಳಬಹುದು. ಅದಕ್ಕೂ ತಾತ್ವಿಕತೆಗೂ ಒಂದು ಸಂಬಂಧವು ಇರುತ್ತದೆ. ಎರಡನೆಯಾಗಿ ಆಧುನಿಕ ಆಳಿಸಿಕೊಳ್ಳುವ ಸಂಸ್ಕೃತಿಯು ಹೇಗೆ ಕೆಲಸವನ್ನು ಮಾಡುತ್ತದೆ ಎಂದೂ ಗ್ರಹಿಸುವುದು ಅತ್ಯಂತ ಅಗತ್ಯ. ಸಂಸ್ಕೃತಿಯಲ್ಲಿ ಆಳುವುದು ಅಥವಾ ಅಳಿಸಿಕೊಳ್ಳುವುದು ಎನ್ನುವುದಕ್ಕೆ ವಿಶೇಷವಾದ ಅರ್ಥವಿದೆ. ಆಳುವುದಕ್ಕೆ ಹೇಗೆ ಒಂದು ನಿರ್ದಿಷ್ಟವಾದ ಮೌಲ್ಯವಿದೆಯೋ ಅದೇ ರೀತಿಯಲ್ಲಿ ಆಳಿಸಿಕೊಳ್ಳುವ ಸಂಸ್ಕೃತಿಗೂ ಒಂದು ನಿರ್ದಿಷ್ಟವಾದ ಮೌಲ್ಯವು ಇರುತ್ತದೆ. ಇಲ್ಲಿ ಗ್ರಾಂಶಿಯು ಹೇರಲ್ಪಡುವ ಮೌಲ್ಯಗಳು ಎಂದು ಹೇಳುತ್ತಾನೆ. ಗ್ರಾಂಶಿಯು ಇಲ್ಲಿ ಇನ್ನೊಂದು ಅಂಶವನ್ನು ಹೇಳುತ್ತಾನೆ. ಕ್ಯಾಥೋಲಿಕ್ ಚರ್ಚ್‌ಗಳು ತಮ್ಮ ಮೌಲ್ಯಗಳನ್ನು ಜನರಿಗೆ ಹೇಳಿದೆ. ಅದರಿಂದ ಜನರು ಅದಕ್ಕೆ ಆಕರ್ಶಿತರಾದರು. ಇದನ್ನು ಹೇಳುವಾಗ ಉಳಿದವರು ಹೇಳುವಂತೆ ಚರ್ಚ್‌ಗಳು ಪ್ರಗತಿಪರವೇ ಅಥವಾ ಪ್ರಗತಿವಿರೋಧವೆ ಎಂದು ನಿರ್ಧಾರ ಮಾಡಲು ಆಗುವುದಿಲ್ಲ ಎಂದು ಅವನು ಭಾವಿಸುತ್ತಾನೆ. ತನ್ನಿಂದ ತಾನಾಗಿಯೇ ಚರ್ಚ್ ಪ್ರಗತಿ ವಿರೋಧಿಯಾಗಲು ಸಾಧ್ಯವಿಲ್ಲ.. ಚರ್ಚ್‌ನ್ನು ನಂಬುವವರು ಜನರನ್ನು ಒಂದು ಧರ್ಮಕ್ಕೆ ಅನುಕೂಲವಾಗುವಂತೆ ಸಂಘಟನೆ ಮಾಡುತ್ತದೆ. ಮೂಲಭೂತವಾದಿಗಳು ಅನೇಕರನ್ನು ಧರ್ಮದ ಹೆಸಏನಲ್ಲಿ ಸಂಘಟನೆ ಮಾಡಲು ಬಯಸುತ್ತದೆ. ಯಾವುದನ್ನು ಈವತ್ತು ಮೂಲಭೂತವಾದ ಎಂದು ಹೇಳುತ್ತೇವೆಯೋ ಅದು ಕೂಡಾ ಈವತ್ತು ಪ್ರಗತಿಯ ಚಿಂತನೆಯನ್ನು ದೂರ ಇಟ್ಟಿದೆ, ಧಾರ್ಮಿಕ ಮೂಲಭೂತವಾದವು ನಾಯಕತ್ವವವನ್ನು ವಹಿಸಿದೆ ಎಂದಾದರೆ ಆಗ ಅದರ ಕೈಕೆಳಗೆ ಅನೇಕರು ಇರುತ್ತಾರೆ., ಹಾಗೆ ನೋಡಿದರೆ ಜನರು ಮತ್ತು ಅವರ ಗುಂಪುಗಳು ತಮ್ಮದೇ ಆದ ಒಂದು ಚೌಕಟ್ಟನ್ನು ಹೊಂದಿರುವುದು ನಮ್ಮ ಕಣ್ಣಿಗೆ

ಕಾಣಿಸುತ್ತವೆ. ಸಮೂಹ ಸಂಸ್ಕೃತಿ ಮತ್ತು ಅದರ ಸ್ವಭಾವನ್ನು ನಾವು ಗ್ರಹಿಸಬಹುದು ಎಂದು ವಿವರಿಸಲು ಅಡರ್ನೊ ಬಂಡವಾಳವಾದ ಮತ್ತು ಅದರ ಸ್ವರೂಪವನ್ನು ವಿವರಿಸುತ್ತಾರೆ. ಆಲೋಚನೆಯ ಕ್ರಮದಲ್ಲಿಯೂ ಧನಾತ್ಮಕ ಮತ್ತು ಋಣಾತ್ಮಕವಾದ ನಿಲುವುಗಳಿಗ ವಿವಿಧ ಆಯಮಗಳು ಇರುತ್ತವೆ. ಗ್ರಾಂಶಿಯು ಇದನ್ನು ಹೀಗೆ ಭಾವಿಸುತ್ತಾನೆ. ಋಣಾತ್ಮಕ ಮತ್ತು ಧನಾತ್ಮಕವಾದ ನಿಲುವುಗಳು ಹೇಗೆ ಇರುತ್ತವೆ ಎನ್ನುವುದು ಅವನಿಗೂ ಅತ್ಯಂತ ಮುಖ್ಯ. ಇದರ ಹಿಂದೆ ಒಂದು ಚರಿತ್ರೆಯು ಇರುತ್ತದೆ ಎನ್ನುವುದು ಅವನ ವಾದವಾಗಿದೆ. ಬಂಡವಾಳವಾದ ಮತ್ತು ಅದರ ರೀತಿಯು ಬೇರೆ ಇರುತ್ತದೆ. ಅದನ್ನೂ ಗ್ರಾಂಶಿಯು ಹೇಳುತ್ತಾನೆ. ನಾವು ಕಾರನ್ನು ಬಳಸುತ್ತೇವೆ. ಅದು ಒಂದು ವಾಹನವೂ ಆಗಿದೆ. ಆದರೆ ಕಾರನ್ನು ತಯಾರು ಮಾಡುವುದು ಬೃಹತ್ ಕೈಗಾರಿಕೆ. ಬೃಹತ್ ಕೈಗಾರಿಕೆಗೆ ಬಂಡವಾಳವಾದವೂ ಬೇಕಾಗುತ್ತದೆ. ಅದು ಕಾರನ್ನು ಉತ್ಪಾದನೆ ಮಾಡಿದೆ ಎಂದರೆ ಕೈಗಾರಿಕೆ ಮತ್ತು ಅದರ ಲಾಭವನ್ನು ನಾವು ಬಳಸುತ್ತಿದ್ದೇವೆ ಎಂದು ಅರ್ಥ. ಬಂಡವಾಳವಾದವು ಹೇಗೆ ನಮ್ಮನ್ನು ತನ್ನ ಒಟ್ಟಿಗೆ ಇಟ್ಟುಕೊಂಡಿದೆ ಎನ್ನುವುದನ್ನು ನಾವು ಇಲ್ಲಿ ಗಮನಿಸಬೇಕಾಗುತ್ತದೆ. ಕಾಲು ಹಾದಿಯಲ್ಲಿ ನಡೆಯುವವರಿಗೆ ಕಾರು ಮತ್ತು ಅದರ ಬಳಕೆಯು ಬೇಕಾಗಿಲ್ಲ. ಕಾರು ಇದ್ದರೆ ಅದಕ್ಕೆ ರಸ್ತೆಯು ಬೇಕಾಗುತ್ತದೆ, ರಸ್ತೆ ಮತ್ತು ವಾಹನಗಳ ಸಹಯೋಗವು ಈ ದೃಷ್ಟಿಯಿಂದ ಅತ್ಯಂತ ಮುಖ್ಯ. ವಾಸ್ತವವಾಗಿ ಈವತ್ತು ಒಂದು ಸಮಾಜದಲ್ಲಿ ಈ ಬಗೆಯ ಅನೇಕ ರೀತಿಗಳನ್ನು ಕಾಣುತ್ತೇವೆ. ಇವುಗಳಲ್ಲಿ ಅನೇಕ ವೈರುಧ್ಯಗಳೂ ಇರುತ್ತವೆ. ಇಲ್ಲಿ ಕಾರು ಎನ್ನುವುದು ಹೇಗೆ ಇದೆ ಎಂದು ನೋಡಬೇಕು. ಕಾರು ನಮ್ಮನ್ನು ಬೇಗನೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕರೆದುಕೊಂಡು ಹೋಗುತ್ತದೆ. ಅದರ ಜೊತೆಯಲ್ಲಿ ಅದು ಸರಕನ್ನು ಸಾಗಿಸುತ್ತದೆ. ಆದ್ದರಿಂದ ಕಾರು ಎನ್ನುವುದು ನಮಗೆ ಅತ್ಯಂತ ಉಪಯುಕ್ತವಾದ ವಾಹನವೂ ಹೌದು. ನಾಗರಿಕ ಸಮಾಜದಲ್ಲಿಯೂ ಇದು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದು ಒಂದು ವಿಷಯವಾದರೆ ಮತ್ತೊಂದು ಕಡೆಯಿಂದ ಆಧುನಿಕ ನಾಗರಿಕತೆಗೆ ಅನೇಕ ಬಗೆಯ ಆಲೋಚನೆಗಳೂ ಬಂದಿವೆ. ಈವತ್ತು ತಾಂತ್ರಿಕತೆಗೆ ವಿವಿಧ ಆಯಾಮಗಳೂ ಇವೆ. ಅದು ನಮ್ಮ ಜೀವನದ ಮೇಲೆ ಪ್ರಭಾವವನ್ನು ಬೀರಿದೆ. ಈ ತಾಂತ್ರಿಕತೆಯೂ ನಮ್ಮ ಮೇಲೆ ಅಧಿಪತ್ಯವನ್ನು ಹೊಂದಿದೆ ಎನ್ನುವುದು ಸ್ಪಷ್ಟ.

ಬಲಾತ್ಕಾರ ಮತ್ತು ಒಪ್ಪಿಗೆಗಳು

ಇದರಲ್ಲಿ ಬೇರೆ ಬೇರೆ ಮಾದರಿಗಳು ಇರುತ್ತವೆ. ಬಲಾತ್ಕಾರ ಎಂದರೆ ಅದರ ದೃಷ್ಟಿಕೋನವು ವಿವಿಧ ರೀತಿಯಲ್ಲಿ ಇರಲು ಸಾಧ್ಯ. ಇದನ್ನು ಗ್ರಾಂಶಿಯು

ಹೇಳುವಾಗ ಅನುಮತಿಗೆ ಮತ್ತು ಬಲಾತ್ಕಾರಕ್ಕೆ ಇರುವ ವ್ಯತ್ಯಾಸವನ್ನು ಅವನು ಸೂಚಿಸುತ್ತಾನೆ. ಪ್ರಭುತ್ವವು ಕೆಲವನ್ನು ಅಧಿಕಾರಯುತವಾಗಿ ಜನರ ಮೇಲೆ ಹೇರುತ್ತದೆ. ಇದರ ಜೊತೆಗೆ ಅವನು ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಪುನರುಜ್ಜೀವನ ಕಾಲದ ರಾಜಕೀಯ ನಿಲವುಗಳನ್ನು ಪರಸ್ಪರ ತೌಲನಿಕವಾಗಿ ನೋಡುವಾಗ ಒಪ್ಪಿಗೆ ಮತ್ತು ಬಲಾತ್ಕಾರಗಳನ್ನು ಹೇಳುತ್ತಾನೆ. ಮೆಕೆವಲ್ಲಿಯು ಹೇಳಿದ ಕೆಲವು ಸಂಗತಿಗಳನ್ನು ಗ್ರಾಂಶಿಯು ಪ್ರಸ್ತಾವಿಸುತ್ತಾನೆ. ಮೆಕೆವಲ್ಲಿಯು ಹೇಳಿದ್ದ: ಅತ್ಯುತ್ತಮ ಪ್ರಭುತ್ವವು ಆಳ್ವಿಕೆಯನ್ನು ನಡೆಸುವಾಗ ಮೊದಲು ಜನರ ಮೌಲ್ಯಗಳನ್ನು ಗಮನಿಸುತ್ತದೆ. ಮತ್ತೆ ಅದರಲ್ಲಿ ಕೆಲವು ಮೌಲ್ಯಗಳನ್ನು ಅಂಗೀಕರಿಸುತ್ತಾನೆ. ಇದರಿಂದ ಜನರು ಕೆಲವನ್ನು ಅಂಗೀಕರಿಸದ ಹಾಗೆ ಕಾಣುತ್ತದೆ. ಮತ್ತೆ ಇದಕ್ಕೆ ಪೂರಕವಾಗಿ ಇರುವ ಆಢಳಿತವನ್ನು ಕೂಡಾ ಮೆಕೆವಲ್ಲಿಯು ಗಮನಿಸುತ್ತಾನೆ. ಮೆಕೆವಲ್ಲಿಯು ಇದನ್ನು ಹೇಳುವಾಗ ಒಂದು ಪುರಾಣವನ್ನು ಹೇಳುತ್ತಾನೆ. ಅದನ್ನು ನಾವು ರೂಪಕ ಎಂದು ಹೇಳಿದರೂ ಸರಿಯಾಗುತ್ತದೆ. ಅರ್ಧ ಮನುಷ್ಯ ಮತ್ತು ಅರ್ಧ ಕುದುರೆಯು ಹೇಗೆ ಇರುತ್ತದೆಯೋ ಅದೇ ರೀತಿಯಲ್ಲಿ ಅರ್ಧ ಜನರು ಮತ್ತು ಅವರ ಅಭಿಪ್ರಾಯವನ್ನು ತೆಗೆದು ಕೊಳ್ಳುತ್ತದೆ. ಮತ್ತೆ ಅರ್ಧ ತನ್ನ ಸಂಹಿತೆಯನ್ನು ಅನ್ವಯ ಮಾಡುತ್ತದೆ. ಅವನ ಮುಖ್ಯವಾದ ಚರ್ಚೆ ಎಂದರೆ ಮನುಷ್ಯ ಅರ್ಧ ದೆವ್ವವನ್ನು ಅನುಕರಣೆ ಮಾಡುತ್ತಾನೆ. ಅರ್ಧ ಮಾತ್ರವೇ ಅವನು ಮನುಷ್ಯನಾಗುತ್ತಾನೆ.

ಇದೇ ರೀತಿಯಲ್ಲಿ ಗ್ರಾಂಶಿಯು ದ್ವಿರೂಪದ ಮಾದರಿಗಳು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಹೇಳುತ್ತಾನೆ. ಇಲ್ಲಿ ಅತ್ಯಂತ ಮುಖ್ಯವಾಗಿರುವುದು ಅವನು ಪ್ರಸ್ತಾವಿಸಿದ ಒಪ್ಪಿಗೆ ಮತ್ತು ಬಲಾತ್ಕಾರ ಎನ್ನುವ ಪರಿಭಾಷೆಗಳು. ಯಾವುದೇ ಒಂದು ವಿಚಾರವನ್ನು ನಾವು ಒಪ್ಪಿಕೊಳ್ಳಲು ನಮಗೆ ನಮ್ಮದೇ ಆದ ಅಭಿಪ್ರಾಯವು ಸಾಕಾಗುವುದಿಲ್ಲ. ಅದರ ಜೊತೆಗೆ ಅವನು ಮತ್ತೆ ಒಂದು ವಿಚಾರವನ್ನು ಹೇಳುತ್ತಾನೆ. ಬೇರೆ ಬೇರೆ ಕಾಲಗಳು ನಮಗೆ ಬೇರೆ ಬೇರೆ ಹಾದಿಗಳನ್ನು ಹೇಳುತ್ತವೆ. ಒಂದು ಗುಂಪು ಅಥವಾ ಒಬ್ಬ ವ್ಯಕ್ತಿಯು ಇನ್ನೊಬ್ಬರ ಮೇಲೆ ತಮ್ಮ ಅಧಿಕಾರವನ್ನು ಹೇರಲು ಹೊರಡುವಾಗ ತನ್ನ ನಿಯಂತ್ರಣದ ಶಕ್ತಿಯನ್ನು ಹೆಚ್ಚು ಬಳಸುತ್ತದೆ. ಆದರೆ ಮತ್ತೊಂದು ಕಡೆಗೆ ಅದು ಅಧಿಕಾರದ ವಿರುದ್ಧ ಬರುವವರ ಮೇಲೆ ತನ್ನ ಅಭಿಪ್ರಾಯವನ್ನು ಒಪ್ಪುವ ಹಾಗೆ ಮಾಡುತ್ತದೆ. ಆದ್ದರಿಂದ ಗ್ರಾಂಶಿಯು ಇದನ್ನು ನೋಡಿ ರಾಜಕೀಯ ಸಮಾಜ ಎಂದು ಮಾತಾಡುತ್ತಾನೆ. ಇದೇ ಸನ್ನಿವೇಶದಲ್ಲಿ ಅಧಿಕಾರವನ್ನು ಚಲಾಯಿಸಲು ಕೂಡಾ ಒಂದು ಕ್ಷಣ ಎನ್ನುವುದು ಇರುತ್ತದೆ.ಅವನು ಹೇಳುವ ರಾಜಕೀಯ ಸಮಾಜದಲ್ಲಿ ಅನೇಕ ಬಗೆಯ ಪರಿಕರಗಳೂ ಇರುತ್ತವೆ. ಗ್ರಾಂಶಿಯಲ್ಲಿ ಒಪ್ಪಿಗೆ ಎನ್ನುವುದು ರಾಜಕಾರಣವಲ್ಲಿ

ಜವಾಬ್ದಾರಿಯೂ ಆಗಿದೆ. ಅದರ ಜೊತೆಗೆ ರಾಜಕಾರಣವು ಜನರ ಮೇಲೆ ತನ್ನ ಶಿಸ್ತುಗಳನ್ನು ಹೇರುತ್ತವೆ. ಅದರಲ್ಲಿ ಆರ್ಥಿಕತೆಯು ಇರುತ್ತದೆ. ಮತ್ತೊಂದು ಕಡೆಗೆ ಅದು ಅಧಿಕಾರದ ರಾಜಕೀಯ ಆಯಾಮವನ್ನು ಕೂಡಾ ಹೊಂದಿರುತ್ತದೆ. ಪರ್ತೋಟಿಗೆ ತರುವಾಗ ಅದು ಹಿಂಸೆಯನ್ನು ಕೂಡಾ ಬಳಸುತ್ತದೆ. ರಾಜಕಾರಣ ಮತ್ತು ಅದರ ಸನ್ನಿವೇಶವನ್ನು ಕೂಡಾ ನಾವು ಗಮನಿಸಬೇಕಾಗುತ್ತದೆ. ಅದರಲ್ಲಿ ಪೋಲೀಸ್ ವ್ಯವಸ್ಥೆ ಕೂಡಾ ಇರುತ್ತದೆ. ಆದ್ದರಿಂದ ಒಪ್ಪಿಗೆ ಮತ್ತು ಬಲಾತ್ಕಾರಗಳು ಜೊತೆಯಲ್ಲಿ ಇರುವುದು ನಿಜ. ಇದರ ಸಮಸ್ಯೆಗಳನ್ನು ಗ್ರಾಂಶಿಯು ಹೇಳುತ್ತಾನೆ. ಬಲಾತ್ಕಾರ ಮತ್ತು ಒಪ್ಪಿಗೆ ಎನ್ನುವುದು ಹೇಗೆ ಜೊತೆಯಲ್ಲಿ ಹೋಗಬಲ್ಲುದು ಎನ್ನುವ ಪ್ರಶ್ನೆಯು ಗ್ರಾಂಶಿಗೂ ಇದೆ. ಆಧುನಿಕ ರಾಜಕೀಯ ಮತ್ತು ಆರ್ಥಿಕ ಪ್ರಶ್ನೆಗಳಲ್ಲಿ ಆಳ್ವಿಕೆ ಮತ್ತು ಆಳಿಸಿಕೊಳ್ಳುವಿಕೆ ಎನ್ನುವುದು ನಮಗೆ ಬೇರೆ ಬೇರೆ ಧ್ವನಿಯನ್ನು ಸೂಚಿಸುತ್ತದೆ. ಆಳುವುದು ಮತ್ತು ಆಳಿಸಿಕೊಳ್ಳುವುದು ಎನ್ನುವುದಕ್ಕೆ ವಿವಿಧ ರೂಪಗಳೂ ಇವೆ, ಆದ್ದರಿಂದ ಮೆಕೆವಲ್ಲಿಯ ವಾದವನ್ನು ಮರು ಪರಿಶೀಲನೆಯನ್ನು ಗ್ರಾಂಶಿಯು ಮಾಡಬೇಕಾಗಿ ಬಂತು. ಯುದ್ಧ ಮತ್ತು ತಂತ್ರಗಳು ನಾಗರಿಕ ಸಮಾಜದಲ್ಲಿ ನಮಗೆ ಬೇರೆ ರೀತಿಯಲ್ಲಿ ಇರುತ್ತದೆ. ಒಪ್ಪಿಗೆ ಮತ್ತು ಬಲಾತ್ಕಾರ ಎನ್ನುವುದು ಹೇಗೆ ವಿವಿಧ ಆಯಾಮನ್ನು ಪಡೆಯುತ್ತದೆ ಎನ್ನುವುದೂ ಗ್ರಾಂಶಿಗೆ ಮುಖ್ಯವಾದ್ದರಿಂದ ರಾಜಕಾರಣಿಗಳು ಮತ್ತು ಸರಕಾರದ ಅಧಿಕಾರಿ ವರ್ಗಗಳು ಕೆಲವು ರೀತಿಯಲ್ಲಿ ನಮ್ಮ ಅಧಿಕಾರವನ್ನು ಸ್ಥಾಪಿಸುತ್ತವೆ. ಆದರೆ ಹೀಗೆ ಮಾಡುವಾಗ ಅವುಗಳು ನಮಗೆ ಸೂಚನೆಗಳನ್ನು ಕೊಡುತ್ತವೆ. ಅದು ಬಲಾತ್ಕಾರವನ್ನು ಮಾಡುವುದಿಲ್ಲ. ಅದರ ಬದಲು ಸರಕಾರ ಮತ್ತು ಅಧಿಕಾರಿ ವರ್ಗವು ನಮಗೆ ಒಪ್ಪಿಗೆಯನ್ನು ಸೂಚಿಸುವಂತೆ ಮಾಡುತ್ತದೆ. ಅಧಿಕಾರಶಾಹಿಯು ನಮಗೆ ಆಧುನಿಕ ಸಮಾಜದಲ್ಲಿ ಕೆಲವು ಕಾರ್ಯ ವಿಧಾನವನ್ನು ಕೂಡಾ ನಿರ್ಧಾರತ್ತದೆ. ತಬರನ ಕತೆಯನ್ನು ನಾವು ನೆನಪು ಮಾಡಿಕೊಂಡರೆ ಇದು ತಿಳಿಯುತ್ತದೆ. ರಾಜಕೀಯ ಸಮಾಜದಲ್ಲಿ ಈ ಬಗೆಯ ಸಂಗತಿಗಳು ಅತ್ಯಂತ ಸಹಜ ಎಂದು ಒಪ್ಪಿಕೊಳ್ಳುವಂತೆ ಇದು ಮಾಡುತ್ತವೆ.. ಇದು ಮತ್ತೊಂದು ಅರ್ಥದಲ್ಲಿ ನಮ್ಮ ನಿತ್ಯದ ಸಂಗತಿಯನ್ನು ಹೇಳುತ್ತವೆ.ಪಿರ್ರೆ ಬೌರ್ದಿವ್ ಇದನ್ನು ಸಾಂಕೇತಿಕವಾದ ಹಿಂಸೆ ಎಂದು ಹೇಳುತ್ತಾನೆ. ಅದು ನಮ್ಮ ಭಾವನೆಗೆ ಬರುತ್ತದೆ. ಆದರೆ ನಾವು ಏನೂ ಮಾಡಲಾರೆವು ಎನ್ನುವ ಸ್ಥಿತಿಗೆ ಬರುತ್ತೇವೆ. ಅದುವೇ ನಮಗೆ ನಮ್ಮ ಜೀವನ ಎನ್ನುವಷ್ಟರ ಮಟ್ಟಿಗೆ ಬಂದಿರುತ್ತದೆ. ಒಬ್ಬ ವ್ಯಕ್ತಿಯಾಗಿ ನಾವು ಈವತ್ತು ಪ್ರಭುತ್ವದ ವಿರುದ್ಧ ಹೋರಾಟ ಮಾಡುವುದು ಅತ್ಯಂತ ಕಷ್ಟ.

ಬಲಾತ್ಕಾರ ಮತ್ತು ಅದರ ವಿಸ್ತರಣೆ ಹಾಗೂ ಮಿತಿಗಳು

ಒಂದು ಜನ ಸಮೂಹವು ಯಜಮಾನಿಕೆಯನ್ನು ಒಪ್ಪುವಂತೆ ಮಾಡುವುದು ಎಂದರೆ ಅಲ್ಲಿ ಅಧಿಕಾರ ಮತ್ತು ಅದರ ವಿಸ್ತರಣೆಯು ಇರುತ್ತದೆ ಎಂದು ಅರ್ಥ. ಬಲಾತ್ಕಾರ ಎನ್ನುವುದು ಅತ್ಯಂತ ಸಾಮಾನ್ಯವಾದ ಒಂದು ಚಟುವಟಿಕೆ ಅಲ್ಲ. ದಬ್ಬಾಳಿಕೆ ಎನ್ನುವುದು ನಮಗೆ ಈವತ್ತು ಒಂದು ತಾತ್ವಿಕವಾದ ಪರಿಕಲ್ಪನೆಯೂ ಹೌದು. ಆದರೆ ಅಧಿಕಾರ ಎನ್ನುವುದು ಹೇಗೆ ವಿಸ್ತಾರವಾಗುತ್ತದೆ ಮತ್ತು ಅಧಿಕಾರ ಎನ್ನುವುದಕ್ಕೆ ಹೇಗೆ ಮಿತಿಗಳು ಇರುತ್ತವೆ ಎಂದು ನೋಡಬೇಕಾಗುತ್ತದೆ ಎನ್ನುವುದು ಗ್ರಾಂಶಿಯ ನಿಲುವು. ಯಜಮಾನಿಕೆ ಎನ್ನುವುದು ವಿಸ್ತಾರವಾಗುತ್ತವೆ, ಅದು ಸಾಧ್ಯವಾದಷ್ಟು ಹೆಚ್ಚು ಜನರನ್ನು ತನ್ನ ವ್ಯಾಪ್ತಿಗೆ ಒಳಪಡುವಂತೆ ಮಾಡುತ್ತದೆ. ಒಪ್ಪುವುದು ಮತ್ತಯ ಅದನ್ನು ಒಪ್ಪುವಂತೆ ಮಾಡುವುದು ಸಮಾಜದಲ್ಲಿ ಪರಿವರ್ತನೆಯನ್ನು ತರುತ್ತದೆ. ಅಷ್ಟೇ ಅಲ್ಲ ಈ ಸನ್ನಿವೇಶದಲ್ಲಿ ಆಳುವುದು ಮತ್ತು ಆಳಿಸಿಕೊಳ್ಳುವುದು ಒಂದನೆಯದಾಗಿ ರಾಜಕೀಯ ಕಾರ್ಯಕ್ರಮ. ಇಲ್ಲಿ ಇನ್ನೊಂದು ಅಂಶವನ್ನು ನಾವು ನೋಡಬೇಕು: ಆಳುವುದು ಮತ್ತು ತನ್ನ ಅಧಿಕಾರವನ್ನು ಚಲಾಯಿಸುವುದು ಎನ್ನುವುದಕ್ಕೆ ಕೆಲವು ತಂತ್ರಗಳೂ ಇರುತ್ತವೆ. ಯಾವಾಗ ಆಳುವುದು ಎನ್ನುವುದು ನಮಗೆ ವಿಸ್ತಾರವಾಗುವಂತೆ ಕಾಣುತ್ತದೆಯೋ ಆಗ ಆಳಿಸಿಕೊಳ್ಳುವ ವರ್ಗವು ಶಕ್ತಿ ಹೀನವಾಗುತ್ತದೆ. ಅದರ ಅನನ್ಯತೆಯು ಬೇರೆಯಾಗುತ್ತದೆ.

ಸಾಮಾನ್ಯ ತಿಳುವಳಿಕೆ ಮತ್ತು ಒಳ್ಳೆಯ ಗುಣ

ಗ್ರಾಂಶಿಯಲ್ಲಿ ಇದಕ್ಕೆ ಅತ್ಯಂತ ಮಹತ್ವವಿದೆ. ಅವನು ಇದನ್ನು ಬೇರೆ ಥರ ನೋಡುತ್ತಾನೆ. ಅವನು ಬಳಸಿದ ಅತ್ಯಂತ ಮುಖ್ಯವಾದ ಪರಿಕಲ್ಪನೆ ಎಂದರೆ ಇದು. ಇದನ್ನು ಹೇಳುವಾಗ ಅವನು ಜಾನಪದ ಮತ್ತು ಅದರ ಲೋಕದ ಕಲ್ಪನೆಯು ಕೂಡಾ ಅತ್ಯಂತ ಮುಖ್ಯವಾಗಿತ್ತು. ಜಾನಪದ ಮತ್ತು ಅದರ ಜೀವನದ ದೃಷ್ಟಿಕೋನವು ಕೂಡಾ ಗ್ರಾಂಶಿಗೆ ಪ್ರಭಾವವನ್ನು ಬೀರಿರುವುದು ಸತ್ಯ. ಒಟ್ಟು ಜಗತ್ತನ್ನು ನೋಡಲು ಇದು ಮುಖ್ಯವಾಗಿದೆ . ಅದನ್ನು ಗ್ರಾಂಶಿಯು ಕೊಟ್ಟ. ಅತ್ಯಂತ ಸಾಮಾನ್ಯವಾದ ಒಂದು ತಿಳುವಳಿಕೆ ಎನ್ನುವುದು ಬಹಳ ದೊಡ್ಡದಾದ ತತ್ವಜ್ಞಾನವೂ ಹೌದು. ಅದನ್ನು ಅವನು ಒಪ್ಪುತ್ತಾನೆ. ಸಾಮಾನ್ಯವಾದ ತಿಳುವಳಿಕೆಯು ಹೇಗೆ ಇರುತ್ತದೆ ಎಂದರೆ ಗ್ರಾಂಶಿಯು ನಮಗೆ ಒಂದು ಉತ್ತರವನ್ನು ಕೊಡುತ್ತಾನೆ. ಜನಪದ ತತ್ವಜ್ಞಾನ ಎನ್ನುವುದು ಅತ್ಯಂತ ಮುಖ್ಯವಾದ್ದು. ಅದನ್ನು ಅವನು ಹೇಳಿದ್ದು ಜೀವನ ಮತ್ತು ಅದರ ಕ್ರಮಕ್ಕೂ ಅನ್ವಯವಾಗುತ್ತದೆ. ಆದರೆ ಅವನು ಹೇಳುವಂತೆ ಸಾಮಾನ್ಯವಾದ ನಮ್ಮ ಆಲೋಚನೆ ಮತ್ತು ಜೀವನದ ಕ್ರಮವು

ಒಂದು ಸಾಂಪ್ರದಾಯಿಕವಾದ ನೆಲೆಯಲ್ಲಿ ಇರುವುದಿಲ್ಲ. ಅದನ್ನು ಅವನು ನಿಯಮಕ್ಕೆ ಅನುಸಾರವಾದ್ದು ಎಂದು ತಿಳಿಯಬೇಕಿಲ್ಲ. ಅದರಲ್ಲಿ ಬಹುತ್ವವು ಇರುತ್ತದೆ. ಅದರಲ್ಲಿ ಸ್ಫೂರ್ತಿ ಇರುತ್ತದೆ. ಬಹುತ್ವ, ಸಹಯೋಗ, ಇವೆಲ್ಲಾ ಅದರ ಜೊತೆಗೆ ಇರುತ್ತದೆ. ಸಮಾಜ ಮತ್ತು ಅದರ ತಿಳುವಳಿಕೆಗಳು ಸಾಮಾನ್ಯವಾದ ತಿಳುವಳಿಕೆಯ ಮೇಲೆ ಕೆಲಸವನ್ನು ಮಾಡುತ್ತದೆ. ಅಂದರೆ ಸಾಮಾನ್ಯ ಎನ್ನುವುದು ನಿಜವಾಗಿಯೂ ಸಹಜವಾದ ರೂಪದಲ್ಲಿ ಚಾಲ್ತಿಗೆ ಬರುತ್ತದೆ. ಆದರೆ ಇವುಗಳಲ್ಲಿ ಕೆಲವು ಬಹಳ ಹಿಂದಿನಿಂದ ಬಂದಿರುತ್ತವೆ. ಹಳೆಯ ಶಿಲಾಯುಗದಿಂದ ಇಲ್ಲಿಯ ವರೆಗೆ ಬೇರೆ ಬೇರೆ ಜ್ಞಾನದ ರೂಪಗಳು ಬೆಳೆದು ಬಂದಿವೆ. ಅದರಲ್ಲಿ ವಿವಿಧತೆಗಳೂ ಇವೆ. ಅದರ ಜೊತೆಯಲ್ಲಿ ಪ್ರತಿಯೊಂದು ಸಮಾಜವು ತನಗೆ ಬೇಕಾದ ಜ್ಞಾನದ ರೂಪಗಳನ್ನು ಹುಟ್ಟುಹಾಕುತ್ತದೆ. ಗುಂಪು ಜ್ಞಾನವನ್ನು ಪಡೆಯುತ್ತದೆ. ಅದರ ಜೊತೆಗೆ ಜ್ಞಾನ ಎನ್ನುವುದು ವಿವಿಧ ರೀತಿಯಲ್ಲಿ ಚಾಲ್ತಿಗೆ ಬರುತ್ತದೆ. ಗ್ರಾಂಶಿಯು ಬದಲಾಗುವ ಸಮಾಜ ಮತ್ತು ಅದರ ಜೊತೆಗೆ ಇರುವ ತಿಳುವಳಿಕೆಗಳು ಹಾಗೂ ಅದರ ಸಂಪನ್ಮೂಲಗಳು ವೈಜ್ಞಾನಿಕವಾಗಿಯೂ ಇರಬಹುದು. ಸಮಾನ್ಯವಾದ ತಿಳುವಳಿಕೆ ಎನ್ನುವುದು ಕೆಲಸವನ್ನು ಮಾಡುವುದು ನಿರ್ದಿಷ್ಟವಾದ ನೆಲೆಯಲ್ಲಿ ಎನ್ನುವುದು ಸ್ಪಷ್ಟ. ವ್ಯಕ್ತಿಯಲ್ಲಿ ಪ್ರಜ್ಞೆ ಇದೆ. ಅವನ ಪ್ರಜ್ಞೆಯನ್ನು ಅನೇಕ ಸನ್ನಿವೇಶದಲ್ಲಿ ಧರ್ಮವು ನಿಯಂತ್ರಣ ಮಾಡುತ್ತದೆ. ಅದು ನಮ್ಮಲ್ಲಿ ವೈರುಧ್ಯವನ್ನು ಹುಟ್ಟುಹಾಕುತ್ತದೆ. ಹೀಗೆ ಇದ್ದರೂ ಒಳ್ಳೆಯ ಗುಣ ಎನ್ನುವುದನ್ನು ನಾವು ವಿವಿಧ ರೀತಿಯಲ್ಲಿ ಬಳಸುತ್ತೇವೆ. ಸಾಮಾನ್ಯವಾದ ಅರಿವು ಮತ್ತು ಒಳ್ಳೆಯ ಗುಣಗಳು ಬೇರೆ ಎಂದು ಗ್ರಾಂಶಿಯು ಹೇಳುತ್ತಾನೆ. ಅದನ್ನು ಜನರು ಶಿಷ್ಟ ಎಂದೂ ಹೇಳುತ್ತಾರೆ. ಸಮಾಜದಲ್ಲಿ ಇರುವ ಎಲ್ಲಾ ಗುಣಗಳೂ ಅತ್ಯಂತ ಕೆಟ್ಟದ್ದು ಎಂದು ಹೇಳುವಂತೆ ಇಲ್ಲ... ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದಲ್ಲಿ ತನ್ನದೇ ಆದ ಕೆಲಸವನ್ನು ಮಾಡುತ್ತಾರೆ. ಅದರಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದು ಎಂದು ಹೇಳುವುದಾದರೆ ಮತ್ತೆ ಬೇರೆ ಅಂಶಗಳೂ ಇರುತ್ತವೆ ಎಂದೂ ಅರ್ಥವಾಗುತ್ತದೆ. ಬುದ್ಧಿಜೀವಿಗಳು ಭಾವನೆ ಮತ್ತು ಒಳ್ಳೆಯತನವನ್ನು ಸಂಯೋಜನೆ ಮಾಡುತ್ತಾರೆ. ಆದರೆ ಇಲ್ಲಿ ಒಳ್ಳೆಯತನ ಎನ್ನುವುದು ಜನಪ್ರಿಯತೆಯ ನೆಲೆಯನ್ನೂ ಪಡೆಯುತ್ತದೆ.

ಅನನ್ಯತೆ

ವ್ಯಕ್ತಿ ಮತ್ತು ಅವನ ಅನನ್ಯತೆಯನ್ನು ಅನೇಕ ವಿದ್ವಾಂಸರು ಚರ್ಚೆ ಮಾಡಿದ್ದಾರೆ. ಆದರೂ ಗ್ರಾಂಶಿಯಲ್ಲಿ ಇದು ಬೇರೆಯಾಗುತ್ತದೆ. ಅವನು ಅನನ್ಯತೆಯನ್ನು ವಿವರಿಸುವಾಗ ಅವನಲ್ಲಿ ಯಜಮಾನಿಕೆ ಮತ್ತು ವ್ಯಕ್ತಿ ವ್ಯಕ್ತಿಗಳ ನಡುವೆ ಉಂಟಾಗುವ ಭಿನ್ನತೆಗಳನ್ನು ಅವನು ಗಮನಿಸುತ್ತಾನೆ. ಅದರಲ್ಲಿಯೂ ಅವನಿಗೆ ವ್ಯಕ್ತಿ ಮತ್ತು

ಅವನ ಅನನ್ಯತೆಗೆ ವಿಶಿಷ್ಟವಾದ ನೆಲೆಯು ಸಿಗುವುದು ಯಜಮಾನಿಕೆ ಮತ್ತು ಸಾಮಾನ್ಯ ಮನುಷ್ಯರ ಸಂಬಂಧದಲ್ಲಿ. ಯಜಮಾನಿಕೆಯು ವ್ಯಕ್ತಿಯನ್ನು ನಿರ್ಧಾರ ಮಾಡುತ್ತದೆ. ಮೊದಲನೆಯದಾಗಿ ವ್ಯಕ್ತಿಯನ್ನು ಗುರುತಿಸುವುದು ಜನಾಂಗದ ಭಾಗವಾಗಿ. ಸ್ಟುವರ್ಟ್ ಹಾಲ್ ಗ್ರಾಂಶಿಯನ್ನು ಕುರಿತು ಹೇಳುವಾಗ ಅವನ ಸಿದ್ಧಾಂತವು ಅತ್ಯಂತ ಸಂಕೀರ್ಣವಾಗಿದೆ. ಹಾಗೂ ಅವನಲ್ಲಿ ಕೆಲವು ಸಮಸ್ಯೆಗಳೂ ಇವೆ ಎಂದು ಹೇಳುತ್ತಾನೆ. ಗ್ರಾಂಶಿಯಲ್ಲಿ ಯಜಮಾನಿಕೆ ಎನ್ನುವುದಕ್ಕೆ ಸಾಂಸ್ಥಿಕವಾದ ಒಂದು ರೂಪವೂ ಇದೆ. ಸಂಸ್ಕೃತಿಯ ಸಂಗತಿಗಳೂ ಇವೆ. ವ್ಯಕ್ತಿ ಮತ್ತು ಅವನ ಅನನ್ಯತೆಗೆ ಆಧುನಿಕ ನಾಗರಿಕ ವ್ಯಾಖ್ಯೆಗಳು ಕೂಡಾ ಇರುತ್ತವೆ. ಸಾಮಾಜಿಕ ಮತ್ತು ರಾಜಕೀಯ ನಿಲುವುಗಳು ಕೂಡಾ ಇದಕ್ಕೆ ಕಾರಣವಾಗುತ್ತದೆ. ಆದರೆ ಒಂದು ಸಮಸ್ಯೆಯು ಇರುತ್ತದೆ. ವ್ಯಕ್ತಿ ಮತ್ತು ಅವನ ಅನನ್ಯತೆಗೆ ಅರಿವು ಕೂಡಾ ಅತ್ಯಂತ ಮುಖ್ಯವಾಗಿದೆ. ಅದರ ಜೊತೆಗೆ ಒಂದು ಸಂಸ್ಕೃತಿಯೂ ವ್ಯಕ್ತಿಯ ಮೇಳೆ ಪ್ರಭಾವವನ್ನು ಬೀರುತ್ತದೆ.

ಅತ್ಯುತ್ತಮ

ಅತ್ಯುತ್ತಮ ಎಂದರೆ ಏನು ಎಂದು ಗ್ರಾಂಶಿಯು ವಿವರಿಸುತ್ತಾನೆ, ಮುಖ್ಯವಾಗಿ ಇದು ಒಂದು ಪರಿಕಲ್ಪನೆ. ಅಷ್ಟೇ ಅಲ್ಲ, ಇದು ಭಾವನೆ ಮತ್ತು ವ್ಯಕ್ತಿತ್ವವನ್ನು ಹೇಳುತ್ತದೆ. ಇದರಲ್ಲಿ ಸಬ್ ಆಲ್ಟ್ರಾನ್ ಅನನ್ಯತೆಯ ಪ್ರಶ್ನೆಯೂ ಸೇರುತ್ತದೆ. ಆಳುವ ವರ್ಗವು ತನಗೆ ಬೇಕಾದ್ದನ್ನು ಮಾತ್ರವೇ ಪ್ರತಿಪಾದಿಸುತ್ತದೆ, ಅದಕ್ಕೆ ವ್ಯಕ್ತಿ ಮತ್ತು ಅವನು ಗುಣಗಳು ಅದಕ್ಕೆ ಹೊಂದಾಣಿಕೆಯಾದರೆ ಆಗ ಅವನನ್ನು ಒಳ್ಳೆಯವನು ಎಂದು ಕರೆಯುತ್ತಾರೆ. ಇಲ್ಲಿ ಸಂಸ್ಥೆ ಮತ್ತು ಅದರ ಸ್ವರೂಪವು ಅತ್ಯಂತ ಮುಖ್ಯ. ಅಂಚಿನ ವರ್ಗದಲ್ಲಿ ಇರುವ ವರ್ಗ ಮತ್ತು ಮಧ್ಯಮ ವರ್ಗವು ಆಳುವ ವರ್ಗವನ್ನು ಹೇಗೆ ಇದನ್ನು ಅನುಸರಿಸುತ್ತವೆ ಎಂದು ಗ್ರಾಂಶಿಯು ಹೇಳುತ್ತಾನೆ. ಇದರಲ್ಲಿ ಅನೇಕ ಬಗೆಯ ಸಂಕಥನಗಳು ಇರುತ್ತವೆ. ಇದು ಅತ್ಯಂತ ಮುಖ್ಯ. ಯಾಕೆಂದರೆ ಆಳಿಸಿಕೊಳ್ಳುವ ವರ್ಗಕ್ಕೆ ಕೆಲವನ್ನು ಸೂಚಿಸಲಾಗುತ್ತದೆ. ಅದಕ್ಕೆ ಕೆಲವು ಮಾನದಂಡವೂ ಇರುತ್ತವೆ. ಅದರ ಮೂಲಕ ಇನ್ನೊಂದು ಪ್ರಕ್ರಿಯೆಯೂ ನಡೆಯುತ್ತದೆ. ಅದನ್ನು ಗ್ರಾಂಶಿಯು ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದ ಕ್ರಮಕ್ಕೆ ಆನ್ವಯಿತೆ ಎಂದು ಹೇಳುತ್ತಾನೆ. ಅದು ಒಂದು ಬಗೆಯಲ್ಲಿ ಆಳಿಸಿಕೊಳ್ಳುವ ವರ್ಗಗಳ ಒಪ್ಪಿಗೆಯ ಕ್ರಮ ಎಂದೂ ಹೇಳುತ್ತೇವೆ. ಈ ಒಪ್ಪಿಗೆಯಲ್ಲಿ ಸಾಂಸ್ಕೃತಿಕ ಜೀವನದ ಕ್ರಮ ಎಂದೂ ಹೇಳಬಹುದು. ಇದನ್ನು ಹೇಳುವಾಗಲೇ ಒಪ್ಪಿಗೆ, ನಿರಾಕರಣೆ ಮತ್ತು ಸಂಧಾನ ಎನ್ನುವ ಪರಿಕಲ್ಪನೆಗಳು ಇರುತ್ತವೆ ಎಂದು ಗ್ರಾಂಶಿಯು ಹೇಳುತ್ತಾನೆ.

ಯಾವುದನ್ನು ನಾವು ಅತ್ಯುತ್ತಮ ಎಂದು ಕರೆಯಬಹುದು ಎನ್ನುವುದಕ್ಕೆ ಪೌಲ್ ದು ಗೇ (೧೯೯೧) ವಿವರಣೆಯು ಇಲ್ಲಿ ಉಲ್ಲೇಖನೀಯ . ೧೯೭೦ರ ತರುವಾಯ ಪಶ್ಚಿಮದ ದೇಶಗಳಲ್ಲಿ ಈ ಪ್ರಶ್ನೆಯು ಬಂದಿದೆ. ಇದರಲ್ಲಿ ಮುಖ್ಯವಾದ್ದು ಆರ್ಥಿಕತೆ. ಗ್ರಾಂಶಿಯು ಇದನ್ನು ಮತ್ತೊಂದು ರೀತಿಯಲ್ಲಿ ಹೇಳುತ್ತಾನೆ. ಇದರಲ್ಲಿ ಸಂಸ್ಕೃತಿಯ ಪ್ರಶ್ನೆಗಳು ಇವೆ ಎನ್ನುವುದು ಒಂದಂಶವಾದರೆ ವ್ಯಕ್ತಿ ಮತ್ತು ರಾಷ್ಟ್ರೀಯತೆ ಪ್ರಶ್ನೆಯು ಮತ್ತೊಂದು. ವ್ಯಕ್ತಿ ಮತ್ತು ಅವನ ಗುಣಗಳು ನಮಗೆ ಇಲ್ಲಿ ಮುಖ್ಯ. ಅವನಲ್ಲಿ ಇರಬಹುದಾದ ಗುಣಾತ್ಮಕ ಮೌಲ್ಯಗಳು ಮನುಷ್ಯನ ಘನತೆಯ ಪ್ರಶ್ನೆಗಳೂ ಆದವು. ವ್ಯಕ್ತಿಯನ್ನು ಆರ್ಥಿಕ ಪ್ರಶ್ನೆಯಿಂದ ಬೇರೆ ಮಾಡಬಹುದೇ ಎನ್ನುವುದು ಆಗ ಇದ್ದ ಸಮಸ್ಯೆಗಳಲ್ಲಿ ಒಂದಾಗಿತ್ತು. ಎರಡನೆಯದಾಗಿ ಒಬ್ಬ ವ್ಯಕ್ತಿಯು ಒಂದು ಸ್ಥಳದಲ್ಲಿ ಹೇಗೆ ಕೆಲಸವನ್ನು ಮಾಡುತ್ತಾನೆ ಎನ್ನುವುದರ ಆಧಾರದ ಮೇಲೆ ಅವನು ಗುಣವು ನಿರ್ಧಾರವಾಗಿತ್ತು. ಸಾಂಸ್ಕೃತಿಕ ಒಳ್ಳೆಯತನ ಎನ್ನುವುದು ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾಗಿತ್ತು. ಆದರೆ ಗ್ರಾಂಶಿಯು ಇದನ್ನು ಹೇಳುವಾಗ ಒಬ್ಬ ವ್ಯಕ್ತಿಗೆ ಇರುವ ಗುಣಗಳು ಒಂದೇ ಅಲ್ಲ ಎಂದು ಹೇಳುತ್ತಾನೆ. ಅದು ಬಹುತ್ವ ಆಗಿರುತ್ತದೆ. ನಾವು ಮಾಡುವ ಕೆಲಸ ಮತ್ತು ನಮ್ಮ ಅನನ್ಯತೆಗೆ ಈ ದೃಷ್ಟಿಯಿಂದ ಒಂದು ಅನನ್ಯತೆಯು ಇದೆ. ಕೆಥೋಲಿಕ್ ಚರ್ಚ್‌ಗಳು ವ್ಯಕ್ತಿಯ ಗುಣ ಮತ್ತು ನಡತೆಗಳನ್ನು ತಿದ್ದಲು ಪ್ರಯತ್ನ ಮಾಡಿದ್ದು ಇಲ್ಲಿ ಉಲ್ಲೇಖನೀಯ. ವೈಯಕ್ತಿಕ ವಿಕಾಸ ಎನ್ನುವುದು ಚರ್ಚ್‌ಗಳಿಗೆ ಮುಖ್ಯ. ಇದರಲ್ಲಿ ವ್ಯಕ್ತಿಯನ್ನು ನಿಯಂತ್ರಣ ಮಾಡುವ ಕ್ರಮವೂ ಇದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಸಾಂಸ್ಕೃತಿಕ ಅತ್ಯುತ್ತಮ ನಡವಳಿಕೆ ಎಂದರೆ ಒಂದು ನೋವು. ಮತ್ತು ಅದರ ಮತ್ತೊಂದು ಬಗೆಯ ಋಣ ಎಂದು ದು ಗೇ ಹೇಳುತ್ತಾನೆ. ತನ್ನ ಆಸೆಗಳನ್ನು ಮತ್ತು ಬಯಕೆಗಳನ್ನು ತೃಪ್ತಿ ಪಡಿಸಿಕೊಳ್ಳುವ ಕ್ರಮವೂ ಹೌದು. ಅದರಲ್ಲಿ ಆದಾಯದ ಪ್ರಶ್ನೆಯು ಇದೆ. ಆದರೆ ಇದರಲ್ಲಿ ವೈಯಕ್ತಿಕತೆಯು ಅತ್ಯಂತ ಮುಖ್ಯ. ಆದರೆ ಅತ್ಯುತ್ತಮ ಗುಣ ಮತ್ತು ನಡತೆ ಎನ್ನುವುದು ಮತ್ತೊಂದು ಬಗೆಯಲ್ಲಿ ತನ್ನ ಬುದ್ಧಿವಂತಿಕೆ ಮತ್ತು ತನ್ನದೇ ಆದ ತಂತ್ರಗಾರಿಕೆಯನ್ನು ಹೊರಜಗತ್ತಿಗೆ ತೋರ್ಪಡಿಸುವುದು. ಹಾಗಿದ್ದರೆ ನಾವು ಅತ್ಯುತ್ತಮವಾದ್ದನ್ನು ಸಾಧಿಸುವುದು ಅಂದರೆ ಏನು? ಇದಕ್ಕೆ ಅತ್ಯಂತ ಸಂಕ್ಷಿಪ್ತವಾದ ಉತ್ತರವೆಂದರೆ ತನ್ನ ನಡವಳಿಕೆಯನ್ನು ಆಳುವ ವರ್ಗಕ್ಕೆ ಬೇಕಾದಂತೆ ಸರಿಪಡಿಸಿಕೊಳ್ಳುವುದು. ಕಾರ್ಪೋರೇಟ್ ಜಗತ್ತಿನಲ್ಲಿ ವ್ಯಕ್ತಿಯನ್ನು ಹೇಗೆ ನೋಡಲಾಗುತ್ತದೆ ಎಂದು ಅಲೈನ್ ಕೆನಡಿ ಹೀಗೆ ಹೇಳುತ್ತಾರೆ. 'ಒಂದು ಕಂಪೆನಿಯಲ್ಲಿ ಕೆಲಸವನ್ನು ಮಾಡುವವರು ಅದರ ಬೆಳವಣಿಗೆಗೆ ದುಡಿಯುತ್ತಾರೆ. ಅದರ ಮೂಲಕ ಅವರ ಅಸ್ತಿತ್ವವನ್ನು ರೂಪಿಸಿಕೊಳ್ಳುತ್ತಾರೆ.' ಆಳುವ ವರ್ಗಕ್ಕೆ ಬೇಕಾದಂತೆ ತನ್ನ ವ್ಯಕ್ತಿತ್ವವನ್ನು

ರೂಪಿಸಿಕೊಳ್ಳುವುದು ಎಂದು ಗ್ರಾಂಶಿಯು ಹೇಳುತ್ತಾನೆ. ಇದರಿಂದ ಮನುಷ್ಯರಿಗೆ ಒಂದು ವ್ಯಕ್ತಿತ್ವವನ್ನು ರಚನೆ ಮಾಡಲು ಹೇಳಲಾಗುತ್ತದೆ. ಅದರಲ್ಲಿ ಸಂಸ್ಥೆ ಮತ್ತು ಅದರ ನಿಯಮಗಳೂ ಸೇರುತ್ತವೆ. ಮನುಷ್ಯನನ್ನು ಸಂಸ್ಥೆಗೆ ಬೇಕಾದ ರೀತಿಯಲ್ಲಿ ಸಜ್ಜು ಮಾಡುವಾಗ ಅದರಲ್ಲಿ ತರಬೇತಿಯು ಸೇರುತ್ತದೆ. ಆರೋಗ್ಯಕರವಾದ ಜೀವನದ ಕ್ರಮ ಎಂದರೆ ಏನು ಎನ್ನುವುದನ್ನು ವಿವರಣೆ ಮಾಡುವಾಗ ಇಂಥ ಪ್ರಶ್ನೆಗಳು ಸಾಮಾನ್ಯವಾಗುತ್ತದೆ. ಇದನ್ನು ನಾವು ಕ್ರೀಢೆಗಳಲ್ಲಿಯೂ ಕಾಣುತ್ತೇವೆ ಎಂದು ಗ್ರಾಂಶಿಯು ಹೇಳುತ್ತಾನೆ. ಫುಟ್ ಬಾಲ್‌ಕ್ರೀಡೆಗೆ ಮತ್ತು ಆರ್ಥಿಕವಾದ ಜೀವನದ ಕ್ರಮಕ್ಕೆ ಸಂಬಂಧವು ಇದೆ ಎನ್ನುವುದು ಅವನ ಅಭಿಪ್ರಾಯ. ಯಾರಿಗೆ ಬಿಡುವಿನ ವೇಳೆಯು ಇರುತ್ತದೆಯೋ ಅವರು ಮಾತ್ರವೇ ಇದನ್ನು ಆಡಬಲ್ಲರು. ಈ ಕ್ರೀಡೆಯಲ್ಲಿ ಚಲನೆ, ಸ್ಪರ್ಧೆ, ಅಲಿಖಿತವಾದ ನಿಯಮ ಎಲ್ಲವೂ ಇರುತ್ತದೆ. ಇದರ ಮೂಲಕವೂ ದೇಹವನ್ನು ಬಗ್ಗಿಸಲಾಗುತ್ತದೆ. ದೇಹಕ್ಕೆ ಒಂದು ಚೌಕಟ್ಟಿನ ಒಳಗೆ ತರಲಾಗುತ್ತದೆ. ಒಳ್ಳೆಯತನ ಎನ್ನುವುದು ಹೇಗೆಲ್ಲಾ ಬಳಕೆಯಾಗಿದೆ ಎನ್ನುವುದಕ್ಕೆ ಇದು ಉದಾಹರಣೆಯಾಗಿದೆ ಎಂದು ಗ್ರಾಂಶಿಯು ತಿಳಿಯುತ್ತಾನೆ.

ಯುವ ಉಪಸಂಸ್ಕೃತಿ

ಯಜಮಾನಿಕೆ ಎನ್ನುವುದು ಹೆಚ್ಚು ಪ್ರಭಾವಶಾಲಿಯಾದಾಗ ಆಳುತನವೂ ಬೇರೆ ಥರ ಕಾಣಿಸಿಕೊಳ್ಳುತ್ತದೆ. ಯಾವುದು ಯಾವುದರ ಭಾಗವಾಗಿದೆ ಎಂದು ನೋಡಿಕೊಂಡು ನಾವು ಕೆಲವನ್ನು ತೀರ್ಮಾನ ಮಾಡಬೇಕಾಗುತ್ತದೆ. ಆದ್ದರಿಂದ ಮುಖ್ಯವಾದ ಸಂಸ್ಕೃತಿ ಮತ್ತು ಉಪ ಸಂಸ್ಕೃತಿ ಎನ್ನುವುದು ಮೌಲ್ಯ ಮತ್ತು ಅದರ ಅನುಸಂಧಾನದ ದೃಷ್ಟಿಯಿಂದ ಮಹತ್ವದ್ದು. ದುಗ್ಲಾಸ್ ಇದನ್ನು ಬೇರೆ ರೀತಿಯಲ್ಲಿ ಹೇಳುತ್ತಾನೆ. ಅವನು ಸಾಂಸ್ಕೃತಿಕವಾದ ನಿಯಮಗಳು ಮತ್ತು ಅದರ ಸ್ವರೂಪದಲ್ಲಿ ಆಳುವ ಸಂಸ್ಕೃತಿ ಮತ್ತು ಆಳಿಸಿಕೊಳ್ಳುವ ಸಂಸ್ಕೃತಿಯೆನ್ನುವುದು ಹೇಗೆ ಭಿನ್ನವಾಗುತ್ತದೆ ಎಂದು ನೋಡಬೇಕು ಎಂದು ಹೇಳುತ್ತಾನೆ. ಪ್ರಧಾನ ಮತ್ತು ಉಪ ಎನ್ನುವುದು ನಮಗೆ ಈ ಮಾದರಿಯನ್ನು ಹೇಳುತ್ತದೆ. ಅದು ಕೆಲವನ್ನು ಉಪ ಮತ್ತು ಇನ್ನು ಕೆಲಸವನ್ನು ಪ್ರಧಾನವೆಂದು ಹೇಳುತ್ತದೆ. ವರ್ಗೀಕರಣ ಮತ್ತು ಸಂಸ್ಕೃತಿಗೆ ಈ ದೃಷ್ಟಿಯಿಂದ ಅಧ್ಯಯನದ ಅನುಕೂಲವೂ ಹೌದು. ಅನೇಕ ಸನ್ನಿವೇಶದಲ್ಲಿ ಇದು ಶೈಕ್ಷಣಿಕ ವಲದ ಚರ್ಚೆ ಎಂದೂ ಅನಿಸುತ್ತದೆ. ಇಲ್ಲಿ ಯುವ ಎನ್ನುವುದು ನಮಗೆ ಅತ್ಯಂತ ಮುಖ್ಯ. ಈವತ್ತು ನಮ್ಮ ಯುವ ಎನ್ನುವುದು ಸಂಕೇತವೂ ಹೌದು. ಆದರೆ ಇದನ್ನು ಹೇಳುವಾಗ ಮತ್ತೆ ಮತ್ತೆ ನೆನಪು ಮಾಡುವ ವಿಷಯವೂ ಇದೆ. ಯುವಕರು ಕೆಲವನ್ನು ಅಂಗೀಕಾರ ಮಾಡುತ್ತಾರೆ. ಅದರಲ್ಲಿ ಅನ್ಯಭಾಷೆ ಮತ್ತು ಅದರ ಯಜಮಾನಿಕೆಯೂ ಇದೆ.

ಅದನ್ನು ಯುವಕರು ಅನುಸರಿಸಬೇಕಾಗುತ್ತದೆ. ಅಥವಾ ಅನುಸರಿಸುತ್ತಾರೆ. ಇದರಲ್ಲಿ ವರ್ಗ ಮತ್ತು ಅದರ ಸ್ವರೂಪವು ಇರಿತ್ತದೆ ಎಂದು ಗ್ರಾಂಶಿಯು ಭಾವಿಸುತ್ತಾನೆ. ಯುವ ಕೇಂದ್ರಿತವಾದ ಸಂಸ್ಕೃತಿಯನ್ನು ನಾವು ಇನ್ನೂ ಒಂದು ರೀತಿಯಲ್ಲಿ ಅರ್ಥ ಪೂರ್ಣ. ಒಂದು ದೊಡ್ಡ ಸಂಸ್ಕೃತಿಯ ಮಧ್ಯೆ ಈ ಉಪಸಂಸ್ಕೃತಿಯು ಇರುತ್ತದೆ. ಉಪ ಸಂಸ್ಕೃತಿಯು ಯಾವುದೇ ಆಗಿರಬಹುದು, ಅದರಲ್ಲಿ ಲಿಂಗ ತಾರತಮ್ಯ ಇರುತ್ತದೆ. ಇದರ ಮೊದಲ ಚರ್ಚೆಯು ಬಂದಿರುವುದು ಸಮಾಜಶಾಸ್ತ್ರದಲ್ಲಿ ಎನ್ನುವುದನ್ನು ನಾವು ಗಮನಿಸಬೇಕು. ಮಾರ್ಕ್ಸವಾದದಲ್ಲಿ ಇದರ ಬಗ್ಗೆ ಬೇರೆ ಅರ್ಥವಿದೆ. ವರ್ಗ ಮತ್ತು ಅದರ ಉಪ ಸಂಸ್ಕೃತಿಗಳು ಇದರಲ್ಲಿ ಅತ್ಯಂತ ಮುಖ್ಯ. ಯುವ ಸಂಸ್ಕೃತಿಯು ಸಾಂಕೇತಿಕವೂ ಆಗಿರುತ್ತದೆ ಎಂದು ಸ್ಟುವರ್ಟ್ ಹಾಲ್ ಹೇಳುತ್ತಾನೆ. ಆದರೆ ಸಮಾಜ ಮತ್ತು ಅದರ ಅಧ್ಯಯನಕ್ಕೆ ಇದು ಅತ್ಯಂತ ಉಪಯುಕ್ತವಾದ ಒಂದು ಪರಿಭಾಷೆಯೂ ಹೌದು. ಅದರ ಜೊತೆಗೆ ಈವತ್ತು ನಮ್ಮ ಎದುರು ಇರುವ ಬಂಡವಾಳವಾದವು ಒಡೆದು ಆಳು ಎನ್ನುವುದನ್ನು ಹೇಳುತ್ತದೆ. ಅದು ಬೇರೆ ಪ್ರಶ್ನೆನೆ. ಆದರೆ ಒಂದು ಪ್ರಧಾನವಾದ ಸಂಗತಿಯು ಇದೆ. ಯುವಕರು ಅವರದೇ ಒಂದು ಸಂಸ್ಕೃತಿಯನ್ನು ಹುಟ್ಟು ಹಾಕುತ್ತಾರೆ. ಸಮಾಜ ಮತ್ತು ಕುಟುಂಬದಲ್ಲಿ ಯುವ ಸಂಸ್ಕೃತಿಯು ತನ್ನದೇ ಆದ ಒಂದು ಚಹರೆಯನ್ನು ಕಟ್ಟುತ್ತದೆ. ಅದಕ್ಕೆ ಒಂದು ರಚನೆಯು ಇರುತ್ತದೆ ಎಂದು ಮಾರ್ಕ್ಸವಾದವು ಹೇಳುತ್ತದೆ. ಆದರೆ ಬಂಡವಾಳವಾದವು ಒಂದು ಸಮಾಜದ ಯಜಮಾನಿಕೆಯನ್ನು ವಹಿಸಿದರೆ ಅದರ ಸಾಂಸ್ಕೃತಿಕವಾದ ಮೌಲ್ಯವು ಬೇರೆಯಾಗುತ್ತದೆ. ಉಪ ಸಂಸ್ಕೃತಿ ಎನ್ನುವುದು ಹೇಗೆ ನಮಗೆ ತಾತ್ವಿಕವಾದ ಒಂದು ಪ್ರಶ್ನೆಯೂ ಹೌದು ಎನ್ನುವುದನ್ನು ಗ್ರಾಂಶಿಯು ಹೇಳುತ್ತಾನೆ. ಯುವ ಉಪಸಂಸ್ಕೃತಿಯು ಒಂದು ಸ್ಥಿರವಾದ ನೆಲೆಯನ್ನು ಹೊಂದಿರುವುದಿಲ್ಲ ಎಂದು ಕೊಹೆನ್ ಹೇಳುತ್ತಾನೆ. ಮಧ್ಯಮ ವರ್ಗದ ಅನೇಕ ಯುವಕರು ತಮ್ಮ ಪಾಲಕರ ಯಾವುದೇ ಮೌಲ್ಯಗಳನ್ನು ಒಪ್ಪುವುದಿಲ್ಲ. ಅವರು ಕಾಲ ಮತ್ತು ಪ್ರದೇಶವನ್ನು ಅಷ್ಟಾಗಿ ಗಮನಿಸುವುದಿಲ್ಲ. ಇದು ಮೂಲಭೂತವಾಗಿ ತೊಂದರೆಯೂ ಆಗುತ್ತದೆ. ಕೊಹೆನ್ ಇದರಲ್ಲಿ ಅನೇಕ ವೈರುದ್ಧ್ಯಗಳು ಇರುತ್ತವೆ ಎನ್ನುವುದನ್ನು ಒಪ್ಪುತ್ತಾನೆ. ವಾಸ್ತವವಾಗಿ ಪಾಲಕರು ಮತ್ತು ಅವರ ಸಂಸ್ಕೃತಿಯು ಒಂದು ಥರ ಇದ್ದರೆ ಅದರ ಜೊತೆಗೆ ಬರುವ ತಾತ್ವಿಕತೆಗೆ ಇನ್ನೊಂದು ಆಯಾಮವೂ ಇರುತ್ತದೆ.

ಕೊಹೆನ್ ಹೇಳಿದ ವಿಚಾರವನ್ನು ನಾವಿಲ್ಲಿ ಮತ್ತೊಮ್ಮೆ ಚರ್ಚೆ ಮಾಡಬೇಕಾಗಿದೆ: ಅವನು ಯುವ ಉಪ ಸಂಸ್ಕೃತಿಯನ್ನು ವಾಸ್ತವ ಮತ್ತು ಇತರ ಸಂಗತಿಗಳ ಆಧಾರದ ಮೇಲೆ ನಿರ್ಧಾರ ಮಾಡಬೇಕಾಗುತ್ತದೆ. ಸಂತೋಷ,

ಅನನ್ಯತೆ ಎರಡು ಯುವ ಸಂಸ್ಕೃತಿಗೆ ಹೆಚ್ಚು ಮುಖ್ಯವಾಗುತ್ತದೆ. ಇದನ್ನು ಇಷ್ಟ ಪಡುವುದು ಅಂದರೆ ಮುಖ್ಯ ಸಂಸ್ಕೃತಿಗಿಂತ ಭಿನ್ನವಾಗಿ ಆಲೋಚನೆ ಮಾಡುವುದೂ ಹೌದು. ಯಾರು ಯುವಕರಾಗಿರುತ್ತಾರೆಯೋ ಅವರು ವೌಲ್ಯಗಳನ್ನು ಮೀರುವುದರಲ್ಲಿ ಸಂತೋಷವನ್ನು ಪಡೆಯುವುದೂ ನಿಜ. ಅವರು ಅಭಿವ್ಯಕ್ತಿಯನ್ನು ಬೇರೆ ಥರ ಸಾಧಿಸುತ್ತಾರೆ. ಅವರ ಧೋರಣೆಯು ಕೂಡಾ ಪ್ರತಿಯಾದ ಒಂದು ಯಜಮಾನಿಕೆಯನ್ನು ಹೇಳುತ್ತದೆ. ಅವರಲ್ಲಿ ಪ್ರತಿರೋಧವು ಇರುತ್ತದೆ. ಯಜಮಾನಿಕೆಯನ್ನು ವಹಿಸುವ ವರ್ಗವು ಒಂದು ಥರ ಯೋಚನೆ ಮಾಡುವುದಿದ್ದರೆ ಆಳಿಸಿಕೊಳ್ಳುವ ವರ್ಗವು ಮತ್ತೊಂದು ಥರ ಯೋಚನೆಯನ್ನು ಮಾಡುತ್ತದೆ. ಅದರಲ್ಲಿಯೂ ಯುವ ಸಂಸ್ಕೃತಿಯು ಸಂಗೀತ, ಪ್ಯಾಶನ್, ಮಾತುಕತೆ ಮುಂತಾದವುಗಳಲ್ಲಿ ಬೇರೆ ಥರ ದೃಷ್ಟಿಕೋನವನ್ನು ಹೊಂದಿರುವುದು ಮೇಲಿನ ವಾದಕ್ಕೆ ಒಂದು ಸಾಕ್ಷಿ. ಯುವ ಉಪ ಸಂಸ್ಕೃತಿಯು ಸ್ವಾತಂತ್ರ್ಯ ಮತ್ತು ಸಮಾನತೆಯ ಕುರಿತು ಬೇರೆ ಥರದ ಯೋಚನೆಯನ್ನು ಹೊಂದಿರುವುದೂ ಸತ್ಯ. ಅದರ ಮೂಲಕ ಪ್ರಧಾನ ಸಂಸ್ಕೃತಿಗೆ ಪ್ರತಿಕ್ರಿಯೆಯನ್ನು ನೀಡುತ್ತದೆ. ಇದರಲ್ಲಿ ತಲೆಗೂದಲನ್ನು ಯಾವ ಥರ ಇಟ್ಟುಕೊಳ್ಳಬೇಕು ಎನ್ನುವುದು ಅವರಿಗೆ ಅಗತ್ಯ. ಹಿರಿಯರು ಒಂದು ಮಾದರಿಯಲ್ಲಿ ತಲೆಗೂದಲವನ್ನು ಬೆಳೆಸಿದರೆ ಕಿರಿಯರು ಇನ್ನೊಂದು ಥರ ರೂಪಿಸಿಕೊಳ್ಳುತ್ತಾರೆ. ಕಲಿಯುವುದು ಮತ್ತು ಓದುವುದು ಕೂಡಾ ಭಿನ್ನವಾಗುತ್ತದೆ. ಅವರು ಅಂದರೆ ಯುವಕರು ಯಾವುದನ್ನು ಓದಬೇಕು ಮತ್ತು ಮುಂದೆ ಯಾವ ಮಾದರಿಯ ಉದ್ಯೋಗವನ್ನು ಪಡೆಯವುದು ಅಗತ್ಯವಿದೆ ಎಂದು ಅವರೇ ನಿರ್ಧಾರಮಾಡಿಕೊಳ್ಳುತ್ತಾರೆ., ಮನುಷ್ಯನ ಸಾಮಾನ್ಯವಾದ ಸಂವೇದನೆಯನ್ನು ಕೂಡಾ ಈ ಸಂಗತಿಗಳು ಹೇಗೆ ನಿರ್ಧಾರ ಮಾಡುತ್ತವೆ ಎನ್ನುವುದಕ್ಕೆ ಇದೇ ನಿದರ್ಶನ.

ಯಜಮಾನಿಕೆ, ಪ್ರಾತಿನಿಧಿಕತೆ ಮತ್ತು ಸಂಸ್ಥೆಗಳು

ಗ್ರಾಂಶಿಗೆ ಅತ್ಯಂತ ಮುಖ್ಯವಾಗುವುದು ಲೋಕ ದೃಷ್ಟಿ. ಇದನ್ನು ಇಟ್ಟುಕೊಂಡು ಅವನು ಬೇರೆ ಬೇರೆ ವಿಚಾರಗಳನ್ನು ಮಂಡಿಸುತ್ತಾನೆ. ಆದರೂ ಅವನಿಗೆ ಒಂದು ನಿರ್ದಿಷ್ಟವಾದ ನಿಲುವು ಇದೆ. ಅದರ ಜೊತೆಗೆ ಅವನಿಗೆ ಒಂದು ನಿರ್ದಿಷ್ಟವಾದ ಒಳನೋಟವೂ ಇದೆ. ಈ ಸಂಗತಿಗಳನ್ನು ಹೇಳುವಾಗ ಗ್ರಾಂಶಿಯು ಸಾಹಿತ್ಯ, ಸಂಸ್ಕೃತಿ, ಸಿನಿಮಾ ನೃತ್ಯ ಇತ್ಯಾದಿ ಎಲ್ಲಾ ಅಂಶಗಳನ್ನು ಅವನು ಹೇಳುತ್ತಾನೆ. ಯಾವುದನ್ನು ನಾವು ಅಂಗೀಕರಿಸಬೇಕು ಮತ್ತು ಯಾವುದರ ಜೊತೆಗೆ ನಾವು ಒಂದು ಬಗೆಯ ಒಪ್ಪಂದ ಮಾಡಬೇಕು ಎನ್ನುವುದು ಅವನಿಗೆ ಅರಿವು ಇದೆ. ಅದರ ಜೊತೆಗೆ ಅನೇಕ ವಿಚಾರಗಳಿಗೆ ಕಥನದ ಕ್ರಮವೂ ಇದೆ. ಯಾವುದರ

ಜೊತೆಗೆ ನಾವು ಸಂಧಾನ ಮಾಡಬೇಕು ಮತ್ತು ಯಾವುದರ ಜೊತೆಗೆ ನಾವು ಸಂಘರ್ಷವನ್ನು ಮಾಡಬೇಕು ಎನ್ನುವುದು ಅವನಿಗೆ ಹೆಚ್ಚು ಮುಖ್ಯ. ಹಾಗೆ ನೋಡಿದರೆ ಅವನಲ್ಲಿ ಸಂಧಾನ ಎನ್ನುವುದು ಕೂಡಾ ಒಂದು ಬಗೆಯ ತಂತ್ರವಾಗಿದೆ. ಯಾವುದನ್ನು ನಾವು ಉಪ ಸಂಸ್ಕೃತಿ ಮತ್ತು ಯುವ ಸಂಸ್ಕೃತಿ ಎಂದು ಹೇಳುತ್ತೇವೆಯೋ ಅದು ಕೆಲವು ವಿಷಯಗಳನ್ನು ಎದುರಿಸಲೇ ಬೇಕಾಗುತ್ತದೆ. ಆದ್ದರಿಂದ ಇದನ್ನು ನಾವು ತಾತ್ವಿಕವಾಗಿಯೂ ಗಮನಿಸಬೇಕಾಗುತ್ತದೆ. ಲೋಕ ದೃಷ್ಟಿಯನ್ನು ಕುರಿತು ಹೇಳುವಾಗ ಇದು ಬೇರೆಯಾಗುತ್ತದೆ. ಅದು ಸಾಂಕೇತಿಕವಾದ ಒಂದು ಚಟುವಟಿಕೆಯ ಆಗಬಹುದು, ಯಜಮಾನಿಕೆ, ಪ್ರತಿರೋಧ ಹಾಗೂ ಪ್ರಾತಿನಿಧಿಕತೆಗೆ ಈ ದೃಷ್ಟಿಯಿಂದ ವಿಶಿಷ್ಟವಾದ ಆಯಾಮವೂ ಇದೆ. ಗ್ರಾಂಶಿಗೆ ಯಜಮಾನಿಕೆ, ಪ್ರತಿರೋಧ ಹಾಗೂ ಅದರ ಪ್ರಾತಿನಿಧಿಕತೆ ಈ ದೃಷ್ಟಿಯಿಂದ ಮುಖ್ಯವಾದ್ದು ಅನಿಸುತ್ತದೆ. ಇಲ್ಲಿ ಮತ್ತೆ ಹಿಂದೆ ಹೇಳಿದ ಮಾತನ್ನು ನೆನಪು ಮಾಡಿಕೊಳ್ಳುವುದು ಅಗತ್ಯ. ಜಾನಪದ ಮತ್ತು ಅದರ ಇತರ ಪ್ರಕಾರಗಳು ಸಾಂಸ್ಕೃತಿಕವಾಗಿ ಮಹತ್ವದ್ದು. ಇವುಗಳು ನಮಗೆ ಇನ್ನೊಂದು ಕಾರಣಕ್ಕೆ ಮುಖ್ಯ. ಯಜಮಾನಿಕೆಗೆ ಪ್ರತಿರೋಧವನ್ನು ಒಡ್ಡುವ ಜಾನಪದವು ತನ್ನದೇ ಆದ ಒಂದು ಅಭಿವ್ಯಕ್ತಿಯನ್ನು ಸ್ಥಾಪಿಸಿಕೊಳ್ಳುತ್ತದೆ. ಇದು ಪ್ರಾತಿನಿಧಿಕವೂ ಹೌದು. ಆದ್ದರಿಂದ ಯಜಮಾನಿಕೆ ಮತ್ತು ಅದರ ವಿರುದ್ಧದ ಪ್ರತಿರೋಧಕ್ಕೆ ವಿಶಿಷ್ಟವಾದ ಆಯಾಮವೂ ಇರುತ್ತದೆ, ಒಂದು ಪರಿಭಾಷೆಯನ್ನು ನಾವು ಇಲ್ಲಿ ತರುವುದು ಅತ್ಯಂತ ಅಗತ್ಯ. ಪ್ರತಿಸಂಸ್ಕೃತಿ ಮತ್ತು ಪ್ರತಿ ಯಜಮಾನಿಕೆ ಎನ್ನುವುದು ಹೇಗೆ ಸೃಷ್ಟಿಯಾಗುತ್ತದೆ ಎಂದು ರೋಸ್ ಹೇಳುತ್ತಾರೆ. ಯಾವುದು ನಿಜವಾಗಿದೆಯೋ ಅದನ್ನು ಪ್ರತಿರೋಧದ ಸಂಗತಿಯು ನಿರಾಕರಿಸುತ್ತದೆ. ನಿಯಂತ್ರಣವು ನಮಗೆ ಮತ್ತೊಂದು ಅಂಶವನ್ನು ಹೊಂದಿರುತ್ತದೆ. ಇದನ್ನು ನಾವು ಬಂಧನ ಎಂದು ಹೇಳಿದರೆ ಬಂಧನವು ಕೆಲವೊಮ್ಮೆ ಸೀಮಿತವಾಗಿರುತ್ತದೆ. ಮನೆ , ಮದುವೆ ಮತ್ತು ಕುಟುಂಬ ಎನ್ನುವುದು ಒಂದು ವಲಯವನ್ನು ಹೇಳುತ್ತದೆ. ಎಷ್ಟೋ ಸರ್ತಿ ಇದು ಬಂಧನ, ಮತ್ತೆ ಕೆಲವು ಸನ್ನಿವೇಶದಲ್ಲಿ ಬಂಧನವಲ್ಲ. ಆದರೆ ಮತ್ತೆ ಅನೇಕವು ನಮಗೆ ಬಂಧನವು ಆಗಿರುತ್ತದೆ. ಅದರಲ್ಲಿ ಹಿಂಸೆ ಮತ್ತು ನೋವು ಎರಡೂ ಇರಬಹುದು. ನಾವು ಯಾವ ಸನ್ನಿವೇಶದಲ್ಲಿ ಹೇಗೆ ಇರುತ್ತೇವೆ ಎನ್ನುವುದರ ಆಧಾರದ ಮೇಲೆ ಇದು ನಿರ್ಧಾರವಾಗುತ್ತದೆ.

ಸಂಧಾನ ಮತ್ತು ಸ್ವಯಂಬಲ

ಆಧುನಿಕ ಅರ್ಥದಲ್ಲಿ ಹೇಳುವುದಿದ್ದರೆ ಸ್ವಯಂಬಲ ಎನ್ನುವುದು ನಮಗೆ ಸಾಧಿತವಾಗುವ ಒಂದು ಪ್ರಕ್ರಿಯೆ. ಅದು ಸಾಧ್ಯತೆಯೂ ಹೌದು. ಅದೇ ರೀತಿಯಲ್ಲಿ

ಪ್ರತಿ ಯಜಮಾನಿಕೆ ಎನ್ನುವುದು ಕೂಡಾ ನಮ್ಮ ಶಕ್ತಿಯನ್ನು ಮತ್ತು ಸಾಮರ್ಥ್ಯವನ್ನು ಸೂಚಿಸುತ್ತದೆ ಮತ್ತೊಂದು ಕಡೆಯಿಂದ ಇದು ನಮಗೆ ಸಮಾಜದ ಜೊತೆಗೆ ನಾವು ಇಟ್ಟುಕೊಳ್ಳುವ ಸಂಬಂಧವೂ ಹೌದು. ರೇಮಾಂಡ್ ವಿಲಿಯಂಸ್ ಹೆಚ್ಚು ಕಡಿಮೆ ಇದೇ ರೀತಿಯಲ್ಲಿ ಮಾತಾಡುತ್ತಾನೆ. ಅವನು ಎರಡು ವಿಷಯಗಳನ್ನು ಪ್ರಸ್ತಾವಿಸುತ್ತಾನೆ. ಅದನ್ನು ನಾವು ಪರಿಭಾಷೆ ಎಂದೂ ಹೇಳಬಹುದು, ಅವನಲ್ಲಿ ಇದು ಅತ್ಯಂತ ಮುಖ್ಯವಾದ್ದು ಕೂಡಾ . ಡಾಮಿನೆಂಟ್ ಮತ್ತು ಎಮರ್ಜೆಂಟ್. ಸಮಾಜದಲ್ಲಿ ಒಂದು ಸಮಾನತೆಯು ಇಲ್ಲದೆ ಹೋದರೆ ಆಗ ಒಂದು ವರ್ಗವು ಸಮಾಜವನ್ನು ತನ್ನ ಅಧೀನತೆಯಲ್ಲಿ ಇರುವಂತೆ ನೋಡುತ್ತದೆ ಎಷ್ಟೋ ಸರ್ತಿ ಯಜಮಾನ ಸಂಸ್ಕೃತಿಯಲ್ಲಿ ಮತ್ತೊಂದು ಸಂಸ್ಕೃತಿಯು ಸೇರುವುದು ಮಾತ್ರವೇ ಅಲ್ಲ, ಅದರ ಜೊತೆಗೆ ಅದು ತನ್ನ ಅನನ್ಯತೆಯನ್ನು ಬಿಡುತ್ತದೆ. ದೊಡ್ಡ ನದಿಯಲ್ಲಿ ಉಪ ನದಿಗಳು ಸೇರುವ ಹಾಗೆ. ಆಳುವ ವರ್ಗವು ಅತ್ಯಂತ ಸಣ್ಣ ವರ್ಗವನ್ನು ನುಂಗುತ್ತದೆ. ಹಾಗೆ ನುಂಗುವುದು ಆಶ್ಚರ್ಯವೂ ಅಲ್ಲ. ಇದರಿಂದ ಒಂದು ಅಸಮತೆಯು ಬರುತ್ತದೆ. ಒಂದು ಸಂಘರ್ಷವು ಉಂಟಾಗುತ್ತದೆ., ಆದ್ದರಿಂದ ಅನನ್ಯತಗೆ ಬೇರೆ ಬೇರೆ ಆಯಾಮವೂ ಇರುತ್ತದೆ. ಆಲೋಚನೆ ಎನ್ನುವುದನ್ನು ರೂಪಿಸುವುದು ಕೂಡಾ ಇದೇ ಆಳುವ ವರ್ಗ., ಆದರೂ ಸಮಾಜದಲ್ಲಿ ರಾಜಕೀಯ ವರ್ಗ ಮತ್ತು ಸಮಾಜದ ವರ್ಗಗಳು ಒಂದಕ್ಕೆ ಒಂದು ಮುಖಾಮುಖಿಯಾಗುತ್ತವೆ. ಗ್ರಾಂಶಿಯು ನಮ್ಮನ್ನು ಹೇಗೆ ಸಾಂಸ್ಥಿಕವಾದ ರೂಪಗಳು ನಿಯಂತ್ರಣ ಮಾಡುತ್ತವೆ ಎಂದು ವಿವರವಾಗಿ ಹೇಳಿದ್ದಾನೆ. ಕೆಲವು ಸಂಸ್ಥೆಗಳಿಗೆ ಕಾನೂನು ಕೂಡಾ ಸಹಾಯವನ್ನು ಮಾಡುತ್ತವೆ. ಇಲ್ಲಿ ಮೂರು ಅಂಶಗಳು ಅತ್ಯಂತ ಮುಖ್ಯ. ಅನೇಕ ಸಂಸ್ಥೆಗಳು ಸಾಮಾಜಿಕರು ಮಾತಾಡುವ ಹಾಗೆ ಮಾತಾಡುತ್ತವೆ. ಅದರ ಅಂತರಾಳದಲ್ಲಿ ಒಂದು ಭಿನ್ನತೆಯೂ ಇರುತ್ತದೆ.

ಬುದ್ಧಿಜೀವಿಗಳು

ವ್ಯಕ್ತಿಯ ವಿಶ್ವಾತ್ಮಕ ಸತ್ಯವನ್ನು ಕೂಡಾ ವರ್ಗೀಕರಣಕ್ಕೆ ಅನುಸಾರವಾಗಿ ರೂಪಿಸುವ ಅಗತ್ಯವಿದೆ ಎನ್ನುವುದು ಮುಖ್ಯ. ಬಂಡವಾಳವಾದದ ಮುಖ್ಯ ಸಂಗತಿಯೆಂದರೆ ಅದು ಬುದ್ಧಿ ಜೀವಿಗಳನ್ನು ಮತ್ತು ದೈಹಿಕ ಶಕ್ತಿಯನ್ನು ಬಳಸುವವರನ್ನು ಬೇರೆ ಬೇರೆಯಾಗಿ ನೋಡುತ್ತದೆ ಇಲ್ಲಿಯೇ ನಾವು ಮತ್ತೊಂದು ಮಾತನ್ನು ಗಮನಿಸಬೇಕು. ಅದು ವ್ಯಕ್ತಿ ಮತ್ತು ಅವನ ವ್ಯಕ್ತಿತ್ವದ ಕುರಿತು ಮಾರ್ಕ್ಸವಾದವು ತಳೆಯುವ ನಿಲುವು. ವ್ಯಕ್ತಿ ಮತ್ತು ಅವನ ಸ್ಥಾನವನ್ನು ಮಾರ್ಕ್ಸವಾದವು ಹೇಳುವ ವಿಧಾನವು ಬೇರೆ. ಉದಾರವಾದಿ ಮಾನವತಾವಾದವು ವ್ಯಕ್ತಿಯನ್ನು ಭಿನ್ನವಾಗಿ ಗ್ರಹಿಸುತ್ತದೆ. ಅದರಲ್ಲಿ ವ್ಯಕ್ತಿತ್ವದ ಚಿಂತನೆಯು ತಾತ್ವಿಕವಲ್ಲ.

ಅದು ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಲು ಹೋಗುವುದಿಲ್ಲ. ಆದರೆ ಮಾರ್ಕ್ಸ್‌ವಾದವು ವ್ಯಕ್ತಿಯನ್ನು ನೋಡುವಾಗಲೇ ಅವನ ವ್ಯಕ್ತಿತ್ವವನ್ನು ಯಾವುದು ನಿಯಂತ್ರಿಸಿದೆ ಎನ್ನುವುದನ್ನೂ ಗಮನಿಸುತ್ತದೆ. ಉದಾರವಾದಿಗಳಿಗೆ ಸ್ವಾತಂತ್ರ್ಯವೆನ್ನುವುದು ಒಂದು ಆದರ್ಶ. ಆದರೆ ಸ್ವಾತಂತ್ರ್ಯವು ಕೇವಲ ಒಂದು ಕಲ್ಪನೆ ಮಾತ್ರ. ವ್ಯಕ್ತಿ ಮತ್ತು ಅವನ ಹಿನ್ನೆಲೆಯು ಬಹಳ ಮುಖ್ಯವಾಗಿದೆ. ವ್ಯಕ್ತಿಯನ್ನು ಒಂದು ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯು ನಿಯಂತ್ರಿಸುತ್ತದೆ ಎನ್ನುವುದು ಮಾರ್ಕ್ಸ್‌ವಾದದ ನಿಲುವು. ಅದು ತತ್ವಜ್ಞಾನವೂ ಹೌದು. ಹೀಗಾಗಿಯೇ ಮಾರ್ಕ್ಸ್‌ವಾದವು ಸಮಾಜವಾದಿ ದೃಷ್ಟಿಕೋನದ ಮಾನವೀಯತೆಯನ್ನು ಎತ್ತಿ ಹಿಡಿಯುತ್ತದೆ. ಮನುಷ್ಯತ್ವ ಅನ್ನುವುದು ಕೇವಲ ಮಾನವೀಯತೆಯನ್ನು ಒಳಗೊಂಡ ಸಮಸ್ಯೆ ಅಲ್ಲ. ಅದು ವೈಜ್ಞಾನಿಕವಾದ ಕಲ್ಪನೆಯೂ ಹೌದು.ವಿವರಣೆಯು ಮಾತ್ರವೇ ಸಾಕಾಗುವುದಿಲ್ಲ. ಅದರ ರಾಜಕೀಯ ಪ್ರಶ್ನೆಗಳು ಸಮಾಜದ ಹೊರಗಿನ ಪ್ರಶ್ನಗಳು ಅಲ್ಲವೆನ್ನುವುದನ್ನು ಗಮನಿಸಬೇಕು. ರಾಜಕೀಯವಾಗಿ ಯಾವುದನ್ನು ಎಡವೆಂದು ಹೇಳುತ್ತೇವೆಯೋ ಅದು ಕೇವಲ ಎಡ ಮಾತ್ರವೇ ಅಲ್ಲ. ಅದು ರಾಜಕೀಯ ಪ್ರಶ್ನೆಯೆಂದೂ ಭಾವಿಸಬೇಕಾಗಿಲ್ಲ. ಅದು ಸಾಮಾಜಿಕ ಜೀವನದ ಪ್ರಶ್ನೆಯೂ ಹೌದು. ವಾಸ್ತವವಾಗಿ ಈವತ್ತು ನಾವು ಬುದ್ಧಿಜೀವಿಗಳನ್ನು ನೋಡುವಾಗ ಅವರು ಅನೇಕವನ್ನು ಒಂದು ರೂಪಕ್ಕೆ ತರುತ್ತಾರೆ ಎನ್ನುವುದು ಒಂದು ಅಂಶವಾಗಿದೆ. ಅವರು ಕೆಲವನ್ನು ಅಭಿವ್ಯಕ್ತಿ ಮಾಡುತ್ತಾರೆ. ಅದರಲ್ಲಿ ಸಮಾಜ, ತಾತ್ವಿಕತೆ ಮತ್ತು ವಿಜ್ಞಾನದ ಸಂಗತಿಗಳೂ ಇರುತ್ತವೆ. ಅವರೂ ಅನೇಕವನ್ನು ನಿರ್ಧಾರ ಮಾಡುತ್ತಾರೆ. ಎಷ್ಟೋ ಸರ್ತಿ ಅವರು ಯುಜಮಾನಿಕೆಯ ಮಧ್ಯವರ್ತಿಗಳಂತೆ ಕೆಲಸವನ್ನು ಮಾಡುತ್ತಾರೆ ಎನ್ನುವುದು ಸತ್ಯ. ಆದರೆ ಗ್ರಾಂಶಿಯ ಅತ್ಯಂತ ಮಹತ್ವದ ವಾಕ್ಯವೆಂದರೆ ಎಲ್ಲಾ ಮನುಷ್ಯರು ಮೂಲತಃ ಬುದ್ಧಿಜೀವಿಗಳೇ ಆಗಿರುತ್ತಾರೆ. ಆದರೆ ಈವತ್ತು ನಾವು ಯಾರನ್ನು ಬುದ್ಧಿಜೀವಿಗಳು ಎಂದು ಕರೆಯುತ್ತೇವೆಯೋ ಅವರು ಕೂಡಾ ಅನೇಕ ಮಿತಿಗಳನ್ನು ಹೊಂದಿರುತ್ತಾರೆ. ಹಾಗೆಂದು ಅವರಿಗೆ ಯಾವುದೇ ಚಟುವಟಿಕೆ ಇಲ್ಲ ಎಂದು ಅರ್ಥವಲ್ಲ. ಅವರದೂ ಒಂದು ಬಗೆಯ ಜೀವನದ ಕ್ರಮವೂ ಹೌದು. ಮತ್ತೊಂದು ದೃಷ್ಟಿಯಿಂದ ಹೇಳುವುದಾದರೆ ಸಮಾಜದ ಜೊತೆಗೆ ಅವರ ಸಂಬಂಧ ಎನ್ನುವುದು ಅತ್ಯಂತ ಸಂಕೀರ್ಣವಾಗಿರುತ್ತದೆ. ಈ ಬಗೆಯ ಸಂಬಂಧವು ಚರಿತ್ರೆಯಲ್ಲಿ ಬದಲಾಗಬಹುದು. ಅದರ ಜೊತೆಗೆ ಈವತ್ತು ನಾವು ಕರೆಯುತ್ತಿರುವ ವಿದ್ವಾಂಸರು ಅವರದೇ ಆದ ಸ್ಥಾನಮಾನವನ್ನು ಹೊಂದಿರುತ್ತಾರೆ. ನಾವು ಇಪ್ಪತ್ತನೆಯ ಶತಮಾನದ ಬುದ್ಧಿಜೀವಿಗಳನ್ನು ಹನ್ನೆರಡನೆಯ ಶತಮಾನದ ಬುದ್ಧಿಜೀವಿಗಳ ಜೊತೆಗೆ ಹೋಲಿಸುವುದು ಅತ್ಯಂತ ಕಷ್ಟ. ಈಗ ಇರುವ ಕೆಲವು ಬುದ್ಧಿಜೀವಿಗಳನ್ನು

ನಾವು ಮತ್ತೊಮ್ಮೆ ನಮ್ಮ ಗಮನಕ್ಕೆ ತಂದು ಕೊಳ್ಳಬೇಕು. ಈಗ ಮಧ್ಯಮಾದಲ್ಲಿ ಕೆಲಸವನ್ನು ಮಾಡುವವರು ಇದ್ದಾರೆ. ಹೋಟೇಲಿನಲ್ಲಿ ಮೆನೇಜರ್ ಆಗಿ ಕೆಲಸವನ್ನು ಮಾಡುವವರೂ ಇದ್ದಾರೆ. ಇವರೆಲ್ಲರಗೆ ಅವರದಾದ ಒಂದು ಚಿಂತನೆಯ ಕ್ರಮವು ಇರುತ್ತದೆ. ಅವರಿಗೆ ಇರುವ ಜ್ಞಾನವು ಒಂದು ಬಗೆಯದು. ಅಡುಗೆ ಮತ್ತು ಅದರ ರುಚಿಯನ್ನು ನೋಡಿ ತೀರ್ಮಾನ ಮಾಡುವವನಿಗೆ ಬೇಕಾಗಿರುವುದು ಪ್ರಯೋಗದ ಪ್ರಶ್ನೆ ಮಾತ್ರ. ಇವರಿಗೆ ಸಾರ್ವಜನಿಕರ ಜೊತೆಗೆ ಒಂದು ಸಂಬಂಧವಂತೂ ಇದ್ದೇ ಇದೆ. ಹೀಗೆ ಇದ್ದರೂ ವೈಯಕ್ತಿಕ ಅಭಿರುಚಿಯು ಮಾತ್ರವೇ ಕೆಲಸವನ್ನು ಮಾಡುತ್ತವೆ.

ಈಗ ಇದರ ಮತ್ತೊಂದು ರೂಪವನ್ನು ನಾವು ಗಮನಿಸಬೇಕು. ಆಧುನಿಕ ಉತ್ಪಾದನೆಗಳು ಬದಲಾಗುತ್ತಿವೆ. ಬಂಡವಾಳವಾದವು ತನ್ನ ಸಂಪನ್ಮೂಲವನ್ನು ಬೇರೆ ಬೇರೆ ಚಟುವಟಿಕೆಗಳಲ್ಲಿ ಪ್ರಯೋಗವನ್ನು ಮಾಡುತ್ತವೆ. ಉದ್ಯಮ ಎನ್ನುವುದು ಮಾತ್ರವೇ ಈವತ್ತು ನಮ್ಮ ಮುಂದೆ ಇದೆ. ಆದರೆ ಉದ್ಯಮ ಎನ್ನುವುದು ಈವತ್ತು ಅತ್ಯಂತ ಸಾಮಾನ್ಯವಾದ ಕಾರ್ಮಿಕರು ಇಷ್ಟ ಪಡುವುದಿಲ್ಲ. ಅದಕ್ಕೆ ಹೆಚ್ಚು ತರಬೇತಿ ಹೊಂದಿರುವ ಜನರು ಬೇಕಾಗುತ್ತಾರೆ. ಅವರನ್ನು ಕಂಪೆನಿಯ ಉದ್ಯೋಗಕ್ಕೆ ಒಗ್ಗಿಸುವುದು ಮುಖ್ಯ. ಅವರೂ ನಿರ್ದಿಷ್ಟವಾದ ಜ್ಞಾನವನ್ನು ಮಾತ್ರವೇ ಹೊಂದಿರುತ್ತಾರೆ. ಅದಕ್ಕಾಗಿಯೇ ಅನೇಕ ತರಬೇತಿ ಕಾರ್ಯಕ್ರಮವೂ ನಡೆಯುತ್ತದೆ. ಹೀಗಾಗಿ ಬಂಡವಾಳವಾದವು ತನ್ನದೇ ಒಂದು ಜ್ಞಾನವನ್ನು ಸೃಷ್ಟಿ ಮಾಡುವುದು ಮಾತ್ರವೇ ಅಲ್ಲ, ಅದರ ಜೊತೆಗೆ ಉತ್ಪಾದನೆಯು ಹೇಗೆ ನಮ್ಮನ್ನು ಒಂದು ಸಿದ್ಧವಾದ ಚೌಕಟ್ಟಿಗೆ ತರುತ್ತದೆ ಎನ್ನುವುದಕ್ಕೆ ಇದು ನಿದರ್ಶನ. ಜನರು ಹೇಗೆ ಬಂಡವಾಳವಾದಕ್ಕೆ ಪೂರಕವಾದ ಕೆಲಸವನ್ನು ಮಾಡುತ್ತಾರೆ ಎನ್ನುವುದಕ್ಕೆ ಗ್ರಾಂಶಿಯು ಸಮೂಹ ಮಾಧ್ಯಮದ ಉದಾಹರಣೆಯನ್ನು ಕೊಡುತ್ತಾನೆ. ಮಾಧ್ಯಮಗಳಲ್ಲಿ ಕೆಲಸವನ್ನು ಮಾಡುವವರು ಬಂಡವಾಳವಾದದ ಮಧ್ಯವರ್ತಿಯಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಇದೇ ರೀತಿಯಲ್ಲಿ ಅನೇಕ ಸಂಸ್ಥೆಗಳು ಇರುತ್ತವೆ. ಅವು ಮನುಷ್ಯನ ದೇಹದ ಶ್ರಮ, ಮನಸ್ಸಿನ ಶ್ರಮವನ್ನು ಬಳಸುತ್ತವೆ. ಯಾವುದೇ ಒಂದು ಸಮೂಹ ಮಾಧ್ಯಮದಲ್ಲಿ ಕೆಲಸವನ್ನು ಮಾಡುವವರು ಬರೀ ಒಬ್ಬ ವ್ಯಕ್ತಿ ಮಾಡುವಷ್ಟು ಮಾತ್ರ ಕೆಲಸವನ್ನು ಮಾಡುವುದು ಸಾಧ್ಯವಿಲ್ಲ. ಆದ್ದರಿಂದ ಅದರಲ್ಲಿ ಒಂದು ಗುಂಪು ಕೆಲಸವನ್ನು ಮಾಡಬೇಕಾಗುತ್ತದೆ. ಸಂಪಾದಕ, ವರದಿಕಾರ ಸತ್ಯದ ವರದಿ, ಪಥ್ಯವನ್ನು ಸೋಸುವುದು. ಯಾವ ಸುದ್ಧಿಯನ್ನು ಯಾವ ಪುಟದಲ್ಲಿ ಹಾಕಬೇಕು ಎಂದು ನಿರ್ಧಾರ ಮಾಡುತ್ತರೆ. ಆಧುನಿಕ ಜಗತ್ತಿನಲ್ಲಿ ಆಲೋಚನೆ ಮತ್ತು ಅದರ ಅಭಿವ್ಯಕ್ತಿ ಎನ್ನುವುದು ಅತ್ಯಂತ ಮುಖ್ಯವಾಗುತ್ತದೆ. ಗ್ರಾಂಶಿಯು

ಮಧ್ಯಮ ವರ್ಗದ ಬುದ್ಧಿಜೀವಿಗಳು ಮತ್ತು ಕಾರ್ಮಿಕರು ಜೊತೆ ಸೇರಿಯೆ ಹೋರಾಟವನ್ನು ಮಾಡಬೇಕಾದ್ದು ಅತ್ಯಂತ ಅನಿವಾರ್ಯ ಎಂದು ಹೇಳುತ್ತಾನೆ. ಲೆನಿನ್ ಇದನ್ನು ಸ್ಪಷ್ಟವಾಗಿ ಹೇಳಿದ್ದ ಎನ್ನುವುದು ಇಲ್ಲಿ ಉಲ್ಲೇಖನೀಯ. ಅದರಲ್ಲಿ ಬುದ್ಧಿ ಮತ್ತು ದೇಹದ ಶ್ರಮ ಒಟ್ಟಿಗೆ ಇರಬೇಕಾಗುತ್ತದೆ. ಇದನ್ನು ಗ್ರಾಂಶಿಯು ಬರೀ ಒಬ್ಬ ಸಿದ್ಧಾಂತಿಯಾಗಿ ನೋಡುವುದಿಲ್ಲ. ಅದರ ಬದಲು ಅವನು ಪ್ರಯೋಗವನ್ನು ಕೂಡಾ ಮನಸ್ಸಿನಲ್ಲಿ ಇಟ್ಟುಕೊಂಡಿದ್ದ. ಇದನ್ನು ನಾವು ಅವನ ಆರ್ಗ್ಯಾನಿಕ್ ಬುದ್ಧಿಜೀವಿಗಳು ಮತ್ತು ಪಾರಂಪರಿಕವಾದ ಬುದ್ಧಿಜೀವಿಗಳು ಎನ್ನುವುದರಲ್ಲಿ ಕಾಣುತ್ತದೆ. ಲೆನಿನ್ ಒಮ್ಮೆ ಮೇಲು ಸ್ತರದ ಮತ್ತು ಕೆಳಸ್ತರದ ಎನ್ನುವ ವರ್ಗೀಕರಣವನ್ನು ಮಾಡಿದ್ದು ಇಲ್ಲಿ ಗಮನಾರ್ಹ. ಆದರೆ ಗ್ರಾಂಶಿಯು ಬುದ್ಧಿಜೀವಿಗಳು ಮತ್ತು ಕಾರ್ಮಿಕರ ನಡುವೆ ಒಂದು ಸಂಬಂಧ ಇರಬೇಕು ಎಂದು ಬಯಸುತ್ತಾನೆ. ಈವತ್ತು ಬುದ್ಧಿಜೀವಿಗಳಿಗೆ ರಾಜಕಾರಣ, ಕಲಾತ್ಮಕವಾದ ಒಂದು ಅಭಿವ್ಯಕ್ತಿ , ಹಾಗೂ ವಿಜ್ಞಾನ ಮತ್ತು ನೈತಿಕತೆಯು ಇದ್ದರೆ ಲೋಕವನ್ನು ನೋಡುವ ಕ್ರಮಗಳು ಬೇರೆಯಾಗುತ್ತವೆ. ಆದರೂ ಅವರು ಸಮಾಜದಲ್ಲಿ ಇರುತ್ತಾರೆ. ಸಮಾಜವನ್ನು ಹೊರತುಪಡಿಸಿಕೊಂಡು ಬುದ್ಧಿಜೀವಿಗಳು ಇರಲು ಸಾಧ್ಯವೇ ಇಲ್ಲ.

ಗ್ರಾಂಶಿಯಲ್ಲಿ ರಾಜಕೀಯ ಮತ್ತು ಬುದ್ಧಿಜೀವಿಗಳ ಕುರಿತು ಚರ್ಚೆ:

ಸಮಾಜ ಮತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡಲು ಹೊರಟವರು ಈವತ್ತು ಮತ್ತೆ ಗ್ರಾಂಶಿಯನ್ನು ಓದಬೇಕಾಗಿದೆ. ಸಮಕಾಲೀನ ಚರ್ಚೆಯು ಹೇಗೆ ಇದೆ ಎಂದು ಅತ್ಯಂತ ಸೂಕ್ಷ್ಮವಾಗಿ ನೋಡಿದರೆ ಇದರ ಅರ್ಥವು ತಿಳಿಯುತ್ತದೆ. ಅಷ್ಟೇ ಅಲ್ಲ ಯಾರು ಈವತ್ತು ಮಾರ್ಕ್ಸವಾದವನ್ನು ಅಧ್ಯಯನ ಮಾಡಲು ಹೊರಟಿದ್ದಾರೆಯೋ ಅವರಿಗೆ ಅತ್ಯಂತ ಹೆಚ್ಚು ಉಪಯೋಗಕ್ಕೆ ಬರುವುದು ಗ್ರಾಂಶಿಯ ಬರಹಗಳು. ಅವನ ಬರಹಗಳಲ್ಲಿ ನಮಗೆ ಮತ್ತೆ ಮತ್ತೆ ಬರುವ ಕಾರ್ಮಿಕರ ಪ್ರಶ್ನೆ, ಬುದ್ಧಿಜೀವಿಗಳು ಮತ್ತು ಅವರ ಕಾರ್ಯ ವಿಧಾನ, ಫೋರ್ಡಿನ ಚರ್ಚೆ, ಜಾನಪದ ನಮಗೆ ಈಗಲೂ ಅತ್ಯಂತ ಉಪಯುಕ್ತವಾಗಿದೆ. ಅವನು ಉಳಿದವರಂತೆ ಕೇವಲ ಜನಪ್ರಿಯ ಸಂಸ್ಕೃತಿ ಮತ್ತು ಅದರ ಸ್ವರೂಪವನ್ನು ದೂರ ಇಟ್ಟವನು ಅಲ್ಲ. ಅವನ ಚರ್ಚೆಯಲ್ಲಿ ಫುಟ್‌ಬಾಲ್, ಜಾಝ್ ಸಂಗೀತ ಮುಂತಾದವು ಬರುತ್ತವೆ. ಇವು ಹೇಗೆ ಜಗತ್ತಿನಲ್ಲಿ ಒಂದು ಸಂಚಲನವನ್ನು ಉಂಟು ಮಾಡಿದೆ ಎಂದು ವಿವರಿಸುವಾಗ ಅದಕ್ಕೆ ಒಂದು ತಾತ್ವಿಕವಾದ ಆಯಾಮವನ್ನು ಕೊಡುತ್ತಾನೆ., ಅದಕ್ಕೆ ಒಂದು ವಿಮರ್ಶಾತ್ಮಕವಾದ ಆಯಾಮವು ಇರುತ್ತದೆ. ನಾವು ಇವುಗಳನ್ನು ಅರ್ಥ ಮಾಡಿಕೊಳ್ಳುವುದು ಸೂಕ್ತ ಎಂದು

ಅವನು ಹೇಳಿದ್ದು ಮೇಲಿನ ವಾಕ್ಯಕ್ಕೆ ಪುಷ್ಟಿಯನ್ನು ಕೊಡುತ್ತದೆ. ಅವನು ಸನ್ನಿವೇಶವು ಹೇಗೆ ಇರುತ್ತದೆ ಮತ್ತು ಅದರ ಪರಿಣಾಮದ ಸ್ವರೂಪವು ಮನುಷ್ಯರ ಮೇಲೆ ಯಾವ ದಿಕ್ಕನ್ನು ಸೂಚಿಸುತ್ತದೆ ಎಂದು ವಿವರಿಸುತ್ತಾನೆ. ಅದನ್ನು ಇನ್ನೊಂದು ಥರ ಹೇಳುತ್ತಾನೆ: ಆರೋಗ್ಯಕರವಾದ ಮತ್ತು ವಿಮರ್ಶಾತ್ಮಕವಾದ ಒಂದು ವಿಸ್ತರಣೆ ಎಂದು ಭಾವಿಸುತ್ತಾನೆ. ಅವನು ಇದನ್ನು ಹೇಳುವಾಗ ಅದರ ಹಿಂದೆ ಇರುವ ಚರಿತ್ರೆ ಮತ್ತು ಅದರ ವಿಶಿಷ್ಟವಾದ ಆಯಾಮವನ್ನು ಹೇಳುತ್ತಾನೆ. ಯಾವುದೇ ರಚನೆಗಳು ಮತ್ತು ಆದರ ಆಂಶಿಕವಾದ ರೂಪಗಳು ಜಗತ್ತಿನಲ್ಲಿ ಇದ್ದೇ ಇರುತ್ತವೆ. ಆದರೆ ಅವುಗಳನ್ನು ನಾವು ಹೇಗೆ ನಿರೂಪಿಸುತ್ತೇವೆ ಎನ್ನುವುದು ಅತ್ಯಂತ ಮುಖ್ಯ. ಗ್ರಾಂಶಿಯ ಮಾತುಗಳಿಗೆ ಇನ್ನೊಂದು ಆಯಾಮವು ಇದೆ. ಅದನ್ನು ಹೇಳುವಾಗ ಅವನು ಯಾವುದೇ ಪ್ರಭಾವಕ್ಕೆ ಸಿಕ್ಕಿದವನೂ ಅಲ್ಲ. ಅವನಲ್ಲಿ ಅನೇಕ ಚಿಂತನೆಗಳು ಬೇರೆ ಬೇರೆ ಆಯಾಮವನ್ನು ಹೊಂದಿದೆ. ಒಂದು ಸೈದ್ಧಾಂತಿಕವಾದ ತಿಳುವಳಿಕೆಯು ಹೇಗೆ ಮುಖ್ಯವಾಗಿದೆ ಎಂದು ಅವನ ಬರಹಗಳನ್ನು ನೋಡಿದರೆ ನಮಗೆ ತಿಳಿಯುತ್ತದೆ. ಅವನ ಬರಹಗಳೇ ಒಂದು ಅರ್ಥದಲ್ಲಿ ಬೌದ್ಧಿಕವಾದ ಚಿಂತನೆಗಳನ್ನು ಹೇಳುತ್ತವೆ. ಅವನು ರಾಜಕೀಯ ಚಿಂತಕ ಎಂದು ಹೇಳಿ ನಾವು ಕೈ ತೊಳೆಯುವಂತೆ ಇಲ್ಲ. ಅವನು ರಾಜಕಾರಣದಲ್ಲಿ ಅತ್ಯಂತ ಕ್ರಿಯಾಶಾಲಿಯಾದ ಕಾರ್ಯಕರ್ತನೂ ಆಗಿದ್ದ. ಅವನ ದೃಷ್ಟಿಯಲ್ಲಿ ರಾಜಕಾರಣ ಎನ್ನುವುದು ತಪ್ಪಲ್ಲ. ಲೇಖಕರು ಮತ್ತು ಬುದ್ಧಿಜೀವಿಗಳು ರಾಜಕಾರಣವನ್ನು ಮೈಲಿಗೆ ಎಂದು ತಿಳಿಯಬೇಕಾದ ಅಗತ್ಯವಿಲ್ಲ.

ಅದನ್ನು ಹೇಳುವಾಗ ಮುಖ್ಯವಾಗಿ ನಾಗರಿಕ ಸಮಾಜ ಮತ್ತಿತರ ಸಂಗತಿಗಳು ಮನುಷ್ಯರ ಮೇಲೆ ಪ್ರಭಾವವನ್ನು ಬೀರುತ್ತದೆ ಎಂದು ಹೇಳುತ್ತಾನೆ. ನಾಗರಿಕ ಮತ್ತು ಅನಾಗರಿಕ ಎಂದು ಹೇಳುವಾಗ ನಾವು ಯಾವ ರಾಜಕಾರಣವನ್ನು ಮಾಡುತ್ತೇವೆ ಎಂದು ಗ್ರಾಂಶಿಯು ವಿವರಿಸುತ್ತಾನೆ. ಅವನು ಒಂದು ಪರಿಭಾಷೆಯನ್ನು ಬಳಸುತ್ತಾನೆ. ಅದು ರಿಸ್‌ಆರ್ಗ್‌ಮೆಂಟೋ. ಮತ್ತೊಂದು ಟ್ರಾನ್ಸೊ ಪೊರ್ಮಿಯೊ. ಮೊದಲನೆಯದು ನಮಗೆ ಮತ್ತೆ ಮರು ರೂಪವನ್ನು ತಳೆಯುವುದು. ಇನ್ನೊಂದು ಹತ್ತೊಂಬತ್ತನೆಯ ಶತಮಾನದಲ್ಲಿ ಇದು ರಾಜಕೀಯ ಏಕೀಕರಣವನ್ನು ಸೂಚಿಸಿತು. ಅತ್ಯಂತ ಸರಳವಾಗಿ ಹೇಳಬೇಕೆಂದರೆ ಪುನರುಜ್ಜೀವನ. ಇದು ಇಟೆಲಿಯಲ್ಲಿ ನಡೆಯಿತು. ಮತ್ತೊಂದು ಪದವು ನಮಗೆ ರೂಪಾಂತರವನ್ನು ಹೇಳುತ್ತದೆ. ಇದು ಕೂಡಾ ಇಟೆಲಿಯಲ್ಲಿ ನಡೆಯಿತು. ಇದನ್ನು ಒಂದು ಸೂತ್ರ ರೂಪವಾಗಿ ಗ್ರಾಂಶಿಯು ಬಳಸುತ್ತಾನೆ. ಒಂದರ ಬದಲಿಗೆ ಇನ್ನೊಂದು ಬರುವಾಗ ಅದರಲ್ಲಿ ರೂಪಾಂತರದ ಕ್ರಿಯೆಯು ನಡೆಯುತ್ತದೆ. ಇವುಗಳನ್ನು ಅತ್ಯಂತ ತಾಂತ್ರಿಕವಾದ ಒಂದು ಪದವೆಂದು

ಹೇಳಬೇಕಾಗಿಲ್ಲ. ಒಂದು ಗುಂಪು ಇನ್ನೊಂದು ಗುಂಪನ್ನು ತನ್ನ ಹಿತಾಸಕ್ತಿಗಾಗಿ ಯಜಮಾನಿಕೆಯನ್ನು ಸಾಧಿಸುತ್ತದೆ ಎನ್ನುವುದು ಸ್ಪಷ್ಟ. ಇಟಾಲಿಯನ್ ಭಾಷೆಯಲ್ಲಿ ಫಾರ್ಮ್ಸಿಯೋ. ಎನ್ನುವುದು ಒಂದು ಅರ್ಥದಲ್ಲಿ ಒಂದು ಪರಿವರ್ತನೆಯನ್ನು ಸೂಚಿಸುತ್ತದೆ. ರಿಸಾರ್ಗ್ಗ ಮೆಂಟೋ ಎನ್ನುವುದು ನಮಗೆ ಅತ್ಯಂತ ಮಹತ್ವದ ಒಳನೋಟವನ್ನು ಕೊಡುತ್ತದೆ. ವಾಸ್ತವದಲ್ಲಿ ಇದು ಅವನ ಜೀವನದ ಅನುಭವಕ್ಕೆ ಬಂದಿತ್ತು. ಪರಿವರ್ತನೆಯು ಹೇಗೆ ಮನುಷ್ಯನನ್ನು ನೋಡುತ್ತದೆ ಎನ್ನುವುದ ಅವನಿಗೆ ತಿಳಿದಿತ್ತು.

ಇದು ಮಾತ್ರವೇ ಅಲ್ಲ, ಅವನಿಗೆ ಬೇರೆ ಬೇರೆ ಚಿಂತಕರ ಪ್ರಭಾವವು ಬೀರಿತ್ತು. ಮುಸ್ಸಲೋನಿಯನ್ನು ಅತ್ಯಂತ ಕಟುವಾಗಿ ವಿಮರ್ಶೆ ಮಾಡಿದ್ದ ಕ್ರೋಸೆಯು ವಾಸ್ತವ ಮತ್ತು ಅದರ ಸಾಧ್ಯತೆಯನ್ನು ಹೆಚ್ಚು ಚರ್ಚೆ ಮಾಡುತ್ತಾನೆ. ರಾಜಕಾರಣ ಮತ್ತು ಅದರ ಜೊತೆಗೆ ಇರುವ ನೈತಿಕತೆಯನ್ನು ಹೇಳುತ್ತಾನೆ. ವಿಶೇಷವೆಂದರೆ ಅವನ ರೀತಿ ಮತ್ತು ಅವನ ಚಾರಿತ್ರಿಕವಾದ ತಿಳುವಳಿಕೆಯು ಅತ್ಯಂತ ಮುಖ್ಯವಾಗಿತ್ತು. ಅದರ ಪ್ರಭಾವವು ನಮಗೆ ಗ್ರಾಂಶಿಯಲ್ಲಿಯೂ ಕಾಣುತ್ತೆದೆ.

ಬುದ್ಧಿಜೀವಿಗಳು

ಗ್ರಾಂಶಿಯ ಅತ್ಯಂತ ಮುಖ್ಯವಾದ ಒಂದು ಚರ್ಚೆಯು ಇರುವುದು ಬುದ್ಧಿಜೀವಿಗಳ ಕುರಿತು. ಅದನ್ನು ಮೊದಲು ಒಂದು ಪ್ರತ್ಯೇಕವಾದ ವರ್ಗ ಎಂದು ಹೇಳುತ್ತಿದ್ದರು. ಅದರಲ್ಲಿಯೂ ಅವರನ್ನು ಅತಿ ವಿಶಿಷ್ಟವಾದ ಜನರು ಕಾವ್ಯ, ತತ್ವಜ್ಞಾನ, ಸಮಾಜ ಚಿಂತನೆಯನ್ನು ಬೇರೆ ಥರ ಮಾಡುತ್ತಾರೆ ಎಂದು ಹೇಳುತ್ತಿದ್ದರು ಆದರೆ ಗ್ರಾಂಶಿಯು ಇದನ್ನು ಒಪ್ಪುವುದಿಲ್ಲ. ಆದರೆ ಅವನು ಇದನ್ನು ಪ್ರತ್ಯೇಕವಾದ ವರ್ಗ ಎಂದು ಭಾವಿಸುವ ಬದಲು ಅವರನ್ನು ಉಳಿದವರಂತೆ ನೋಡಬೇಕಾದ ಅಗತ್ಯವಿದೆ ಎಂದು ಹೇಳುತ್ತಾನೆ. ಒಂದು ಜನವರ್ಗವು ಆಧುನಿಕ ವಿದ್ಯಾಭಾಸವನ್ನು ಪಡೆದು ಬುದ್ಧಿಜೀವಿಗಳು ಎನಿಸಿಕೊಂಡಿದ್ದಾರೆ. ಅವರಿಗೆ ಸಮಾಜದ ಮನ್ನಣೆಯು ಇರುತ್ತದೆ. ಇದರಲ್ಲಿ ಲೇಖಕರು ಇದ್ದಾರೆ. ವಿಜ್ಞಾನದಲ್ಲಿ ಕೆಲಸ ಮಾಡುವವರೂ ಇದ್ದಾರೆ. ಮತ್ತೊಂದು ಬಗೆಯ ಜನರು ಇದ್ದಾರೆ. ಅವರಿಗೆ ಈ ಬಗೆಯ ಮಾನ್ಯತೆಯು ಇಲ್ಲ. ಅವರು ಬೇರೆ ಥರ ಇದ್ದಾರೆ. ಅವರನ್ನು ಸಾಮಾಜಿಕ ಜೀವನದ ಅತ್ಯಂತ ಅನಿವಾರ್ಯವಾದ ವರ್ಗ. ಇವರನ್ನು ಗ್ರಾಂಶಿಯು ಸಾವಯವ ಥರದ ಎಂದು ಹೇಳಬಹುದು ಎಂದು ಹೇಳುತ್ತಾನೆ. ಸಮಾಜದಲ್ಲಿ ಈ ವರ್ಗವು ಅತ್ಯಂತ ಮುಖ್ಯವಾದ ವರ್ಗ ಎಂದು ಮಾತ್ರವೇ ಹೇಳುವುದಲ್ಲ, ಇವರು ಸಮಾಜದಲ್ಲಿ ಬುನಾದಿಯೂ ಆಗಿರುತ್ತಾರೆ. ಅವರು ಸಮಾಜದಲ್ಲಿ ಮಾಡುವ ಕೆಲಸಗಳು ಬೇರೆಯಾಗಿರುತ್ತವೆ.

ಆದರೆ ಅವನು ಮತ್ತೊಂದು ಮಾತನ್ನು ಹೇಳುತ್ತಾನೆ. ಲೇಖಕರು ಮಾತ್ರವೇ ನಾವು ಬುದ್ಧಿಜೀವಿಗಳು ಎಂದು ಭಾವಿಸುವುದು ಅಗತ್ಯವಿಲ್ಲ. ಎಲ್ಲಾ ಮನುಷ್ಯರು ಬುದ್ಧಿಜೀವಿಗಳು ಎಂದು ಭಾವಿಸುವುದು ಅತ್ಯಂತ ಅಗತ್ಯ ಎಂದು ಅವನು ಹೇಳುತ್ತಾನೆ. ಅವರ ಚಟುವಟಿಕೆಗಳು ಬೇರೆ ಎನ್ನುವುದು ಸಮಾಜಕ್ಕೆ ಅನಿವಾರ್ಯ. ಇದನ್ನು ನಾವು ಶಿಕ್ಷಣದ ಹಿನ್ನೆಲೆಯಲ್ಲಿಯೂ ಗಮನಿಸಬೇಕಾಗುತ್ತದೆ. ಶಿಕ್ಷಣ ಮತ್ತು ಅದರ ಪ್ರಜಾಪ್ರಭುತ್ವ ಮಾದರಿಯ ಸ್ವರೂಪವು ನಮಗೆ ಬುದ್ಧಿಜೀವಿಗಳನ್ನು ರೂಪಿಸಲು ಅವಕಾಶವನ್ನು ಮಾಡಿಕೊಡುತ್ತದೆ ಎನ್ನುವುದು ಅವನ ಮತ್ತೊಂದು ವಾದವಾಗಿದೆ. ರಾಜಕಾರಣ ಮತ್ತು ಅದರ ಸ್ವರೂಪವು ನಮಗೆ ಹೋರಾಟದ ಅಗತ್ಯವನ್ನು ಹೇಳುತ್ತದೆ. ಇದನ್ನು ಹೇಳುವಾಗ ಗ್ರಾಂಶಿಯು ನಮಗೆ ರಿಸೊಗಿಮೆನಂಟೂ ಎಂದು ಹೇಳುತ್ತಾನೆ. ವರ್ಗ ಮತ್ತು ಅದರ ಸಮರದಲ್ಲಿ ಈ ಬಗೆಯ ವರ್ಗವು ಅತ್ಯಂತ ಮುಖ್ಯ. ಹೋರಾಟದಲ್ಲಿ ಲೇಖಕರು ಮತ್ತು ಬುದ್ಧಿಜೀವಿಗಳ ಅಗತ್ಯವನ್ನು ಗ್ರಾಂಶಿಯು ಒಪ್ಪುತ್ತಾನೆ. ಅವರ ಅಗತ್ಯವಿದೆ ಎಂದೂ ಹೇಳುತ್ತಾನೆ. ಇದನ್ನು ಹೇಳುವಾಗ ಅವನು ಲೆನಿನ್‌ನ ಅತ್ಯಂತ ಮುಖ್ಯವಾದ ಒಂದು ಮಾತನ್ನು ಎತ್ತಿ ಹಿಡಿಯುತ್ತಾನೆ: ನಾವು ಮಾಡಬೇಕಾದುದು ಏನು? ಕಾರ್ಮಿಕರು ಮಾತ್ರವೇ ಅಲ್ಲ, ಎಲ್ಲಾ ಜನರು ಹೋರಾಟದಲ್ಲಿ ಭಾಗವಹಿಸುವುದು ಅತ್ಯಂತ ಅಗತ್ಯ ಎನ್ನುವುದು ಅವನ ವಾದ. ಒಂದು ರೀತಿಯಿಂದ ಗ್ರಾಂಶಿಯು ಲೆನಿನ್ ವಾದದ ಮುಖ್ಯವಾದ ಅಂಶಗಳನ್ನು ಎತ್ತಿ ಹಿಡಿಯುತ್ತಾನೆ. ಆದರೆ ಅದನ್ನು ಸ್ವಲ್ಪ ನವೀಕರಣ ಮಾಡುತ್ತಾನೆ. ಬುದ್ಧಿಜೀವಿಗಳು ಕೂಡಾ ರಾಜಕೀಯ ಮತ್ತು ಅದರ ಬದ್ಧತೆಯನ್ನು ಒಪ್ಪಿಕೊಳ್ಳುವುದು ಅಗತ್ಯ ಎನ್ನುವುದು ಅವನ ವಾದ., ಯಾವದೇ ಚಟುವಟಿಕೆಯನ್ನು ಹೆಚ್ಚು ಚಾಲಿಗೆ ಬರುವಂತೆ ಮತ್ತು ಒಂದು ಪ್ರವಾಹದ ಭಾಗವಾಗುವಂತೆ ನೋಡುವುದು ಅಗತ್ಯ.. ಸಾಮಾನ್ಯ ಮನುಷ್ಯರಿಗೂ ಬುದ್ಧಿಜೀವಿಗಳಿಗೂ ಒಂದು ಸಂಬಂಧ ಇರಬೇಕಾದ ಅಗತ್ಯವಿದೆ. ಸಾಮಾನ್ಯ ಮನುಷ್ಯರಿಗೆ ಕೆಲವು ಬಗೆಯ ಜ್ಞಾನವು ಇರುತ್ತದೆ ಎಂದು ಅವನು ಹೇಳುತ್ತಾನೆ.ಅವರೂ ರಾಜಕೀಯ ನಿರ್ಧಾರಗಳಲ್ಲಿ ಒಂದು ಪಾತ್ರವನ್ನು ವಹಿಸುತ್ತಾರೆ. ಇಲ್ಲಿಯೂ ಆಳ್ವಿಕೆ ಮತ್ತು ಅದರ ಪ್ರಶ್ನೆಗಳು ಇದ್ದೇ ಇರುತ್ತವೆ. ಅದರ ಅರಿವು ನಮಗೆ ಇರಬೇಕು. ನಮ್ಮ ಅನೇಕ ಸಾಂಪ್ರದಾಯಿಕ ಕ್ರಮಗಳೂ ಕೂಡಾ ಚರಿತ್ರೆಯ ಭಾಗವಾಗಿವೆ. ಅತಿಯಾದ ವಿಜೃಂಭಣೆಯಿಂದ ಅವರನ್ನು ನೋಡುವುದು ಸರಿಯಾದ ಒಂದು ಕ್ರಮವಲ್ಲ., ಇದರಲ್ಲಿ ಸಾಮಾಜಿಕ ಜೀವನ ಮತ್ತು ಅದರ ವರ್ಗೀಕರಣವು ಇಲ್ಲ. ಅದರ ಬದಲು ಜನರನ್ನು ಪ್ರತಿಭಾವಂತ ಮತ್ತು ಪ್ರತಿಭೆಯು ಇಲ್ಲದವರು ಎಂದು ಹೇಳಬೇಕಾದ ಅಗತ್ಯವಿಲ್ಲ. ಅಡರ್ನೋನ ಪ್ರಕಾರ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು ಬುದ್ಧಿಜೀವಿಗಳ ಮೇಲೆ ಪ್ರಭಾವವನ್ನು ಬೀರುತ್ತದೆ.

ಬುದ್ಧಿಜೀವಿಗಳ ಶಕ್ತಿಯು ವಿಶೇಷ ಅಧ್ಯಯನಗಳಲ್ಲಿ ವ್ಯಕ್ತವಾಗುತ್ತದೆ. ಬುದ್ದಿಜೀವಿಗಳ ಚಟುವಟಿಕೆಯು ಯಾವಾಗಲೂ ಒಂದು ಮಿತಿಯ ಒಳಗಡೆಗೆ ಕೆಲಸವನ್ನು ಮಾಡುತ್ತದೆ. ಯಾವುದನ್ನು ನಾವು ಬೌದ್ಧಿಕ ಸ್ವಾತಂತ್ರ್ಯವೆಂದು ಹೇಳುತ್ತೇವೆಯೋ ಅದನ್ನು ಕೂಡಾ ಚರಿತ್ರೆಯ ಅಗತ್ಯವೆಂದು ಹೇಳುತ್ತೇವೆ. ಪುನರುಜ್ಜೀವನದ ಅನಂತರ ಮನುಷ್ಯನ ಸಂವೇದನೆ ಮತ್ತು ಮನಸ್ಸಿನ ಕುರಿತು ಅನೇಕ ಚರ್ಚೆಗಳಾದವು ಎನ್ನುವುದನ್ನು ಮರೆಯಬಾರದು. ಆ ಕಾಲದ ಬುದ್ಧಿಜೀವಿ ವರ್ಗದ ವಿಚಾರಧಾರೆಗಳು ಒಂದು ಬಗೆಯಲ್ಲಿದ್ದವು. ಇದನ್ನು ಅನಂತರ ವೈಚಾರಿಕ ಸಂಘರ್ಷವೆಂದು ಕರೆಯಲಾಯಿತು. ಆದರೆ ಆಗಿನ ವಿಚಾರ ಧಾರೆಗಳನ್ನು ಮತ್ತೆ ಬೇರೆ ವಿಧದಲ್ಲಿ ನಿರೂಪಿಸಲಾಯಿತು. ಜ್ಞಾನದ ಚರ್ಚೆಯು ರಾಜಕೀಯ ಸಂಗತಿಗಳನ್ನು ಸೂಚಿಸಿತು. ಹಾಗೆಯೇ ಆಗಿನ ವಿಚಾರಗಳು ನೈತಿಕ, ರಾಜಕೀಯ, ಸಾಮಾಜಿಕ ಅರಿವನ್ನು ಸೂಚಿಸಿತು. ಆಗಿನ ರಾಜಕೀಯ ಎಚ್ಚರವು ಭಿನ್ನವಾಗಿತ್ತು. ಮತ್ತು ಅದಕ್ಕೆ ಅನುಗುಣವಾಗಿ ಸಂವಹನ ಪ್ರಕ್ರಿಯೆಗಳು ಬದಲಾದವು. ಈ ಸಂದರ್ಭದಲ್ಲಿ ಮಾತು ಎನ್ನುವುದು ಕೂಡಾ ಆಗ ಭಿನ್ನವಾದ ಚಹರೆಗಳನ್ನು ಸೂಚಿಸಿತು. ರಾಜಕೀಯ ಮತ್ತು ಚಾರಿತ್ರಿಕ ಸಂಗತಿಗಳು ಆಗುತ್ತಿರುತ್ತವೆ. ಅವುಗಳ ಸ್ವರೂಪವು ಅಸ್ಪಷ್ಟವೆಂದು ಹೇಳಬೇಕಾಗಿಲ್ಲ. ಚರಿತ್ರೆಯಲ್ಲಿ ಬೇಕಾದ್ದು ಯಾವುದು ಬೇಡವಾದ್ದು ಎಂದು ಅನೇಕ ಸಂದರ್ಭದಲ್ಲಿ ವರ್ಗೀಕರಿಸಲು ಬರುವುದಿಲ್ಲ. ಅದು ಸತ್ಯವೂ ಹೌದು. ಚರಿತ್ರೆಯನ್ನು ನಾವು ಹಗುರವಾದ ವಿಷಯವೆಂದು ಪರಿಗಣಿಸಬೇಕಾಗಿಲ್ಲ. ಚರಿತ್ರೆಯ ಅನಿರ್ದಿಷ್ಟವಾದುದು ಅಲ್ಲ. ಅಸ್ಪಷ್ಟವೂ ಅಲ್ಲ. ಅದಕ್ಕೆ ವಿಶಿಷ್ಟವಾದ ಅಸ್ತಿತ್ವವಿದೆ. ಅದು ಗಾಳಿಯಲ್ಲಿ ನಾವು ತೇಲಿಬಿಡಬಹುದಾದ ಸಂಗತಿಯೂ ಅಲ್ಲ. ಕಳೆದು ಹೋದುದಕ್ಕೆ ಮತ್ತು ನಮ್ಮ ವರ್ತಮಾನಕ್ಕೆ ಒಂದು ನಿಕಟವಾದ ಸಂಬಂಧವಿದೆ. ಅದು ಅನೇಕ ಸಂದರ್ಭದಲ್ಲಿ ಅವ್ಯಕ್ತವೂ ಹೌದು. ಆದರೆ ಭೂತ ಮತ್ತು ವರ್ತಮಾನಕ್ಕೆ ಒಂದು ಅವ್ಯಕ್ತವಾದ ನಂಟು ಇದೆ. ಚರಿತ್ರೆಯು ಮರುಕಳಿಸುತ್ತದೆ ಎಂದು ಹೇಳುವಂತಿಲ್ಲ. ಚರಿತ್ರೆಯು ಅಸ್ತಿತ್ವದಲ್ಲಿತ್ತು ಮತ್ತು ಇದೆ. ಅದಕ್ಕೂ ನಮ್ಮ ಜೀವನಕ್ಕೂ ಒಂದು ನಂಟು ಇದೆ. ಅದೆ ನಮ್ಮ ಅಸ್ತಿತ್ವವನ್ನು ರೂಪಿಸಿದೆ. ಚಾರಿತ್ರಿಕ ಭೌತವಾದವು ಅದನ್ನು ಸೂಚಿಸುತ್ತದೆ. ನಾವು ಇದ್ದಕ್ಕಿಂತ ಸೃಷ್ಟಿಯಾದವರಲ್ಲ. ನಮ್ಮ ಅಸ್ತಿತ್ವವು ಪಾಪವಲ್ಲ. ಚರಿತ್ರೆಯು ಬರೀ ಕಥನವೂ ಅಲ್ಲ. ನಮ್ಮ ಅನಿರೀಕ್ಷಿತವಲ್ಲವೆಂದು ಬೆಂಜಮಿನ್ ಹೇಳುತ್ತಾನೆ. ಅದು ಕಲ್ಪಿತವಲ್ಲ. ಅದು ಸತ್ಯವೂ ಹೌದು. ಆದರೆ ನಾವು ಏನು ಮಾಡುತ್ತೇವೆಂದರೆ ಚರಿತ್ರೆಯನ್ನು ವರ್ಗೀಕರಿಸುತ್ತೇವೆ. ಚರಿತ್ರೆಯ ವರ್ಗೀಕರಣವೆಂದರೆ ಮೇಜರ್ ಮತ್ತು ಮೈನರ್. ಚರಿತ್ರೆಯನ್ನು ನಾವು ಸತ್ಯವೆಂದು ಗ್ರಹಿಸಲು ಹೋದರೆ ಅದರಲ್ಲಿ ಈ ವರ್ಗೀಕರಣವು ಬರುವುದಿಲ್ಲ. ಸತ್ಯದಲ್ಲಿ ಮೇಜರ್ ಮತ್ತು ಮೈನರ್ ಎಂಬ

ವ್ಯತ್ಯಾಸವಿದೆಯೇ ಎನ್ನವುದು ಮಾರ್ಕ್ಸವಾದದ ಪ್ರಶ್ನೆ. ಚರಿತ್ರೆಯು ಆಗಿರುವುದು. ಅದನ್ನು ಒರಸಿ ಹಾಕಲು ಬರುವುದಿಲ್ಲ. ಯಾವುದು ನಡೆದಿದೆಯೋ ಅದು ನಿಜವಾಗಿ ಆಗಿ ಹೋಗಿದೆ. ಮತ್ತು ಅದನ್ನು ಬೇರೆ ಬೇರೆ ಹಿನ್ನೆಲೆಯಲ್ಲಿಯೂ ಅರ್ಥ ಮಾಡಿಕೊಳ್ಳಬೇಕು. ಸತ್ಯವು ನಮ್ಮಿಂದ ಓಡಿಹೋಗಿ ಎಲ್ಲೋ ಅಡಗಿ ಕೂತುಕೊಳ್ಳುವುದಿಲ್ಲ. ಚರಿತ್ರೆಯನ್ನು ಅಲೌಕಿಕವೆಂದು ಅನೇಕರು ಭಾವಿಸುತ್ತಾರೆ. ಆದರೆ ಮಾರ್ಕ್ಸವಾದದ ಪ್ರಕಾರ ಅದು ಅಲೌಕಿಕವಲ್ಲ. ಅದು ಮನುಷ್ಯರಿಗೆ ಸಂಬಂಧ ಪಟ್ಟದ್ದೂ ಹೌದು. ಆದರೆ ನಾವು ನಮ್ಮ ವರ್ತಮಾನದಿಂದಲೇ ಭೂತವನ್ನು ಕಟ್ಟಿಕೊಳ್ಳುತ್ತೇವೆ. ಅದು ನಿಜವಾಗಿಯೂ ಏನಾಗಿತ್ತು ಎನ್ನುವುದೇ ಮುಖ್ಯವಾದ ಪ್ರಶ್ನೆ. ಅದು ನಮ್ಮ ನೆನಪೂ ಹೌದು. ನೆನಪು ಎನ್ನುವುದು ವಾಸ್ತವವಾಗಿ ಏಕ ಕೇಂದ್ರಿತವಾಗಿ ಇರಬೇಕಾಗಿಲ್ಲ. ಅದು ಆಳುವವರ ಕಥನವೂ ಹೌದು. ಮತ್ತು ಆಳಿಸಿಕೊಂಡವರ ಕತೆಗಳು ಕೂಡಾ ಹೌದು. ಚರಿತ್ರೆಯೆಂದರೆ ಅದು ಹೋರಾಟಗಳ ಕಥನವೂ ಅಲ್ಲ. ಅನೇಕ ಹೋರಾಟಗಳು ನಮ್ಮನ್ನು ನಿಯಂತ್ರಿಸಿದ್ದೂ ಹೌದು. ಪರಂಪರೆಯಲ್ಲಿ ಅವುಗಳು ನಡೆದು ಹೋಗಿವೆ. ಆದ್ದರಿಂದ ಅದನ್ನು ನಾವು ಅರ್ಥ ಮಾಡಿಕೊಳ್ಳುವಾಗ ಎಚ್ಚರದಲ್ಲಿ ಇರಬೇಕು. ಚರಿತ್ರೆಯು ಯಾವಾಗಲೂ ನಮ್ಮಲ್ಲಿ ಕೆಲವು ಸೂಚನೆಗಳನ್ನು ಕೊಡುತ್ತವೆ. ಯಾವುದೇ ಯುದ್ಧ ನಡೆದಿದ್ದರೂ ಕೂಡಾ ಚರಿತ್ರೆಯನ್ನು ನಿಯಂತ್ರಿಸಲು ಆಗಲಿಲ್ಲ. ಹಾಗೆ ನೋಡುವುದಿದ್ದರೆ ಯಾವುದೇ ಯುದ್ಧಗಳು ನಮ್ಮಲ್ಲಿ ಕೇವಲ ದುಃಖವನ್ನು ಮಾತ್ರವೇ ಬಿಟ್ಟು ಹೋಗಿವೆ. ಯುದ್ಧಗಳನ್ನು ನೀತಿಶಾಸ್ತ್ರಗಳು ಕೂಡಾ ನಿಯಂತ್ರಿಸಲು ಶಕ್ತವಾಗಲಿಲ್ಲ. ಇಲ್ಲಿ ಮತ್ತೊಂದು ಅಂಶವನ್ನು ನಾವು ನೆನಪಿನಲ್ಲಿಡಬೇಕು: ಚರಿತ್ರೆಯನ್ನು ಸಂಸ್ಕೃತಿಗಿಂತ ಭಿನ್ನವಾಗಿ ನೋಡಲು ಬರುವುದೂ ಇಲ್ಲ. ಇಸವಿಗಳೇ ಚರಿತ್ರೆಯಲ್ಲ ಯಾರನ್ನು ನಾವು ಸಾಂಪ್ರದಾಯಿಕ ಬುದ್ಧಿಜೀವಿಗಳು ಎಂದು ಹೇಳುತ್ತೇವೆಯೋ ಅವರು ಉತ್ಪಾದನೆಯಲ್ಲಿ ನೇರವಾದ ಪಾತ್ರವನ್ನು ವಹಿಸುತ್ತಾರೆ. ಅವರ ವರ್ಗವು ಹೆಚ್ಚು ಸ್ಪಷ್ಟವಾಗಿ ನಮಗೆ ಕಾಣಿಸುತ್ತದೆ. ಬೂರ್ಜ್ವಾ ಬುದ್ಧಿಜೀವಿಗಳು ವಹಿಸುವ ಪಾತ್ರಕ್ಕೂ ಇವರಿಗೂ ತುಂಬಾ ವ್ಯತ್ಯಾಸವಿದೆ. ಇದರ ಇನ್ನೊಂದು ಪ್ರಶ್ನೆಯನ್ನು ನಾವು ನೋಡಬೇಕಾಗುತ್ತದೆ. ನಾವು ಯಾವುದನ್ನು ಆಲೋಚನೆ ಮಾಡುತ್ತೇವೆಯೋ ಅದರ ರೂಪವು ನಮಗೆ ನಿರ್ಧಾರವಾಗುವುದು ನಮ್ಮ ಪ್ರಜ್ಞೆಯಲ್ಲಿ. ಆಲೋಚನೆ ಎನ್ನುವುದು ನಮಗೆ ಪ್ರಾತಿನಿಧಿಕವೂ ಆಗಿರುತ್ತದೆ. ನಮ್ಮ ಆಲೋಚನೆ ಎನ್ನುವುದು ಯಾವಾಗಲೂ ಈ ದೃಷ್ಟಿಯಿಂದ ಬೇರೆಯಾಗುತ್ತವೆ. ಇದರ ಜೊತೆಗೆ ನಾವು ನಮ್ಮ ಆವಶ್ಯಕತೆಗೆ ಹೇಗೆ ಬೇರೆ ಬೇರೆ ಆಯಾಮವು ಇರುತ್ತದೆ ಎನ್ನುವುದನ್ನು ಗಮನಿಸಬೇಕಾಗುತ್ತದೆ. ನಮ್ಮ ಪ್ರಜ್ಞೆಯು ನಮ್ಮ ಜೀವನದ ಕ್ರಮವನ್ನು ನಿರ್ಧಾರ ಮಾಡುತ್ತದೆ. ಎಂದು ಮಾರ್ಕ್ಸವಾದವು ಹೇಳುತ್ತದೆ. ಇಲ್ಲಿ

ಇನ್ನೊಂದು ಸಂಗತಿಯನ್ನು ನಾವು ಹೇಳಬೇಕು: ನಮ್ಮ ಅನೇಕ ಆಲೋಚನೆ ಮತ್ತು ಅನೇಕ ಸಂಗತಿಗಳು ಚರಿತ್ರೆ ಮತ್ತು ಸಾಮಾಜಿಕ ಕಾರಣದಿಂದ ಬರುತ್ತವೆ. ಯಾವುದು ನಮ್ಮ ಆಲೋಚನೆಯು ಆಗುತ್ತದೆಯೋ ಅದು ಬೇರೆ ಬೇರೆ ಉತ್ಪಾದನೆಗಳನ್ನು ಮಾಡುತ್ತವೆ. ದೇವರ ಮತ್ತು ಅವನ ಅಸ್ತಿತ್ವಕ್ಕೆ ಜನರು ಒಂದು ರೂಪವನ್ನು ಕೊಟ್ಟಿದ್ದಾರೆ. ಆದರೆ ಇರುವ ಸಂಗತಿಯೆಂದರೆ ನಾವು ಈಗ ದೇವರನ್ನು ರೂಪಿಸುವುದು ಅಲ್ಲ. ಅದರ ಬದಲಿಗೆ ನಾವು ಈವತ್ತು ಮನುಷ್ಯರಿಗೆ ಒಂದು ಚಹರೆಯನ್ನು ಕೊಡಬೇಕಾಗುತ್ತದೆ. ನಮ್ಮ ಆಲೋಚನೆ, ನಮ್ಮ ಕ್ರಿಯಾಶೀಲತೆ, ನಾವು ಬರೆಯುವ ಚಿತ್ರ, ನಾವು ಬರೆಯುವ ಸಾಹಿತ್ಯ ಮುಂತಾದವುಗಳು ದೈವಿಕ ವಾಸ್ತವದಿಂದ ಮನುಷ್ಯನ ವಾಸ್ತವವು ಅತ್ಯಂತ ಮುಖ್ಯ ಎಂದು ಮಾರ್ಕ್ಸವಾದವು ಹೇಳುತ್ತವೆ. ಜರ್ಮನಿಯ ಒಂದು ತತ್ವಜ್ಞಾನವನ್ನು ಹೇಳಬೇಕೆಂದರೆ ದೇವ ಲೋಕದಿಂದ ಮನುಷ್ಯನ ಲೋಕಕ್ಕೆ ಇಳಿಯುವುದು ಅತ್ಯಂತ ಅಗತ್ಯ. ಮನುಷ್ಯನನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ಅವನ ಕಾರ್ಯವನ್ನು ಮತ್ತೆ ಮತ್ತೆ ಪರಿಶೀಲನೆ ಮಾಡುವುದೂ ಹೌದು. ಇದರ ಭಾವಾರ್ಥವನ್ನು ನಾವು ನೋಡಬೇಕು: ಭ್ರಮೆಯಿಂದ ವಾಸ್ತವದ ಕಡೆಗೆ ಎನ್ನುವುದು ಇಲ್ಲಿ ಮುಖ್ಯವಾದ ಒಂದು ತತ್ವ ಇಂಥ ವಾದವನ್ನು ಮಂಡಿಸುವವರು ವಾಸ್ತವವನ್ನು ಮಾತ್ರವೇ ಗ್ರಹಿಸುತ್ತಾರೆ. ಅವರಿಗೆ ದೈವೀವಾದವು ಬೇಕಾಗುವುದಿಲ್ಲ. ಅದು ಮುಖ್ಯ. ನಮಗೆ ಈಗ ತತ್ವಜ್ಞಾನವನ್ನು ನೋಡಿದರೆ ಒಂದು ಸಂಗತಿಯು ಅರ್ಥವಾಗುತ್ತದೆ. ಮನುಷ್ಯ ಮತ್ತು ಅವನ ಅಸ್ತಿತ್ವವು ಹೇಗೆ ಕಾರಣಗಳಿಂದ ಕೂಡಿರುತ್ತವೆ ಎಂದು ನೋಡಬೇಕಾಗುತ್ತದೆ. ಆದರೆ ವರ್ಗ ಆಳುವ ಆಲೋಚನೆಯ ಕ್ರಮವೂ ಹೌದು. ಅದು ಅನೇಕ ಸಂಪನ್ಮೂಲಗಳನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳುತ್ತದೆ. ಬೂರ್ಜ್ವಾ ಚಿಂತಕರು ಬೂರ್ಜ್ವಾ ಸಮಾಜವನ್ನು ಎತ್ತಿ ಹಿಡಿಯುತ್ತಾರೆ. ಅತ್ಯಂತ ಸಣ್ಣ ಆರ್ಥಿಕ ಚಟುವಟಿಕೆಯು ಸಮಾಜದ ಮೇಲೆ ಪ್ರಭಾವವನ್ನು ಬೀರುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಅತ್ಯಂತ ಸೂಕ್ತ ಎಂದು ಗ್ರಾಂಶಿಯು ಭಾವಿಸುತ್ತಾನೆ. ವಾಸ್ತವವಾಗಿ ಇದು ಸಮಾಜದ ಮೂಲಭೂತವಾದ ಪ್ರಕ್ರಿಯೆ ಕೂಡಾ ಹೌದು. ಮಾರ್ಕ್ಸವಾದದಲ್ಲಿ ಇದು ಅತ್ಯಂತ ಶಕ್ತಿಯುತವಾದ ಒಂದು ಪಾತ್ರವನ್ನು ವಹಿಸುತ್ತದೆ ಎನ್ನುವುದು ನಿಜ. ಮನುಷ್ಯನನ್ನು ಗುಲಾಮನಂತೆ ನಡೆಸಿಕೊಳ್ಳುವುದು ಇದರ ಭಾಗವಾಗಿದೆ. ಇನ್ನೊಂದು ಅಂಶವನ್ನು ನಾವು ಇಲ್ಲಿ ನೋಡಬೇಕು: ಯಾವುದನ್ನು ಉತ್ಪಾದನೆ ಎಂದು ಹೇಳುತ್ತೇವೆಯೋ ಅದು ಸಮಾಜ ಪ್ರಮುಖವಾದ ಒಂದು ಕೇಂದ್ರವೂ ಆಗಿರುವುದರಿಂದ ಅದಕ್ಕೆ ಒಂದು ವಿಶಿಷ್ಟವಾದ ಶಕ್ತಿಯು ಇರುತ್ತದೆ., ಇದು ಸಾಂಸ್ಕೃತಿಕ ಮತ್ತು ರಾಜಕೀಯ ಬದಲಾವಣೆಗೆ ಕಾರಣವಾಗುತ್ತದೆ ಎನ್ನುವುದು ಅವನ ನಿಲುವು. ಗ್ರಾಂಶಿಯು ಹೇಳುತ್ತಿದ್ದ ಮತ್ತೊಂದು ವಾಕ್ಯವನ್ನು ನಾವು ಇಲ್ಲಿ

ಗಮನಿಸಬೇಕು. ಪ್ರತಿಯೊಂದು ಸಮಾಜದಲ್ಲಿಯೂ ಗುಂಪುಗಳು ಇರುತ್ತವೆ. ಅವು ಅಸ್ತಿತ್ವಕ್ಕೆ ಬಂದ ಮೇಲೆ ತಮಗೆ ಬೇಕಾದ್ದನ್ನು ರೂಪಿಸುತ್ತವೆ. ಸಮಾಜವೂ ಒಂದು ಬಗೆಯಲ್ಲಿ ನಿರ್ದಿಷ್ಟವಾದ ಗುಂಪುಗಳು ಆಗಿತುತ್ತವೆ. ಮಾರ್ಕ್ಸವಾದವೂ ಇದನ್ನು ಹೇಳಿತ್ತು. ಹೇಗೆ ಅರ್ಥಶಾಸ್ತ್ರವು ಕೆಲಸವನ್ನು ಮಾಡುತ್ತದೆಯೋ ಅದಕ್ಕೆ ಅನುಗುಣವಾಗಿ ಗುಂಪುಗಳು ಆಗುತ್ತವೆ. ಆದ್ದರಿಂದ ಇದನ್ನು ಇಟ್ಟುಕೊಂಡು ನಾವು ಅನೇಕವನ್ನು ಚರ್ಚೆ ಮಾಡಬೇಕಾದ ಅಗತ್ಯವಾಗಿರುತ್ತದೆ. ಇದನ್ನು ನಾವು ಅನೇಕ ದೇಶಗಳಲ್ಲಿ ಕಾಣುತ್ತೇವೆ.

ಬುದ್ಧಿಜೀವಿಗಳು ಮತ್ತು ಅವರ ಚಹರೆಗಳು

ಒಂದು ಸಮಾಜದ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವಾಗ ನಾವು ಬುದ್ಧಿಜೀವಿಗಳು ಮತ್ತು ಅವರ ಪಾತ್ರವನ್ನೂ ಗಮನಿಸಬೇಕಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ಚರಿತ್ರೆಯಲ್ಲಿ ಅವರದೂ ಒಂದು ಪಾತ್ರವಿದೆ. ಇಲ್ಲಿ ಎರಡು ಸಂಗತಿಗಳನ್ನು ನಾವು ಗಮನಿಸಬೇಕು: ಮೊದಲನೆಯದಾಗಿ ಈ ಗುಂಪು ಅತ್ಯಂತ ಸಹಜವಾಗಿ ರೂಪುಗೊಳ್ಳುತ್ತದೆ. ಅವರದೂ ಒಂದು ಪಾತ್ರವಿದೆ. ಅವರಿಗೂ ಒಂದು ಸಮಾಜದಲ್ಲಿ ಪಾತ್ರವಿದೆ. ಒಂದು ಸಾಮಾಜಿಕ ಗುಂಪು ಎಂದು ಹೇಳುವಾಗ ಅವನು ಉತ್ಪಾದನೆ ಮತ್ತು ಅದರ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಗುಂಪು ಎಂದು ಹೇಳುತ್ತಾನೆ. ಹಾಗೆ ನೋಡಿದರೆ ಆಧುನಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಬುದ್ಧಿಜೀವಿಗಳು ಮತ್ತು ಅವರ ಕ್ರಿಯಾಶೀಲತೆಯು ಅತ್ಯಂತ ಮುಖ್ಯವಾಗಿದೆ. ಬುದ್ಧಿಜೀವಿಗಳು ಮತ್ತು ಅವರ ತಜ್ಞತೆಯು ಒಂದು ಥರ ಇರುತ್ತದೆ. ಆದರೆ ತಳಮಟ್ಟದಲ್ಲಿ ಇರುವ ಜನರು ಬೇರೆ ಬಗೆಯ ಅನುಭವವನ್ನು ಹೊಂದಿರುತ್ತಾರೆ. ಯಾರು ವಿಶೇಷವಾದ ಒಂದು ತಜ್ಞತೆಯನ್ನು ಹೊಂದಿರುತ್ತಾರೆಯೋ ಅವರು ಬರೀ ತಾಂತ್ರಿಕವಾದ ಕುಶಲ ಕರ್ಮಿಗಳು ಆಗಿರುವುದಿಲ್ಲ..ಅವರು ಮತ್ತೊಂದು ಬಗೆಯ ಸಾಮಾಜಿಕ ಸಂಬಂಧವನ್ನು ಹೊಂದಿರುತ್ತಾರೆ. ಇದರಿಂದ ಯಾರು ಬಂಡವಾಳವನ್ನು ಹೂಡಿರುತ್ತಾರೆಯೋ ಅವರ ಪರವಾಗಿ ಈ ಬಗೆಯ ಬುದ್ಧಿಜೀವಿಗಳು ಕೆಲಸವನ್ನು ಮಾಡುತ್ತದೆ. ಯಜಮಾನ ಮತ್ತು ಅವನ ನಂಬಿಕೆಗೆ ಸರಿಯಾಗಿ ಈ ಗುಂಪು ಕೆಲಸವನ್ನು ಮಾಡುವುದು ಸತ್ಯವಾಗಿದೆ. ಒಂದು ಹಂತದಲ್ಲಿ ಇವರು ಪ್ರಭುತ್ವದ ಪರವಾದ ಕೆಲಸವನ್ನೂ ಮಾಡುತ್ತಾರೆ. ಆದರೆ ಇದು ಅವರಿಗೆ ಅರ್ಥವಾಗದೆ ಹೋಗಬಹುದು. ಯಾರು ಈ ಕೆಲಸಗಳನ್ನು ಮಾಡುತ್ತಾರೆಯೋ ಅವರು ಒಂದು ಹಂತದಲ್ಲಿ ಕೆಲವು ವಿಷಯಗಳಲ್ಲಿ ಮಾತ್ರವೇ ಪರಿಣಿತಿಯನ್ನು ಹೊಂದಿರುತ್ತಾರೆ. ಆಗ ಅವರು ನಿರ್ದಿಷ್ಟವಾದ ಸಂಗತಿಗಳಿಗೆ ಮಾತ್ರವೇ ಬದ್ಧರಾಗಿರುತ್ತಾರೆ. ಬುದ್ಧಿಜೀವಿಗಳು

ಒಂದು ಸಮಾಜದಲ್ಲಿ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ಗ್ರಾಂಶಿಯಲ್ಲಿ ಇದು ವಿಶಿಷ್ಟವಾದ ಚರ್ಚೆಯಾಗಿದೆ ಎಂದು ಈ ಮೊದಲು ಹೇಳಲಾಗಿದೆ. ಅವರ ಅರಿವು ಅತ್ಯಂತ ಮುಖ್ಯ. ಅವರಿಗೆ ರಾಜಕೀಯವಾದ ಒಂದು ನಿಲುವು ಇರುತ್ತದೆ. ಅವರ ತಿಳುವಳಿಕೆಯು ಒಂದು ಸಿದ್ಧಾಂತವನ್ನು ಕಟ್ಟುತ್ತದೆ. ಅದು ಸಮಾಜ ಮತ್ತು ರಾಜಕೀಯವಾದ ಅರಿವೂ ಹೌದು. ಆಧುನಿಕ ಸಮಾಜದಲ್ಲಿ ತಾಂತ್ರಿಕ ಶಿಕ್ಷಣವು ಹೇಗೆ ಇರುತ್ತದೆ ಮತ್ತು ಅದರ ಪರಿಣಾಮವು ಏನು ಎಂದು ಅವನು ವಿವರಿಸುತ್ತಾನೆ. ಆದರೆ ಇವರು ಆಧುನಿಕ ಶಿಕ್ಷಣವನ್ನು ಪಡೆಯುವ ಮೂಲಕ ಆಧುನಿಕ ಬಂಡವಾಳವಾದಕ್ಕೆ , ಕೈಗಾರಿಕೆಗಳಿಗೆ ಬೇಕಾದ ಆವಶ್ಯಕತೆಯನ್ನು ಪೂರೈಸುತ್ತಾರೆ. ತಾಂತ್ರಿಕವಾದ ಜ್ಞಾನವು ಒಂದು ಬಗೆಯಲ್ಲಿ ಇದ್ದರೆ ವೈದ್ಯಕೀಯ ಜ್ಞಾನವು ಮತ್ತೊಂದು ಬಗೆಯಲ್ಲಿ ಇರುತ್ತದೆ. ಇದು ನೇರವಾಗಿ ಇರುವ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಯತ್ನವನ್ನು ಮಾಡುತ್ತದೆ. ಬೌದ್ಧಿಕವಾದ ಜಗತ್ತು ಬದಲಾಗುತ್ತದೆ. ಅದನ್ನು ಹೊಸ ರೂಪದ ಜ್ಞಾನ ಮಾದರಿಗಳು ಎಂದು ಹೇಳಬೇಕಾಗುತ್ತದೆ. ಇದು ಅರ್ಥಶಾಸ್ತ್ರದ ಹೊಸದಾದ ಪರಿಭಾಷೆಯೂ ಹೌದು.

ಸಾಂಪ್ರದಾಯಿಕ ಜ್ಞಾನಿಗಳು

ಸಂಪ್ರದಾಯವು ಕೆಲವು ಮಾದರಿಗಳನ್ನು ಸೃಷ್ಟಿಸುತ್ತದೆ. ಅದರಲ್ಲಿ ಜ್ಞಾನವೂ ಒಂದು. ಆಧುನಿಕ ಜ್ಞಾನದ ಮಾದರಿಯಲ್ಲಿ ಅದು ಇರುವುದಿಲ್ಲ.

ಆಧುನಿಕ ಮತ್ತು ಸಾಂಪ್ರದಾಯಿಕ ಜ್ಞಾನಗಳ ರೂಪಕ್ಕೆ ಭಿನ್ನತೆಗಳು ಇವೆ. ಈಗ ಜ್ಞಾನಕ್ಕೆ ಮತ್ತು ಉದ್ಯೋಗಕ್ಕೆ ಒಂದು ಸಂಬಂಧವು ಇದೆ. ವಿದ್ಯಾಭ್ಯಾಸ ಮತ್ತು ಉದ್ಯೋಗ ಎನ್ನುವುದರ ಸಂಬಂಧ ಈವತ್ತು ಬೇರೆ ಬೇರೆ ವಲಯವನ್ನು ಸೃಷ್ಟಿ ಮಾಡಿದೆ ಎಂದು ಗ್ರಾಂಶಿಯು ಭಾವಿಸುತ್ತಾನೆ. ಆಧುನಿಕ ಶಿಕ್ಷಣವು ಹಳೆಯ ಜ್ಞಾನವನ್ನು ನಿರಾಕರಿಸುತ್ತದೆ ಎನ್ನುವುದೂ ಅವನ ನಿಲುವು. ಸಂಪ್ರದಾಯ ಮತ್ತು ಆಧುನಿಕ ಎನ್ನುವುದಕ್ಕೆ ಅತ್ಯಂತ ವಿಶಾಲವಾದ ವ್ಯಾಪ್ತಿಯೂ ಇದೆ. ಇದು ಸಾಂಸ್ಕೃತಿಕ ಉತ್ಪಾದನೆಯ ಮೇಲೆಯು ಪರಿಣಾಮವನ್ನು ಬೀರುತ್ತದೆ. ಹಾಗೆ ನೋಡಿದರೆ ಜ್ಞಾನವು ಒಂದು ಬಗೆಯದೇ ಆಗಿರುವುದು ಇಲ್ಲ. ಜ್ಞಾನ ಎನ್ನುವುದು ನಮಗೆ ಮತ್ತೆ ಇನ್ನೊಂದು ಸಂಗತಿಯನ್ನು ಹೇಳುತ್ತದೆ. ಪರಂಪರೆಯಲ್ಲಿ ಬರುವ ಜ್ಞಾನವನ್ನು ಲಿಖಿತವಾದ ರೂಪದಲ್ಲಿ ಕಾಣುವುದು ಸಾಧ್ಯವಿಲ್ಲ. ಸೊರೆ ಕಾಯಿಯನ್ನು ಬೆಳೆಯುವುದು ಹೇಗೆ ಎನ್ನುವುದನ್ನು ಹಿಂದಿನವರು ಮಾತಿನಲ್ಲಿ ಹೇಳುತ್ತಿದ್ದರು ಆದರೆ ಇವು ಬರಹದಲ್ಲಿ ಇಲ್ಲ. ಹಾಗೆಂದು ಅದು ಜ್ಞಾನವೇ ಅಲ್ಲ ಎಂದು ಹೇಳುವಂತೆ ಇಲ್ಲ. ಆದ್ದರಿಂದ ನಾವು ಇದಕ್ಕೆ ಹೆಚ್ಚು ಮಹತ್ವವನ್ನು

ಕೊಡಬೇಕಾಗುತ್ತದೆ. ಒಂದು ಸಮಾಜದಲ್ಲಿ ಪಾರಂಪರಿಕವಾದ ಜ್ಞಾನ ಮತ್ತು ಆಧುನಿಕ ಜ್ಞಾನಗಳು ಹೇಗೆ ಬರುತ್ತವೆ ಎನ್ನುವುದು ಗ್ರಾಂಶಿಗೆ ಅತ್ಯಂತ ಮುಖ್ಯ.

ಕ್ರಾಂತಿ ಮತ್ತು ಜಡತೆ

ಇದನ್ನು ಗ್ರಾಂಶಿಯು ಹೇಳುವಾಗ ಅವನ ಮನಸ್ಸಿನಲ್ಲಿ ಕ್ರಾಂತಿ ಮತ್ತು ಅದರ ಅಪಕಲ್ಪನೆಯು ಸೇರಿಕೊಂಡಂತೆ ಭಾಸವಾಗುತ್ತದೆ. ಆಧುನಿಕ ಬಂಡವಾಳವು ಈವತ್ತು ಕ್ರಾಂತಿಯಾಗದ ಆಗದ ಹಾಗೆ ನೋಡುತ್ತದೆ. ಆದರೆ ಇದು ಸಮಾಜ ಮತ್ತು ಅದರ ರೂಪೀಕರಣವನ್ನು ಹೇಳುತ್ತದೆ. ಅಂತರ್ರಾಷ್ಟ್ರೀಯ ಸಾಮಾಜಿಕ ಸಿದ್ಧಾಂತ ಮತ್ತು ಅದರ ಸ್ವರೂಪವನ್ನು ಹೇಳುವಾಗ ಗ್ರಾಂಶಿಯು ನಿಷ್ಕ್ರಿಯವಾದ ಕ್ರಾಂತಿಯನ್ನು ಹೇಳುತ್ತಾನೆ. ಇದರಲ್ಲಿ ರಾಜಕೀಯ ಒತ್ತಡವೂ ಇದೆ ಎನ್ನುವುದು ಅವನ ಅಭಿಪ್ರಾಯ.

ತಾತ್ವಿಕತೆ

ಸಮಾಜ ಮತ್ತು ಅದರ ಅಧ್ಯಯನಕ್ಕೆ ನಮಗೆ ಗ್ರಾಂಶಿಯ ನಿಲುವುಗಳು ಉಪಯುಕ್ತವಾಗುತ್ತದೆ. ಸಮಾಜ ಮತ್ತು ಅದರ ಕುರಿತಾದ ಚಿಂತನೆಗೆ ನಮಗೆ ಹೆಚ್ಚು ಅನುಕೂಲವನ್ನು ಒದಗಿಸುವುದು ತಾತ್ವಿಕತೆಯೇ. ಯಾವುದು ನಮ್ಮ ಸಾಮಾಜಿಕ ಜ್ಞಾನವು ಆಗಿದೆಯೋ ಅದರ ಮೂಲವು ಇರುವುದು ತಾತ್ವಿಕ ಗ್ರಹಿಕೆಯಲ್ಲಿ ಎನ್ನುವುದು ಸ್ಪಷ್ಟ. ತತ್ವಜ್ಞಾನದಲ್ಲಿಯೂ ಅತ್ಯಂತ ಮುಖ್ಯವಾಗಿರುವುದು ತಾತ್ವಿಕತೆ. ತಾತ್ವಿಕತೆಯೆನ್ನುವುದು ನಮಗೆ ಸಮಾಜದ ಜೊತೆಗೆ ಸಂಬಂಧವನ್ನು ಬೆಳೆಸಲು ಅವಕಾಶವನ್ನು ಮಾಡಿಕೊಡುತ್ತವೆ. ಅದನ್ನು ನಾವು ವಸ್ತುನಿಷ್ಟವಾಗಿಯೂ ನೋಡಬೇಕಾಗುತ್ತದೆ. ತಾತ್ವಿಕತೆ ಎನ್ನುವುದು ನಮಗೆ ಅತ್ಯಂತ ಮಹತ್ವದ್ದು. ಅದನ್ನು ಒಂದು ಪರಿಕರವಾಗಿಯೂ ಬಳಸಬೇಕಾಗುತ್ತದೆ. ತಾತ್ವಿಕತೆಯ ರೂಪಗಳು ಮತ್ತು ಸಾಮಾಜಿಕ ರಚನೆಗಳು ಹಾಗೂ ಆರ್ಥಿಕತೆಗಳ ನಡುವೆ ಸಂಬಂಧವನ್ನು ಬೆಸೆಯುವುದು ತಾತ್ವಿಕತೆ. ಆದ್ದರಿಂದ ತಾತ್ವಿಕತೆ ಎನ್ನುವುದು ನಮಗೆ ಒಂದು ಅರ್ಥದಲ್ಲಿ ಒಂದು ಸೇತುವೆಯಂತೆ ಕೆಲಸವನ್ನು ಮಾಡುತ್ತದೆ. ಆದರಲ್ಲಿಯೂ ನಮಗೆ ಮಾರ್ಕ್ಸವಾದಿ ಅಧ್ಯಯನ ಕ್ರಮವು ನಮಗೆ ತಾತ್ವಿಕತೆಯು ಕುರಿತು ಮುಖ್ಯವಾದ ನಿಲುವನ್ನು ವ್ಯಕ್ತ ಮಾಡಿದೆ. ಅಲ್ತೂಸರ್ ತಾತ್ವಿಕತೆಯನ್ನು ಸಮಾಜ ಮತ್ತು ಅದರ ಸಮಗ್ರತೆಯ ಭಾಗವಾಗಿ ಇರುತ್ತದೆ. ಅದು ವಿಷಯ ನಿಷ್ಟವಲ್ಲ ಎಂದು ಹೇಳುತ್ತಾನೆ. ಆದರೆ ಗ್ರಾಂಶಿಯು ತಾತ್ವಿಕತೆ ಮತ್ತು ಅದರ ಸ್ವರೂಪವನ್ನು ವಿವರಿಸುವಾಗ ಅದನ್ನು ಸಮಾಜದ ಭಾಗವಾಗಿಯೂ ನೋಡುತ್ತಾನೆ. ಸಮಾಜ ಮತ್ತು ಅದರ ಸಮಗ್ರತೆಯು ಹೇಗೆ ಒಂದು ತಾತ್ವಿಕತೆಯನ್ನು ರೂಪಿಸುತ್ತದೆ

ಎನ್ನುವುದು ಅವನ ಚರ್ಚೆಯ ಕೇಂದ್ರವೂ ಆಗಿದೆ. ಗ್ರಾಂಶಿಯು ಚರಿತ್ರೆ ಮತ್ತು ಅದರ ಬ್ಲಾಕ್ ಹೇಗೆ ತಾತ್ವಿಕತೆಯನ್ನು ನಿರ್ವಹಿಸುತ್ತದೆ ಎಂದೂ ವಿವರಿಸುತ್ತಾನೆ. ಚರಿತ್ರೆಯು ಅನೇಕವನ್ನು ರೂಪಿಸುತ್ತದೆ. ಚರಿತ್ರೆಯು ರೂಪವಾಗುತ್ತದೆ. ಆದರೆ ಅದರ ಸ್ವರೂಪವು ಆಗಾಗ ತನ್ನ ಚಹರೆಯನ್ನು ಬದಲಿಸುತ್ತದೆ. ಆದರೆ ತಾತ್ವಿಕತೆಯನ್ನು ಕುರಿತು ವಿವರಿಸುವಾಗ ಸಾಮಾನ್ಯ ಜ್ಞಾನ ಮತ್ತು ಅದರ ಸ್ವರೂಪವನ್ನು ಒಂದು ಹರಡಿಕೊಂಡ ಕ್ರಮವಾಗಿ ನೋಡುತ್ತಾನೆ. ಚರಿತ್ರೆಯು ಯಾವುದನ್ನು ರೂಪಿಸುತ್ತದೆ ಅದನ್ನು ಗ್ರಾಂಶಿಯು ಅತ್ಯಂತ ಮುಖ್ಯವಾದ್ದು ಎಂದು ಭಾವಿಸುತ್ತಾನೆ. ನಮಗೆ ಇರುವ ಜ್ಞಾನ ಮತ್ತು ಅದರ ರೂಪಗಳು ಹೇಗೆ ನಮಗೆ ಸಮಾಜವನ್ನು ನೋಡಲು ಸಹಾಯವನ್ನು ಮಾಡುತ್ತದೆ ಎಂದು ಹೇಳುತ್ತಾನೆ. ಒಂದು ಸಮಾಜ ಮತ್ತು ಅದರ ರಚನೆಗಳು ಯಾವ ರೀತಿಯಲ್ಲಿ ಇರುತ್ತದೆಯೋ ಅದರ ಸ್ವರೂಪಕ್ಕೆ ಅನುಸಾರವಾಗಿ ಭಿನ್ನವಾದ ಜ್ಞಾನಗಳು ರೂಪಿಸಲ್ಪಡುತ್ತವೆ. ಜ್ಞಾನ ಎನ್ನುವುದು ಈ ಅರ್ಥದಲ್ಲಿ ನಮಗೆ ಒಂದು ನಿರ್ದಿಷ್ಟವಾದ ಚೌಕಟ್ಟು ಕೂಡಾ ಆಗಿದೆ. 1930ರಲ್ಲಿ ಗ್ರಾಂಶಿಯು ಬರೆದುದು ಅನಂತರ ಬೇರೆ ಬೇರೆ ತಾತ್ವಿಕ ನೆಲೆಯನ್ನು ಪಡೆದುಕೊಂಡಿರುವುದು ನಿಜ.

ತಾತ್ವಿಕತೆಯನ್ನು ಗ್ರಾಂಶಿಯು ಅತ್ಯಂತ ವಿಶಿಷ್ಟವಾಗಿ ಹೇಳಿದ್ದಾನೆ. ಸಂವೇದನೆ ಮತ್ತು ತಾತ್ವಿಕತೆಗೆ ಸಂಬಂಧವು ಇದೆ ಎನ್ನುವುದು ಅವನ ಮೊದಲ ವಾದ. ಹಾಗೆ ನೋಡಿದರೆ ನಾವು ಮತ್ತೆ ಮತ್ತೆ ನೆನಪು ಮಾಡಿಕೊಳ್ಳಬೇಕಾದ ಲೇಖಕರಲ್ಲಿ ಗ್ರಾಂಶಿಯು ಒಬ್ಬ. ಅವನು ತನ್ನ ನೋಟ್ ಬುಕ್‌ನಲ್ಲಿ ತಾನು ಹೇಗೆ ಫ್ರೆಂಚ್‌ನ ಹದಿನೆಂಟನೆಯ ಶತಮಾನದ ಭೌತಿಕವಾದದ ಪ್ರಭಾವವನ್ನು ಅವನು ಒಪ್ಪಿಕೊಂಡಿದ್ದೇನೆ ಎಂದು ಹೇಳಿದ್ದಾನೆ. ಪ್ರೆಂಚ್ ಭೌತಿಕವಾದಿ ನಿಲುವು ಬರೀ ಭೌತಿಕವಾದಿ ನಿಲುವು ಮಾತ್ರವೇ ಅಲ್ಲ. ಅದರಲ್ಲಿ ಮುಖ್ಯವಾಗಿ ವಿಜ್ಞಾನದ ಪ್ರಭಾವವನ್ನು ನಾವು ಕಾಣುತ್ತೇವೆ. ಅದರ ವಿಶ್ಲೇಷಣೆಯ ಕ್ರಮವು ಆನ್ವಯಿಕ ವಿಜ್ಞಾನವೂ ಆಗಿದೆ. ಅಂದರೆ ಅದು ಆಲೋಚನೆ ಮತ್ತು ಅದರ ಹಿಂದೆ ಇರುವ ತರ್ಕವನ್ನು ಗ್ರಹಿಸಬೇಕು. ಗ್ರಾಂಶಿಯು ನಮಗೆ ಆಲೋಚನೆಯ ವಿಶ್ಲೇಷಣೆ ಎಂದು ತಿಳಿಸುತ್ತಾನೆ. ಮೂಲ ಆಲೋಚನೆ ಮತ್ತು ಅದರ ಹುಡುಕಾಟವನ್ನು ಅವನು ಮುಖ್ಯವೆಂದು ಪರಿಗಣಿಸುತ್ತಾನೆ. ಆಲೋಚನೆ ಮತ್ತು ಅದರ ಅಂಶಗಳು ನಮ್ಮ ಸಂವೇದನೆಯನ್ನು ಬಿಟ್ಟು ಇರುವುದೂ ಇಲ್ಲ. ಅಂದರೆ ಅವನು ಹೇಳುವುದು ಸಂವೇದನೆಗೂ ಆಲೋಚನೆಗೂ ತಾತ್ವಿಕತೆಗೂ ಒಂದು ಸಂಬಂಧವು ಇದೆ. ವಾಸ್ತವವಾಗಿ ಟ್ರೆಸಿಯು ಹೇಳುವ ಮಾತನ್ನು ಇಲ್ಲಿ ಉಲ್ಲೇಖಿಸಬೇಕು: ರಾಜಕೀಯವಾಗಿ ನಮಗೆ ತಾತ್ವಿಕತೆ ಎನ್ನುವುದು ಅತ್ಯಂತ ಮುಖ್ಯವಾಗಿದೆ.

ರಾಜಕೀಯ ಮತ್ತು ಸಾಮಾಜಿಕವಾದ ಕಾರಣದಿಂದ ತಾತ್ವಿಕ ದೃಷ್ಟಿಯನ್ನು ಹೊಂದುತ್ತೇವೆ. ಅದರ ಹೊರತು ನಾವು ಸಮಾಜವನ್ನು ವೈಜ್ಞಾನಿಕವಾಗಿ ವಿಶ್ಲೇಷಣೆಯನ್ನು ಮಾಡಲಾರೆವು. ವಿಜ್ಞಾನವು ನಮಗೆ ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಪಲ್ಲಟಕ್ಕೆ ಕಾರಣವೂ ಆಯಿತು. ವಿಜ್ಞಾನವು ನಮಗೆ ಹೊಸದಾದ ಅವಕಾಶವನ್ನು ಕಲ್ಪಿಸಿತು. ಅದರಿಂದ ನಾವು ಹೊಸದಾದ ಪ್ರಶ್ನೆಗಳನ್ನು ಕೇಳಿದೆವು. ಮನುಷ್ಯನು ಸ್ವತಂತ್ರನೇ?ಹೌದು ಎಂದಾದರೆ ಎಷ್ಟರಮಟ್ಟಿಗೆ ಅವನು ಸ್ವತಂತ್ರನಾಗಿದ್ದಾನೆ? ಮನುಷ್ಯನು ಹೇಗೆ ಆಲೋಚನೆಯನ್ನು ಮಾಡುತ್ತಾನೆ ಮತ್ತು ಅದರ ಕಾರಣವು ಏನು ಎನ್ನುವುದನ್ನು ವಿಜ್ಞಾನವು ನಮಗೆ ತಿಳಿಸಿಕೊಟ್ಟಿತು. ವಿಜ್ಞಾನವು ನಮಗೆ ಹೊಸದಾದ ಸನ್ನಿವೇಶವನ್ನು ಸೃಷ್ಟಿಸಿಕೊಟ್ಟಿತು. ಸಮಾಜದಲ್ಲಿ ಸಾಂಪ್ರದಾಯಿಕ ಜನರಿಗೆ ಇದ್ದ ಅವಕಾಶಕ್ಕಿಂತ ಹೆಚ್ಚಿನ ಅವಕಾಶವನ್ನು ನಮಗೆ ಅದು ಕೊಟ್ಟಿತು. ಅವರಿಗೆ ಇದ್ದ ಶಕ್ತಿಯು ಒಂದು ಬಗೆಯದು. ಆದರೆ ನವೀನ ಮನುಷ್ಯರಿಗೆ ಹೆಚ್ಚು ಅವಕಾಶವು ಸಿಕ್ಕಿತು. ತಂತ್ರಜ್ಞಾನವು ಸಿಕ್ಕಿತು. ವಿಜ್ಞಾನದಿಂದ ನಮಗೆ ಹೊಸದಾದ ಆಲೋಚನೆಯು ದೊರೆಯಿತು. ವಿಜ್ಞಾನವನ್ನು ಜನರು ಹೇಗೆ ಬಳಸಿಕೊಳ್ಳುತ್ತಾರೆ ಎನ್ನುವುದು ಬೇರೆ ಪ್ರಶ್ನೆ. ವಿಜ್ಞಾನವನ್ನು ಮತ್ತುಅದರ ಪರಿಣಾಮವನ್ನು ಮೊದಲೇ ಊಹಿಸುವುದು ಅಶಕ್ಯವಾಗಿತ್ತು. ಗ್ರಾಂಶಿಯು ಈ ಪಲ್ಲಟವನ್ನು ಗಮನಿಸದ್ದ. ಚರಿತ್ರೆಯು ಹೇಗೆ ಬದಲಾಗುತ್ತದೆ ಎನ್ನುವುದು ಅವನಿಗೆ ಗೊತ್ತಾಗಿತ್ತು. ವಿಜ್ಞಾನವು ಹೇಗೆ ನಮ್ಮ ಆಲೋಚನೆಯನ್ನು ಬದಲಿಸುತ್ತದೆ ಮತ್ತು ಅದರ ಮೂಲಕ ಹೇಗೆ ಒಂದು ತಾತ್ವಿಕತೆಯನ್ನು ಹುಟ್ಟು ಹಾಕುತ್ತದೆ ಎಂದು ಗ್ರಾಂಶಿಯು ಗ್ರಹಿಸಿದ್ದರಿಂದಲೇ ಅವನು ತಾತ್ವಿಕತೆಯನ್ನು ಒಂದು ಸ್ಥಳ ಮತ್ತು ಕಾಲದ ಆಧಾರದ ಮೂಲಕವೇ ಗ್ರಹಿಸುತ್ತಾನೆ. ಚರಿತ್ರೆ ಮತ್ತು ತಾತ್ವಿಕತೆಯು ಹೇಗೆ ಜೊತೆಯಲ್ಲಿ ಹೋಗುತ್ತವೆ ಎನ್ನುವುದು ಅವನಿಗೆ ಮುಖ್ಯವಾಗುತ್ತದೆ. ಚರಿತ್ರೆಯಲ್ಲಿ ತಾತ್ವಿಕತೆಯು ತರ್ಕ ರಹಿತವಾದ್ದು ಎಂದು ಹೇಳಲು ಬರುವುದಿಲ್ಲ. ಅದರ ರೂಪವು ಆಗುತ್ತದೆ. ಅಂದರೆ ಅದು ಏಕಾ ಏಕಿ ನಿರ್ಧಾರವಾಗುವ ಸಂದರ್ಭವಲ್ಲ. ಅದು ಚಲನೆ. ಅದಕ್ಕೆ ಒಂದು ಪ್ರತ್ಯೇಕವಾದ ಒಂದು ನಿರ್ದಿಷ್ಟವಾದ ಗುಣವು ಇರುತ್ತದೆ ಎಂದು ಹೇಳುವುದು ಅಸಾಧ್ಯ. ಅದಕ್ಕೆ ಅದರದೇ ಆದ ಒಂದು ಸಾಮಾಜಿಕ ಮತ್ತು ರಾಜಕೀಯವಾದ ಸಂಬಂಧವೂ ಇರುತ್ತದೆ. ಈ ದೃಷ್ಟಿಯಿಂದ ಭೌತವಾದಿ ಚಿಂತನೆಯು ತಾತ್ವಿಕತೆಗೆ ಅತ್ಯಂತ ಮಹತ್ವದ ಕೊಡುಗೆಯನ್ನು ಕೊಟ್ಟಿದೆ. ಅದನ್ನು ರಾಜಕಾರಣವೆಂಬ ಮೇಲುರಚನೆಯ ಜೊತೆಗೆ ನಾವು ನೋಡಬೇಕಾಗುತ್ತದೆ. ಪ್ರಿಸನ್ ನೋಟ್ಬುಕ್ ಕೃತಿಯಲ್ಲಿ ಗ್ರಾಂಶಿಯು ನಮಗೆ ಈ ದೃಷ್ಟಿಯಿಂದ ಕೆಲವು ಒಳನೋಟವನ್ನು ಕೊಡುತ್ತಾನೆ. ರಾಜಕಾರಣ ಮತ್ತು ಚರಿತ್ರೆ ಎರಡೂ ಅವನಿಗೆ ಅತ್ಯಂತ ಅಗತ್ಯ. ಆದರೆ ಅದಕ್ಕೆ ಒಂದು ನಿಯಮವು

ಇರುತ್ತದೆ. ವಿಜ್ಞಾನದಲ್ಲಿ ಆಲೋಚನೆ ಮತ್ತು ಅದರ ಸ್ವರೂಪವು ಒಂದು ಥರ ಇರುತ್ತದೆ. ವಿಜ್ಞಾನದ ಪ್ರಕಾರ ಆಲೋಚನೆ ಮತ್ತು ಅದರ ಚಹರೆಗಳು ಒಂದು ಬಗೆಯವು. ಆದರೆ ಅದನ್ನೇ ನಾವು ಮಾನವಿಕಗಳಲ್ಲಿ ಆಲೋಚನೆ ಎಂದು ಹೇಳುವಾಗ ಬೇರೆ ಥರ ಹೇಳುತ್ತೇವೆ. ಇದನ್ನು ಹೀಗೆಯೂ ಹೇಳಬಹುದು: ಒಬ್ಬ ವ್ಯಕ್ತಿಯು ಹೇಗೆ ತನ್ನ ಆಲೋಚನೆಯನ್ನು ವ್ಯಕ್ತಮಾಡುತ್ತಾನೆಯೋ ಅದು ತಾತ್ವಿಕ ರೂಪವನ್ನು ಪಡೆಯುತ್ತದೆ. ಮೊದಲು ಚರಿತ್ರೆಯಲ್ಲಿ ತಾತ್ವಿಕತೆಯು ಹೇಗೆ ಭೌತಿಕವಾದ ರೂಪವನ್ನು ಹೊಂದಿದ್ದವೋ ಅದು ಅನಂತರ ರಾಜಕೀಯ ಮತ್ತು ಸಾಂಸ್ಕೃತಿಕವಾದ ಅರ್ಥವನ್ನು ಪಡೆದುಕೊಂಡಿತು. ತಾತ್ವಿಕತೆ ಎನ್ನುವುದು ಒಂದು ಪರಿಕಲ್ಪನೆಯು ಆಗಿದೆ. ಅದೇ ಹೊತ್ತಿಗೆ ಅದು ಸೈದ್ಧಾಂತಿಕವೂ ಆಗಿದೆ. ಆದ್ದರಿಂದ ಗ್ರಾಂಶಿಯಲ್ಲಿ ತಾತ್ವಿಕತೆಯೆ ಭಿನ್ನವಾದ ಚರ್ಚೆಯನ್ನು ಒಳಗೊಳ್ಳುತ್ತದೆ. ತಾತ್ವಿಕತೆಗೆ ಒಂದು ನಿಜವಾದ ಪದವೆಂದರೆ ನಿಯಮಬದ್ಧವಾದ ನಿರೂಪಣೆ. ಅದನ್ನು ಅಶಾಸ್ತ್ರ ಮಾಡಬೇಕಾದ ಅಗತ್ಯವು ಇಲ್ಲ. ಅದಕ್ಕೆ ಒಂದು ಕ್ರಿಯಾತ್ಮಕವಾದ ರೂಪವೂ ಇದೆ ಎಂದು ಗ್ರಾಂಶಿಯು ನಂಬುತ್ತಾನೆ. ಸಮಾಜ ಮತ್ತು ಅದರ ಅತ್ಯಂತ ಸಂಕೀರ್ಣವಾದ ರೂಪವು ತಾತ್ವಿಕತೆಯು ಆಗುತ್ತದೆ ಎಂದು ಅವನು ಹೇಳುತ್ತಾನೆ. ಹಾಗೆಂದು ತಾತ್ವಿಕತೆಯು ಯಾವತ್ತೂ ಕ್ರಿಯಾರಹಿತವಾಗಿರುವುದೂ ಇಲ್ಲ. ಅದು ನಮ್ಮ ನಮ್ಮ ಮನೋಸ್ಥಿತಿಯನ್ನು ಹೇಳುತ್ತದೆ. ಒಬ್ಬ ಸಾಮಾನ್ಯ ವ್ಯಕ್ತಿಯು ತಾನು ಯಾವುದನ್ನು ಮಾಡುತ್ತಿದ್ದೇನೆ ಎಂದು ತಿಳಿದಿರುತ್ತಾನೆ. ಆದರೆ ಅವನಿಗೆ ಸೈದ್ಧಾಂತಿಕವಾದ ಅರಿವಿರಬೇಕು ಎಂದೇನೂ ಇಲ್ಲ. ಅವನು ಕೆಲಸವನ್ನು ಮಾಡುತ್ತಾನೆ. ಅವನು ತನ್ನ ಕೆಲಸವನ್ನು ಮಾಡುವ ಅರಿವನ್ನು ಹೊಂದುತ್ತಾನೆ ಎನ್ನುವುದು ಒಂದು ಅಂಶವಾದರೆ ಮತ್ತೊಂದು ಕಡೆಯಿಂದ ಅವನು ತಾನು ಮಾಡುವ ಕೆಲಸ ಮತ್ತು ಅದರ ಮೂಲಕ ಪರಿವರ್ತನೆ ಮಾಡುವುದನ್ನು ಅರ್ಥಮಾಡಿಕೊಳ್ಳುತ್ತಾನೆ. ಗ್ರಾಂಶಿಯು ಒಂದು ಕಡೆಗೆ ತತ್ವಜ್ಞಾನದ ಜಾನಪದ ಎಂದು ಹೇಳುತ್ತಾನೆ. ಅದು ಸಾಮಾಜಿಕವಾಗಿ ಅತ್ಯಂತ ಮಹತ್ವದ್ದೂ ಆಗಿದೆ. ನೈತಿಕತೆ, ಧರ್ಮ, ಆಧ್ಯಾತ್ಮ ಎಲ್ಲವೂ ನಮ್ಮ ಪ್ರಜ್ಞೆಯನ್ನು ರೂಪಿಸುತ್ತವೆ ಎಂದು ಮಾರ್ಕ್ಸ್ ಹೇಳುತ್ತಾನೆ. ಇದನ್ನು ಇಲ್ಲಿ ಯಾಕೆ ಹೇಳಲಾಯಿತು ಎಂದರೆ ನಮ್ಮ ಆಧುನಿಕತೆಯ ಪರಿಸ್ಥಿತಿಯನ್ನು ನಾವು ನಮ್ಮದೇ ತಾತ್ವಿಕತೆ ಮೂಲಕವೇ ಅರ್ಥಮಾಡಿಕೊಳ್ಳುವುದು ಅತ್ಯಂತ ಸೂಕ್ತವಾಗಿದೆ. ಗ್ರಾಂಶಿಯಲ್ಲಿ ಯಜಮಾನಿಕೆ ಮತ್ತು ತಾತ್ವಿಕತೆಗೆ ಒಂದು ಸಂಬಂಧವು ಇದೆ. ಆಧುನಿಕ ಸಂದರ್ಭದಲ್ಲಿ ನಾವು ವಿಮರ್ಶೆಯ ಬಗ್ಗೆ ಹೆಚ್ಚು ಮಾತಾಡುತ್ತಿದ್ದೇವೆ. ನಾವು ಏನೇ ಮಾತಾಡಿದರೂ ಇವತ್ತು ನಮ್ಮ ಸಾಹಿತ್ಯ ಮತ್ತು ಅದರ ಸಿದ್ಧಾಂತಗಳು ಸಾಹಿತ್ಯವನ್ನು ಒಂದು ವಲಯದಲ್ಲಿ ತರುತ್ತದೆ. ಲುಕಾಕ್ಸ್ ತನ್ನ ಸಾಹಿತ್ಯ ಮತ್ತು ಸಿದ್ಧಾಂತದ ಚರ್ಚೆಯ

ಸಂದರ್ಭದಲ್ಲಿ ಅಭಿವ್ಯಕ್ತಿ ಸಿದ್ಧಾಂತ ಮತ್ತು ಅದರ ಬೆಳವಣಿಗೆ ಹಾಗೂ ಅದರ ಪಲ್ಲಟವನ್ನು ಕುರಿತು ಹೇಳುತ್ತಾನೆ. ಆಧುನಿಕ ವಿಮರ್ಶೆಯು ಹೇಗೆ ಪ್ಯಾಸಿಸಂ ಎನ್ನುವುದನ್ನು ವಿರೋಧಿಸಿತು ಎಂದು ಅವನು ವಿವರಿಸುತ್ತಾನೆ. ಆದರೆ ಈವತ್ತು ನಾವು ಈವತ್ತು ಯಾವುದನ್ನು ಕಾಣುತ್ತಿದ್ದೇವೆ ಎಂದು ನೋಡಬೇಕಾಗಿದೆ. ನಮ್ಮ ಈವತ್ತಿನ ಪರಿಸ್ಥಿತಿ ಮತ್ತು ಅದರ ನಿರೂಪಣೆಗಳನ್ನು ನೋಡಿದರೆ ಗ್ರಾಂಶಿಯು ಹೇಗೆ ಅಗತ್ಯವಾಗಿದ್ದಾನೆ ಎಂದು ತಿಳಿಯುತ್ತದೆ. ಆದರೆ ನಾವು ಯಾವುದನ್ನು ತಾತ್ವಿಕತೆ ಎಂದು ಕರೆಯುತ್ತೇವೆಯೋ ಅದರ ಸ್ವರೂಪವನ್ನು ನಾವು ಬರೀ ಒಂದು ಭಾಷೆಯ ವ್ಯವಹಾರ ಎಂದು ಕರೆಯಲು ಬರುವುದಿಲ್ಲ. ಅದರ ರೂಪವು ಅತ್ಯಂತ ಸಂಕೀರ್ಣವಾಗಿರುತ್ತದೆ. ತಾತ್ವಿಕತೆಯನ್ನು ಹೇಳಲು ಭಾಷೆಯು ಒಂದು ವಾಹಕವು ಮಾತ್ರವೇ ಆಗಿದೆ. ಹಾಗೆ ನೋಡಿದರೆ ನಮ್ಮ ಅನೇಕ ಸಂಗತಿಗಳು ಭಾಷಯಲ್ಲಿ ವ್ಯಕ್ತವಾಗುತ್ತವೆ. ಅದು ತಾತ್ವಿಕತೆಯನ್ನು ಹೊಂದಿರುತ್ತವೆ. ಹಾಗೆಂದು ಯಾವುದು ಭಾಷೆಯಲ್ಲಿ ವ್ಯಕ್ತವಾಗಿದೆ ಅದು ಮಾತ್ರವೇ ತಾತ್ವಿಕವೂ ಅಲ್ಲ. ಮಮಗೆ ತಾತ್ವಿಕ ಮತ್ತು ಅತಾತ್ವಿಕತೆ ನಮ್ಮ ದೃಷ್ಟಿಕೋನಗಳನ್ನು ಹೇಳುತ್ತವೆ. ಗಂಡು ಹೆಣ್ಣಿಗಿಂತ ಹೆಚ್ಚು ಶ್ರೇಷ್ಠ ಎಂದರೆ ಅದು ತಾತ್ವಿಕವಲ್ಲ. ಆದರೆ ಅದನ್ನು ನಾವು ಲಿಂಗ ರಾಜಕಾರಣದ ಮೂಲಕ ನೋಡಿದರೆ ಅದು ಹೆಚ್ಚು ತಾತ್ವಿಕವಾಗುತ್ತದೆ. ಅದನ್ನು ನಾವು ರಾಜಕಾರಣವಾಗಿ ನೋಡಲು ಬರುತ್ತದೆ. ಯಾವಾಗ ಸಮಾಜದಲ್ಲಿ ಅತ್ಯಂತ ಸಂಕೀರ್ಣತೆಯು ಇರುತ್ತದೆಯೋ ಆಗ ತಾತ್ವಿಕವಾದ ದೃಷ್ಟಿಕೋನವೂ ಹೆಚ್ಚು ಸಂಕೀರ್ಣವಾಗಿರುತ್ತದೆ. ಗ್ರಾಂಶಿಯ ಪ್ರಕಾರ ತಾತ್ವಿಕತೆಯೆಂದರೆ ಅದು ಒಂದು ಸರಳವಾದ ರೂಪವು ಅಲ್ಲ. ಅದನ್ನು ಒಂದು ಸರಳ ರೇಖಾತ್ಮಕವಾಗಿ ಹೇಳುವುದು ಸಾಧ್ಯವೇ ಇಲ್ಲ. ಇಡೀ ಜಗತ್ತು ಮತ್ತು ಅದರ ಉತ್ಪಾದನೆಯ ಕ್ರಮವನ್ನು ನೋಡಿಕೊಂಡು ನಾವು ತಾತ್ವಿಕತೆಯನ್ನು ನಿರ್ಧಾರ ಮಾಡಬೇಕಾಗುತ್ತದೆ. ಯಾವಾಗ ತಾತ್ವಿಕತೆಯು ಹೆಚ್ಚು ಸಂಕೀರ್ಣವಾಗುತ್ತದೆ ಎನ್ನುವುದನ್ನು ವಿವರಿಸುವಾಗ ಗ್ರಾಂಶಿಯು ಸಮಾಜವು ಸಂಕೀರ್ಣವಾಗಿದ್ದಾಗ ಮಾತ್ರವೇ ಅದು ಹೆಚ್ಚು ಸಂಕೀರ್ಣವಾಗಿರುತ್ತದೆ ಎಂದು ಹೇಳುತ್ತಾನೆ. ಈ ಅರ್ಥದಲ್ಲಿ ಸಮಾಜ ಮತ್ತು ತಾತ್ವಿಕತೆಗೆ ಒಂದು ದ್ವಂದ್ವಾತ್ಮಕವಾದ ಸಂಬಂಧವು ಇದ್ದೇ ಇರುತ್ತದೆ. ಆದರೆ ನಮ್ಮ ಸಾಮಾನ್ಯವಾದ ಜ್ಞಾನ ಮತ್ತು ನಮ್ಮ ಸಾಮಾನ್ಯವಾದ ಸಂವೇದನೆಗೆ ಹಾಗೂ ತಾತ್ವಿಕತೆಗೂ ಒಂದು ಸಂಬಂಧವು ಇರುತ್ತದೆ. ಹಾಗೆ ನೋಡಿದರೆ ಗ್ರಾಂಶಿಗೆ ಮುಸಲೋನಿಯ ವಿರುದ್ಧ ಹೋರಾಟವನ್ನು ಮಾಡುವಾಗ ನಿರ್ದಿಷ್ಟವಾದ ಒಂದು ಗುರಿಯು ಇತ್ತು. ಕಮ್ಯುನಿಸ್ಟ್ ಪಾರ್ಟಿಯ ಸದಸ್ಯನಾಗಿ ಅವನು ನಿಜವಾದ ಪ್ರಯೋಗನಿಷ್ಟನೂ ಆಗಿದ್ದ, ಆದ್ದರಿಂದಲೇ ಅವನು ತನ್ನ ಸಾಮಾಜಿಕ ಜ್ಞಾನ ಮತ್ತು ಅದರ ಅಭ್ಯಾಸಗಳಿಂದ ತಾತ್ವಿಕತೆಯನ್ನು ರೂಪಿಸಿದ್ದಾನೆ. ತಾತ್ವಿಕತೆ ಎಂದರೆ

ಅವನ ಪ್ರಕಾರ ಅದು ಒಂದು ಬಗೆಯಲ್ಲಿ ನಮ್ಮ ಅಭ್ಯಾಸವೂ ಆಗಿರುತ್ತದೆ. ಪ್ರಾಯೋಗಿಕವಾದ ಅಭ್ಯಾಸಗಳಿಂದ ಹೊರತು ಮಾಡಿದ ಸೈದ್ಧಾಂತಿಕತೆಯು ಇಲ್ಲವೆನ್ನುವುದು ಅವನ ನಿಲುವು. ನಮ್ಮ ಪ್ರಾಯೋಗಿಕವಾದ ಪ್ರಜ್ಞೆ ಎನ್ನುವುದು ಮೂಲತಃ ಚಾರಿತ್ರಿಕ ಒಪ್ಪಗೆ ಮತ್ತು ನಿರಾಕರಣೆಗಳ ಮಧ್ಯೆ ರೂಪುಗೊಳ್ಳುತ್ತದೆ ಎಂದು ಅವನು ಹೇಳುತ್ತಾನೆ. ರಾಜಕೀಯವಾದ ಯಜಮಾನಿಕೆಯು ಕೂಡಾ ಪ್ರಯೋಗ ಮತ್ತು ಸಿದ್ಧಾಂತಗಳನ್ನು ಇಟ್ಟುಕೊಂಡಿರುತ್ತವೆ. ವರ್ಗಗಳು ಮತ್ತು ಅವುಗಳ ಪ್ರಜ್ಞೆಗೂ ಒಂದು ನಿರ್ದಿಷ್ಟವಾದ ನೆಲೆಯು ಇರುತ್ತದೆ ಎಂದು ಅವನು ಹೇಳುತ್ತಾನೆ. ನಮ್ಮ ಸೈದ್ಧಾಂತಿಕವಾದ ಪ್ರಜ್ಞೆ ಮತ್ತು ಅದರ ಸ್ವರೂಪವು ಕೆಲವು ಒತ್ತಡಗಳಿಂದ ಶುರುವಾಗುತ್ತದೆ. ರಾಜಕೀಯದ ಸರಿ ಮತ್ತು ರಾಜಕೀಯವಾದ ತಪ್ಪು ಎನ್ನುವುದು ಇದರಿಂದ ರೂಪಿತವಾಗುತ್ತದೆ. ತಾತ್ವಿಕತೆ ಎನ್ನುವುದು ಒಂದು ಅರ್ಥದಲ್ಲಿ ಸಂಘರ್ಷವನ್ನು ಹೇಳುತ್ತದೆ. ಸಾಮಾನ್ಯವಾದ ರಚನೆ ಮತ್ತು ಮೇಲು ರಚನೆಗಳ ಸಂಘರ್ಷವು ಅತ್ಯಂತ ಅನಿವಾರ್ಯವೂ ಆಗಿರುತ್ತದೆ. ಯಾರು ಚರಿತೆಯನ್ನು ನಿರ್ಮಾಣ ಮಾಡುತ್ತಾರೆಯೋ ಅವರು ಸಮಾಜದ ಜೊತೆಗೆ ಒಂದು ನಿರ್ದಿಷ್ಟವಾದ ಸಂಬಂಧವನ್ನು ಹೊಂದಿರುತ್ತಾರೆ. ಈ ಮೊದಲು ಯಾವುದು ಇದೆಯೋ ಅದರ ಸರಿ ಮತ್ತು ತಪ್ಪುಗಳ ನಿರ್ಣಯವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಯಾವುದೂ ಸುಮ್ಮನೆ ಉಂಟಾಗುವುದಿಲ್ಲ. ಅದು ಆಂತರಿಕವಾದ ಸಂಬಂಧವನ್ನು ಹೇಳುತ್ತದೆ.ಆದ್ದರೀಮದ ನಾವು ರಾಜಕಾರಣವನ್ನು ವಿವರಿಸಿಕೊಳ್ಳುವಾಗ ಸಾಧ್ಯವಾದಷ್ಟು ಯಾವುದೇ ಪಕ್ಷಪಾತಿಯಾದ ಧೋರಣೆಯನ್ನು ಬಿಡವುದು ಅತ್ಯಂತ ಅಗತ್ಯವಾಗಿರುತ್ತದೆ., ಆದರೆ ತಾತ್ವಿಕತೆ ಎನ್ನುವುದು ಒಂದು ಹಾದಿಯೂ ಹೌದು. ಅದು ಒಂದು ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಆದರೆ ತಾತ್ವಿಕತೆ ಎನ್ನುವುದು ಹೇಗೆ ಅನ್ವಯವನ್ನು ಹೊಂದಿರುತ್ತದೆ ಎಂದು ವಿವೇಚನೆ ಮಾಡುತ್ತಾನೆ. ಒಂದು ತತ್ವವು ನಮಗೆ ಲೋಕದೃಷ್ಟಿಯನ್ನು ಕೊಡುತ್ತದೆ. ಅದು ನಮಗೆ ಅನೇಕವನ್ನು ಹೇಳಿಕೊಡುತ್ತದೆ. ಮನುಷ್ಯನಿಗೆ ತಾತ್ವಿಕತೆ ಎನ್ನುವುದು ಒಂದು ಶಕ್ತಿಯೂ ಆಗಿದೆ. ನಾವು ಈಗ ಯಾವುದು ಅತ್ಯಂತ ಉದಾರವಾದ ಒಂದು ನಿಲುವು ಎಂದು ಹೇಳುತ್ತೇವೆಯೋ ಅದು ಕೂಡಾ ಒಂದು ನಿರ್ದಿಷ್ಟವಾದ ಚರಿತ್ರೆಯ ಉತ್ಪನ್ನವಾಗಿದೆ ಎಂದು ಅವನು ನಿರೂಪಿಸುತ್ತಾನೆ. ಒಂದು ಬೂರ್ಜ್ವಾ ವರ್ಗವು ಮುಂದೆ ಬಂದಾಗ ಅದಕ್ಕೆ ಬೇಕಾದ ತಾತ್ವಿಕತೆಯನ್ನು ಹೇಳುತ್ತದೆ. ಆದರೆ ನಮಗೆ ನಮ್ಮನ್ನು ರೂಪಿಸಿಕೊಳ್ಳುವ ಒಂದು ಶಕ್ತಿಯು ಇದೆ. ನಾವು ಅದನ್ನು ರೂಪಿಸಿಕೊಳ್ಳಬಲ್ಲೆವು. ಹಾಗೆಂದು ಬಂಡವಾಳವಾದವು ಒಂದು ನಿರ್ದಿಷ್ಟವಾದ ತಾತ್ವಿಕತೆಯನ್ನು ಹೊಂದಿರುವುದಿಲ್ಲ. ಅದು ಅದರ ಸಮಸ್ಯೆಯೂ ಹೌದು. ಬಂಡವಾಳವಾದವು ತನ್ನ ಯಜಮಾನಿಕೆಯನ್ನು ಸ್ಥಾಪಿಸಿಕೊಳ್ಳಲು ಅನ್ಯವನ್ನು

ಮಟ್ಟಹಾಕಲು ಯತ್ನವನ್ನು ಮಾಡುತ್ತದೆ. ಧರ್ಮ, ನೈತಿಕತೆ, ಆಧ್ಯಾತ್ಮ ಮತ್ತು ಇತರ ಸಮಸ್ಯೆಗಳು ನಮ್ಮ ಪ್ರಜ್ಞೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಆದರೆ ನಮ್ಮ ಅಸ್ತಿತ್ವವನ್ನು ಹೇಗೆ ರೂಪಿಸುತ್ತದೆ ಎನ್ನುವುದು ಅತ್ಯಂತ ಮುಖ್ಯ. ತಾತ್ವಿಕತೆಯೆನ್ನುವುದು ಒಂದು ಬಗೆಯ ಸಂಕಥನವೂ ಆಗಿದೆ. ಆದರೆ ತಾತ್ವಿಕತೆಯನ್ನು ನಾವು ವ್ಯಕ್ತಮಾಡುವುದು ಭಾಷೆಯಲ್ಲಿ. ಅದನ್ನು ಸಹಜವಾಗಿ ಹೇಳುತ್ತೇವೆ. ತಾತ್ವಿಕತೆಗೆ ಬೇಕಾದ ಸಾಮಗ್ರಿ ನಾವು ಪಡೆಯುತ್ತೇವೆ.

ಚರಿತ್ರೆ

ಗ್ರಾಂಶಿಯು ಒಂದು ಅರ್ಥದಲ್ಲಿ ಚರಿತ್ರೆಯನ್ನು ತನ್ನ ಚರ್ಚೆಯ ಪ್ರಧಾನವಾದ ಭೂಮಿಕೆಯಾಗಿ ಮಾಡುತ್ತಾನೆ. ಅವನು ಸಂಸ್ಕೃತಿಯನ್ನು ವಿವರಿಸುವಾಗಲೂ ಸಾವಯವ ಎನ್ನುವ ಪರಿಕಲ್ಪನೆಯನ್ನು ಹೆಚ್ಚು ಅರ್ಥಪೂರ್ಣವಾಗಿ ಬಳಸುತ್ತಾನೆ. ಆದರೆ ವಿದ್ವಾಂಸರ ಪ್ರಕಾರ ಅದನ್ನು ಅಂದರೆ ಸಾವಯವ ಎನ್ನುವುದನ್ನು ಆಗಸ್ಟಸ್ ಕಾಮ್ಟೆಯು ತನ್ನ ಧನಾತ್ಮಕವಾದ ದೃಷ್ಟಿಕೋನವನ್ನು ಹೇಳುವಾಗ ವಿವರಿಸಿದ್ದಾನೆ. ಹಾಗೆ ನೋಡಿದರೆ ಸಾವಯವ ಎನ್ನುವುದು ಅತ್ಯಂತ ವಿಶಿಷ್ಟವಾದ ಒಂದು ಪರಿಕಲ್ಪನೆ. ಕಾಮ್ಟೆಯದ್ದು ಒಂದು ದೃಷ್ಟಿಯಿಂದ ಭವಿಷ್ಯದ ಕುರಿತ ಚಿಂತನೆಯೂ ಫ್ರೆಂಚಿನ ಅತ್ಯಂತ ಮಹತ್ವದ ಸಮಾಜಶಾಸ್ತ್ರಜ್ಞ ಆಗಿರುವ ಕೆಲವು ಅತ್ಯಂತ ಮಹತ್ವದ ಚರ್ಚೆಯನ್ನು ಮಾಡುತ್ತಾನೆ. ಅದರಲ್ಲಿಯೂ ಅವನು ತನ್ನ ದಿ ಪಾಸಿಟಿವ್ ಫಿಲಾಸಫಿಯನ್ನು ಹೇಳುವಾಗ ಈ ಕೆಲವು ವಿಚಾರಗಳನ್ನು ಚರ್ಚೆ ಮಾಡುತ್ತಾನೆ.: (ಹಾರಿಟ್ ಮಾರ್ಟಿನ್ ವಾಲ್ಯುಮ್ 2 ಬಟೋಚೆ ಬುಕ್ಸ್ 2000) ಅವನು ಬಾಹ್ಯವನ್ನು ಗಮನಿಸಿಕೊಂಡು ಕೆಲವು ವಿಚಾರವನ್ನು ಹೇಳುತ್ತಾನೆ. ದೇಹವೂ ಒಂದು ಸಾವಯವ ಎಂದು ಅವನು ಭಾವಿಸುತ್ತಾನೆ. ಅದರಲ್ಲಿ ಅನೇಕ ಅಂಶಗಳ ಮಿಶ್ರಣವು ಇರುತ್ತದೆ ಎಂದು ಅವನು ತಿಳಿಯುತ್ತಾನೆ. ಇದನ್ನು ವಿವರಿಸುವಾಗ ನಮಗೆ ಆಕ್ಸಿಜನ್ ಹೇಗೆ ಅಗತ್ಯವಾಗಿದೆ ಮತ್ತು ಅದನ್ನು ನಾವು ಹೇಗೆ ಗಾಳಿಯಿಂದ ತೆಗೆದುಕೊಳ್ಳುತ್ತೇವೆ ಎಂದೂ ವಿವರಿಸುತ್ತಾನೆ. ದೇಹ ಮತ್ತು ಅದರ ಶಾಸ್ತ್ರವನ್ನು ನಾವು ಹೇಗೆ ಗ್ರಹಿಸುತ್ತೇವೆ ಎಂದು ಸವಿವರವಾಗಿ ಅವನು ಮಂಡಿಸಿದ್ದಾನೆ. ದೇಹಕ್ಕೆ ಅಥವಾ ದೇಹದ ಸಾವಯವ ರೂಪಕ್ಕೆ ಯಾವುದು ವಿಷವಾಗುತ್ತದೆ ಮತ್ತು ಯಾವುದು ಸಹಯೋಗವನ್ನು ಕೊಡುತ್ತದೆ ಎಂದು ಅವನು ಹೇಳುತ್ತಾನೆ. ದೇಹ ಮತ್ತು ಅದರ ಸಾವಯವತೆಗೂ ಹೊರಗಿನ ಸಂಬಂಧಕ್ಕೂ ಇರುವ ಸಾಮ್ಯ ಮತ್ತು ವೈಷಮ್ಯವನ್ನು ಅವನು ಹೇಳುತ್ತಾನೆ. (ಪುಟ.64 – 74) ಈ ದೃಷ್ಟಿಯಿಂದ ನಮಗೆ ಅಂದರೆ ನಮ್ಮ ದೇಹಕ್ಕೆ ಒಂದು ಸಾವಯವ ಸಂಬಂಧವು ಇರುತ್ತದೆ. ಆದರೆ ಇದರ ನಡುವೆ ಅವನು ಮತ್ತೊಂದು ಮಾತನ್ನು ಹೇಳುತ್ತಾನೆ:

ಎಲ್ಲಾ ವಿಜ್ಞಾನವೂ ಕೂಡಾ ತಮ್ಮದೇ ಆದ ನಿಯಮವನ್ನು ಕಂಡುಕೊಂಡಿವೆ. (ಅದೇ; 75) ನಾವು ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಅದು ದೇಹವನ್ನು ಕೇಂದ್ರವಾಗಿರಿಸಿಕೊಂಡ ತತ್ವಜ್ಞಾನ. ಅದು ಕೂಡಾ ಸಾವಯವವನ್ನು ಹೆಚ್ಚು ಚರ್ಚೆ ಮಾಡುತ್ತದೆ. ದೇಹ ಮತ್ತು ಮನಸ್ಸುಗಳ ಸಾವಯವ ರೂಪವನ್ನು ಅದು ಗ್ರಹಿಸುತ್ತದೆ. ಅದರ ಜೊತೆಗೆ ಅವನು ಕೆಮಿಕಲ್ ಕೇಂದ್ರವೆಂದು ಹೇಳುತ್ತಾನೆ. ಸಾವಯವ ಸಂಬಂಧ ಮತ್ತು ಸಾವಯವ ಬೆಳವಣಿಗೆ ಎನ್ನುವುದು ಅತ್ಯಂತ ಮಹತ್ವದ್ದು. ಅದನ್ನು ಅವನು ಹೇಳುತ್ತಾನೆ ಸಾವಯವ ಸಂಬಂಧವೇ ಇಲ್ಲದ ತತ್ವಜ್ಞಾನ ಮತ್ತು ಸಾವಯವ ಸಂಬಂಧವು ಇರುವ ದೇಹದ ಶಾಸ್ತ್ರಗಳ ನಡುವೆ ಇರುವ ಸಂಘರ್ಷವೂ ಅವನಿಗೆ ಹೆಚ್ಚು ಮುಖ್ಯವಾಗುತ್ತದೆ. ಆದ್ದರಿಂದಲೇ ಕಾಮ್ಟೆಯು ಧನಾತ್ಮಕವಾದ ನಿಲುವು ಅತ್ಯಂತ ಅಗತ್ಯವೆಂದು ಹೇಳುತ್ತಾನೆ. (ಪುಟ; 82) ಹಾಗೆ ನೋಡಿದರೆ ಅವನು ರಾಜಕಾರಣ ಮತ್ತು ಸಾಮಾಜಿಕ ವಿವರಣೆಯಲ್ಲಿಯೂ ಧನಾತ್ಮಕವಾದ ಅಂಶದ ಅಗತ್ಯವನ್ನು ಪ್ರತಿಪಾದಿಸುತ್ತಾನೆ. ಸಮಾಜ ಮತ್ತು ಅದರ ಪುನರ್ ನಿರ್ಮಾಣವನ್ನು ಪ್ರತಿಪಾದಿಸುತ್ತಾನೆ. (ಕಾಮ್ಟೆ – 1875 ಸಿಸ್ಟಮ್ ಆಫ್‌ಪೊಸಿಟಿವ್ ಪಾಲಿಟಿ ಲಾಂಗ ಮನ್, ಗ್ರೀನ್ ಅಂಡ್ ಕೊ) ಅವನು ಸಾಮಾಜಿಕವಾದ ಭೌತಶಾಸ್ತ್ರವನ್ನು ಹೇಳುತ್ತಾನೆ. ಸಾಮಾಜಿಕ ಭೌತಶಾಸ್ತ್ರ ಮತ್ತು ವ್ಯಕ್ತಿಗೆ ಇರುವ ಸಂಬಂಧವನ್ನು ಅವನು ವಿವೇಚನೆ ಮಾಡುತ್ತಾನೆ. ಅದೇ ರೀತಿಯಲ್ಲಿ ಸಾಮಾಜಿಕ ಭೌತಶಾಸ್ತ್ರ ಮತ್ತು ನಾಗರಿಕತೆಗೆ ಯಾವ ಸಂಬಂಧವು ಇದೆ ಎಂದೂ ಹೇಳುತ್ತಾನೆ ಬೌದ್ಧಿಕ ಮತ್ತು ನೈತಿಕವಾದ ನೆಲೆಗಳು ಸಹಜವಾದ ಚರಿತ್ರೆಯ ಜೊತೆಗೆ ಸಂಬಂಧವನ್ನು ಇಟ್ಟುಕೊಂಡಿರುತ್ತವೆ. ಆದ್ದರಿಂದ ಅದನ್ನು ಪ್ರತ್ಯೇಕ ಮಾಡಲು ಆಗುವುದೂ ಇಲ್ಲವೆಂದು ಅವನು ಪ್ರತಿಪಾದಿಸುತ್ತಾನೆ. ಯಾವುದನ್ನು ನೈಜವಾದ ತತ್ವಜ್ಞಾನವೆಂದು ಹೇಳುತ್ತೇವೆಯೋ ಅದು ದೇಹ ಮತ್ತು ಅದರ ಶಾಸ್ತ್ರವನ್ನು ಹೇಳುತ್ತದೆ. ಸುಮ್ಮನೆ ಆಧ್ಯಾತ್ಮಿಕವನ್ನು ಹೇಳುವುದು ಬೇರೆ ಪ್ರಶ್ನೆ. ಆದರೆ ದೇಹ ಮತ್ತು ಮನಸ್ಸನ್ನು ಕೇಂದ್ರಮಾಡಿಕೊಂಡು ಅದರ ನೆಲೆಗಳನ್ನು ಗಮನಿಸುವುದು ಬೇರೆ ಕ್ರಮ. ಗ್ರಾಂಶಿಯ ನಿಲುವು ಶುದ್ಧವಾದ ಆಧ್ಯಾತ್ಮವನ್ನು ಹೇಳುವುದಿಲ್ಲ. ಅದರ ಸ್ವರೂಪವು ಬೇರೆಯಾಗಿದೆ. ಗ್ರಾಂಶಿಗೆ ಸಮಾಜ ಮತ್ತು ಅದರ ಚಿಂತನೆಗೆ ಮತ್ತೊಂದು ಕಾರಣವೆಂದರೆ ಕಾಮ್ಟೆ ಮೊದಲಾದವರ ನಿಲುವು. ಅದನ್ನು ಎಮಿಲಿ ಡರ್ಕೆಮ್ ಕೂಡಾ ನೈತಿಕತೆ ಮತ್ತು ಸಾವಯವ ಸಂಬಂಧವನ್ನು ಬೇರೆ ರೀತಿಯಲ್ಲಿ ನಿರೂಪಿಸುತ್ತಾನೆ. ಅವನಲ್ಲಿ ಕೆಲಸ ಮತ್ತು ಅದರ ವರ್ಗೀಕರಣಗಳು ಬಹಳ ಮಹತ್ವವನ್ನು ಪಡೆದುಕೊಂಡಿವೆ. ಅವನು ವ್ಯಕ್ತಿ ಮತ್ತು ಸಮಾಜದ ಸಂಬಂಧವನ್ನು ವಿಭಿನ್ನವಾಗಿ ಹೇಳುತ್ತಾನೆ. ವ್ಯಕ್ತಿಯನ್ನು ರೂಪಿಸುವಲ್ಲಿ ಒಂದು ಸಮಾಜವು ಯಾವ ಪ್ರಭಾವವನ್ನು ಬೀರುತ್ತದೆ ಎನ್ನುವುದು ಅವನ ಆಸಕ್ತಿಯಲ್ಲಿ

ಒಂದು. ವ್ಯಕ್ತಿತ್ವ ಮತ್ತು ಸಮಾಜ ಎನ್ನುವುದು ಬೇರೆ ಬೇರೆ ಪಾತಳಿಗಳಲ್ಲಿ ರೂಪುಗೊಳ್ಳುವ ಪ್ರಕ್ರಿಯೆಗಳು ಅಲ್ಲವೆನ್ನುವುದು ಅವನ ವಾದವಾಗಿದೆ. ಕೆಲಸದ ವರ್ಗೀಕರಣ ಮತ್ತು ಜೀವನ ಕ್ರಮಗಳು ಎನ್ನುವುದು ಹೇಗೆ ಪರಸ್ಪರ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತವೆ ಎಂದು ಅವನು ಪ್ರತಿಪಾದಿಸುತ್ತಾನೆ. ಅನೇಕ ವಿಚಾರಗಳು ನಮ್ಮ ಸಾಮಾಜಿಕ ಜೀವನ ಮತ್ತು ಅದರ ಆವಶ್ಯಕತೆಯು ಆಗಿರುತ್ತದೆ. ಆದ್ದರಿಂದ ಅವನ ಸಾಮಾಜಿಕ ಚಿಂತನೆಯು ಭಿನ್ನವಾಗಿದೆ. ಪರಂಪರೆ ಮತ್ತು ಸಂಪ್ರದಾಯಗಳು ಹೇಗೆ ವ್ಯಕ್ತಿಯನ್ನು ರೂಪಿಸುತ್ತದೆ ಎಂದು ಅವನು ವಿವರಿಸುತ್ತಾನೆ. ವ್ಯಕ್ತಿ ಮತ್ತು ಅವನ ಉದ್ದೇಶಗಳನ್ನು ನಾವು ಬೇರೆ ಮಾಡಿಕೊಂಡು ನೋಡಲು ಸಾಧ್ಯವಿಲ್ಲ ಇಲ್ಲ. (ಎಮಿಲಿ ಡರ್ಕಿಮ್ ದ ಡಿವಿಸಿನ್ ಆಫ್ ಲೇಬರ್ ಇನ್ ಸೊಸೈಟಿ 1960 ಪುಟ 236 ಮೆಕ್ಮಿಲನ್ ಕಂಪೆನಿ. ಇದು ಪ್ರಕಟವಾದ್ದು 1893) ಆದರೆ ನಮ್ಮ ಸಂಬಂಧಗಳಲ್ಲಿ ಬೇರೆ ಬೇರೆ ವಿಧದ ಸಂಹಿತೆಗಳು ಕೆಲಸವನ್ನು ಮಾಡುತ್ತವೆ. ಅನೇಕವು ನಮ್ಮ ನಂಬಿಕೆಯಿಂದ ಬರುತ್ತವೆ. ಮತ್ತೆ ಕೆಲವು ಸಹಕಾರದ ಮೂಲಕವೂ ಬರುತ್ತದೆ. ಅದರ ಜೊತೆಗೆ ಮತ್ತೆ ಕೆಲವು ಮನೆಯಲ್ಲಿ ರೂಪುಗೊಳ್ಳುತ್ತವೆ. ಹಾಗೆಂದು ಕೆಲವು ನಿಯಮವು ನಮಗೆ ಅಗತ್ಯವೂ ಆಗಿರುತ್ತವೆ. ಒಂದು ಹಂತದಲ್ಲಿ ನಮಗೆ ಒಂದು ಜನಾಂಗವು ಬೇರೆ ಬೇರೆ ನಿಯಮವನ್ನು ರೂಪಿಸುವುದೂ ಅಷ್ಟೇ ನಿಜ. ಕೆಲವು ಸಂಪ್ರದಾಯಗಳು ನಮಗೆ ಒಂದು ಅಭಿಪ್ರಾಯವನ್ನು ರೂಪಿಸಿಕೊಡುತ್ತದೆ ಎನ್ನವುದು ಅಷ್ಟೇ ನಿಜ. ಅವನು ಯಾವುದನ್ನು ಆರ್ಗ್ಯಾನಿಕ್ ಏಕತೆ ಎಂದು ಹೇಳುತ್ತಾನೆಯೋ ಅದರ ರೂಪಕ್ಕೂ ಅದರ ಸನ್ನಿವೇಶಕ್ಕೂ ಒಂದು ಸಂಬಂಧವಿದೆ ಎನ್ನುವುದು ಖಚಿತ. ಕೆಲಸ ಮತ್ತು ಅದರ ವರ್ಗೀಕರಣವನ್ನು ಅವನು ವಿಶ್ವಾತ್ಮಕ ಎಂದು ಕರೆಯುತ್ತಾನೆ. ಯಾವುದನ್ನು ನಾವು ನೀತಿಯೆಂದು ಹೇಳುತ್ತೇವೆಯೋ ಅದರ ಸ್ವರೂಪವು ಹೆಚ್ಚಾಗಿ ಅನ್ವಯವಾಗುವುದು ನಮಗೆ ಸಮಾಜದಲ್ಲಿಯೇ. ನೀತಿಗೆ ಸಾಮಾಜಿಕವಾದ ಒಂದು ಕೆಲಸವೂ ಇದೆ. ಅದು ಬರೀ ರಾಜಕೀಯ ಅರ್ಥಶಾಸ್ತ್ರವನ್ನು ಮಾತ್ರವೇ ಹೇಳುವುದಿಲ್ಲ. ಈ ದೃಷ್ಟಿಯಿಂದ ಅವನ ನೀತಿಯ ವೈಜ್ಞಾನಿಕ ಅಧ್ಯಯನವು ಅತ್ಯಂತ ಮಹತ್ವದ್ದೂ ಆಗಿದೆ ಎಂದು ಅವನು ಭಾವಿಸುತ್ತಾನೆ. (ದಿ ಸೈನ್ಸ್ ಆಫ್ ಮೊರಾಲಿಟಿ) ಹಾಗೆ ನೋಡಿದರೆ ಸಹಕಾರ ಮತ್ತು ಅದರ ಮೌಲ್ಯವೂ ಅತ್ಯಂತ ದೊಡ್ಡದು. ಹಸಿವೆಯನ್ನು ನಾವು ಹೊಟ್ಟೆ ತುಂಬಿಸುವುದರ ಮೂಲಕ ಈಡೇರಿಸಿಕೊಳ್ಳಬಹುದು. ಆದರೆ ಕಾರಣವನ್ನು ಮತ್ತು ಅದರ ಬಯಕೆಯನ್ನು ತುಂಬಿಸಿಕೊಳ್ಳುವುದು ಹೇಗೆ? ಈ ಪ್ರಶ್ನೆಯು ಇದೆ. ದೈಹಿಕವಾದ ತೃಪ್ತಿ ಮತ್ತು ಮನಸ್ಸಿನ ತೃಪ್ತಿಯನ್ನು ನಾವು ಭಿನ್ನವಾಗಿ ನೋಡಬೇಕಾಗುತ್ತದೆ. ಜ್ಞಾನವನ್ನು ಅತ್ಯಂತ ಸುಲಭವಾಗಿ ಈಡೇರಿಸಿಕೊಳ್ಳಲು ಬರುವುದೂ ಇಲ್ಲ. ಹಾಗೆ ನೋಡಿದರೆ

ಎಲ್ಲ ಕರ್ತವ್ಯವೂ ಅತ್ಯಂತ ಸೀಮಿತವಾದದ್ದು. ಕಾಲ ಮತ್ತು ಸ್ಥಳವನ್ನು ನಾವು ಬಿಡಲು ಆಗುವುದೂ ಇಲ್ಲ. ಸ್ಪೆನ್ಸರ್ ಸಂಬಂಧವನ್ನು ಕುರಿತು ಹೇಳುವಾಗ ಅದನ್ನು ಬರೀ ಸಾಂಪ್ರದಾಯಿಕವಾದ ಎಂದು ಹೇಳುವಂತೆ ಇಲ್ಲವೆಂದು ಹೇಳುತ್ತಾನೆ. ಸ್ಪೆನ್ಸರ್ ಮತ್ತೊಂದು ಅಂಶವನ್ನು ಹೇಳುತ್ತಾನೆ: ಸಾಮಾಜಿಕ ಏಕತೆಯು ಸಾಧ್ಯವಾಗುವುದೇ ಕೆಲಸ ಮತ್ತು ಅದರ ವರ್ಗೀಕರಣದಿಂದ. (ಅದೇ; ಪುಟ 201) ನಾವು ಹೇಗೆ ಇರಬೇಕು ಮತ್ತು ಯಾವ ಸಂದರ್ಭದಲ್ಲಿ ಹೇಗೆ ವರ್ತನೆಯನ್ನು ಮಾಡಬೇಕು ಎನ್ನುವುದನ್ನು ನಮ್ಮ ಸಂಪ್ರದಾಯಗಳು ಹೇಳುತ್ತವೆ. ಸಾಮಾಜಿಕ ಜೀವನ ಮತ್ತು ಅದರ ಸ್ವರೂಪವು ಒಂದು ಥರ ಇರುತ್ತದೆ ಯಾವುದೇ ವ್ಯಕ್ತಿಗೆ ಮತ್ತು ಸಮಾಜಕ್ಕೆ ಇರುವ ಸಂಬಂಧವು ಅತ್ಯಂತ ಸಂಕೀರ್ಣವಾಗಿರುತ್ತದೆ. ಹಾಗೆ ನೋಡಿದರೆ ಮನುಷ್ಯ ಸಂಬಂಧಗಳಲ್ಲಿ ನಿರ್ದಿಷ್ಟವಾದ ಸ್ವರೂಪವಿರುವುದು ಆಯಾ ಅಗತ್ಯಕ್ಕೆ ಅನುಸಾರವಾಗಿ ಎನ್ನುವುದು ಖಚಿತ. ವ್ಯಕ್ತಿ ಮತ್ತು ಅವನ ಸಂಬಂಧಕ್ಕೆ ವಿಭಿನ್ನವಾದ ಆಯಾಮವೂ ಇರುತ್ತದೆ. ಇದರ ಜೊತೆಗೆ ಮನುಷ್ಯನು ತನ್ನ ಸಮೂಹವನ್ನು ಬಿಟ್ಟು ಇರಲಾರ. ಅವನಿಗೆ ಸಮೂಹದ ಪ್ರಜ್ಞೆಯು ಇರುತ್ತದೆ. ಸಮೂಹದ ಜೊತೆಗೆ ನಾವು ಹೇಗೆ ವ್ಯವಹಾರವನ್ನು ಮಾಡಬೇಕು ಎನ್ನುವುದು ಮುಖ್ಯ. ಆದರೆ ಇಲ್ಲಿ ಮತ್ತೊಂದು ಅಂಶವನ್ನು ನಾವು ಗಮನಿಸಬೇಕು: ಸಮೂಹ ಎನ್ನುವುದು ಒಂದು ಸಾಕ್ಷಿಯು ಹೌದು. ಅದಕ್ಕೊಂದು ಚೈತನ್ಯವೂ ಇದೆ.

ಯಾವುದನ್ನು ನಮ್ಮ ಮನಸ್ಸಿನ ಆಕಾಂಕ್ಷೆ ಎಂದು ಹೇಳುತ್ತಿದ್ದೇವೆಯೋ ಅದರ ರೂಪವನ್ನು ನೋಡುವಾಗ ಅದರ ಆಂತರಿಕ ಕಾರಣವನ್ನು ನಾವು ಗಮನಿಸಬೇಕು. ಯಾವುದನ್ನು ನಾವು ನಮ್ಮ ಸಾಮಾಜಿಕ ಜೀವನದ ಒಂದು ಸಂವೇದನೆ ಎಂದು ಕರೆಯುತ್ತೇವೆಯೋ ಅದನ್ನೇ ಗ್ರಾಂಶಿಯು ಕಾಮನ್ ಸೆನ್ಸ್ ಎಂದು ಕರೆಯುತ್ತಾನೆ. ವ್ಯಕ್ತಿಯು ಅದನ್ನು ಬೇರೆ ಬೇರೆ ಥರ ಗ್ರಹಿಸುತ್ತಾನೆ. ಯಾವುದನ್ನು ನಾವು ನಮ್ಮ ಸಂವೇದನೆಯ ಭಾಗ ಎಂದು ಕರೆಯುತ್ತೇವೆಯೋ ಅದು ನಮಗೆ ಒಂದು ನಿರ್ದಿಷ್ಟವಾದ ಮಾನದಂಡವನ್ನು ರೂಪಿಸುತ್ತದೆ. ಸಂವೇದನೆ ಮತ್ತು ಅದರ ತರ್ಕವೆಂದು ಹೇಳುವಾಗ ಕೆಲವನ್ನು ನಮ್ಮ ಸಂವೇದನೆಗಿಂತ ಹೊರತಾದದ್ದು ಎಂದು ತಿಳಿಯುತ್ತವೆ. ನಿಜವಾದ ಅರ್ಥದಲ್ಲಿ ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ನಮಗೆ ಇಂಗ್ಲೀಷಿನ ಪದವನ್ನು ಬಳಸಬೇಕಾಗುತ್ತದೆ: ಸೆನ್ಸ್ ಮತ್ತು ನಾನ್ ಸೆನ್ಸ್. ಹೇಗೆ ಇವುಗಳು ನಿರ್ದಿಷ್ಟವಾದ ವರ್ಗೀಕರಣವನ್ನು ಮಾಡುತ್ತವೆ ಎಂದು ನೋಡಬೇಕಾಗುತ್ತದೆ. ಯಾವುದನ್ನು ನಾವು ಸೆನ್ಸ್ ಮತ್ತು ನಾನ್‌ಸೆನ್ಸ್ ಎಂದು ಹೇಳಿಕೊಳ್ಳುತ್ತೇವೆಯೋ ಅದು ನಮ್ಮ ನಿಲುವಿಗೆ ಮಾತ್ರವೇ ಸಂಬಂಧಪಟ್ಟಿದೆ. ಕೆಲವು ಸಾಮಾನ್ಯವಾದ ನಿಯಮವನ್ನು ಅಂಗೀಕರಿಸಿದ

ಸಂದರ್ಭದಲ್ಲಿ ನಾವು ಸಹಜವಾದ ಒಂದು ಸಂವೇದನೆ ಎಂದು ಹೇಳುತ್ತೇವೆ. ಮತ್ತೊಂದು ಅದಕ್ಕೆ ಹೊರತಾದನ್ನು ಅಸಹಜವಾದ ಸಂವೇದನೆ ಎಂದು ಕರೆಯುತ್ತಾರೆ. ಇವುಗಳ ನಡುವೆ ಅನೇಕ ಸಮಸ್ಯೆಗಳು ಇರುತ್ತವೆ. ಡೆಲ್ಯೂಷೆಯು ಮತ್ತೊಂದು ವಿಚಾರವನ್ನು ಹೇಳುತ್ತಾನೆ- ಅದು ನಮ್ಮ ಆಲೋಚನೆ ಮತ್ತು ಅದರ ಕುರಿತಾದ ವ್ಯಾಮೋಹಗಳು. (ಅದನ್ನು ಅವನು ಒಂದು ಬಗೆಯ ಫ್ಯಾಶನ್ ಎಂದು ಕರೆಯುತ್ತಾನೆ. ಅವನದೇ ಆದ ಮಾತನ್ನು ಹೇಳುವುದಿದ್ದರೆ ಫ್ಯಾಶನ್ ಆಫ್ ಥಾಟ್) (ಅದೇ; 74) ನಾನು ಉಸಿರಾಡುತ್ತೇನೆ, ನಾನು ನಿದ್ದೆ ಮಾಡುತ್ತೇನೆ, ನಾನು ಊಟ ಮಾಡುತ್ತೇನೆ ಎನ್ನುವುದು ನಮ್ಮ ನಮ್ಮ ವೈಯಕ್ತಿಕವಾದ ಸಂವೇದನೆಯನ್ನು ಹೇಳುತ್ತದೆ. ಅದರ ಜೊತೆಗೆ ಇದು ವ್ಯಕ್ತಿಗತವಾದ ಜಗತ್ತನ್ನು ಹೇಳುತ್ತದೆ. ಆದರೆ ಅದರ ಜೊತೆಗೆ ನಮ್ಮ ಕಲ್ಪನೆಯು ಇರುತ್ತದೆ. ಆದ್ದರಿಂದ ಭಾಷೆಯು ಸಮೇತ ನಮಗೆ ಒಂದು ಬಾಹ್ಯದ ಸಂಗತಿಯು ಆಗುವುದಿಲ್ಲ. (ಅದೇ; ಪುಟ 78) ಆದರೆ ಅವನು ಯಾವುದನ್ನು ಒಂದು ತರ್ಕವೆಂದು ಹೇಳುತ್ತಾನೆಯೋ ಅದರಲ್ಲಿ ನಾವು ಹೇಗೆ ಆಗುತ್ತೇವೆ ಎನ್ನುವುದು ಅತ್ಯಂತ ಮುಖ್ಯವಾಗಿದೆ. ನಾವು ನಮ್ಮ ಸಂವೇದನೆಯ ಮೂಲಕವೇ ಆಗುತ್ತೇವೆ. ನಮಗೆ ಯಾವುದೇ ಸಂವೇದನೆಯು ಇಲ್ಲವಾದರೆ ನಾವು ಏನೂ ಆಗುವುದಿಲ್ಲ. ಅದರ ಜೊತೆಗೆ ನಮಗೆ ಬೇರೆ ಬೇರೆ ಅಂಗಾಂಗಗಳಿವೆ. ಆದರೆ ನಮಗೆ ದೇಹ ಮತ್ತು ಮನಸ್ಸುಗಳ ನಡುವೆ ಸಂಬಂಧವಿದೆ ಅಷ್ಟೇ ಅಲ್ಲ ಅದರ ಜೊತೆಗೆ ನಮಗೆ ದೇಹ ಮತ್ತು ಮನಸ್ಸುಗಳ ನಡುವೆ ಸಂಘರ್ಷವಿದೆ. ಆದ್ದರಿಂದ ಇದನ್ನು ನಾವು ಬೇರೆ ಮಾಡಿ ನೋಡಿದರೆ ನಮಗೆ ದ್ವಂದ್ವವು ಶುರುವಾಗುತ್ತದೆ. ಇದನ್ನು ಡೆಲ್ಯೂಷೆ ಮತ್ತು ಗುಟ್ಟಾರಿ ಇಬ್ಬರೂ ಹೇಳುತ್ತಾರೆ. ಇಚ್ಛಿತ್ತವಾದ ಒಂದು ಸ್ಥಿತಿಯು ಅತ್ಯಂತ ಕಷ್ಟವಾದ ಸಮಸ್ಯೆಯೂ ಆಗಿದೆ ಎನ್ನುವುದು ಅವರಿಗೂ ಗೊತ್ತು. ಹಾಗೆಂದು ಇವೆರಡೂ ಅಂದರೆ ದೇಹ ಮತ್ತು ಮನಸ್ಸುಗಳ ಸಂಬಂಧವು ದ್ವಂದ್ವ ಎಂದರೂ ಅದರ ಸ್ವರೂಪವನ್ನು ಅವರು ಬೇರೆ ಎಂದು ಗಣಿಸುವುದಿಲ್ಲ. ಯಾವುದನ್ನು ಆಳುತ್ತದೆ ಎನ್ನುವುದನ್ನು ವಿವರಿಸುವಾಗ ಅವರು ಸ್ಕಿಜೋ ಎನ್ನುವುದನ್ನು ಮಾರ್ಕ್ಸ್‌ವಾದದ ಪರಿಭಾಷೆಯಲ್ಲಿ ವಿವರಿಸಿದ್ದಾರೆ. ಅದನ್ನು ಮೇಲು ರಚನೆ ಮತ್ತು ಒಳರಚನೆ ಎನ್ನುವ ಹಿನ್ನೆಲೆಯಲ್ಲಿ ನೋಡುತ್ತಾರೆ. ಮೇಲು ರಚನೆ ಮತ್ತು ಕೆಳರಚನೆಯಲ್ಲಿ ಇರುವ ದ್ವಂದ್ವಗಳು ಇಲ್ಲಿಗೂ ಅನ್ವಯವಾಗುತ್ತದೆ. ಆಧುನಿಕ ಚರಿತ್ರೆಯಲ್ಲಿ ಮನುಷ್ಯ ಮತ್ತು ಅವನ ವ್ಯಕ್ತಿತ್ವವನ್ನು ಅನೇಕ ಸಂದರ್ಭದಲ್ಲಿ ಬಂಡವಾಳವಾದವು ನಿರೂಪಿಸಿದೆ. ಅದು ನಮಗೆ ಮತ್ತೊಂದು ರೀತಿಯ ಕನಸನ್ನು ಹುಟ್ಟುಹಾಕುತ್ತದೆ. ಅದು ನಿರ್ದಿಷ್ಟವಾದ ಅಧಿಕಾರವನ್ನು ನಿರೂಪಿಸುತ್ತದೆ. ಅದರಲ್ಲಿ ವಾಸ್ತವ ಮತ್ತು ಭ್ರಮೆಗಳ ನಡುವೆ ಒಂದು ಅಂತರವೂ ಇದೆ. ಮಧ್ಯೆ ನೆರಳು

ಕೂಡಾ ಇದೆ. ಮನುಷ್ಯತ್ವ ಎನ್ನುವುದು ಈವತ್ತು ನಮಗೆ ಈ ನೆರಳುಗಳ ನಡುವೆ ಇರುತ್ತದೆ. ಜಾನ್ ಹಾಲ್‌ವೇಯ ನಿಲುವು ಇಲ್ಲಿ ಉಲ್ಲೇಖನೀಯ: ಅವನು ಯಾವುದೇ ಅಧಿಕಾರವು ಇಲ್ಲದೆ ನಾವು ಸಾಮಾಜಿಕ ಸ್ವರೂಪವನ್ನು ಹೇಗೆ ಬದಲಾವಣೆ ಮಾಡಬಹುದು ಎಂದು ಹೇಳುತ್ತಾನೆ. ಈವತ್ತು ಬಂಡವಾಳವದಕ್ಕೆ ಒಂದು ಅಹಂಕಾರವು ಇದೆ ಎಂದು ಅವನು ಭಾವಿಸುತ್ತಾನೆ. ಅದಕ್ಕೆ ಮನುಷ್ಯತ್ವವೇ ಇಲ್ಲ. ಎರಡು ಅಧಿಕಾರವನ್ನು ನಾವು ಇವತ್ತು ನೋಡಬಹುದು: ಒಂದು ಮಿಲಿಟರಿ ಅಧಿಕಾರ ಮತ್ತೊಂದು ಬಂಡವಾಳವಾದದ ಅಧಿಕಾರ, ಇದರಲ್ಲಿ ಬಂಡವಾಳವಾದವು ತನ್ನ ಮಾಧ್ಯಮದ ಮೂಲಕ ಜನರನ್ನು ಒಂದು ಒಪ್ಪಿಗೆಗೆ ಬರುವಂತೆ ಮಾಡುತ್ತದೆ. ಅವನು ಕೊಡುವ ಅನೇಕ ಮಾಹಿತಿಗಳು ನಮಗೆ ಭಯವನ್ನು ಹುಟ್ಟಿಸುತ್ತದೆ.

ಸಂಸ್ಕೃತಿ ಅಧ್ಯಯನ

ವಸಾಹತು ದೇಶಗಳಲ್ಲಿ ಯಾವುದನ್ನು ಉನ್ನತ ಸಾಂಸ್ಕೃತಿಕ ಅಧ್ಯಯನವೆಂದು ಹೇಳುತ್ತಾ ಬಂದೆವೋ ಅದು ಈವತ್ತು ಅನೇಕ ಸಂಶಯಕ್ಕೆ ಕಾರಣವೂ ಆಗಿದೆ. ವಸಾಹತು ದೇಶಗಳು ಬ್ರಿಟೀಶ್ ಸಾಂಸ್ಕೃತಿಕ ಅಧ್ಯಯನವೆಂದು ಹೇಳಲಾಯಿತೋ ಅವುಗಳೇ ಈಗ ಮತ್ತೆ ಚರ್ಚೆಗೆ ಒಳಗಾಗಿದೆ. ಇಲ್ಲಿನ ಒಂದು ಅಪಾಯವೆಂದರೆ ಪಶ್ಚಿಮವನ್ನು ಸಾರಾಸಗಟಾಗಿ ತಿರಸ್ಕರಿಸುವುದು ಸಮರ್ಥನೀಯವೇ ಎಂದರೆ ಅದೂ ಅಲ್ಲ. ಯಾಕೆಂದರೆ ಪಶ್ಚಿಮವೆಂದು ಯಾವುದನ್ನು ನಾವು ಹೇಳಿದೆವೋ ಅದು ಅಷ್ಟೇ ಅಲ್ಲ. ಅನೇಕ ಸಂದರ್ಭದಲ್ಲಿ ರಾಜಕೀಯ ಮತ್ತು ಸಾಮಾಜಿಕ ಸಿದ್ಧಾಂತಗಳನ್ನು ಒಳಗೊಳ್ಳುವುದು ಅಗತ್ಯ. ಯುರೋಪಿನ ಅನೇಕ ಸಿದ್ಧಾಂತಗಳಿಗೆ ಅವುಗಳದೇ ಬೇರುಗಳಿವೆ. ಅಷ್ಟೇ ಅಲ್ಲ ಫೋರ್ಡ್ ಪೌಂಡೇಶನ್ ಸಂಸ್ಕೃತಿಯ ಅಧ್ಯಯನಕ್ಕೆ ಕೊಟ್ಟ ವಿಶೇಷ ಪ್ರಾಶಸ್ತ್ಯವೂ ಅಷ್ಟೇ ಮಹತ್ವವನ್ನು ಪಡೆದುದು ಯಾಕೆಂದರೆ ಅವು ಸಂಸ್ಕೃತಿಯ ಅಧ್ಯಯನವನ್ನು ಹಿಂದಿನ ಬಾಗಿಲಿನಿಂದಲೇ ಪ್ರವೇಶಿಸಿದವು. ಹಾಗೆಯೇ ಸಂಸ್ಕೃತಿಯನ್ನು ಅಧ್ಯಯನ ಮಾಡುವಾಗ ಅವುಗಳು ಕೆಲವನ್ನು ಮಾತ್ರವೇ ಪ್ರಚೋದಿಸಿದವು. ಅವುಗಳು ತೆರೆಮರೆಯ ಸಿದ್ಧಾಂತಗಳೂ ಹೌದು. ಇದನ್ನು ಮತ್ತೆ ಯಾಕೆ ಹೇಳಲಾಗಿದೆ ಎಂದರೆ ಯಾವುದನ್ನೋ ಒಂದನ್ನು ಮಾನದಂಡವಾಗಿ ಇರಿಸಿಕೊಂಡು ಅದನ್ನು ಉನ್ನತ ಸಂಸ್ಕೃತಿಯೆಂದೂ ಉಳಿದವುಗಳನ್ನು ಕನಿಷ್ಠವೆಂದೂ ಹೇಳಿರುವುದು ಬ್ರಿಟೀಶ್ ಮಾದರಿಯ ಸಂಸ್ಕೃತಿಯ ಅಧ್ಯಯನ ಕ್ರಮಗಳೇ ಆಗಿವೆ. ಜನಪ್ರಿಯ ಸಂಸ್ಕೃತಿ, ಉನ್ನತ ಸಂಸ್ಕೃತಿ, ಲಘು ಸಂಸ್ಕೃತಿ ಮುಂತಾದ ವರ್ಗೀಕರಣಗಳಿಂದ ಅಲ್ಲಿಯ ಅಧ್ಯಯನ ಕ್ರಮಗಳು ಸೊರಗಿದವು. ಅಲ್ಲಿ ಸಂಸ್ಕೃತಿಯ ಅಧ್ಯಯನದಲ್ಲಿ ಕೆಲವು ಮಾದರಿಯ

ವರ್ಗೀಕರಣಗಳು ಇದ್ದವು. ಅದನ್ನೇ ಒಂದು ಹಂತದಲ್ಲಿ ವಸಾಹತು ದೇಶಗಳ ಬುದ್ಧಿಜೀವಿ ವರ್ಗಗಳು ಅನುಸರಿಸಿದವು. ಸಾಹಿತ್ಯಕ್ಕೆ ಅನ್ವಯಿಸಿ ಹೇಳುವುದಿದ್ದರೆ ಇವುಗಳೇ ಮತ್ತೆ ಯುರೋಪಿನಲ್ಲಿ ವಾಸ್ತವ ಮತ್ತು ಆಧುನಿಕತೆಯ ಚರ್ಚೆಯಾಗಿ ಪರಿಣಮಿಸಿತು. ಬ್ರಿಟೀಶ್ ಮಾದರಿಯ ಅಧ್ಯಯನ ಕ್ರಮದ ಒಂದು ಸೂಚನೆ ಮಾತ್ರವೇ ಇದು.

ಫ್ರಾಂಕ್‌ಫ್ರಾರ್ಕ್ಟ್ ಸ್ಕೂಲ್

ಸಾಂಸ್ಕೃತಿಕ ಅಧ್ಯಯನಕ್ಕೆ ಫ್ರಾಂಕ್‌ಫರ್ಟನ ಕೊಡುಗೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಫ್ರಾಂಕ್‌ಫರ್ಟ್ ಸ್ಕೂಲ್ ಅನ್ಯ ಶಿಸ್ತಿನ ಅಧ್ಯಯನವನ್ನು ಒಳಗೊಂಡದ್ದು ಕೂಡಾ ಮಹತ್ವವೇ ಆಗಿದೆ. ಯಾಕೆಂದರೆ ಅವುಗಳ ಮೂಲಕವೇ ಹೊಸತೊಂದು ಸಾಧ್ಯತೆಯು ಮೂಡಿ ಬಂತು. ಸಂಸ್ಕೃತಿಯನ್ನು ನೋಡುವ ಮತ್ತೊಂದು ಕ್ರಮದ ಕುರಿತು ಅಡರ್ನೋ ಮತ್ತೆ ಕೆಲವು ಅಂಶಗಳನ್ನು ಹೇಳಿದ್ದಾನೆ. ಅವನನ್ನು ಕೆಲವರು ಇಲೈಟಿಸ್ಟ್ ಎಂದು ಕರೆದಿರುವುದು ನಿಜ. ಅವನ ವಾದಗಳನ್ನು ಕೆಲವರು ಆಧುನಿಕೋತ್ತರವಾದಿ ಎಂದೂ ಹೇಳಿದ್ದಾರೆ.ಕಲಾತ್ಮಕ ಆಧುನಿಕತೆ ಮತ್ತು ಅದರ ಪರಿಣಾಮಗಳನ್ನು ಅವನು ಚರ್ಚಿಸಿದ ಕ್ರಮಗಳು ಭಿನ್ನ. ಕಲೆಯು ಒಂದು ಹಂತದಲ್ಲಿ ಸಂಸ್ಕೃತಿ ಕೈಗಾರಿಕೆಯಾಗಿಯೂ ಬದಲಾಗಿದೆ. ಆಧುನಿಕ ಯಗದಲ್ಲಿ ಕಲೆಯು ಗಿರಾಕಿಯನ್ನು ಆಧರಿಸಿಕೊಂಡು ರೂಪುಗೊಂಡಿದೆ ಎನ್ನುವುದು ಬಹಳ ಮುಖ್ಯವಾಗಿ ಗಮನಿಸಬೇಕು. ಕಲಾತ್ಮಕ ಆಧುನಿಕತೆಯು ಸುಮ್ಮನೆ ಹುಟ್ಟಿಕೊಂಡಿಲ್ಲ. ಅದನ್ನು ನೋಡುವಾಗ ನಾವು ಮರೆಯುವುದು ಯಾವುದನ್ನು ಎಂದರೆ ಅದಕ್ಕೂ ಆಧುನಿಕ ಬಂಡವಾಳವಾದಕ್ಕೂ ಇರುವ ಅಂತರ್ಗತ ಸಂಬಂಧವನ್ನು. ಅಂದರೆ ಬಂಡವಾಳವಾದಿ ಚರಿತ್ರೆಗೂ ಅದರ ಪರಿಣಾಮಗಳಿಗೂ ಕೆಲವು ಮಾದರಿಯ ಸಂಬಂಧಗಳಿವೆ. ಆಧುನಿಕಯುಗದ ಜ್ಞಾನದ ವರ್ಗೀಕರಣವು ನಮಗೆ ಬೇರೆ ಬೇರೆ ರೀತಿಯ ಪಾಠಗಳನ್ನು ಹೇಳಿವೆ. ಇದಕ್ಕೆ ಒಂದು ಉದಾಹರಣೆಯನ್ನು ನಾವು ಕೊಡಬಹುದು–ಒಂದು ಸಿನಿಮಾವನ್ನು ನಾವು ನೋಡುವಾಗ ಅದನ್ನು ಸಮಗ್ರವಾಗಿ ನೋಡುತ್ತೇವೆ. ಆದರೆ ಅದರ ಹಿಂದೆ ನಡೆಯುತ್ತಿರುವ ಅನೇಕ ಕೆಲಸವು ನಮ್ಮ ಗಮನಕ್ಕೆ ಬಾರದೇ ಹೋಗುತ್ತದೆ. ಅದರಲ್ಲಿ ಅನೇಕರು ಕೆಲಸವನ್ನು ಮಾಡಿದ್ದಾರೆ ಎನ್ನುವುದೇ ನಮಗೆ ಮರೆತು ಹೋಗಿರುತ್ತದೆ. ಆದರಲ್ಲಿ ಛಾಯಗ್ರಹಣವಿರುತ್ತದೆ. ನಿರ್ದೇಶನವಿರುತ್ತದೆ. ಕತೆಯಿರುತ್ತದೆ. ಅದರ ಹಿಂದೆ ಅನೇಕರು ಕೆಲಸವನ್ನು ಮಾಡಿದ್ದಾರೆ. ಎನ್ನುವುದೇ ನಮಗೆ ಮರೆತು ಹೋಗಿರುತ್ತದೆ. ಯಾವುದನ್ನು ಸಂಕಲನ ಮಾಡಬೇಕು ಯಾವುದನ್ನು ಬಿಡಬೇಕು ಅನ್ನುವುದು ನಮಗೆ ಗೊತ್ತಿಲ್ಲ. ಯಾವುದನ್ನು ಬಿಟ್ಟಿದ್ದಾರೆ ಎನ್ನುವುದು ಅನೇಕ ಸಂದರ್ಭದಲ್ಲಿ

ನಮಗೂ ಗೊತ್ತಾಗುವುದಿಲ್ಲ. ಪುನರುಜ್ಜೀವನ ಕಾಲದ ಅನಂತರ ನಡೆದ ಅನೇಕ ಸಂಗತಿಗಳಲ್ಲಿ ಒಂದು ಅಂಶವನ್ನು ನಾವು ಇಲ್ಲಿ ನೆನಪಿಸಿಕೊಳ್ಳಬೇಕು–ಕೈಗಾರಿಕ ಸಂಸ್ಕೃತಿಯು ಬಂದ ಮೇಲೆ ಮನುಷ್ಯನ ಆಲೋಚನೆಯ ಕ್ರಮದಲ್ಲಿ ಬದಲಾವಣೆಯು ಉಂಟಾಯಿತು. ವ್ಯಕ್ತಿಯನ್ನು ಭಿನ್ನವೆಂದು ಪರಿಗಣಿಸುವ ಕ್ರಮವು ಚಾಲ್ತಿಗೆ ಬಂತು. ಪುನರುಜ್ಜೀವನದ ಅನಂತರ ನಡೆದ ಅನೇಕ ಸಂಗತಿಗಳಲ್ಲಿ ಮುಖ್ಯವಾದ ಅಂಶವೆಂದರೆ ಯಾವದೋ ಒಂದು ಮಿಥಿಕಲ್ ಅನ್ನಬಹುದಾದ ಶಕ್ತಿಯು ಮನುಷ್ಯನನ್ನು ಆಳುವುದಿಲ್ಲ. ಅದರ ಬದಲಿಗೆ ಮನುಷ್ಯನು ಆಗಿದ್ದಾನೆ. ತತ್ವಜ್ಞಾನದಲ್ಲಿ ಬಂದ ಬಹಳ ಮುಖ್ಯವಾದ ಅಂಶವೆಂದರೆ ಕಾರಣವೇ ಮುಖ್ಯವಾಗಿದೆ. ಇದನ್ನು ನಾವೀಗ ಕಾರ್ಯ ಕಾರಣಗಳ ಸಂಬಂಧವೆಂದು ಹೇಳುತ್ತೇವೆ. ಮತ್ತು ಆಗಿನ ರಾಶನಾಲಿಟಿಯು ಹೇಗಿತ್ತು ಎಂದರೆ ಕಾರಣ ಮತ್ತು ಅದರಿಂದ ಹೊಳೆಯುವ ಬರುವ ಅನೇಕ ವಿಚಾರಗಳು ಹಾಗೂ ವಿಶ್ವಾತ್ಮಕತೆಗೂ ಒಂದು ಸಂಬಂಧವಿದೆ. ಯಂತ್ರದ ಪರಿಕರಗಳು ಮೂಡಿಸಿದ ಜಾಗೃತಿಯು ಯಾವ ವಿಧವೆಂದರೆ ಯಂತ್ರಕ್ಕೆ ಯಾವುದೇ ರೀತಿಯಲ್ಲಿ ಮನಸ್ಸು ಎನ್ನುವುದು ಬೇಕಾಗಿಲ್ಲ. ಅದು ಯಾವ ಜಾಗಕ್ಕೆ ಹೋದರೂ ಒಂದೇ ರೀತಿಯಲ್ಲಿ ಕೆಲಸವನ್ನು ಮಾಡುತ್ತದೆ. ಪುನರುಜ್ಜೀವನ ಅನಂತರ ಬಂದ ಬಹಳ ಮುಖ್ಯವಾದ ಪ್ರಶ್ನೆಯೆಂದರೆ ವ್ಯಕ್ತಿಯ ಸುಖ.

ಪೋಸ್ಟ್ ಫೋರ್ಡಿಸಂ

ಸಂಸ್ಕೃತಿಯ ಅಧ್ಯಯನವು ಒಂದು ಗುಂಪಿನ ಪ್ರಾತಿನಿಧಿಕ ಮಾದರಿಯೆನ್ನುವಂತೆ ನಡೆದ ಅಧ್ಯಯನಗಳಿಗೆ ಸೀಮಿತವಾದ ಗಡಿರೇಖೆಗಳಿವೆ. ಯಾವಾಗ ಪೋಸ್ಟ್ ಫೋರ್ಡಿಸಂ ಮತ್ತು ಪೋಸ್ಟ್ ಮೊರ್ಡನಿಸಂ ಬಂತೋ ಅಗ ಅದರ ಚರ್ಚೆಗಳ ಸ್ವರೂಪವೂ ಬದಲಾಯಿತು. ಉದಾಹರಣೆಗೆ ನಾವು ಬಳಸುವ ಆಧುನಿಕೋತ್ತರವೆಂದು ಯಾವುದನ್ನು ಹೇಳುತ್ತಿದ್ದೇವೆಯೋ ಅದು ಯಾರಿಗೆ ಮತ್ತು ಹೇಗೆ ಅನ್ವಯವಾಗುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಪ್ರೆಡ್ರಿಕ್ ಜೇಮ್ಸನ್ ಹೇಳುವುದು ಏನೆಂದರೆ ಆಧುನಿಕ ಜಾಗತಿಕ ಮಾರುಕಟ್ಟೆಯ ಕಲ್ಪನೆಯೂ ಅಷ್ಟೇ ಮುಖ್ಯವಾದ ಪರಿಕಲ್ಪನೆಯನ್ನು ನಮ್ಮ ಮುಂದೆ ಇಟ್ಟಿದೆ ಅದು ರಾಷ್ಟ್ರೀಯತೆಯ ಗಡಿಯನ್ನು ಮೀರಿ ಜಾಗತಿಕ ಮಾರುಕಟ್ಟೆಯನ್ನು ಕೇಂದ್ರವಾಗಿರಿಸಿಕೊಂಡಿದೆ. ಆದರೆ ಅದರ ಸಮಸ್ಯೆಯೂ ಅಷ್ಟು ಬೇಗನೆ ನಮ್ಮ ಗಮನಕ್ಕೆ ಬರುವುದೂ ಇಲ್ಲ. ಬೆಳೆಯುತ್ತಿರುವ ತಾಂತ್ರಿಕತೆಯು ಮನುಷ್ಯರನ್ನು ಹತ್ತಿರ ತರುತ್ತಿದೆ.ಇದರಿಂದ ಸಾಂಸ್ಕೃತಿಕ ಅಧ್ಯಯನವು ಮತ್ತೆ ಬೇರೆ ರೀತಿಯಲ್ಲಿಯೂ ಬೆಳೆಯಿತು. ಆಧುನಿಕ ಬಂಡವಾಳವಾದವು ಮಾಹಿತಿ, ತಾಂತ್ರಿಕತೆ, ಮನೋರಂಜನೆ, ಮಾರುಕಟ್ಟೆಯ ವಿಸ್ತರಣೆಯನ್ನು ಒಳಗೊಂಡಿದೆ. ಏಕಕೇಂದ್ರಿತ ಬಂಡವಾಳವಾದವು ತನಗೆ

ಬೇಕಾದಂತೆ ಮನುಷ್ಯರನ್ನು ವ್ಯಾಖ್ಯಾನಿಸುತ್ತದೆ. ಮನುಷ್ಯನು ಈಗ ಕೇವಲ ಗ್ರಾಹಕನಾಗಿದ್ದಾನೆ. ವ್ಯಕ್ತಿಯ ಅನನ್ಯತೆಯು ಈ ದೃಷ್ಟಿಯಿಂದ ಭಿನ್ನವಾಗಿದೆ. ಅನೇಕ ಸಾಂಸ್ಕೃತಿಕ ಅಧ್ಯಯನವು ವ್ಯಕ್ತಿಯನ್ನು ಒಂದು ಬಿಡಿಯಾದ ಭಾಗವಾಗಿ ನೋಡುತ್ತಿರುವುದರಿಂದ ಹೀಗೆ ಆಗುತ್ತಿದೆ. "ನಿರ್ಧಾರಾತ್ಮಕವಾದ ಏಕಕೇಂದ್ರಿತ ಆರ್ಥಿಕ ಚಟುವಟಿಕೆಯಿದು." ಎನ್ನುವ ಗ್ರಾಂಶಿಯ ಮಾತು ಇಲ್ಲಿಗೆ ಸರಿಯಾಗಿ ಹೊಂದಾಣಿಕೆಯಾಗುತ್ತಿದೆ. ಜಾಗತಿಕ ಮಾರುಕಟ್ಟೆಯ ಸಂದರ್ಭವನ್ನು ನಾವು ಸರಳವಾಗಿ ಪರಿಗಣಿಸಬೇಕಾಗಿಯೂ ಇಲ್ಲ. ವಾಸ್ತವವಾಗಿ ಈಗ ನಡೆಯುತ್ತಿರುವ ಚರ್ಚೆಯನ್ನು ನಾವು ಹೀಗೂ ವಿಶ್ಲೇಷಿಸಬಹುದು–ನಾವೀಗ ಮಾಡಬೇಕಾದುದು ಏನೆಂದರೆ ಜಾಗತಿಕ ಬಂಡವಾಳವಾದವು ಸಂಸ್ಕೃತಿಯೊಂದಿಗೆ ಯಾವ ರೀತಿಯ ಒಡನಾಟವನ್ನು ಇಟ್ಟುಕೊಂಡಿದೆ ಎಂದು ನೋಡುವುದು. ಹಾಗೂ ಈ ಸಂದರ್ಭದಲ್ಲಿ ಮನುಷ್ಯನು ಹೇಗಿದ್ದಾನೆ. ಅದರೆ ಜಾಗತಿಕ ಬಂಡವಾಳವಾದವು ವ್ಯಕ್ತಿಯನ್ನು ನಿರೂಪಿಸುವ ಕ್ರಮಗಳು ಭಿನ್ನ. ಸ್ಥಳೀಯತೆಯು ನಾಶ ಹೊಂದಿ ಅದರ ಬದಲಿಗೆ ಹೊಸ ನಿರ್ವಚನಗಳು ಪ್ರಾರಂಭವಾಗಿದೆ. ಜಾಗತಿಕ ಸಮೂಹ ಮಾಧ್ಯಮಗಳು ತನಗೆ ಬೇಕಾದಂತೆ ಜನರನ್ನು ರೂಪಿಸುತ್ತಿದೆ. ತಮಗೆ ಬೇಕಾದಂತೆ ಸಂಸ್ಕೃತಿಯನ್ನು ಹಿಡಿತಕ್ಕೆ ತಂದು ನಿರ್ವಹಿಸುತ್ತಿದೆ. ಎನ್.ಬಿ.ಸಿ. ಎಂ.ಟಿ.ವಿ. ಮುಂತಾದವುಗಳು ನಮ್ಮನ್ನು ರೂಪಿಸುವುದು ಮಾತ್ರವೇ ಅಲ್ಲ ಕೆಲವು ಸಂಗತಿಗಳನ್ನು ಕೈಬಿಟ್ಟಿವೆ – ಇವುಗಳ ಎದುಎನಲ್ಲಿ ಅನನ್ಯತೆ, ಪ್ರತ್ಯೇಕತೆ, ಮೌಲ್ಯ, ಸಂಸ್ಕೃತಿಯ ವ್ಯಾಖ್ಯೆಗಳು ಬದಲಾಗಿವೆ. ಕಸಿ ಸಂಸ್ಕೃತಿಯೊಂದು ಮನುಷ್ಯರನ್ನು ಆಳುತ್ತದೆ. ಮನುಷ್ಯನ ಆಸೆ, ಅವನ ಬಯಕೆ. ಅವನ ಅತೃಪ್ತಿಯನ್ನು ಮಾರುಕಟ್ಟೆಯು ನಿಯಂತ್ರಿಸುತ್ತದೆ ಎನ್ನುವುದೇ ಮುಖ್ಯ.ಸಾಂಸ್ಕೃತಿಕ – ಹಾಗೂ ಶೈಕ್ಷಣಿಕ ವರ್ಗೀಕರಣವು ಮನುಷ್ಯನ ಕೆಲಸವನ್ನು ಅನನ್ಯವೆಂದು ಹೇಳುತ್ತವೆ. ಕಲಾತ್ಮಕ ಆಧುನಿಕತೆಗೂ ಬದಲಾದ ಸಂಸ್ಕೃತಿಯ ಪ್ರಶ್ನಗೂ ವ್ಯತ್ಯಾಸವಿದೆ. ಆಧುನಿಕವಾದ ಅನೇಕ ಕೆಲಸಗಳು ಮತ್ತೆ ಬೇರೆ ಬೇರೆ ವರ್ಗೀಕರಣಗಳನ್ನು ಮಾಡಿದವು. ಮನುಷ್ಯನು ಹಳೆಯದಕ್ಕೆ ವಿದಾಯವನ್ನು ಹೇಳುತ್ತಾನೆ, ಹಾಗೂ ತನ್ನ ಅಸ್ತಿತ್ವವನ್ನು ತನಗೆ ತಾನೇ ರೂಢಿಸಿಕೊಳ್ಳುತ್ತಾನೆ. ಆಧುನಿಕವಾಗಿ ಮನುಷ್ಯರ ಸ್ವಭಾವವು ಬದಲಾಗುತ್ತಿದೆ ಎನ್ನುವುದೇ ಮಾನನೀಯ. ಸಂಸ್ಕೃತಿಯನ್ನು ನೋಡುವಾಗ ನಾವು ಗ್ರಹಿಸುವ ವಿಧಾನಗಳು ಹೇಗೆ ಇವೆ ಎನ್ನುವುದೂ ಅಷ್ಟೇ ಮುಖ್ಯ.

ವ್ಯಕ್ತಿ

ಸಮಾಜವೆಂದರೆ ಹಾಗೆಯೇ: ಅದು ಬೇರೆ ಬೇರೆ ರೀತಿಯಲ್ಲಿ ಇರುತ್ತದೆ. ಶ್ರೇಣೀಕರಣ ಎಂದು ಹೇಳುತ್ತೇವೆ. ಅದರ ಸ್ವರೂಪ ವ್ಯಕ್ತಿಯ ಘನತೆಗೂ ಒಂದು

ಸಂಬಂಧವು ಇದೆ. ಹಾಗೆ ನೋಡಿದರೆ ವ್ಯಕ್ತಿ ಮತ್ತು ಅವನ ಸಮೂಹದ ಸಂಬಂಧಗಳು ವಿಭಿನ್ನವಾಗುತ್ತವೆ. ಸಮೂಹವನ್ನು ನೋಡುವಾಗ ವ್ಯಕ್ತಿ ಅವನ ಸ್ವರೂಪವು ಏನು ಎನ್ನುವುದು ಅತ್ಯಂತ ಮುಖ್ಯವಾಗುತ್ತದೆ. ಹ್ಯಾಮ್ಲೆಟ್ ನಾಟಕದಲ್ಲಿ ಬರುವ ತಂದೆಯ ಪ್ರೇತ ಬಂದು ಕಾಡುತ್ತದೆ. ಅದು ಭೂತವಾದದ್ದು ಸತ್ತ ನಂತರ ಬರುತ್ತದೆ. ನಮಗೆ ಮಾರ್ಕ್ಸ್‌ವಾದವು ಭೂತವೇ ಅಥವಾ ವರ್ತಮಾನವೇ ಎನ್ನುವ ಅರ್ಥದಲ್ಲಿ ಡೆರಿಡಾ ಪ್ರಶ್ನೆಯನ್ನು ಕೇಳುತ್ತಾನೆ. ಮನುಷ್ಯ ಸಂಬಂಧಗಳು ಭಿನ್ನ ರೀತಿಯಲ್ಲಿ ಇರುತ್ತವೆ. ಕೆಲವು ತಾತ್ಕಾಲಿಕವಾದದ್ದು ಮತ್ತು ಮತ್ತೆ ಕೆಲವು ಶಾಶ್ವತವಾದದ್ದು. ಆದರೆ ಮನುಷ್ಯರಿಗೆ ಪರಸ್ಪರವಾದ ಸಂಬಂಧವೇ ಇಲ್ಲವೆಂದು ಹೇಳಲು ಬರುವುದಿಲ್ಲ. ಆಧುನಿಕ ಮನುಷ್ಯ ಮತ್ತು ಅವನ ಜೀವನದ ಕ್ರಮವು ಈಗ ಬದಲಾಗಿದೆ. ಆದ್ದರಿಂದ ನಮ್ಮ ಸಂಕಥನಗಳು ಕೂಡಾ ಬದಲಾಗಿವೆ. ಮನುಷ್ಯ ಮತ್ತು ಅವನ ಜೀವನವು ಯಾವುದೇ ಸಂಬಂಧವಿಲ್ಲದೆ ಇರಲು ಸಾಧ್ಯವೇ ಇಲ್ಲ. ಆಧುನಿಕತೆಯು ಮನುಷ್ಯರ ಸಂಬಂಧವನ್ನು ಬೇರೆ ಮಾಡಿದೆ ಎಂದು ಯಾರೂ ಗುರುತಿಸಲು ಸಾಧ್ಯವಿದೆ. ಗ್ರಾಂಶಿಯು ಇದನ್ನು ಗುರುತಿಸುತ್ತಾನೆ. ಗ್ರಾಂಶಿಯು ನಮಗೆ ಇನ್ನೊಂದು ವಿಚಾರವನ್ನು ಹೇಳುತ್ತಾನೆ: ಮನುಷ್ಯ, ಮನುಷ್ಯತ್ವ, ವ್ಯಕ್ತಿತ್ವ, ವೈಯಕ್ತಿಕತೆಗಳು ನಮ್ಮ ಮೇಲೆ ಬೇರೆ ಬೇರೆ ಪ್ರಭಾವವನ್ನು ಬೀರುತ್ತದೆ. ಇದನ್ನು ನಾವು ನಮ್ಮ ಸಂಕಥನಗಳಲ್ಲಿ ಕಾಣಬಹುದು. ಆದರೆ ನಾವು ಯಾರ ಜೊತೆಗೆ ಮಾತಾಡುತ್ತೇವೆ ಮತ್ತು ಯಾರ ಜೊತೆಗೆ ಮಾತಾಡುವುದಿಲ್ಲ ಎನ್ನುವುದು ನಮ್ಮ ನಮ್ಮ ಆಯ್ಕೆಗೆ ಸಂಬಂಧಪಟ್ಟಿದೆ. ಯಾವುದೇ ಸಂಕಥನಗಳು ನಮಗೆ ಈವತ್ತು ವ್ಯಕ್ತಿಯನ್ನು ಅವನ ಚಹರೆಗಳನ್ನು ಹೆಚ್ಚು ಖಚಿತ ಮಾಡುವುದು ನಿಜ. ಬಾಹ್ಯದಲ್ಲಿ ಒಂದು ಕ್ರಿಯಾತ್ಮಕವಾದ ಸಂಬಂಧವು ಉಂಟಾಗುವುದು ನಮಗೆ ನಮ್ಮ ಮಾತು ಮತ್ತು ಅದರ ಚಟುವಟಿಕೆಯಿಂದ. ಆಧುನಿಕ ಮನುಷ್ಯ ಮತ್ತು ಅವನ ಚಹರೆಗಳು ಹೇಗೆ ಬೇರೆಯಾಗುತ್ತವೆ ಎಂದು ಅವನು ವಿವರಿಸುತ್ತಾನೆ. ಆದರೆ ಒಂದು ವ್ಯವಸ್ಥೆಯು ಹೇಗೆ ಮನುಷ್ಯರ ಸಂಬಂಧವನ್ನು ರೂಪಿಸುತ್ತದೆ ಎನ್ನುವುದು ಇಲ್ಲಿ ಮುಖ್ಯವಾಗಿದೆ. ಕೈಗಾರಿಕೆಗಳು ಒಂದು ಬಗೆಯ ಸಂಬಂಧವನ್ನು ಹೇಳುತ್ತದೆ. ಗ್ರಾಮ ಸಮಾಜವು ಮತ್ತೊಂದು ಬಗೆಯ ಸಂಬಂಧವನ್ನು ರೂಪಿಸುತ್ತದೆ. ಅದರಲ್ಲಿ ವಸ್ತುನಿಷ್ಠ ಸಂಬಂಧ ಮತ್ತು ಭಾವನಿಷ್ಟವಾದ ಸಂಬಂಧವೆನ್ನುವುದು ಇರುತ್ತದೆ. ನಾವು ಯಾವ ಸಂಬಂಧವನ್ನು ರೂಪಿಸುತ್ತೇವೆ ಮತ್ತು ಅದರಲ್ಲಿ ಯಾವುದು ಹೆಚ್ಚು ಮುಖ್ಯವಾಗುತ್ತದೆ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ನಮ್ಮ ಮಾತುಕತೆಗಳ ಕೇಂದ್ರವು ಯಾವುದು ಎನ್ನುವುದು ಅತ್ಯಂತ ಮುಖ್ಯ. ನಮ್ಮ ಸಂವಹನದಲ್ಲಿ ಕೆಲವು ಕೇಂದ್ರಗಳು ಇರುತ್ತವೆ. ಹೊರಗಿನ ಸನ್ನಿವೇಶಕ್ಕೂ ನಮ್ಮ ಸಂವಾದಗಳಿಗೂ ಸಂಬಂಧವು ಇರುತ್ತದೆ. ಸಮಾಜ ಮತ್ತು ಅದರ

ಸಂಬಂಧದಲ್ಲಿ ಮಾತುಕತೆಯು ಅತ್ಯಂತ ಮಹತ್ವದ್ದೂ ಹೌದು. ಅದನ್ನು ನಾವು ಮರೆಯಲು ಆಗುವುದೂ ಇಲ್ಲ. ಅದು ಹೆಚ್ಚು ಕ್ರಿಯಾಶೀಲವಾದ ಸಂಗತಿಯೂ ಆಗಿದೆ. ಮಾತುಕತೆಯು ಪರಸ್ಪರವಾದ ಸಂಬಂಧವನ್ನು ಹೇಳುತ್ತದೆ. ಆದರೆ ಇದನ್ನು ನಾವು ತಾತ್ವಿಕವಾಗಿಯೂ ಗಮನಿಸಬೇಕಾಗುತ್ತದೆ. ವ್ಯಕ್ತಿ ಮತ್ತು ಅವನ ಸಂಕಥನಗಳ ರೂಪಗಳನ್ನು ಅವನಲ್ಲಿ ಮಾತ್ರವೇ ನೋಡಬೇಕೆ ಅಥವಾ ಅದನ್ನು ಒಂದು ಸಮಾಜದ ರೂಪವಾಗಿ ನೋಡಬೇಕೆ ಎನ್ನುವುದು ತತ್ವಜ್ಞಾನದ ಪ್ರಶ್ನೆಯೂ ಆಗಿದೆ. ಮನುಷ್ಯ ಮತ್ತು ಅವನ ಭಾಷೆಯನ್ನು ನಾವು ಪವಿತ್ರವಾಗಿ ನೋಡಬೇಕೆ ಅಥವಾ ಧಾರ್ಮಿಕವಾಗುವಂತೆ ನೋಡುತ್ತೇವೆಯೇ ಅಥವಾ ಅದನ್ನು ವ್ಯಕ್ತಿಗತವಾಗಿ ನೋಡುವುದೇ ಅಥವಾ ಭಾಷೆಯನ್ನು ಎಲ್ಲರ ನಡುವೆ ಇರುವ ಒಂದು. ಸಾಮಾನ್ಯವಾದ ಪ್ರಕ್ರಿಯೆಯಂತೆ ನೋಡುವುದೇ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆಯೂ ಆಗುತ್ತದೆ. ಅದನ್ನು ಗ್ರಾಂಶಿಯು ಮಾತ್ರ ಸಾಮಾನ್ಯವಾದ ಒಂದು ಸಂಕಥನವೆನ್ನುವಂತೆ ನೋಡುತ್ತಾನೆ. ಮಾತು ಮತ್ತು ಅದರ ಭವ್ಯತೆಯನ್ನು ಕ್ರೋಚೆಯು ಹೇಳಿದ್ದ. ವ್ಯಕ್ತಿಯ ಮಾತುಗಳನ್ನು ನಾವು ಮನುಷ್ಯನ ಒಂದು ಭಾಗವಾಗಿಯೇ ನಾವು ನೋಡಬೇಕು ಎಂದು ಗ್ರಾಂಶಿಯು ಹೇಳುತ್ತಾನೆ. ಮನುಷ್ಯತ್ವ ಎನ್ನುವುದು ಅವನ ವ್ಯಕ್ತಿತ್ವದ ಭಾಗವಾಗಿಯೇ ನೋಡಬೇಕಾಗುತ್ತದೆ ಎಂದು ಅವನು ಭಾವಿಸುತ್ತಾನೆ. ವ್ಯಕ್ತಿಗಳು ಮತ್ತು ಅವರ ಸಂಬಂಧವನ್ನು ಗ್ರಾಂಶಿಯು ಕ್ರಿಯಾಶೀಲವಾದದ್ದು ಮತ್ತು ಪ್ರಜ್ಞಾಪೂರ್ವಕವಾದದ್ದು ಎಂದು ಎಂದು ಹೇಳುತ್ತಾನೆ. ಅದರಲ್ಲಿ ಸಾಮೂಹಿಕವಾದ ಅರ್ಥವೂ ಇದೆ. ಅದರಲ್ಲಿ ನಮಗೆ ಕೆಲವು ಮಾದರಿಯ ಎಚ್ಚರವೂ ಇರುತ್ತದೆ. ಯಾರನ್ನು ನಾವು ವ್ಯಕ್ತಿಗಳು ಎಂದು ಹೇಳುತ್ತೇವೆಯೋ ಅವರು ವಾಸ್ತವವಾಗಿ ಸಾಮಾಜೀಕರಣದ ಒಂದು ಭಾಗವೂ ಆಗಿರುತ್ತಾನೆ. ಆದ್ದರಿಂದ ವ್ಯಕ್ತಿತ್ವ ಎನ್ನುವುದು ಆಗುತ್ತದೆ. ಅದರಲ್ಲಿ ವಿಶಿಷ್ಟತೆಯು ಇರುವುದು ಆಯಾ ಸಮಾಜ ಮತ್ತು ಅದರ ಅರ್ಥದಲ್ಲಿ ಎನ್ನುವುದು ಗ್ರಾಂಶಿಯ ವಾದ.

ದೇಹ ಮತ್ತು ಮನಸ್ಸು

ಗ್ರಾಂಶಿಯು ಒಂದು ಅರ್ಥದಲ್ಲಿ ಚರಿತ್ರೆಯನ್ನು ತನ್ನ ಚರ್ಚೆಯ ಪ್ರಧಾನವಾದ ಭೂಮಿಕೆಯಾಗಿ ಮಾಡುತ್ತಾನೆ. ಅವನು ಸಂಸ್ಕೃತಿಯನ್ನು ವಿವರಿಸುವಾಗಲೂ ಸಾವಯವ ಎನ್ನುವ ಪರಿಕಲ್ಪನೆಯನ್ನು ಹೆಚ್ಚು ಅರ್ಥಪೂರ್ಣವಾಗಿ ಬಳಸುತ್ತಾನೆ. ಆದರೆ ವಿದ್ವಾಂಸರ ಪ್ರಕಾರ ಅದನ್ನು ಅಂದರೆ ಸಾವಯವ ಎನ್ನುವುದನ್ನು ಆಗಸ್ಟಸ್ ಕಾಮ್ಟೆಯು ತನ್ನ ಧನಾತ್ಮಕವಾದ ದೃಷ್ಟಿಕೋನವನ್ನು ಹೇಳುವಾಗ ವಿವರಿಸಿದ್ದಾನೆ. ಹಾಗೆ ನೋಡಿದರೆ ಸಾವಯವ ಎನ್ನುವುದು ಅತ್ಯಂತ ವಿಶಿಷ್ಟವಾದ ಒಂದು ಪರಿಕಲ್ಪನೆಯು ನಿಜ ಕಾಮ್ಟೆಯದ್ದು ಒಂದು ದೃಷ್ಟಿಯಿಂದ ಭವಿಷ್ಯದ ಕುರಿತ

ಚಿಂತನೆಯೂ ಆಗಿದೆ. ಫ್ರೆಂಚಿನ ಅತ್ಯಂತ ಮಹತ್ವದ ಸಮಾಜಶಾಸ್ತ್ರಜ್ಞ ಆಗಿರುವ ಕೆಲವು ಅತ್ಯಂತ ಮಹತ್ವದ ಚರ್ಚೆಯನ್ನು ಮಾಡುತ್ತಾನೆ. ಅದರಲ್ಲಿಯೂ ಅವನು ತನ್ನ ದಿ ಪಾಸಿಟಿವ್ ಫಿಲಾಸಫಿಯನ್ನು ಹೇಳುವಾಗ ಈ ಕೆಲವು ವಿಚಾರಗಳನ್ನು ಚರ್ಚೆ ಮಾಡುತ್ತಾನೆ.: (ಹಾರಿಟ್ ಮಾರ್ಟಿನ್ ವಾಲ್ಯುಮ್ 2 ಬಟೋಚೆ ಬುಕ್ಸ್ 2000) ಅವನು ಬಾಹ್ಯವನ್ನು ಗಮನಿಸಿಕೊಂಡು ಕೆಲವು ವಿಚಾರವನ್ನು ಹೇಳುತ್ತಾನೆ. ದೇಹವೂ ಒಂದು ಸಾವಯವ ಎಂದು ಅವನು ಭಾವಿಸುತ್ತಾನೆ. ಅದರಲ್ಲಿ ಅನೇಕ ಅಂಶಗಳ ಮಿಶ್ರಣವು ಇರುತ್ತದೆ ಎಂದು ಅವನು ತಿಳಿಯುತ್ತಾನೆ. ಇದನ್ನು ವಿವರಿಸುವಾಗ ನಮಗೆ ಆಕ್ಸಿಜನ್ ಹೇಗೆ ಅಗತ್ಯವಾಗಿದೆ ಮತ್ತು ಅದನ್ನು ನಾವು ಹೇಗೆ ಗಾಳಿಯಿಂದ ತೆಗೆದುಕೊಳ್ಳುತ್ತೇವೆ ಎಂದೂ ವಿವರಿಸುತ್ತಾನೆ. ದೇಹ ಮತ್ತು ಅದರ ಶಾಸ್ತ್ರವನ್ನು ನಾವು ಹೇಗೆ ಗ್ರಹಿಸುತ್ತೇವೆ ಎಂದು ಸವಿವರವಾಗಿ ಅವನು ಮಂಡಿಸಿದ್ದಾನೆ. ದೇಹಕ್ಕೆ ಅಥವಾ ದೇಹದ ಸಾವಯವ ರೂಪಕ್ಕೆ ಯಾವುದು ವಿಷವಾಗುತ್ತದೆ ಮತ್ತು ಯಾವುದು ಸಹಯೋಗವನ್ನು ಕೊಡುತ್ತದೆ ಎಂದು ಅವನು ಹೇಳುತ್ತಾನೆ. ದೇಹ ಮತ್ತು ಅದರ ಸಾವಯವತೆಗೂ ಹೊರಗಿನ ಸಂಬಂಧಕ್ಕೂ ಇರುವ ಸಾಮ್ಯ ಮತ್ತು ವೈಷಮ್ಯವನ್ನು ಅವನು ಹೇಳುತ್ತಾನೆ. (ಪುಟ.64 – 74) ಈ ದೃಷ್ಟಿಯಿಂದ ನಮಗೆ ಅಂದರೆ ನಮ್ಮ ದೇಹಕ್ಕೆ ಒಂದು ಸಾವಯವ ಸಂಬಂಧವು ಇರುತ್ತದೆ. ಆದರೆ ಇದರ ನಡುವೆ ಅವನು ಮತ್ತೊಂದು ಮಾತನ್ನು ಹೇಳುತ್ತಾನೆ: ಎಲ್ಲಾ ವಿಜ್ಞಾನವೂ ಕೂಡಾ ತಮ್ಮದೇ ಆದ ನಿಯಮವನ್ನು ಕಂಡುಕೊಂಡಿವೆ. (ಅದೇ; 75) ನಾವು ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಅದು ದೇಹವನ್ನು ಕೇಂದ್ರವಾಗಿರಿಸಿಕೊಂಡ ತತ್ವಜ್ಞಾನ. ಅದು ಕೂಡಾ ಸಾವಯವನ್ನು ಹೆಚ್ಚು ಚರ್ಚೆ ಮಾಡುತ್ತದೆ. ದೇಹ ಮತ್ತು ಮನಸ್ಸುಗಳ ಸಾವಯವ ರೂಪವನ್ನು ಅದು ಗ್ರಹಿಸುತ್ತದೆ. ಅದರ ಜೊತೆಗೆ ಅವನು ಕೆಮಿಕಲ್ ಕೇಂದ್ರವೆಂದು ಹೇಳುತ್ತಾನೆ. ಸಾವಯವ ಸಂಬಂಧ ಮತ್ತು ಸಾವಯವ ಬೆಳವಣಿಗೆ ಎನ್ನುವುದು ಅತ್ಯಂತ ಮಹತ್ವದ್ದು. ಅದನ್ನು ಅವನು ಹೇಳುತ್ತಾನೆ ಸಾವಯವ ಸಂಬಂಧವೇ ಇಲ್ಲದ ತತ್ವಜ್ಞಾನ ಮತ್ತು ಸಾವಯವ ಸಂಬಂಧವು ಇರುವ ದೇಹದ ಶಾಸ್ತ್ರಗಳ ನಡುವೆ ಇರುವ ಸಂಘರ್ಷವೂ ಅವನಿಗೆ ಹೆಚ್ಚು ಮುಖ್ಯವಾಗುತ್ತದೆ. ಆದ್ದರಿಂದಲೇ ಕಾಮ್ಟೆಯು ಧನಾತ್ಮಕವಾದ ನಿಲುವು ಅತ್ಯಂತ ಅಗತ್ಯವೆಂದು ಹೇಳುತ್ತಾನೆ. (ಪುಟ; 82) ಹಾಗೆ ನೋಡಿದರೆ ಅವನು ರಾಜಕಾರಣ ಮತ್ತು ಸಾಮಾಜಿಕ ವಿವರಣೆಯಲ್ಲಿಯೂ ಧನಾತ್ಮಕವಾದ ಅಂಶದ ಅಗತ್ಯವನ್ನು ಪ್ರತಿಪಾದಿಸುತ್ತಾನೆ. ಸಮಾಜ ಮತ್ತು ಅದರ ಪುನರ್ ನಿರ್ಮಾಣವನ್ನು ಪ್ರತಿಪಾದಿಸುತ್ತಾನೆ. (ಕಾಮ್ಟೆ – 1875 ಸಿಸ್ಟಮ್ ಆಫ್‌ಪೊಸಿಟಿವ್ ಪಾಲಿಟಿ ಲಾಂಗ ಮನ್, ಗ್ರೀನ್ ಅಂಡ್ ಕೊ) ಅವನು ಸಾಮಾಜಿಕವಾದ ಭೌತಶಾಸ್ತ್ರವನ್ನು ಹೇಳುತ್ತಾನೆ. ಸಾಮಾಜಿಕ ಭೌತಶಾಸ್ತ್ರ ಮತ್ತು

ವ್ಯಕ್ತಿಗೆ ಇರುವ ಸಂಬಂಧವನ್ನು ಅವನು ವಿವೇಚನೆ ಮಾಡುತ್ತಾನೆ. ಅದೇ ರೀತಿಯಲ್ಲಿ ಸಾಮಾಜಿಕ ಭೌತಶಾಸ್ತ್ರ ಮತ್ತು ನಾಗರಿಕತೆಗೆ ಯಾವ ಸಂಬಂಧವು ಇದೆ ಎಂದೂ ಹೇಳುತ್ತಾನೆ ಬೌದ್ಧಿಕ ಮತ್ತು ನೈತಿಕವಾದ ನೆಲೆಗಳು ಸಹಜವಾದ ಚರಿತ್ರೆಯ ಜೊತೆಗೆ ಸಂಬಂಧವನ್ನು ಇಟ್ಟುಕೊಂಡಿರುತ್ತವೆ. ಆದ್ದರಿಂದ ಅದನ್ನು ಪ್ರತ್ಯೇಕ ಮಾಡಲು ಆಗುವುದೂ ಇಲ್ಲವೆಂದು ಅವನು ಪ್ರತಿಪಾದಿಸುತ್ತಾನೆ. ಯಾವುದನ್ನು ನೈಜವಾದ ತತ್ವಜ್ಞಾನವೆಂದು ಹೇಳುತ್ತೇವೆಯೋ ಅದು ದೇಹ ಮತ್ತು ಅದರ ಶಾಸ್ತ್ರವನ್ನು ಹೇಳುತ್ತದೆ. ಸುಮ್ಮನೆ ಆಧ್ಯಾತ್ಮಿಕವನ್ನು ಹೇಳುವುದು ಬೇರೆ ಪ್ರಶ್ನೆ. ಆದರೆ ದೇಹ ಮತ್ತು ಮನಸ್ಸನ್ನು ಕೇಂದ್ರಮಾಡಿಕೊಂಡು ಅದರ ನೆಲೆಗಳನ್ನು ಗಮನಿಸುವುದು ಬೇರೆ ಕ್ರಮ. ಗ್ರಾಂಶಿಯ ನಿಲುವು ಶುದ್ಧವಾದ ಆಧ್ಯಾತ್ಮವನ್ನು ಹೇಳುವುದಿಲ್ಲ. ಅದರ ಸ್ವರೂಪವು ಬೇರೆಯಾಗಿದೆ. ಗ್ರಾಂಶಿಗೆ ಸಮಾಜ ಮತ್ತು ಅದರ ಚಿಂತನೆಗೆ ಮತ್ತೊಂದು ಕಾರಣವೆಂದರೆ ಕಾಮ್ಟೆ ಮೊದಲಾದವರ ನಿಲುವು. ಅದನ್ನು ಎಮಿಲಿ ಡರ್ಕೆಮ್ ಕೂಡಾ ನೈತಿಕತೆ ಮತ್ತು ಸಾವಯವ ಸಂಬಂಧವನ್ನು ಬೇರೆ ರೀತಿಯಲ್ಲಿ ನಿರೂಪಿಸುತ್ತಾನೆ. ಅವನಲ್ಲಿ ಕೆಲಸ ಮತ್ತು ಅದರ ವರ್ಗೀಕರಣಗಳು ಬಹಳ ಮಹತ್ವವನ್ನು ಪಡೆದುಕೊಂಡಿವೆ. ಅವನು ವ್ಯಕ್ತಿ ಮತ್ತು ಸಮಾಜದ ಸಂಬಂಧವನ್ನು ವಿಭಿನ್ನವಾಗಿ ಹೇಳುತ್ತಾನೆ. ವ್ಯಕ್ತಿಯನ್ನು ರೂಪಿಸುವಲ್ಲಿ ಒಂದು ಸಮಾಜವು ಯಾವ ಪ್ರಭಾವವನ್ನು ಬೀರುತ್ತದೆ ಎನ್ನುವುದು ಅವನ ಆಸಕ್ತಿಯಲ್ಲಿ ಒಂದು. ವ್ಯಕ್ತಿತ್ವ ಮತ್ತು ಸಮಾಜ ಎನ್ನುವುದು ಬೇರೆ ಬೇರೆ ಪಾತಳಿಗಳಲ್ಲಿ ರೂಪುಗೊಳ್ಳುವ ಪ್ರಕ್ರಿಯೆಗಳು ಅಲ್ಲವೆನ್ನುವುದು ಅವನ ವಾದವಾಗಿದೆ. ಕೆಲಸದ ವರ್ಗೀಕರಣ ಮತ್ತು ಜೀವನ ಕ್ರಮಗಳು ಎನ್ನುವುದು ಹೇಗೆ ಪರಸ್ಪರ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತವೆ ಎಂದು ಅವನು ಪ್ರತಿಪಾದಿಸುತ್ತಾನೆ. ಅನೇಕ ವಿಚಾರಗಳು ನಮ್ಮ ಸಾಮಾಜಿಕ ಜೀವನ ಮತ್ತು ಅದರ ಆವಶ್ಯಕತೆಯು ಆಗಿರುತ್ತದೆ. ಆದ್ದರಿಂದ ಅವನ ಸಾಮಾಜಿಕ ಚಿಂತನೆಯು ಭಿನ್ನವಾಗಿದೆ. ಪರಂಪರೆ ಮತ್ತು ಸಂಪ್ರದಾಯಗಳು ಹೇಗೆ ವ್ಯಕ್ತಿಯನ್ನು ರೂಪಿಸುತ್ತದೆ ಎಂದು ಅವನು ವಿವರಿಸುತ್ತಾನೆ. ವ್ಯಕ್ತಿ ಮತ್ತು ಅವನ ಉದ್ದೇಶಗಳನ್ನು ನಾವು ಬೇರೆ ಮಾಡಿಕೊಂಡು ನೋಡಲು ಬರುವುದೂ ಇಲ್ಲ. (ಎಮಿಲಿ ಡರ್ಕೆಮ್ ದ ಡಿವಿಸಿನ್ ಆಫ್ ಲೇಬರ್ ಇನ್ ಸೊಸೈಟಿ 1960 ಪುಟ 236 ಮೆಕ್ಮಿಲನ್ ಕಂಪೆನಿ. ಇದು ಪ್ರಕಟವಾದ್ದು 1893) ಆದರೆ ನಮ್ಮ ಸಂಬಂಧಗಳಲ್ಲಿ ಬೇರೆ ಬೇರೆ ವಿಧದ ಸಂಹಿತೆಗಳು ಕೆಲಸವನ್ನು ಮಾಡುತ್ತವೆ. ಅನೇಕವು ನಮ್ಮ ನಂಬಿಕೆಯಿಂದ ಬರುತ್ತವೆ. ಮತ್ತೆ ಕೆಲವು ಸಹಕಾರದ ಮೂಲಕವೂ ಬರುತ್ತದೆ. ಅದರ ಜೊತೆಗೆ ಮತ್ತೆ ಕೆಲವು ಮನೆಯಲ್ಲಿ ರೂಪುಗೊಳ್ಳುತ್ತವೆ. ಹಾಗೆಂದು ಕೆಲವು ನಿಯಮವು ನಮಗೆ ಅಗತ್ಯವೂ ಆಗಿರುತ್ತವೆ. ಒಂದು ಹಂತದಲ್ಲಿ ನಮಗೆ ಒಂದು ಜನಾಂಗವು ಬೇರೆ ಬೇರೆ

ನಿಯಮವನ್ನು ರೂಪಿಸುವುದೂ ಅಷ್ಟೇ ನಿಜ. ಕೆಲವು ಸಂಪ್ರದಾಯಗಳು ನಮಗೆ ಒಂದು ಅಭಿಪ್ರಾಯವನ್ನು ರೂಪಿಸಿಕೊಡುತ್ತದೆ ಎನ್ನವುದು ಅಷ್ಟೇ ನಿಜ. ಅವನು ಯಾವುದನ್ನು ಆರ್ಗ್ಯಾನಿಕ್ ಏಕತೆ ಎಂದು ಹೇಳುತ್ತಾನೆಯೋ ಅದರ ರೂಪಕ್ಕೂ ಅದರ ಸನ್ನಿವೇಶಕ್ಕೂ ಒಂದು ಸಂಬಂಧವಿದೆ ಎನ್ನುವುದು ಖಚಿತ. ಕೆಲಸ ಮತ್ತು ಅದರ ವರ್ಗೀಕರಣವನ್ನು ಅವನು ವಿಶ್ವಾತ್ಮಕ ಎಂದು ಕರೆಯುತ್ತಾನೆ. ಯಾವುದನ್ನು ನಾವು ನೀತಿಯೆಂದು ಹೇಳುತ್ತೇವೆಯೋ ಅದರ ಸ್ವರೂಪವು ಹೆಚ್ಚಾಗಿ ಅನ್ವಯವಾಗುವುದು ನಮಗೆ ಸಮಾಜದಲ್ಲಿಯೇ. ನೀತಿಗೆ ಸಾಮಾಜಿಕವಾದ ಒಂದು ಕೆಲಸವೂ ಇದೆ. ಅದು ಬರೀ ರಾಜಕೀಯ ಅರ್ಥಶಾಸ್ತ್ರವನ್ನು ಮಾತ್ರವೇ ಹೇಳುವುದಿಲ್ಲ. ಈ ದೃಷ್ಟಿಯಿಂದ ಅವನ ನೀತಿಯ ವೈಜ್ಞಾನಿಕ ಅಧ್ಯಯನವು ಅತ್ಯಂತ ಮಹತ್ವದ್ದೂ ಆಗಿದೆ ಎಂದು ಅವನು ಭಾವಿಸುತ್ತಾನೆ. (ದಿ ಸೈನ್ಸ್ ಆಫ್ ಮೊರಾಲಿಟಿ) ಹಾಗೆ ನೋಡಿದರೆ ಸಹಕಾರ ಮತ್ತು ಅದರ ಮೌಲ್ಯವೂ ಅತ್ಯಂತ ದೊಡ್ಡದು. ಹಸಿವೆಯನ್ನು ನಾವು ಹೊಟ್ಟೆ ತುಂಬಿಸುವುದರ ಮೂಲಕ ಈಡೇರಿಸಿಕೊಳ್ಳಬಹುದು. ಆದರೆ ಕಾರಣವನ್ನು ಮತ್ತು ಅದರ ಬಯಕೆಯನ್ನು ತುಂಬಿಸಿಕೊಳ್ಳುವುದು ಹೇಗೆ? ಈ ಪ್ರಶ್ನೆಯು ಇದೆ. ದೈಹಿಕವಾದ ತೃಪ್ತಿ ಮತ್ತು ಮನಸ್ಸಿನ ತೃಪ್ತಿಯನ್ನು ನಾವು ಭಿನ್ನವಾಗಿ ನೋಡಬೇಕಾಗುತ್ತದೆ. ಜ್ಞಾನವನ್ನು ಅತ್ಯಂತ ಸುಲಭವಾಗಿ ಈಡೇರಿಸಿಕೊಳ್ಳಲು ಬರುವುದೂ ಇಲ್ಲ. ಹಾಗೆ ನೋಡಿದರೆ ಎಲ್ಲ ಕರ್ತವ್ಯವೂ ಅತ್ಯಂತ ಸೀಮಿತವಾದದ್ದು. ಕಾಲ ಮತ್ತು ಸ್ಥಳವನ್ನು ನಾವು ಬಿಡಲು ಆಗುವುದೂ ಇಲ್ಲ. ಸ್ಪೆನ್ಸರ್ ಸಂಬಂಧವನ್ನು ಕುರಿತು ಹೇಳುವಾಗ ಅದನ್ನು ಬರೀ ಸಾಂಪ್ರದಾಯಿಕವಾದ ಎಂದು ಹೇಳುವಂತೆ ಇಲ್ಲವೆಂದು ಹೇಳುತ್ತಾನೆ. ಸ್ಪೆನ್ಸರ್ ಮತ್ತೊಂದು ಅಂಶವನ್ನು ಹೇಳುತ್ತಾನೆ: ಸಾಮಾಜಿಕ ಏಕತೆಯು ಸಾಧ್ಯವಾಗುವುದೇ ಕೆಲಸ ಮತ್ತು ಅದರ ವರ್ಗೀಕರಣದಿಂದ. (ಅದೇ; ಪುಟ 201) ನಾವು ಹೇಗೆ ಇರಬೇಕು ಮತ್ತು ಯಾವ ಸಂದರ್ಭದಲ್ಲಿ ಹೇಗೆ ವರ್ತನೆಯನ್ನು ಮಾಡಬೇಕು ಎನ್ನುವುದನ್ನು ನಮ್ಮ ಸಂಪ್ರದಾಯಗಳು ಹೇಳುತ್ತವೆ. ಸಾಮಾಜಿಕ ಜೀವನ ಮತ್ತು ಅದರ ಸ್ವರೂಪವು ಒಂದು ಥರ ಇರುತ್ತದೆ. ಯಾವುದೇ ವ್ಯಕ್ತಿಗೆ ಮತ್ತು ಸಮಾಜಕ್ಕೆ ಇರುವ ಸಂಬಂಧವು ಅತ್ಯಂತ ಸಂಕೀರ್ಣವಾಗಿರುತ್ತದೆ. ಹಾಗೆ ನೋಡಿದರೆ ಮನುಷ್ಯ ಸಂಬಂಧಗಳಲ್ಲಿ ನಿರ್ದಿಷ್ಟವಾದ ಸ್ವರೂಪವಿರುವುದು ಆಯಾ ಅಗತ್ಯಕ್ಕೆ ಅನುಸಾರವಾಗಿ ಎನ್ನುವುದು ಖಚಿತ. ವ್ಯಕ್ತಿ ಮತ್ತು ಅವನ ಸಂಬಂಧಕ್ಕೆ ವಿಭಿನ್ನವಾದ ಆಯಾಮವೂ ಇರುತ್ತದೆ. ಇದರ ಜೊತೆಗೆ ಮನುಷ್ಯನು ತನ್ನ ಸಮೂಹವನ್ನು ಬಿಟ್ಟು ಇರಲಾರ. ಅವನಿಗೆ ಸಮೂಹದ ಪ್ರಜ್ಞೆಯು ಇರುತ್ತದೆ. ಸಮೂಹದ ಜೊತೆಗೆ ನಾವು ಹೇಗೆ ವ್ಯವಹಾರವನ್ನು ಮಾಡಬೇಕು ಎನ್ನುವುದು ಮುಖ್ಯ. ಆದರೆ ಇಲ್ಲಿ ಮತ್ತೊಂದು ಅಂಶವನ್ನು ನಾವು ಗಮನಿಸಬೇಕು: ಸಮೂಹ

ಎನ್ನುವುದು ಒಂದು ಸಾಕ್ಷಿಯು ಹೌದು. ಅದಕ್ಕೊಂದು ಚೈತನ್ಯವೂ ಇದೆ. ಆದರೆ ನಮ್ಮ ವ್ಯಕ್ತಿತ್ವ ಮತ್ತು ಅದರ ಉಪಯೋಗತಾವಾದಿ ಮೌಲ್ಯ ಎನ್ನುವುದಕ್ಕೆ ಅರ್ಥವೂ ಇದೆ. ಸಮೂಹ ಮತ್ತು ಅದರ ಆಸಕ್ತಿಯು ವ್ಯಕ್ತಿಯ ಆಸಕ್ತಿಯನ್ನು ರೂಪಿಸುತ್ತದೆ. ವ್ಯಕ್ತಿ ಮತ್ತು ಅವನ ಆಸಕ್ತಿಯು ನಿರ್ದಿಷ್ಟವಾದ ಸಂದರ್ಭದಲ್ಲಿ ಒಂದು ಥರವಿರುತ್ತದೆ. ವ್ಯಕ್ತಿಯನ್ನು ಒಂದು ಸಮಾಜದ ಹಿನ್ನೆಲೆಯಲ್ಲಿ ನಾವು ನೋಡುವುದು ಅತ್ಯಂತ ಅಗತ್ಯ. ಆಗಿದ್ದರೆ ನಮಗೆ ಇರುವ ನಿಜವಾದ ಋಣವನ್ನು ನಾವು ಹೇಗೆ ನೋಡಬೇಕು ಎನ್ನುವುದು ಅತ್ಯಂತ ಮುಖ್ಯವಾಗುತ್ತದೆ. ಕಾಂಟ್ ನಮ್ಮ ಜೀವನದಲ್ಲಿ ನಾವು ಯಾವುದಕ್ಕೆ ಋಣಿಗಳಾಗಿರುತ್ತೇವೆ ಎಂದು ವಿವರವಾದ ಚರ್ಚೆಯನ್ನು ಮಾಡುತ್ತಾನೆ. ನೈತಿಕತೆ ಮತ್ತು ಅದರ ಋಣವು ನಮಗೆ ಇದ್ದೇ ಇರುತ್ತದೆ. ಅದನ್ನು ನಾವು ದಾಟುವುದೂ ಇಲ್ಲ. ಕಾರಂತರಲ್ಲಿ ಬರುವ ಈ ಋಣದ ಪ್ರಶ್ನೆಯನ್ನು ಈ ರೀತಿಯಲ್ಲಿ ಕೂಡಾ ಗಮನಿಸಬಹುದು. ಯಾವುದು ನಮಗೆ ಹೆಚ್ಚು ಉಪಯುಕ್ತವಾಗುತ್ತದೆಯೋ ಅದನ್ನು ಮಾತ್ರವೇ ನಾವು ಅತ್ಯಂತ ಒಳ್ಳೆಯದು ಎಂದು ಹೇಳುತ್ತೇವೆ. ಹಾಗೆ ನೋಡಿದರೆ ನಮಗೆ ಸಮಾಜವು ಬೇರೆ ಬೇರೆ ರೀತಿಯ ಜ್ಞಾನವನ್ನು ಕೊಡುತ್ತದೆ. ಅದರಲ್ಲಿ ಋಣಾತ್ಮಕವಾದ ಜ್ಞಾನ ಮತ್ತು ಧನಾತ್ಮಕವಾದ ಜ್ಞಾನ ಎನ್ನುವುದೂ ಇರುತ್ತದೆ.

ಚರಿತ್ರೆ

ಗ್ರಾಂಶಿಯು ಒಂದು ಅರ್ಥದಲ್ಲಿ ಚರಿತ್ರೆಯನ್ನು ತನ್ನ ಚರ್ಚೆಯ ಪ್ರಧಾನವಾದ ಭೂಮಿಕೆಯಾಗಿ ಮಾಡುತ್ತಾನೆ. ಅವನು ಸಂಸ್ಕೃತಿಯನ್ನು ವಿವರಿಸುವಾಗಲೂ ಸಾವಯವ ಎನ್ನುವ ಪರಿಕಲ್ಪನೆಯನ್ನು ಹೆಚ್ಚು ಅರ್ಥಪೂರ್ಣವಾಗಿ ಬಳಸುತ್ತಾನೆ. ಆದರೆ ವಿದ್ವಾಂಸರ ಪ್ರಕಾರ ಅದನ್ನು ಅಂದರೆ ಸಾವಯವ ಎನ್ನುವುದನ್ನು ಆಗಸ್ಟಸ್ ಕಾಮ್ಟೆಯು ತನ್ನ ಧನಾತ್ಮಕವಾದ ದೃಷ್ಟಿಕೋನವನ್ನು ಹೇಳುವಾಗ ವಿವರಿಸಿದ್ದಾನೆ. ಹಾಗೆ ನೋಡಿದರೆ ಸಾವಯವ ಎನ್ನುವುದು ಅತ್ಯಂತ ವಿಶಿಷ್ಟವಾದ ಒಂದು ಪರಿಕಲ್ಪನೆಯು ಆಗಿದೆ. ಕಾಮ್ಟೆಯದ್ದು ಒಂದು ದೃಷ್ಟಿಯಿಂದ ಭವಿಷ್ಯದ ಕುರಿತ ಚಿಂತನೆಯೂ ಆಗಿದೆ. ಫ್ರೆಂಚಿನ ಅತ್ಯಂತ ಮಹತ್ವದ ಸಮಾಜಶಾಸ್ತ್ರಜ್ಞ ಆಗಿರುವ ಕೆಲವು ಅತ್ಯಂತ ಮಹತ್ವದ ಚರ್ಚೆಯನ್ನು ಮಾಡುತ್ತಾನೆ. ಅದರಲ್ಲಿಯೂ ಅವನು ತನ್ನ ದಿ ಪಾಸಿಟಿವ್ ಫಿಲಾಸಫಿಯನ್ನು ಹೇಳುವಾಗ ಈ ಕೆಲವು ವಿಚಾರಗಳನ್ನು ಚರ್ಚೆ ಮಾಡುತ್ತಾನೆ.: (ಹಾರಿಟ್ ಮಾರ್ಟಿನ್ ವಾಲ್ಯುಮ್ 2 ಬಟೋಚೆ ಬುಕ್ಸ್ 2000) ಅವನು ಬಾಹ್ಯವನ್ನು ಗಮನಿಸಿಕೊಂಡು ಕೆಲವು ವಿಚಾರವನ್ನು ಹೇಳುತ್ತಾನೆ. ದೇಹವೂ ಒಂದು ಸಾವಯವ ಎಂದು ಅವನು ಭಾವಿಸುತ್ತಾನೆ. ಅದರಲ್ಲಿ ಅನೇಕ ಅಂಶಗಳ ಮಿಶ್ರಣವು ಇರುತ್ತದೆ ಎಂದು ಅವನು ತಿಳಿಯುತ್ತಾನೆ. ಇದನ್ನು

ವಿವರಿಸುವಾಗ ನಮಗೆ ಆಕ್ಸಿಜನ್ ಹೇಗೆ ಅಗತ್ಯವಾಗಿದೆ ಮತ್ತು ಅದನ್ನು ನಾವು ಹೇಗೆ ಗಾಳಿಯಿಂದ ತೆಗೆದುಕೊಳ್ಳುತ್ತೇವೆ ಎಂದೂ ವಿವರಿಸುತ್ತಾನೆ. ದೇಹ ಮತ್ತು ಅದರ ಶಾಸ್ತ್ರವನ್ನು ನಾವು ಹೇಗೆ ಗ್ರಹಿಸುತ್ತೇವೆ ಎಂದು ಸವಿವರವಾಗಿ ಅವನು ಮಂಡಿಸಿದ್ದಾನೆ. ದೇಹಕ್ಕೆ ಅಥವಾ ದೇಹದ ಸಾವಯವ ರೂಪಕ್ಕೆ ಯಾವುದು ವಿಷವಾಗುತ್ತದೆ ಮತ್ತು ಯಾವುದು ಸಹಯೋಗವನ್ನು ಕೊಡುತ್ತದೆ ಎಂದು ಅವನು ಹೇಳುತ್ತಾನೆ. ದೇಹ ಮತ್ತು ಅದರ ಸಾವಯವತೆಗೂ ಹೊರಗಿನ ಸಂಬಂಧಕ್ಕೂ ಇರುವ ಸಾಮ್ಯ ಮತ್ತು ವೈಷಮ್ಯವನ್ನು ಅವನು ಹೇಳುತ್ತಾನೆ. (ಪುಟ.64 – 74) ಈ ದೃಷ್ಟಿಯಿಂದ ನಮಗೆ ಅಂದರೆ ನಮ್ಮ ದೇಹಕ್ಕೆ ಒಂದು ಸಾವಯವ ಸಂಬಂಧವು ಇರುತ್ತದೆ. ಆದರೆ ಇದರ ನಡುವೆ ಅವನು ಮತ್ತೊಂದು ಮಾತನ್ನು ಹೇಳುತ್ತಾನೆ: ಎಲ್ಲಾ ವಿಜ್ಞಾನವೂ ಕೂಡಾ ತಮ್ಮದೇ ಆದ ನಿಯಮವನ್ನು ಕಂಡುಕೊಂಡಿವೆ. (ಅದೇ; 75) ನಾವು ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಅದು ದೇಹವನ್ನು ಕೇಂದ್ರವಾಗಿರಿಸಿಕೊಂಡ ತತ್ವಜ್ಞಾನ. ಅದು ಕೂಡಾ ಸಾವಯವನ್ನು ಹೆಚ್ಚು ಚರ್ಚೆ ಮಾಡುತ್ತದೆ. ದೇಹ ಮತ್ತು ಮನಸ್ಸುಗಳ ಸಾವಯವ ರೂಪವನ್ನು ಅದು ಗ್ರಹಿಸುತ್ತದೆ. ಅದರ ಜೊತೆಗೆ ಅವನು ಕೆಮಿಕಲ್ ಕೇಂದ್ರವೆಂದು ಹೇಳುತ್ತಾನೆ. ಸಾವಯವ ಸಂಬಂಧ ಮತ್ತು ಸಾವಯವ ಬೆಳವಣಿಗೆ ಎನ್ನುವುದು ಅತ್ಯಂತ ಮಹತ್ವದ್ದು. ಅದನ್ನು ಅವನು ಹೇಳುತ್ತಾನೆ ಸಾವಯವ ಸಂಬಂಧವೇ ಇಲ್ಲದ ತತ್ವಜ್ಞಾನ ಮತ್ತು ಸಾವಯವ ಸಂಬಂಧವು ಇರುವ ದೇಹದ ಶಾಸ್ತ್ರಗಳ ನಡುವೆ ಇರುವ ಸಂಘರ್ಷವೂ ಅವನಿಗೆ ಹೆಚ್ಚು ಮುಖ್ಯವಾಗುತ್ತದೆ. ಆದ್ದರಿಂದಲೇ ಕಾಮ್ಟೆಯು ಧನಾತ್ಮಕವಾದ ನಿಲುವು ಅತ್ಯಂತ ಅಗತ್ಯವೆಂದು ಹೇಳುತ್ತಾನೆ. (ಪುಟ; 82) ಹಾಗೆ ನೋಡಿದರೆ ಅವನು ರಾಜಕಾರಣ ಮತ್ತು ಸಾಮಾಜಿಕ ವಿವರಣೆಯಲ್ಲಿಯೂ ಧನಾತ್ಮಕವಾದ ಅಂಶದ ಅಗತ್ಯವನ್ನು ಪ್ರತಿಪಾದಿಸುತ್ತಾನೆ. ಸಮಾಜ ಮತ್ತು ಅದರ ಪುನರ್ ನಿರ್ಮಾಣವನ್ನು ಪ್ರತಿಪಾದಿಸುತ್ತಾನೆ. (ಕಾಮ್ಟೆ – 1875 ಸಿಸ್ಟಮ್ ಆಫ್‌ಪೊಸಿಟಿವ್ ಪಾಲಿಟಿ ಲಾಂಗ ಮನ್, ಗ್ರೀನ್ ಅಂಡ್ ಕೊ) ಅವನು ಸಾಮಾಜಿಕವಾದ ಭೌತಶಾಸ್ತ್ರವನ್ನು ಹೇಳುತ್ತಾನೆ. ಸಾಮಾಜಿಕ ಭೌತಶಾಸ್ತ್ರ ಮತ್ತು ವ್ಯಕ್ತಿಗೆ ಇರುವ ಸಂಬಂಧವನ್ನು ಅವನು ವಿವೇಚನೆ ಮಾಡುತ್ತಾನೆ. ಅದೇ ರೀತಿಯಲ್ಲಿ ಸಾಮಾಜಿಕ ಭೌತಶಾಸ್ತ್ರ ಮತ್ತು ನಾಗರಿಕತೆಗೆ ಯಾವ ಸಂಬಂಧವು ಇದೆ ಎಂದೂ ಹೇಳುತ್ತಾನೆ ಬೌದ್ಧಿಕ ಮತ್ತು ನೈತಿಕವಾದ ನೆಲೆಗಳು ಸಹಜವಾದ ಚರಿತ್ರೆಯ ಜೊತೆಗೆ ಸಂಬಂಧವನ್ನು ಇಟ್ಟುಕೊಂಡಿರುತ್ತವೆ. ಆದ್ದರಿಂದ ಅದನ್ನು ಪ್ರತ್ಯೇಕ ಮಾಡಲು ಆಗುವುದೂ ಇಲ್ಲವೆಂದು ಅವನು ಪ್ರತಿಪಾದಿಸುತ್ತಾನೆ. ಯಾವುದನ್ನು ನೈಜವಾದ ತತ್ವಜ್ಞಾನವೆಂದು ಹೇಳುತ್ತೇವೆಯೋ ಅದು ದೇಹ ಮತ್ತು ಅದರ ಶಾಸ್ತ್ರವನ್ನು ಹೇಳುತ್ತದೆ. ಸುಮ್ಮನೆ ಆಧ್ಯಾತ್ಮಿಕವನ್ನು ಹೇಳುವುದು ಬೇರೆ ಪ್ರಶ್ನೆ.

ಆದರೆ ದೇಹ ಮತ್ತು ಮನಸ್ಸನ್ನು ಕೇಂದ್ರಮಾಡಿಕೊಂಡು ಅದರ ನೆಲೆಗಳನ್ನು ಗಮನಿಸುವುದು ಬೇರೆ ಕ್ರಮ. ಗ್ರಾಂಶಿಯ ನಿಲುವು ಶುದ್ಧವಾದ ಆಧ್ಯಾತ್ಮವನ್ನು ಹೇಳುವುದಿಲ್ಲ. ಅದರ ಸ್ವರೂಪವು ಬೇರೆಯಾಗಿದೆ. ಗ್ರಾಂಶಿಗೆ ಸಮಾಜ ಮತ್ತು ಅದರ ಚಿಂತನೆಗೆ ಮತ್ತೊಂದು ಕಾರಣವೆಂದರೆ ಕಾಮ್ಟೆ ಮೊದಲಾದವರ ನಿಲುವು. ಅದನ್ನು ಎಮಿಲಿ ಡರ್ಕೆಮ್ ಕೂಡಾ ನೈತಿಕತೆ ಮತ್ತು ಸಾವಯುವ ಸಂಬಂಧವನ್ನು ಬೇರೆ ರೀತಿಯಲ್ಲಿ ನಿರೂಪಿಸುತ್ತಾನೆ. ಅವನಲ್ಲಿ ಕೆಲಸ ಮತ್ತು ಅದರ ವರ್ಗೀಕರಣಗಳು ಬಹಳ ಮಹತ್ವವನ್ನು ಪಡೆದುಕೊಂಡಿವೆ. ಅವನು ವ್ಯಕ್ತಿ ಮತ್ತು ಸಮಾಜದ ಸಂಬಂಧವನ್ನು ವಿಭಿನ್ನವಾಗಿ ಹೇಳುತ್ತಾನೆ. ವ್ಯಕ್ತಿಯನ್ನು ರೂಪಿಸುವಲ್ಲಿ ಒಂದು ಸಮಾಜವು ಯಾವ ಪ್ರಭಾವವನ್ನು ಬೀರುತ್ತದೆ ಎನ್ನುವುದು ಅವನ ಆಸಕ್ತಿಯಲ್ಲಿ ಒಂದು. ವ್ಯಕ್ತಿತ್ವ ಮತ್ತು ಸಮಾಜ ಎನ್ನುವುದು ಬೇರೆ ಬೇರೆ ಪಾತಳಿಗಳಲ್ಲಿ ರೂಪುಗೊಳ್ಳುವ ಪ್ರಕ್ರಿಯೆಗಳು ಅಲ್ಲವೆನ್ನುವುದು ಅವನ ವಾದವಾಗಿದೆ. ಕೆಲಸದ ವರ್ಗೀಕರಣ ಮತ್ತು ಜೀವನ ಕ್ರಮಗಳು ಎನ್ನುವುದು ಹೇಗೆ ಪರಸ್ಪರ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತವೆ ಎಂದು ಅವನು ಪ್ರತಿಪಾದಿಸುತ್ತಾನೆ. ಅನೇಕ ವಿಚಾರಗಳು ನಮ್ಮ ಸಾಮಾಜಿಕ ಜೀವನ ಮತ್ತು ಅದರ ಆವಶ್ಯಕತೆಯು ಆಗಿರುತ್ತದೆ. ಆದ್ದರಿಂದ ಅವನ ಸಾಮಾಜಿಕ ಚಿಂತನೆಯು ಭಿನ್ನವಾಗಿದೆ. ಪರಂಪರೆ ಮತ್ತು ಸಂಪ್ರದಾಯಗಳು ಹೇಗೆ ವ್ಯಕ್ತಿಯನ್ನು ರೂಪಿಸುತ್ತದೆ ಎಂದು ಅವನು ವಿವರಿಸುತ್ತಾನೆ. ವ್ಯಕ್ತಿ ಮತ್ತು ಅವನ ಉದ್ದೇಶಗಳನ್ನು ನಾವು ಬೇರೆ ಮಾಡಿಕೊಂಡು ನೋಡಲು ಬರುವುದೂ ಇಲ್ಲ. (ಎಮಿಲಿ ಡರ್ಕೆಮ್ ದ ಡಿವಿಸಿನ್ ಆಫ್ ಲೇಬರ್ ಇನ್ ಸೊಸೈಟಿ 1960 ಪುಟ 236 ಮೆಕ್ಮಿಲನ್ ಕಂಪೆನಿ. ಇದು ಪ್ರಕಟವಾದ್ದು 1893) ಆದರೆ ನಮ್ಮ ಸಂಬಂಧಗಳಲ್ಲಿ ಬೇರೆ ಬೇರೆ ವಿಧದ ಸಂಹಿತೆಗಳು ಕೆಲಸವನ್ನು ಮಾಡುತ್ತವೆ. ಅನೇಕವು ನಮ್ಮ ನಂಬಿಕೆಯಿಂದ ಬರುತ್ತವೆ. ಮತ್ತೆ ಕೆಲವು ಸಹಕಾರದ ಮೂಲಕವೂ ಬರುತ್ತದೆ. ಅದರ ಜೊತೆಗೆ ಮತ್ತೆ ಕೆಲವು ಮನೆಯಲ್ಲಿ ರೂಪುಗೊಳ್ಳುತ್ತವೆ. ಹಾಗೆಂದು ಕೆಲವು ನಿಯಮವು ನಮಗೆ ಅಗತ್ಯವೂ ಆಗಿರುತ್ತವೆ. ಒಂದು ಹಂತದಲ್ಲಿ ನಮಗೆ ಒಂದು ಜನಾಂಗವು ಬೇರೆ ಬೇರೆ ನಿಯಮವನ್ನು ರೂಪಿಸುವುದೂ ಅಷ್ಟೇ ನಿಜ. ಕೆಲವು ಸಂಪ್ರದಾಯಗಳು ನಮಗೆ ಒಂದು ಅಭಿಪ್ರಾಯವನ್ನು ರೂಪಿಸಿಕೊಡುತ್ತದೆ ಎನ್ನವುದು ಅಷ್ಟೇ ನಿಜ. ಅವನು ಯಾವುದನ್ನು ಆರ್ಗಾನಿಕ್ ಏಕತೆ ಎಂದು ಹೇಳುತ್ತಾನೆಯೋ ಅದರ ರೂಪಕ್ಕೂ ಅದರ ಸನ್ನಿವೇಶಕ್ಕೂ ಒಂದು ಸಂಬಂಧವಿದೆ ಎನ್ನುವುದು ಖಚಿತ. ಕೆಲಸ ಮತ್ತು ಅದರ ವರ್ಗೀಕರಣವನ್ನು ಅವನು ವಿಶ್ವಾತ್ಮಕ ಎಂದು ಕರೆಯುತ್ತಾನೆ. ಯಾವುದನ್ನು ನಾವು ನೀತಿಯೆಂದು ಹೇಳುತ್ತೇವೆಯೋ ಅದರ ಸ್ವರೂಪವು ಹೆಚ್ಚಾಗಿ ಅನ್ವಯವಾಗುವುದು ನಮಗೆ ಸಮಾಜದಲ್ಲಿಯೇ. ನೀತಿಗೆ ಸಾಮಾಜಿಕವಾದ ಒಂದು

ಕೆಲಸವೂ ಇದೆ. ಅದು ಬರೀ ರಾಜಕೀಯ ಅರ್ಥಶಾಸ್ತ್ರವನ್ನು ಮಾತ್ರವೇ ಹೇಳುವುದಿಲ್ಲ. ಈ ದೃಷ್ಟಿಯಿಂದ ಅವನ ನೀತಿಯ ವೈಜ್ಞಾನಿಕ ಅಧ್ಯಯನವು ಅತ್ಯಂತ ಮಹತ್ವದ್ದೂ ಆಗಿದೆ ಎಂದು ಅವನು ಭಾವಿಸುತ್ತಾನೆ. (ದಿ ಸೈನ್ಸ್ ಆಫ್ ಮೊರಾಲಿಟಿ) ಹಾಗೆ ನೋಡಿದರೆ ಸಹಕಾರ ಮತ್ತು ಅದರ ಮೌಲ್ಯವೂ ಅತ್ಯಂತ ದೊಡ್ಡದು. ಹಸಿವೆಯನ್ನು ನಾವು ಹೊಟ್ಟೆ ತುಂಬಿಸುವುದರ ಮೂಲಕ ಈಡೇರಿಸಿಕೊಳ್ಳಬಹುದು. ಆದರೆ ಕಾರಣವನ್ನು ಮತ್ತು ಅದರ ಬಯಕೆಯನ್ನು ತುಂಬಿಸಿಕೊಳ್ಳುವುದು ಹೇಗೆ? ಈ ಪ್ರಶ್ನೆಯು ಇದೆ. ದೈಹಿಕವಾದ ತೃಪ್ತಿ ಮತ್ತು ಮನಸ್ಸಿನ ತೃಪ್ತಿಯನ್ನು ನಾವು ಭಿನ್ನವಾಗಿ ನೋಡಬೇಕಾಗುತ್ತದೆ. ಜ್ಞಾನವನ್ನು ಅತ್ಯಂತ ಸುಲಭವಾಗಿ ಈಡೇರಿಸಿಕೊಳ್ಳಲು ಬರುವುದೂ ಇಲ್ಲ. ಹಾಗೆ ನೋಡಿದರೆ ಎಲ್ಲ ಕರ್ತವ್ಯವೂ ಅತ್ಯಂತ ಸೀಮಿತವಾದದ್ದು. ಕಾಲ ಮತ್ತು ಸ್ಥಳವನ್ನು ನಾವು ಬಿಡಲು ಆಗುವುದೂ ಇಲ್ಲ. ಸ್ಪೆನ್ಸರ್ ಸಂಬಂಧವನ್ನು ಕುರಿತು ಹೇಳುವಾಗ ಅದನ್ನು ಬರೀ ಸಾಂಪ್ರದಾಯಿಕವಾದ ಎಂದು ಹೇಳುವಂತೆ ಇಲ್ಲವೆಂದು ಹೇಳುತ್ತಾನೆ. ಸ್ಪೆನ್ಸರ್ ಮತ್ತೊಂದು ಅಂಶವನ್ನು ಹೇಳುತ್ತಾನೆ: ಸಾಮಾಜಿಕ ಏಕತೆಯು ಸಾಧ್ಯವಾಗುವುದೇ ಕೆಲಸ ಮತ್ತು ಅದರ ವರ್ಗೀಕರಣದಿಂದ. (ಅದೇ; ಪುಟ 201) ನಾವು ಹೇಗೆ ಇರಬೇಕು ಮತ್ತು ಯಾವ ಸಂದರ್ಭದಲ್ಲಿ ಹೇಗೆ ವರ್ತನೆಯನ್ನು ಮಾಡಬೇಕು ಎನ್ನುವುದನ್ನು ನಮ್ಮ ಸಂಪ್ರದಾಯಗಳು ಹೇಳುತ್ತವೆ. ಸಾಮಾಜಿಕ ಜೀವನ ಮತ್ತು ಅದರ ಸ್ವರೂಪವು ಒಂದು ಥರ ಇರುತ್ತದೆ ಯಾವುದೇ ವ್ಯಕ್ತಿಗೆ ಮತ್ತು ಸಮಾಜಕ್ಕೆ ಇರುವ ಸಂಬಂಧವು ಅತ್ಯಂತ ಸಂಕೀರ್ಣವಾಗಿರುತ್ತದೆ. ಹಾಗೆ ನೋಡಿದರೆ ಮನುಷ್ಯ ಸಂಬಂಧಗಳಲ್ಲಿ ನಿರ್ದಿಷ್ಟವಾದ ಸ್ವರೂಪವಿರುವುದು ಆಯಾ ಅಗತ್ಯಕ್ಕೆ ಅನುಸಾರವಾಗಿ ಎನ್ನುವುದು ಖಚಿತ. ವ್ಯಕ್ತಿ ಮತ್ತು ಅವನ ಸಂಬಂಧಕ್ಕೆ ವಿಭಿನ್ನವಾದ ಆಯಾಮವೂ ಇರುತ್ತದೆ. ಇದರ ಜೊತೆಗೆ ಮನುಷ್ಯನು ತನ್ನ ಸಮೂಹವನ್ನು ಬಿಟ್ಟು ಇರಲಾರ. ಅವನಿಗೆ ಸಮೂಹದ ಪ್ರಜ್ಞೆಯು ಇರುತ್ತದೆ. ಸಮೂಹದ ಜೊತೆಗೆ ನಾವು ಹೇಗೆ ವ್ಯವಹಾರವನ್ನು ಮಾಡಬೇಕು ಎನ್ನುವುದು ಮುಖ್ಯ. ಆದರೆ ಇಲ್ಲಿ ಮತ್ತೊಂದು ಅಂಶವನ್ನು ನಾವು ಗಮನಿಸಬೇಕು: ಸಮೂಹ ಎನ್ನುವುದು ಒಂದು ಸಾಕ್ಷಿಯು ಹೌದು. ಅದಕ್ಕೊಂದು ಚೈತನ್ಯವೂ ಇದೆ.

ಹೊಸತು ಮತ್ತು ಹಳೆಯದು

ಗ್ರಾಂಶಿಯು ಒಂದು ಮಾತನ್ನು ಹೇಳುತ್ತಾನೆ: ಹಳೆಯದು ಎನ್ನುವುದು ಈಗ ಇಲ್ಲವಾಗಿದೆ. ಹೊಸತು ಎನ್ನುವುದು ಇನ್ನೂ ಹುಟ್ಟಿಲ್ಲ. ಇದರ ಮಧ್ಯೆ ನಾವು ಇದ್ದೇವೆ. ಒಂದು ಮಧ್ಯಮ ಅವಕಾಶ ಎಂದು ಇದನ್ನು ಗುರುತಿಸುತ್ತಾನೆ.

ಅಂದರೆ ನಾವು ಯಾವುದನ್ನು ಬರೆಯುತ್ತಿದ್ದೇವೆಯೋ ಅದರ ರೂಪವು ಕೂಡಾ ಈವತ್ತು ಈ ಖಾಲಿಯಾದ ಒಂದು ಜಾಗವನ್ನು ತುಂಬಿಸುತ್ತದೆ.

ಯಜಮಾನಿಕೆ ಮತ್ತು ಕಾರ್ಮಿಕರ ನಡುವಣ ಸಂಬಂಧ

ಗ್ರಾಂಶಿಯು ಹೇಳಿದ ಸಂಗತಿಯಿದು. ಅವನು ಕಾರ್ಮಿಕರನ್ನು ಯಜಮಾನಿಕೆಯ ವಿರುದ್ಧ ತಯಾರು ಮಾಡಬೇಕಾದ ಅಗತ್ಯವನ್ನು ಹೇಳುತ್ತಾನೆ. ಅವನ ಪ್ರಕಾರ ಯಜಮಾನಿಕೆಯ ವಿರುದ್ಧ ಕಾರ್ಮಿಕರನ್ನು ಸಿದ್ಧ ಮಾಡಬೇಕು ಎಂದು ಹೇಳುತ್ತಾನೆ. ಅವನ ಪ್ರಕಾರ ಅದು ಆಲೋಚನೆ, ಮೌಲ್ಯ, ಸಂಸ್ಕೃತಿ, ಭೌತಿಕತೆ, ಸಂಸ್ಥೆಗಳನ್ನು ಸಿದ್ಧ ಮಾಡಬೇಕಾದ ಪ್ರಕ್ರಿಯೆ ಕೂಡಾ ಆಗಿದೆ. ಹಾಗೆ ನೋಡುವುದಿದ್ದರೆ ನಮ್ಮ ಹಳೆಯ ವಾಣಿಜ್ಯ ಮತ್ತು ಆಧುನಿಕ ವಾಣಿಜ್ಯ ಪದ್ಧತಿಗೆ ವ್ಯತ್ಯಾಸವೂ ಇದೆ. ಹಳೆಯ ಪದ್ಧತಿಯು ಈಗ ಇಲ್ಲವಾಗಿದೆ. ಮತ್ತು ಈಗ ಬಂದಿರುವ ಹೊಸ ಪದ್ಧತಿಯನ್ನು ನಾವು ಮತ್ತೆ ವಿಭಿನ್ನವಾಗಿಯೂ ಗ್ರಹಿಸಬೇಕಾದ ಅಗತ್ಯವೂ ಇದೆ. ಈಗ ಬಂದಿರುವ ವಾಣಿಜ್ಯ ನೀತಿಯು ಕೂಡಾ ಒಂದು ಸಿದ್ಧಾಂತವೇ ಆಗಿದೆ. ಅಂದರೆ ಇದರಲ್ಲಿ ಬರುವ ನೀತಿಯೂ ಕೂಡಾ ಭಿನ್ನವಾಗಿದೆ. ಮತ್ತು ನೀತಿಯೇ ಇಲ್ಲದೆ ಇದು ರಚಿತವಾಗಿಲ್ಲ. ಸಮಾಜ ಮತ್ತು ಅದರ ನೀತಿಯನ್ನು ನೋಡುವುದು ಎಂದರೆ ಈ ನಿಯಮಗಳನ್ನು ಅರ್ಥ ಮಾಡಿಕೊಳ್ಳುವುದೂ ಹೌದು. ವಾಸ್ತವವಾಗಿ ಯಾವುದನ್ನು ಈಗ ಪ್ರಜಾಪ್ರಭುತ್ವ ಎಂದು ಹೇಳುತ್ತಿದ್ದೇವೆಯೋ ಅದು ಪಶ್ಚಿಮದ ಅನೇಕ ಸಂಗತಿಗಳನ್ನು ತೆಗೆದುಕೊಂಡಿದೆ. ಮತ್ತು ದೇಶಕ್ಕೆ ಬೇಕಾದಂತೆ ಪರಿವರ್ತನೆಯನ್ನು ಮಾಡಿದೆ. ಕ್ರಿಶ್ಚಿಯನ್ ಪ್ರಜಾ ಪ್ರಭುತ್ವ ಮತ್ತು ಅದರ ಚಹರೆಗಳು ಒಂದು ರೀತಿಯಲ್ಲಿದೆ. ಮತ್ತು ವಸಾಹತೀಕರಣಕ್ಕೆ ಗುರಿಯಾದ ದೇಶಗಳ ಪ್ರಜಾಪ್ರಭುತ್ವವು ಬೇರೆಯಾಗಿದೆ. ರಾಜಕಾರಣ ಮತ್ತು ಅದರ ಸ್ವರೂಪವೂ ಭಿನ್ನವಾಗಿದೆ. ಮತ್ತು ಈ ಸಂಗತಿಗಳನ್ನು ಅಳವಡಿಸಿಕೊಂಡರೆ ಇದರ ಸ್ವರೂಪವನ್ನು ನೋಡಬಹುದಾದ ಸಂಗತಿಯೂ ಬೇರೆ ಇರಲು ಸಾಧ್ಯವೆಂದು ಹೋರಾಟಕಾರರು ಹೇಳಿದರು. ಚರಿತ್ರೆ ಮತ್ತು ಅದರ ಸಂಹಿತೆಗಳು ಭಿನ್ನವಾಗಿದೆ. ಅದಕ್ಕೆ ಕೆಲವು ನಿಯಮಗಳು ಇವೆ. ಮತ್ತು ಅವೇ ನಮಗೆ ಅನೇಕವನ್ನು ಕಟ್ಟಿಕೊಡುತ್ತವೆ. ಸಂಸ್ಕೃತಿಯೆನ್ನುವ ಸಂಗತಿಯನ್ನು ಚರಿತ್ರೆಯ ಜೊತೆಗೆ ಬೆಸೆಯಬೇಕಾದ ಅಗತ್ಯವನ್ನು ಮಾರ್ಕ್ಸವಾದವು ಹೇಳುತ್ತದೆ. ಭಾಷೆ ಮತ್ತು ಅದರ ಅನೇಕ ಸಂಗತಿಗಳನ್ನು ನೋಡಿದರೆ ಇದರ ಅರಿವು ನಮಗಾಗುತ್ತದೆ. ರಚನಾವಾದದಲ್ಲಿ ಭಾಷೆ ಮತ್ತು ಅದರ ಸಂವಹನವು ಮಾತ್ರವೇ ಬಹಳ ಮುಖ್ಯವಾಗಿದೆ. ಸಂವಹನವನ್ನು ರಚನೆಯು ಅರ್ಥ ಮಾಡಿಕೊಳ್ಳುವ ಕ್ರಮಗಳೂ ಬೇರೆ. ಆದರೆ ರಚನೆಯಲ್ಲಿ ಹೇಳಿದ್ದು ಏನು ಎನ್ನುವುದೂ ಬಹಳ ಮುಖ್ಯವಾಗಿದೆ. ಅದು ಬಯಕೆಯನ್ನೂ ಹೇಳುತ್ತದೆ. ಉದ್ವೇಗ

ಮತ್ತು ಸ್ವಾತಂತ್ರ್ಯ ಎರಡನ್ನು ಹೆಚ್ಚು ವಿಸ್ತರಿಸಿದ್ದು ಸಾಂಪ್ರದಾಯಿಕವಾದ ಅಸ್ತಿತ್ವವಾದ. ಅದರ ಲಕ್ಷಣವೇ ಯಾವುದೆಂಬುದನ್ನು ಹೇಳುತ್ತದೆ. ಯೂಂಗನ ಸಿದ್ಧಾಂತವು ಮತ್ತೆ ಕೆಲವು ವಿಷಯವನ್ನು ಹೇಳುತ್ತದೆ. ಯೂಂಗ್ ಹೇಳುವ ಪ್ರಾಗ್ರೂಪ ವಿಮರ್ಶೆಯು ಈ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ಮತ್ತು ಇಲ್ಲಿ ಮತ್ತೊಂದು ವಿಷಯವನ್ನು ಯೋಚಿಸಬೇಕಾಗುತ್ತದೆ. ಇಲ್ಲಿ ಮತ್ತೆ ನಾವು ನೋಡಬೇಕಾದ ಸಂಗತಿಯೆಂದರೆ ಯಾವುದು ಅತ್ಯಂತ ಮಹತ್ವದ ತಾತ್ವಿಕತೆಯನ್ನು ಹೊಂದಿರುತ್ತದೆಯೋ ಅದನ್ನು ಉಳಿದ ಮೈನರ್ ತಾತ್ವಿಕತೆಗಳು ಅನುಕರಿಸುತ್ತವೆ. ಸಮಾಜ ಮತ್ತು ಅದರ ಅರಿವುಗಳು ಬದಲಾಗುವುದು ಬೇರೆ ಬೇರೆ ಅಂಶಗಳಿಂದ. ಅವುಗಳಲ್ಲಿ ವಿವಿಧತೆಯು ಇದೆ ಎನ್ನುವುದು ನಿಜವಾದರೂ ಅದನ್ನು ಹೆಚ್ಚಾಗಿ ಆರ್ಥಿಕತೆಯೇ ನಿರ್ಧರಿಸುತ್ತದೆ. ಸಮಾಜವನ್ನು ನಾವು ಒಂದು ನಿರ್ದಿಷ್ಟವಾದ ತಳಹದಿಯ ಮೇಲೆ ರಚಿತವಾಗಿರುತ್ತದೆ. ಅದನ್ನು ಚರಿತ್ರೆ ಮತ್ತು ಆರ್ಥಿಕತೆಯಿಂದ ಹೊರತು ಮಾಡಿಕೊಳ್ಳುವುದು ಅಸಾಧ್ಯ

ಸಬಾಲ್ಟ್ರನ್ ಅಧ್ಯಯನ

ಇದು ಚರಿತ್ರೆಯನ್ನು ನೋಡಲು ನಮಗೆ ಅವಕಾಶವನ್ನು ಕೊಟ್ಟವರಲ್ಲಿ ಗ್ರಾಂಶಿಯೂ ಒಬ್ಬ. ಸಮಾಜದಲ್ಲಿ ಅಸಮತೆಗಳು ಇವೆ ಎನ್ನುವಲ್ಲಿಂದ ಗ್ರಾಂಶಿಯು ಶುರುಮಾಡುತ್ತಾನೆ, ಅಸಮತೆ ಎನ್ನುವುದು ಒಂದು ಮಟ್ಟದಲ್ಲಿ ಮಾತ್ರವೇ ಇದೆ ಎಂದು ಹೇಳಲು ಸಾಧ್ಯವಾಗುತ್ತದೆ. ಸತ್ಯವನ್ನು ಹೇಳುವವರು ಇದನ್ನು ಗಮನಿಸಬೇಕು ಎನ್ನುವುದು ಅವನ ವಾದ. ಅಷ್ಟೇ ಅಲ್ಲ ಅದು ನಮ್ಮ ನಿಜವಾದ ಒಂದು ಸಂವೇದನೆಯನ್ನು ಹೇಳುತ್ತದೆ. (ಸೆನಸೊ ಕಮ್ಯೂನ್) ಗ್ರಾಂಶಿಯು ಇದನ್ನು ಸೈದ್ಧಾಂತಿಕ ಮಾಡುತ್ತಾನೆ. ಆದ್ದರಿಂದ ಅವನಲ್ಲಿ ಇದು ಬೇರೆಯಾಗುತ್ತದೆ. ಸ್ಥಳ ಮತ್ತು ಅವಕಾಶಗಳು ಬೇರೆಯಾಗುವಂತೆ ಆಳುವುದು ಮತ್ತು ಆಳಿಸಿಕೊಳ್ಳುವುದು ಬೇರೆಯಾಗುತ್ತದೆ. ಇದು ಸಬಾಲ್ಟ್ರನ್ ಅಧ್ಯಯನಕ್ಕೆ ಅವಕಾಶವನ್ನು ಕೊಡುತ್ತದೆ.

ತತ್ವಜ್ಞಾನ ಮತ್ತು ನಂಬಿಕೆಗಳ ಪ್ರಶ್ನೆಗಳು (ಫಿಲಾಸಫಿ ಆಫ್ ಪ್ರಾಕ್ಸಿಸ್)

ಇದನ್ನು ಸ್ಥೂಲವಾಗಿ ಸಿದ್ಧಾಂತ ಮತ್ತು ಅದರ ಮುಂದುವರಿಕೆ ಎಂದು ಅನಿಸುತ್ತದೆ. ಒಂದು ಸಿದ್ಧಾಂತವು ಇರುತ್ತದೆ. ಅದನ್ನು ಹೆಚ್ಚು ಕ್ರಿಯೆಗೆ ತಂದಾಗ ಅದರಲ್ಲಿ ಭಿನ್ನವಾದ ಒಂದು ಕ್ರಿಯಾಶೀಲತೆಯು ಕಾಣಿಸುತ್ತದೆ. ಇದನ್ನು ಒಂದು ಪ್ರಕ್ರಿಯೆ ಎಂದು ಹೇಳಬಹುದು.ಸಿದ್ಧಾಂತ ಮತ್ತು ಅದನ್ನು ಅನ್ವಯ ಮಾಡುವಾಗ ನಾವು ತೋರೊಸುವ ಕೌಶಲಗಳ ಅಗತ್ಯವನ್ನು ಗ್ರಾಂಶಿಯು ಹೇಳುತ್ತಾನೆ. ಅರಿಸ್ಟಾಟಲ್ ಮೂರು ಸಂಗತಿಗಳನ್ನು ಹೇಳುತ್ತಾನೆ. ಒಂದು ಥಿಯಾರಿಯಾ

(ಚಿಂತನೆ) ಪೊಯಸಿಸ್ ಮತ್ತೊಂದು. ಅದನ್ನು ತಯಾರಿಕೆ ಎಂದು ಹೇಳುತ್ತಾರೆ. ಕೊನೆಯದು ಪ್ರಾಕ್ಸಿಸ್. ಇದನ್ನು ಕ್ರಿಯೆ ಅಥವಾ ಚಟುವಟಿಕೆ ಎಂದು ಹೇಳಬಹುದು. ಅರಿಸ್ಟಾಟಲ್ ಮತ್ತೂ ಮುಂದುವರಿದು ಪ್ರಾಕ್ಸಿಸ್‌ನ ಮೂಲಕ ನಾವು ಪಡೆಯುಬಹುದಾದ ಜ್ಞಾನವನ್ನು ನೀತಿಶಾಸ್ತ್ರ, ಅರ್ಥಶಾಸ್ತ್ರ ಮತ್ತು ರಾಜಕೀಯ ಎಂದು ವಿಂಗಡಣೆ ಮಾಡುತ್ತಾನೆ. ಅದನ್ನು ಇಲ್ಲಿ ಗ್ರಾಂಶಿಯು ಹೇಳುತ್ತಾನೆ. ಮಾರ್ಕ್ಸವಾದ ಎಂದರೆ ಅದು ಬರೀ ಒಂದು ಸಿದ್ಧಾಂತವಲ್ಲ. ಅದರಲ್ಲಿ ಸಿದ್ಧಾಂತ ಮತ್ತು ಆಚರಣೆಗಳು ಜೊತೆಗೆ ಹೋಗುತ್ತವೆ. ಅದು ಅತ್ಯಂತ ಅಗತ್ಯ ಎನ್ನುವುದು ಅವನ ಭಾವನೆಯು ಆಗಿದೆ. ಮಾರ್ಕ್ಸವಾದದಲ್ಲಿ ಪ್ರಾಕ್ಸಿಸ್ ಎನ್ನುವುದು ಸ್ವತಂತ್ರ, ಸಾರ್ವತ್ರಿಕಮ ಸೃಜನಶೀಲ ಹಾಗೂ ಸ್ವಯಂ ಕ್ರಿಯೆಯನ್ನು ಹೊಂದುವುದೂ ಹೌದು. ಗ್ರಾಂಶಿಯ ಪ್ರಕಾರ ಪ್ರಾಕ್ಸಿಸ್ ಎನ್ನುವುದು ಸಾಮಾನ್ಯವಾದ ಒಂದು ಜ್ಞಾನ. ಇದು ಅವನ ಮೊದಲ ಪ್ರಮೇಯ. ಎರಡನೆಯದಾಗಿ ಅದು ಜೀವನದ ಅತ್ಯಂತ ಉನ್ನತವಾದ ಒಂದು ಮಜಲನ್ನು ಹೇಳುತ್ತದೆ. ಆದ್ದರಿಂದಲೇ ಮಾರ್ಕ್ಸವಾದವನ್ನು ಅಭ್ಯಾಸ ಆಧಾರಿತವಾದ ಒಂದು ತತ್ವಜ್ಞಾನ ಎಂದು ನಿರೂಪಿಸುತ್ತಾನೆ. ಕ್ರಿಯೆಯನ್ನು ಹೊರತು ಮಾಡಿದ ಮಾರ್ಕ್ಸವಾದಿ ಸಿದ್ಧಾತ ಎನ್ನುವುದು ಇಲ್ಲ. ಇದ್ದರೆ ಅದು ಮಾರ್ಕ್ಸವಾದಕ್ಕೆ ವಿರುದ್ಧವಾದ್ದು. ಅವನ ನಿಲುವು ಹೆಚ್ಚು ಕ್ರಿಯಾಶೀಲವಾದ್ದು ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇದನ್ನು ಹೇಳುವಾಗಲೇ ಗ್ರಾಂಶಿಯು ನಮಗೆ ಜಗತ್ತು ಮತ್ತು ಮನುಷ್ಯರ ಸಂಬಂಧವನ್ನು ಹೇಳುತ್ತಾನೆ. ಅದನ್ನು ನಾವು ಶುದ್ಧವಾದ ಒಂದು ಕ್ರಿಯಾಶೀಲತೆ ಎಂದೂ ಹೇಲಬಹುದು. ಅದನ್ನು ನಾವು ಆಗಿನ ಸನ್ನಿವೇಶದ ಪ್ರತಿರೋಧ ಎಂದೂ ಹೇಳಬಹುದು. ಅದು ಗ್ರಾಂಶಿಗೆ ಹೆಚ್ಚು ಅಗತ್ಯವಿತ್ತು. ಗ್ರಾಂಶಿಯಲ್ಲಿ ಇದು ಅತ್ಯಂತ ಮುಖ್ಯವಾದ ಒಂದು ಸಿದ್ಧಾಂತವಿದು. ಇದನ್ನು ಹೇಳುವಾಗ ಅವನಿಗೆ ಒಂದು ತತ್ವದ ನಿಲವು ಇತ್ತು. ಮತ್ತೊಂದು ಕಡೆಯಿಂದ ಅವನಿಗೆ ಸ್ವತಂತ್ರವಾದ ದೃಷ್ಟಿಕೋನವೂ ಇತ್ತು. ಅವನಿಗೆ ಕೆಲವು ವಿಷಯಗಳಲ್ಲಿ ಅವನಿಗೆ ಕ್ರೋಸೆಯ ಪ್ರಭಾವವೂ ಇತ್ತು. ಇದನ್ನು ಅವನು ಹೇಳಿಕೊಂಡಿದ್ದಾನೆ. ಅದು ಬೇರೆ ಪ್ರಶ್ನೆ.

ಭಾಷೆ

ಮಾತು ಮತ್ತು ಬರಹದ ಭಾಷೆಗೆ ಇರುವ ವ್ಯತ್ಯಾಸವನ್ನು ಕ್ರೋಸೆಯು ಹೇಳಿದ್ದಾನೆ. ಅದರಲ್ಲಿ ಅಂತರವು ಇದೆ ಎನ್ನುವುದು ಅವನ ವಾದ. ಅವನ ವಾದವನ್ನು ಗ್ರಾಂಶಿಯು ಗಮನಿಸಿದ್ದಾನೆ.

ಕ್ರೋಸೆಯ ತತ್ವಜ್ಞಾನದ ತುಣುಕುಗಳು

ಕ್ರೋಸೆಯನ್ನು ಗ್ರಾಂಶಿಯು ಗಮನಿಸಿದ್ದಾನೆ ಎನ್ನುವುದು ಸತ್ಯ. ಕ್ರೋಸೆಯು ತತ್ವಜ್ಞಾನವನ್ನು ಕ್ರೋಸೆಯು ತುಂಬಾ ವಿಶಿಷ್ಟವಾಗಿ ಮಂಡಿಸಿದ್ದಾನೆ. ಅದರಲ್ಲಿ ಜ್ಞಾನ ಮತ್ತು ಅದರ ಏಕತೆಯೂ ಒಂದು. ಮತ್ತೊಂದು ಅಂಶವನ್ನು ಅವನು ಹೇಳುತ್ತಾನೆ. ಚರಿತ್ರೆಯು ನಮ್ಮ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಚರಿತ್ರೆಗೆ ಮತ್ತು ವರ್ಗ ಸಂಘಟನೆಗಳಿಗೆ ಒಂದು ಸಂಬಂಧವು ಇದೆ. ಅವನಲ್ಲಿ ಮತ್ತೆ ಅನೇಕ ಅಂಶಗಳು ಸೇರುತ್ತವೆ. ಅದರಲ್ಲಿ ಸೌಂದರ್ಯಶಾಸ್ತ್ರವೂ ಸೇರಿಕೊಂಡಿದೆ. ಅವನು ನಾಲ್ಕು ರೀತಿಯ ವಿಜ್ಞಾನಗಳನ್ನು ಹೇಳುತ್ತಾನೆ.. ಅದರಲ್ಲಿ ನಾಲ್ಕು ಬಗೆಯು ಇದೆ, ಒಂದು ಸೌಂದರ್ಯ ಶಾಸ್ತ್ರ, ಅರ್ಥಶಾಸ್ತ್ರ, ತರ್ಕಶಾಸ್ತ್ರ, ನೀತಿಶಾಸ್ತ್ರಗಳು ಸೇರಿವೆ.

ಉತ್ಪಾದನೆ ಮತ್ತು ಪ್ರಭುತ್ವ:

ಗ್ರಾಂಶಿಯು ಉತ್ಪಾದನೆ ಪ್ರಭುತ್ವವನ್ನು ಮೊದಲು ಗ್ರಹಿಸಬೇಕಾದ ಅಗತ್ಯವು ಇರುತ್ತದೆ ಎಂದು ಹೇಳುತ್ತಾನೆ. ಪ್ರಭುತ್ವವು ಉತ್ಪಾದನೆಯನ್ನು ನಿಯಂತ್ರಿಸಿದರೆ ಆಗ ಶೋಷಣೆಯು ಹೆಚ್ಚು ನಡೆಯುತ್ತದೆ.

ಸಾಮಾನ್ಯರು ಮತ್ತು ಬುದ್ಧಿಜೀವಿಗಳು

ವಾಸ್ತವವಾಗಿ ಈವತ್ತು ನಾವು ಸಾಮಾನ್ಯರು ಮತ್ತು ಅವರ ಅಸ್ತಿತ್ವವನ್ನು ಒಂದು ಅರ್ಥದಲ್ಲಿ ಮಾತ್ರವೇ ಗಮನಿಸುತ್ತೇವೆ. ಆದರೆ ಅವರೂ ಚರಿತ್ರೆಯ ಉತ್ಪನ್ನಗಳೇ ಆಗಿರುತ್ತಾರೆ. ಹೇಗೆ ಬುದ್ಧಿಜೀವಿಗಳು ಎನ್ನುವುದು ಒಂದು ಗುಂಪಾಗಿದೆಯೋ ಅದೇ ರೀತಿಯಲ್ಲಿ ಸಾಮಾನ್ಯರು, ರೈತರೂ ಒಂದು ಮಾದರಿಯಲ್ಲಿ ಗುಂಪಾಗಿದ್ದಾರೆ. ಗ್ರಾಂಶಿಯು ಚರಿತ್ರೆ ಮತ್ತು ಅದರ ಕಾರಣಗಳು ಹೇಗೆ ಮನುಷ್ಯರನ್ನು ರೂಪಿಸುತ್ತವೆ ಎಂದು ಹೇಳುತ್ತಾನೆ. ಈ ಮೊದಲು ಹೇಳಿರುವಂತೆ ಮಾರ್ಕ್ಸವಾದದಲ್ಲಿ ಗುಂಪು ಎನ್ನುವ ಬದಲು ವರ್ಗ ಎಂದು ಗುರುತಿಸುತ್ತಾರೆ. ಯಾವ ಅಗತ್ಯಗಳು ಮತ್ತು ಯಾವ ಸನ್ನಿವೇಶಗಳು ಮನುಷ್ಯರನ್ನು ರೂಪಿಸುತ್ತವೆ ಎನ್ನುವುದು ಮುಖ್ಯ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ಚರಿತ್ರೆ ಮತ್ತು ಅದರ ಸಂಚಲನೆಗಳು ವ್ಯಕ್ತಿಯನ್ನು ರೂಪಿಸುತ್ತವೆ. ಆದರೆ ಅದರಲ್ಲಿಯೂ ವಿವಿಧ ವರ್ಗೀಕರಣಗಳು ಇರುತ್ತವೆ. ಬೂರ್ಜ್ವಾ ವರ್ಗ ಮತ್ತು ರೈತರ ವರ್ಗ ಎನ್ನುವುದು ಒಂದು ವಿಧಾನ. ಅವನು ಬರೆದ ಸನ್ನಿವೇಶದಲ್ಲಿ ಈ ಗುಂಪು ಎನ್ನುವುದು ಉದ್ಯೋಗಕ್ಕೂ ಅನ್ವಯವಾಗುತ್ತದೆ. ಗುಂಪು ಎನ್ನುವುದಕ್ಕೆ ಸಮಾಜದಲ್ಲಿ ಒಂದು ಪಾತ್ರವೇ ಇರುವುದಿಲ್ಲ. ಅದರಲ್ಲಿ ವಿವಿಧ ಪ್ರಕ್ರಿಯೆಗಳು ಇರುತ್ತವೆ.

ಬುದ್ಧಿಜೀವಿಗಳು ಮತ್ತು ಅವರ ಸ್ವರೂಪ

ಗ್ರಾಂಶಿಯು ಬುದ್ಧಿಜೀವಿಗಳ ರಚನೆಯನ್ನು ಹೇಳುತ್ತಾನೆ. ಅವರು ಸುಮ್ಮನೆ ಒಂದು ಸಮಾಜದಲ್ಲಿ ಸೃಷ್ಟಿಯಾಗುವುದಿಲ್ಲ. ನಾವು ಭಾವಿಸುತ್ತಿರುವಂತೆ ಅವರು ಒಂದು ಪ್ರತ್ಯೇಕವಾದ ವರ್ಗವೂ ಅಲ್ಲ. ಅವರಿಗೆ ಒಂದು ಸಮಾಜದಲ್ಲಿ ನಿರ್ದಿಷ್ಟವಾದ ಅರ್ಥವಂತಿಕೆಯು ಇರುತ್ತದೆ. ಸಮಾಜ ಮತ್ತು ಅದರ ಅಗತ್ಯಕ್ಕೆ ತಕ್ಕಂತೆ ಒಂದು ವರ್ಗವು ಸೃಷ್ಟಿಯಾಗುತ್ತದೆ. ಅದಕ್ಕೂ ಚರಿತ್ರೆಗೂ ಒಂದು ಸಂಬಂಧವು ಇದೆ. ಅವರು ಸಮಾಜದಲ್ಲಿ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಾರೆ. ಒಮ್ಮೊಮ್ಮೆ ಅವರ ಕೆಲಸ ಮತ್ತು ಅದರ ಮಾದರಿಗಳು ಸಂಕೀರ್ಣವಾದ ರೀತಿಯಲ್ಲಿಯೂ ಇರುತ್ತದೆ. ಲೇಖಕರು ಮತ್ತು ಅವರ ವರ್ಗವು ಒಂದು ಥರ ಇರಬಹುದು. ಆದರೆ ವಕೀಲರು ಮತ್ತೊಂದು ಬಗೆಯ ಕೆಲಸವನ್ನು ಮಾಡುತ್ತಾರೆ. ಹಾಗೆಯೇ ಪರ್ತಕರ್ತರು ಇನ್ನೊಂದು ಮಾದರಿಯ ಕೆಲಸವನ್ನು ಮಾಡುತ್ತಾರೆ. ಇಲ್ಲಿ ಗ್ರಾಂಶಿಯು ಅತ್ಯಂತ ಖಚಿತವಾದ ಒಂದು ನಿಲುವನ್ನು ಹೊಂದಿದ್ದಾನೆ. ಹೀಗೆ ಆಗುವುದು ಅಂದರೆ ಅವನ ಪ್ರಕಾರ ಒಂದು ಚಾರಿತ್ರಿಕ ಸನ್ನಿವೇಶದಲ್ಲಿ ಎನ್ನುವುದನ್ನು ಸ್ಪಷ್ಟ ಪಡಿಸುತ್ತಾನೆ. ಒಂದಲ್ಲಾ ಒಂದು ಅರ್ಥದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಈ ಜಗತ್ತಿನ ಉತ್ಪಾದನೆಯ ವ್ಯವಸ್ಥೆಯಲ್ಲಿ ಭಾಗವಹಿಸುತ್ತಾನೆ. ಅವನು ಕೊಡುಗೆಯು ಇದ್ದೇ ಇರುತ್ತದೆ. ಆದರಲ್ಲಿ ಸ್ವಲ್ಪ ವ್ಯತ್ಯಾಸವೂ ಇರಬಹುದು. ಆದರೆ ಇಲ್ಲಿ ಅವನು ವರ್ಗ ಎಂದು ಹೇಳುವಾಗ ಅದನ್ನು ಒಂದು ಗುಂಪು ಎಂದು ಭಾವಿಸುತ್ತಾನೆ. ಕೆಲವರು ಕೂಡಿಕೊಂಡು ಉತ್ಪಾದನೆಯನ್ನು ಮಾಡುತ್ತಾರೆ. ಇದು ಅತ್ಯಂತ ಮುಖ್ಯ. ಇಟಾಲಿಯನ ಪದವನ್ನು ಗ್ರಾಂಶಿಯು ಹೇಳುತ್ತಾನೆ ಒಂದು ಸೆಟಿ ಮತ್ತೊಂದು ಸ್ಟ್ರಟ . ಈ ಎರಡು ಪದಗಳನ್ನು ನಾವು ಸರಿಯಾದ ಅರ್ಥದಲ್ಲಿ ಬಳಸುವುದು ಅತ್ಯಂತ ಕಷ್ಟ. ಪರೋಕ್ಷವಾಗಿ ಇದು ಸನ್ನಿವೇಶವನ್ನು ಹೇಳುತ್ತದೆ. ಅದರ ಜೊತೆಗೆ ಸಮಾಜದಲ್ಲಿ ಇರುವ ಗುಂಪುಗಳನ್ನು ಹೇಳುತ್ತದೆ. ಗ್ರಾಂಶಿಯು ಒಂದು ಸಮಾಜದ ಮೂಲಭೂತವಾದ ಗುಂಪನ್ನು ವಿವರಿಸುತ್ತಾನೆ. ಇದನ್ನು ಹೇಳುವಾಗ ತನ್ನ ನಿಲುವನ್ನು ಹೆಚ್ಚು ಖಚಿತವಾಗಿ ಹೇಳಲು ಕಾರಣವೂ ಇದೆ. ವರ್ಗ ಎಂದರೆ ಆಗ ಅದರ ಅರ್ಥವು ಬೇರೆಯಾಗುತ್ತದೆ. ಅದರಲ್ಲಿ ವಿವಿಧ ವರ್ಗಗಳು ಮತ್ತು ಅದರ ಪ್ರಶ್ನೆಗಳು ಬರುತ್ತವೆ. ಆದರೆ ಗುಂಪು ಎಂದರೆ ಅದನ್ನು ಗಮನಿಸುವ ಕ್ರಮವು ಬೇರೆಯಾಗಬೇಕಾಗುತ್ತದೆ. ವರ್ಗವನ್ನು ಅತ್ಯಂತ ಹೆಚ್ಚು ಚರ್ಚೆಮಾಡಲಾಗಿದೆ ಮತ್ತು ಅದಕ್ಕೆ ಹೆಚ್ಚು ಭಾರವನ್ನು ಹೊರಿಸಲಾಗಿದೆ ಎನ್ನುವುದು ಅವನು ನಿಲುವು. ಕೆಲವು ವಿಚಾರಗಳು ಹೇಗೆ ಅಸ್ಪಷ್ಟವಾಗಿದೆ ಎಂದು ಹೇಳುತ್ತಾನೆ. ಅವನು ಒಂದು ವಿಚಾರವನ್ನು ಖಚಿತವಾಗಿ ಹೇಳುತ್ತಾನೆ. ಗುಂಪು

ಅಂದ ಕೂಡಲೇ ನಾವು ಅದನ್ನು ಒಂದು ಜಾತಿ ಎಂದು ಭಾವಿಸುತ್ತೇವೆ. ವರ್ಗ ಮತ್ತು ಅದರ ಗುಂಪುಗಳನ್ನು ಹೇಳುವಾಗ ನಾವು ಸಮಾಜದ ತಳಕ್ಕೆ ಹೋಗಬೇಕು. ಅದರ ವ್ಯುತ್ಪತ್ತಿ ಹೇಗೆ ಇದೆ ಎಂದು ನೋಡಬೇಕಾಗುತ್ತದೆ. ರೈತ, ವರ್ತಕಶಾಹಿ, ರೈತ ಮುಂತಾದ ಪದಗಳೂ ನಮ್ಮ ಹಾದಿಯನ್ನು ಬೇರೆ ಮಾಡುತ್ತದೆ. ಆದ್ದರಿಂದ ಅವನು ಗುಂಪು ಎಂದು ಹೇಳುವಾಗ ಅವನು ಅದನ್ನು ಒಂದು ಉದ್ಯೋಗ, ವ್ಯಾಪಾರ ಮುಂತಾದವುಗಳನ್ನು ಗಮನಕ್ಕೆ ತಂದು ಕೊಳ್ಳುತ್ತಾನೆ. ನಾವು ಯಾವುದೇ ಕೆಲಸವನ್ನು ಮಾಡಿದರೂ ಅಂತಿಮವಾಗಿ ಅದು ಸಮಾಜದಲ್ಲಿ ಒಂದು ಮಹತ್ವದ ಪ್ರಭಾವವನ್ನು ಬೀರುತ್ತದೆ. ಅದರ ಎಚ್ಚರ ನಮಗೆ ಇರುತ್ತದೆ. ಬಂಡವಾಳವಾದ ತನಗೆ ಬೇಕಾದ ಒಂದು ಉದ್ಯಮವನ್ನು ಪ್ರಾರಂಭ ಮಾಡಿದರೆ ಆಗ ಅದು ತನಗೆ ಬೇಕಾದ ಬುದ್ಧಿಜೀವಿಗಳನ್ನು ನಿರ್ಮಾಣ ಮಾಡುತ್ತದೆ. ರಾಜಕೀಯ ಅರ್ಥಶಾಸ್ತ್ರವು ತನ್ನ ನಿಲುವಿಗೆ ಬೇಕಾದ ರೀತಿಯಲ್ಲಿ ಸಂಸ್ಕೃತಿಯನ್ನು ಕೂಡಾ ಸೃಷ್ಟಿ ಮಾಡುತ್ತದೆ. ಅದರ ವ್ಯಾಪಾರ ಮತ್ತು ಉದ್ದಿಮೆ ತಕ್ಕ ರೀತಿಯಲ್ಲಿ ಇದು ಇರುತ್ತದೆ. ಅದು ಮತ್ತೊಂದು ಕೆಲಸವನ್ನು ಮಾಡುತ್ತದೆ. ತನ್ನ ಅನುಕೂಲಕ್ಕೆ ಬೇಕಾದ ರೀತಿಯಲ್ಲಿ ಕಾನೂನನ್ನು ರಚನೆ ಮಾಡುತ್ತದೆ. ಆಧುನಿಕ ಯುಗದ ನಾಗರಿಕತೆಯು ಬೆಳೆಯುತ್ತಾ ಬಂದಂತೆ ಬುದ್ಧಿವಂತಿಕೆ ಮತ್ತು ಅದರ ರೂಪಗಳು ಬದಲಾಗುತ್ತವೆ. ಗ್ರಾಂಶಿಯು ಒಂದು ಅಂಶವನ್ನು ಹೇಳುತ್ತಾನೆ. ಆಧುನಿಕ ನಾಗರಿಕತೆಯು ಕೆಲವು ರಾಜಕೀಯ ಪಕ್ಷಗಳು ನಿರ್ದಿಷ್ಟವಾದ ರಾಜಕೀಯ ಆಸಕ್ತಿಯನ್ನು ಹೊಂದಿರುತ್ತವೆ. ಅದಕ್ಕೆ ಅನುಗುಣವಾದ ಬುದ್ಧಿಜೀವಿಗಳು ತಮ್ಮ ನಿಲುವು ವ್ಯಕ್ತ ಮಾಡುತ್ತಾರೆ.ಎಷ್ಟೋ ಸರ್ತಿ ಬುದ್ಧಿಜೀವಿಗಳು ಬೇರೆ ಬೇರೆ ಸಂಗತಿಗಳನ್ನು ಪ್ರತಿನಿಧಿಸುತ್ತಾರೆ. ಆಳುವ ವರ್ಗಕ್ಕೆ ಅತ್ಯಂತ ಅಗತ್ಯವಾಗಿರುವುದು ತನ್ನ ಅಧಿಕಾರವನ್ನು ಮುಂದುವರಿಸುವವರು ಮಾತ್ರ. ಆದ್ದರಿಂದ ಬುದ್ಧಿಜೀವಿಗಳಿಗೆ ಕೂಡಾ ಒಂದು ವಲಯವು ಇರುತ್ತದೆ. ಒಂದು ಸಮಾಜದಲ್ಲಿ ಲೇಖಕರು ಮತ್ತು ಬುದ್ಧಿಜೀವಿಗಳು ತಮ್ಮದೇ ಆದ ಒಂದು ಪಾತ್ರವನ್ನು ವಹಿಸುತ್ತಾರೆ, ಆದರೆ ಅವರ ಸ್ಥಿತಿ ಮತ್ತು ಅವರ ರಚನೆಗಳು ಅತ್ಯಂತ ಮುಖ್ಯವಾದ ಒಂದು ಪಾತ್ರವನ್ನು ವಹಿಸುವುದು ಸತ್ಯ.. ಹಾಗೆ ನೋಡಿದರೆ ಒಂದು ಗುಂಪು ತನ್ನದೇ ಆದ ಒಂದು ಎಚ್ಚರವನ್ನು ಇಟ್ಟುಕೊಂಡಿರುತ್ತದೆ. ಗ್ರಾಂಶಿಯು ಗುಂಪುಗಳು ಎಂದು ಏನನ್ನು ಹೇಳುತ್ತಾನೆಯೋ ಆ ಗುಂಪಿಗೆ ಬರೀ ಆರ್ಥಿಕವಾದ ಒಂದು ಕ್ರಿಯೆ ಮಾತ್ರವೇ ಇರುತ್ತದೆ ಎಂದು ಹೇಳಲು ಬರುವುದಿಲ್ಲ. ಆ ಗುಂಪು ಸಮಾಜ ಮತ್ತು ರಾಜಕಾರಣದಲ್ಲಿ ತನ್ನದೇ ಆದ ಒಂದು ಪಾತ್ರವನ್ನು ವಹಿಸುತ್ತದೆ. ಇದನ್ನು ಹೇಳುವಾಗ ನಾವು ಇನ್ನೊಂದು ಪ್ರಶ್ನೆಯನ್ನು ನೋಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಇರುವ ಜಾತಿಗಳು ಕೂಡಾ ಗುಂಪುಗಳು ಮಾತ್ರ. ಆದರೆ ನಾವು ಇದರ ಜೊತೆಗೆ

ಇನ್ನೊಂದು ಅಂಶವನ್ನು ಗಮನಿಸುವುದು ಅತ್ಯಂತ ಅಗತ್ಯ ಎಂದು ಗ್ರಾಂಶಿಯು ಹೇಳುತ್ತಾನೆ. ಹೊಸದಾದ ಕೈಗಾರಿಕೆಗಳು ಬಂದಾಗ ಅದಕ್ಕೆ ಬೇಕಾದ ಪರಿಣಿತರಾದ ಜನರು ಬೇಕಾದರು. ಅಷ್ಟೇ ಅಲ್ಲ ಜನರು ಮತ್ತು ಅವರ ತಜ್ಞತೆಯು ಅತ್ಯಂತ ಮುಖ್ಯವಾದವು. ಜನರು ಸಾಮಾಜಿಕ ಜೀವನದಲ್ಲಿ ಪಲ್ಲಟವನ್ನು ಕಂಡರು. ರಾಜಕಾರಣವು ಬದಲಾಯಿತು. ಕೈಗಾರಿಕೆ ಮತ್ತು ಅದರ ತಜ್ಞತೆ ಎನ್ನುವುದು ಬೇಕಾದರೆ ಅದಕ್ಕೆ ತಕ್ಕ ಶಿಕ್ಷಣವೂ ಬೇಕಾಯಿತು. ರಾಜಕೀಯ ಅರ್ಥಶಾಸ್ತ್ರ ಎಂದರೆ ಬರೀ ಒಂದು ವಾದವಲ್ಲ. ಅದರಲ್ಲಿ ನಮಗೆ ರಾಜಕೀಯ ಅರ್ಥಶಾಸ್ತ್ರವು ಮನುಷ್ಯರನ್ನು ಬದಲು ಮಾಡುತ್ತದೆ ಎನ್ನುವುದು ಗ್ರಾಂಶಿಗೆ ಗೊತ್ತಿತ್ತು. ಅದು ಸಮಾಜ ಮತ್ತು ಅದರ ಅತ್ಯಂತ ಸೂಕ್ಷ್ಮದ ಸಂಗತಿಗಳನ್ನು ಬದಲು ಮಾಡುತ್ತದೆ. ಆದ್ದರಿಂದ ಅದಕ್ಕೆ ನಿರ್ದಿಷ್ಟವಾದ ಚಹರೆಗಳು ಇರುತ್ತವೆ. ಅದನ್ನು ಹೇಳುವಾಗ ಗ್ರಾಂಶಿಯು ಹೇಗೆ ಸಮಾಜವು ವಿಸ್ತರಣೆ ಆಯಿತು. ಮತ್ತು ಅದರಲ್ಲಿ ಬುದ್ಧಿಜೀವಿಗಳ ಪಾತ್ರವೇನು ಎನ್ನುವುದರ ಚರ್ಚೆಯೂ ನಡೆಯಿತು. ಸಾಮಾಜಿಕ ವಿಸ್ತರಣೆ ಎನ್ನುವುದು ನಮಗೆ ಕೆಲವೊಮ್ಮ ಕಾಣುತ್ತದೆ. ಆದರೆ ಮತ್ತೆ ಕೆಲವೊಮ್ಮೆ ಅದು ಕಾಣುವುದೂ ಇಲ್ಲ.ಅಷ್ಟು ಸೂಕ್ಷ್ಮವಾಗಿರುತ್ತದೆ. ಬುದ್ಧಿಜೀವಿಗಳು ಇದರಲ್ಲಿ ಅತ್ಯಂತ ಸಕ್ರಿಯವಾದ ಪಾತ್ರವನ್ನು ವಹಿಸಿದ್ದರು. ಅವನಿಗೆ ಇರುವ ಸಾಮಾರ್ಥ್ಯವು ಅತ್ಯಂತ ಸಣ್ಣದು ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ವ್ಯಕ್ತಿ ಮತ್ತು ಅವನ ತಾಂತ್ರಿಕವಾದ ಸಾಮಾರ್ಥ್ಯ ಎನ್ನುವುದು ಒಂದು ಸ್ಥಳವನ್ನು ಮಾತ್ರವೇ ಹೇಳುವುದಿಲ್ಲ. ಅವನ ಕ್ರಿಯಾಶೀಲತೆಯನ್ನು ಅವನಿಗೆ ಇರುವ ಅವಕಾಶದಲ್ಲಿಯೂ ನಾವು ಕಾಣಬಹುದು. ಅವನ ಶಕ್ತಿ ಮತ್ತು ಸಾಮರ್ಥ್ಯವು ಅವಕಾಶವನ್ನು ಹೇಳುತ್ತದೆ. ಆದರೆ ಅದು ಅಲ್ಲಿಗೆ ಮಾತ್ರವೇ ನಿಲ್ಲುವುದಿಲ್ಲ ಎಂದು ಸ್ಪಷ್ಟವಾಗಿ ಗ್ರಾಂಶಿಯು ಹೇಳುತ್ತಾನೆ. ಅವನ ಕೌಶಲವು ಆರ್ಥಿಕತೆಯನ್ನು ಹೇಳುತ್ತದೆ. ಅದರ ಮೇಲೆ ಅವನ ಪ್ರಭಾವವನ್ನು ಕಾಣಬಹುದು. ಅಷ್ಟೇ ಅಲ್ಲ, ಅವನು ಜನರನ್ನು ಒಗ್ಗೂಡಿಸುವ ಕೆಲಸವನ್ನೂ ಮಾಡುತ್ತಾನೆ. ಅದನ್ನು ಗ್ರಾಂಶಿಯು ಅವನ ಆತ್ಮ ವಿಶ್ವಾಸ ಎಂದೂ ಹೇಳುತ್ತಾರೆ. ಬುದ್ಧಿಜೀವಿಗಳು ಅನೇಕ ಸನ್ನಿವೇಶದಲ್ಲಿ ವರ್ತಕರಂತೆ ಕೆಲಸವನ್ನು ಮಾಡುತ್ತಾರೆ. ತನ್ನ ಉತ್ಪಾದನೆಯನ್ನು ಗಿರಾಕಿಗಳಿಗೆ ಮಾರಬಲ್ಲ. ಇದರಲ್ಲಿಯೂ ಅತ್ಯಂತ ಏಕಾಕಿತನವನ್ನು ಹೊಂದಿರುವವರು ಒಂದು ನಿರ್ದಿಷ್ಟವಾದ ಕೆಲಸವನ್ನು ಮಾತ್ರವೇ ಮಾಡುತ್ತಾರೆ. ಅವರ ಪರಿಧಿಯು ಭಿನ್ನವಾದ್ದು. ಪ್ರಭುತ್ವ ಕೂಡಾ ಅವನಿಗೆ ಹೆಚ್ಚು ಅವಕಾಶವನ್ನು ಕೊಡುತ್ತದೆ. ಸಮಾಜವನ್ನು ಸಂಘಟಿಸಲು ಅವನು ಯತ್ನವನ್ನು ಮಾಡುತ್ತಾನೆ: ಬುದ್ಧಿವಂತಿಕೆ ಎನ್ನುವುದು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಹೇಳಲು ಗ್ರಾಂಶಿಯು ಇದನ್ನು ಹೇಳುತ್ತಾನೆ. ಅವರ ಸಾಮಾಜಿಕ ಸಂಬಂಧ ಮತ್ತು ಅದರ ಸ್ವರೂಪವೂ ಬೇರೆಯಾಗಿರುತ್ತದೆ. ಅವರು ಅದನ್ನು ಕಟ್ಟುತ್ತಾರೆ.

ಒಂದು ಮಾತನ್ನು ಇಲ್ಲಿ ಗ್ರಾಂಶಿಯು ಹೇಳುತ್ತಾನೆ. ಸಮಾಜದಲ್ಲಿ ಇರುವ ಸಾಮಾನ್ಯರಿಗೆ ಮತ್ತು ಬುದ್ಧಿಜೀವಿಗಳಿಗೆ ತುಂಬಾ ವ್ಯತ್ಯಾಸವಿದೆ. ಸಾಧಾರಣ ಮನುಷ್ಯರು ಕೆಲವನ್ನು ಸಂಯೋಜನೆ ಮಾಡಲು ವಿಫಲರಾಗುತ್ತಾರೆ. ಅವರು ಅನೇಕವನ್ನು ವಿಸ್ತಾರ ಮಾಡಲಾರರರು. ಬುದ್ಧಿಜೀವಿಗಳು ಪ್ರಭುತ್ವದಲ್ಲಿ ಒಂದು ಪ್ರಧಾನವಾದ ಪಾತ್ರವನ್ನು ವಹಿಸುತ್ತಾರೆ, ಅಷ್ಟೇ ಅಲ್ಲ ಅವರು ತಮ್ಮದೇ ಆದ ಒಂದು ವರ್ಗವನ್ನು ಬೆಳೆಸುತ್ತಾರೆ. ಅದನ್ನು ಸಂಘಟನೆ ಮಾಡುತ್ತಾರೆ. ಇದಕ್ಕೆ ಅವರಿಗೆ ಒಂದು ಶಕ್ತಿಯೂ ಇರುತ್ತದೆ. ಆದ್ದರಿಂದ ಅವರನ್ನು ಅತ್ಯಂತ ವಿಶಿಷ್ಟವಾದ ತಜ್ಞರು ಎಂದು ಹೇಳುತ್ತಾರೆ. ಸಾಮಾನ್ಯವಾದ ಒಂದು ಸಂಬಂಧವನ್ನು ಅವರು ವಿಶಿಷ್ಟವನ್ನಾಗಿ ರೂಪಿಸುತ್ತಾರೆ. ಇದನ್ನು ಹೇಳುವಾಗ ಅವನು ಆರ್ಗ್ಯಾನಿಕ್ ಬುದ್ಧಿಜೀವಿಗಳ ವಿಚಾರವನ್ನು ನಿರೂಪಿಸುತ್ತಾನೆ. ಹೊಸಬಗೆಯ ಹೊಸವರ್ಗ ಎನ್ನುವುದು ಅವನ ನಿರೂಪಣೆ. ಅವರು ಪ್ರಾಥಮಿಕವಾದ ಸ್ಥಿತಿಯನ್ನು ದಾಟಿರುತ್ತಾರೆ. ಸಾಮಾನ್ಯವಾದ ಒಂದು ಚಟುವಟಿಕೆಯನ್ನು ದಾಟಿ ಮುಂದೆ ಬಂದಿರುವುದರಿಂದ ಅವರಿಗೆ ಸಮಾಜದಲ್ಲಿ ಹೆಚ್ಚು ಮನ್ನಣೆಯು ಸಿಗುತ್ತದೆ. ರಾಜಕೀಯ ವರ್ಗ ಮತ್ತು ಏಕಾಂತವಾದಿಗಳ ಸಂಬಂಧವು ಅತ್ಯಂತ ಮುಖ್ಯ. ಇದನ್ನು ಚಾರಿತ್ರಿಕ ಸಂಗತಿಗಳ ಮೂಲಕ ನಾವು ನೋಡಬೇಕಾಗುತ್ತದೆ. ಚರಿತ್ರೆಯ ಉದ್ದಗಲಕ್ಕೂ ಬುದ್ಧಿಜೀವಿಗಳು ತಮ್ಮ ಪಾತ್ರವನ್ನು ವಹಿಸುತ್ತಾ ಬಂದಿದ್ದಾರೆ. ಪ್ರಭುತ್ವ ಮತ್ತು ಸಾಮಾಜಿಕರ ಮಧ್ಯೆ ಈ ವರ್ಗವು ಬಂದಿದೆ. ಯಾರನ್ನು ನಾವು ಏಕಾಂತವಾದಿಗಳು ಎಂದು ಹೇಳುತ್ತೇವೆಯೋ ಅವರು ರಾಜಪ್ರಭುತ್ವ ಸಾಮಾನ್ಯರ ನಡುವೆ ಒಂದು ಸಂಬಂಧವನ್ನು ರೂಪಿಸಿದ್ದು ಇಲ್ಲಿ ಗಮನಾರ್ಹ.

ಏಕಾಂತವಾದಿಗಳು ಇವತ್ತು ಒಂದು ವ್ಯವಸ್ಥೆಯ ಭಾಗವಾಗಿದ್ದಾರೆ. ಅವರನ್ನು ಪ್ರಭುತ್ವವು ರಕ್ಷಣೆ ಮಾಡುತ್ತದೆ. ಪ್ರಭುತ್ವವನ್ನು ಈ ಏಕಾಂತವಾದಿಗಳು ಅನೇಕ ಸನ್ನಿವೇಶದಲ್ಲಿ ಬೆಂಬಲಿಸುತ್ತಾರೆ. ರಾಜಕೀಯ ಏಕಾಂತವಾದಿಗಳು ಪ್ರಭುತ್ವವನ್ನು ಬೆಂಬಲಿಸುವುದರಿಂದ ಅವರುಗೆ ಹೆಚ್ಚು ಮನ್ನಣೆಯು ಇದೆ. ಇವರನ್ನು ಪೊಲಿಟಿಕಲ್ ಇಲೈಟ್ಸ್ ಎಂದೂ ಹೇಳುವುದು ಇದೆ., ಹಿಂದೆ ಏನಾಗಿತ್ತು ಎಂದೂ ನೋಡಬೇಕು. ಚರಿತ್ರೆಯಲ್ಲಿ ಜಮೀನ್ದಾರರು ಇದ್ದರು. ಅವರೂ ಈ ಬಗೆಯ ಬುದ್ಧಿಜೀವಿಗಳನ್ನು ಬೆಂಬಲಿಸಿದ್ದಾರೆ. ಅವರಿಗೂ ಈ ಬಗೆಯ ತಾಂತ್ರಿಕ ಸಾಮಾರ್ಥ್ಯವನ್ನು ಒದಗಿಸಿದವರು ಇದೇ ಬುದ್ಧಿಜೀವಿಗಳು. ಬುದ್ಧಿಜೀಗಳು ಆಗ ಯುದ್ಧಕ್ಕೆ ಮತ್ತು ಸೈನ್ಯಕ್ಕೆ ಹೆಚ್ಚು ಸಹಾಯವನ್ನು ಉಂಟು ಮಾಡಿದ್ದರು. ರಾಜಪ್ರಭುತ್ವವು ಕೂಡಾ ಹೀಗೆ ಇರುತ್ತದೆ. ಅದೂ ಲೇಖಕರನ್ನು ಮತ್ತು ಬುದ್ಧಿಜೀವಿಗಳನ್ನು ಬಳಸಿದೆ. ಅದರಲ್ಲಿ ಅನುಮಾನವಿಲ್ಲ. ಆದರೆ ಬುದ್ಧಿಜೀವಿಗಳು ಮತ್ತು ಅವರ ಚಿಂತನೆಯ ಕ್ರಮವು ಬೇರೆಯಿತ್ತು ಎನ್ನುವುದು ಇಲ್ಲಿ ಗಮನಾರ್ಹ.

ಉತ್ಪಾದನೆಗೆ ಇವರ ಅಗತ್ಯವು ರಾಜ ಪ್ರಭುತ್ವಕ್ಕೂ ಬೇಕಿತ್ತು ಎನ್ನುವುದು ನಿಜ. ಸಾಂಪ್ರದಾಯಿಕ ಬುದ್ಧಿಜೀವಿಗಳು ಇದಕ್ಕಿಂತ ಬೇರೆಯಾಗಿರುತ್ತಾರೆ ಎಂದು ಗ್ರಾಂಶಿಯು ಹೇಳುತ್ತಾನೆ., ರೈತ ಮತ್ತು ಅವನ ಗುಂಪು ಮತ್ತೊಂದು ಥರ ಕೆಲಸವನ್ನು ಮಾಡುತ್ತಾರೆ. ರೈತರು ಮತ್ತು ಅವರ ಗುಂಪು ಎನ್ನುವುದಕ್ಕೆ ಒಂದು ನಿರ್ದಿಷ್ಟವಾದ ಚರಿತ್ರೆಯು ಇರುತ್ತದೆ. ಅದನ್ನು ಗ್ರಾಂಶಿಯು ಮೂಲದಿಂದ ಬಂದ ರೈತಾಪಿ ವರ್ಗ ಎಂದು ಹೇಳುತ್ತಾನೆ. ಆದರೆ ಏನಿದ್ದರೂ ಒಂದು ಸಮಾಜದಲ್ಲಿ ಒಂದು ನಿರ್ದಿಷ್ಟವಾದ ಗುಂಪು ಆರ್ಥಿಕವಾದ ಮೂಲ ರಚನೆಗಳನ್ನು ಮಾಡಿದ್ದು ನಿಜ. ಆರ್ಥಿಕತೆ ಮತ್ತು ಅದರ ರಚನೆಗಳು ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದು ನಿಜ. ಅಲ್ಲಿಂದ ಇಲ್ಲಿಯ ವರೆಗೆ ಇದು ಬಂದಿರುವುದು ನಮಗೆ ಕಾಣಿಸುತ್ತದೆ. ಇದನ್ನು ಗ್ರಾಂಶಿಯು ಚಾರಿತ್ರಿಕವಾದ ಮುಂದುವರಿಯುವಿಕೆ ಎಂದು ಹೇಳುತ್ತಾನೆ. ಇದನ್ನು ಪ್ರಸ್ತಾವಿಸುವುದು ಅಂದರೆ ರಾಜಕಾರಣ ಮತ್ತು ಸಾಮಾಜಿಕ ಜೀವನ ಕ್ರಮದ ರೂಪಗಳನ್ನು ತಿಳಿಯುವುದು ಎಂದೂ ಅರ್ಥವಾಗುತ್ತದೆ.

ಹಾಗೆ ನೋಡಿದರೆ ನಮಗೆ ಇತಿಹಾಸದ ಬೆಳವಣಿಗೆಯಲ್ಲಿ ಚರ್ಚನ ಸಂಸ್ಥೆಗಳು ಉಂಟುಮಾಡಿದ ತಾರತಮ್ಯಗಳು ಬೇರೆ ರೀತಿಯಲ್ಲಿ ಇವೆ. ಅವುಗಳು ತಮಗೆ ಬೇಕಾದ ಜ್ಞಾನವನ್ನು ಉತ್ಪಾದನೆ ಮಾಡಿದ್ದು ನಿಜ. ಅದು ಮತ್ತೊಂದು ಅರ್ಥದಲ್ಲಿ ತನಗೆ ಬೇಕಾದ ಧಾರ್ಮಿಕವಾದ ಒಂದು ತಾತ್ವಿಕತೆಯನ್ನು ಮಾತ್ರವೇ ಹೆಚ್ಚು ಚಾಲ್ತಿಗೆ ತಂದಿತ್ತು. ಸೇವೆ ಎನ್ನುವುದು ಧಾರ್ಮಿಕವಾದ ಒಂದು ನಿಲುವು. ಆದರೆ ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಶಾಲೆ, ನೈತಿಕತೆ, ನ್ಯಾಯ, ತ್ಯಾಗ ಇತ್ಯಾದಿಗಳನ್ನು ಅವು ನಿರೂಪಿಸಿದವು. ಅವುಗಳೂ ತಮಗೆ ಬೇಕಾದ ಬುದ್ಧಿವಂತಿಕೆಯನ್ನು ಬಳಸಿದ್ದು ನಿಜ. ಅದರ ಜೊತೆಗೆ ನಾವು ಆಗಿನ ಜಮೀನ್ದಾರಿ ಪದ್ಧತಿಯು ಹೇಗೆ ಜಮೀನಿನ ಮೇಲೆ ತನ್ನ ಅಧಿಕಾರವನ್ನು ಪಡೆದವು ಹಾಗೂ ಅದರ ಮೂಲಕವೇ ಹೇಗೆ ಪ್ರಬಲವಾದವು ಎಂದು ಗ್ರಾಂಶಿಯು ಹೇಳುತ್ತಾನೆ. ಆ ಗುಂಪಿಗೂ ವಿಶೇಷವಾದ ಸ್ಥಾನಮಾನವು ದೊರಕಿತ್ತು. ರೈತರು ಮತ್ತು ಆ ಬಗೆಯ ಗುಂಪುಗಳು ಒಂದು ಥರ ಇದ್ದರೆ ಧಾರ್ಮಿಕ ಗುಂಪುಗಳು ಮತ್ತೊಂದು ಥರ ಇರುತ್ತವೆ. ಧಾರ್ಮಿಕ ಗುಂಪುಗಳನ್ನು ಮತ್ತೊಂದು ಅರ್ಥದಲ್ಲಿ ಬಾಹ್ಯ ರಚನೆ ಎಂದೂ ಹೇಳಬಹುದು. ಅವುಗಳು ಕೂಡಾ ಅಧಿಕಾರವನ್ನು ಬೇರೆ ಥರ ಬಳಸಿದ್ದು ಸತ್ಯ, ಸಾಂಪ್ರದಾಯಿಕ ಬುದ್ಧಿಜೀವಿಗಳ ಅನುಭವ ಮತ್ತು ಅವರ ಸ್ಥಾನಮಾನವು ಒಂದು ದೃಷ್ಟಿಯಿಂದ ಅತ್ಯಂತ ಮಹತ್ವದ್ದೆಂದು ಸಮಾಜವು ಅಂಗೀಕರಿಸಿತ್ತು. ಅವರಿಗೆ ಇದ್ದ ವಿಶೇಷವಾದ ಅರ್ಹತೆಯು ಉಳಿದವರಿಗೆ ಇರಲಿಲ್ಲ. ವೈದ್ಯರು ಮತ್ತು ಧಾರ್ಮಿಕ ಗುಂಪು ಈ ಬಗೆಯಲ್ಲಿ ಭಿನ್ನವಾದ ಪಾತ್ರವನ್ನು ವಹಿಸಿದ್ದು ಇಲ್ಲಿ

ಉಲ್ಲೇಖನೀಯ. ಅನೇಕ ಪೂಜಾರಿಗಳು ತಮ್ಮ ಆಧ್ಯಾತ್ಮಿಕವಾದ ಶಕ್ತಿಯಿಂದ ರೋಗವನ್ನು ಗುಣಪಡಿಸುತ್ತಾರೆ ಎಂದು ಭಾವಿಸಿದ್ದು ನಿಜ. ಅನೇಕ ಆದರ್ಶವಾದಿ ತತ್ವಜ್ಞಾನಿಗಳು ಮತ್ತೊಂದು ಬಗೆಯ ಪಾತ್ರವನ್ನು ವಹಿಸಿದ್ದನ್ನು ಹೇಳುವುದು ಸೂಕ್ತ. ಅವರದು ಅತ್ಯಂತ ಸಂಕೀರ್ಣವಾದ ಪಾತ್ರವೂ ಹೌದು. ಅವರು ಸ್ವತಂತ್ರವೂ ಹೌದು. ಚರ್ಚ್ ಕೂಡಾ ಕೆಲಬಗೆಯ ತಾರತಮ್ಯವನ್ನು ಹೊಂದಿದ್ದು , ಪೋಪ್ ಗೆ ಅತ್ಯಂತ ಸರ್ವೋಚ್ಚವಾದ ಅಧಿಕಾರ ಇದ್ದದು ಇಲ್ಲಿ ಉಲ್ಲೇಖನೀಯ. ಪಾದ್ರಿಗಳು ತಾವು ದೇವರೊಂದಿಗೆ ಮಾತಾಡುತ್ತೇವೆ ಎಂದು ಹೇಳಿದ್ದು ಇಲ್ಲಿ ಗಮನಿಸಬೇಕಾದ ಸಂಗತಿಯೂ ನಿಜ.

ಬುದ್ಧಿಜೀವಿಗಳ ಮಿತಿಗಳು

ನಮಗೆ ಈವತ್ತು ಯಾರನ್ನು ಬುದ್ಧಿಜೀವಿಗಳು ಮತ್ತು ಯಾರನ್ನು ಸಾಮಾನ್ಯ ಮನುಷ್ಯರು ಎಂದು ಕರೆಯುವಾಗಲೇ ಒಂದು ಗೊಂದಲವಿದೆ. ಬುದ್ಧಿಜೀವಿಗಳು ಎಂದು ಕರೆಯಲು ನಮಗೆ ಇರುವ ಮಾನದಂಡವೇ ಒಂದು ಪ್ರಶ್ನ. ಇನ್ನಿತರ ಸಾಮಾಜಿಕ ಗುಂಪು ಮತ್ತು ಬುದ್ಧಿಜೀವಿಗಳ ಗುಂಪು ಎನ್ನುವುದನ್ನು ಸಂಯೋಜನೆ ಮಾಡುವುದೆ ಕಷ್ಟವಾಗುತ್ತದೆ. ಇದರಲ್ಲಿ ಒಂದು ಅಂಶವು ಅತ್ಯಂತ ಮುಖ್ಯವಾಗಿದೆ. ನಾವು ಗುಂಪುಗಳು ಎಂದು ವರ್ಗೀಕರಣ ಮಾಡುವಾಗ ನಮಗೆ ಮೊದಲು ಸಿಕ್ಕುವುದು ವ್ಯಕ್ತಿಗಳು ಮತ್ತು ಅವರ ಕಾರ್ಯ ವಿಧಾನ. ಇದು ಒಂದು ಕ್ರಿಯಾಶೀಲತೆಯೂ ಹೌದು. ಬುದ್ಧಿಜೀವಿಗಳು ತಮ್ಮನ್ನು ತಾವೇ ಪ್ರಸ್ತುತಪಡಿಸಬಲ್ಲರು. ಸಾಮಾನ್ಯ ಬಗೆಯ ಜನರಿಂದ ಅವರು ಬೇರೆಯಾಗಿದ್ದಾರೆ. ಅವರ ದೃಷ್ಟಿಕೋನವೂ ಬೇರೆ ಇರುತ್ತದೆ. ರೈತರು ಮತ್ತು ತೀರಾ ಸಾಮಾನ್ಯ ಎನ್ನಬಹುದಾದ ಕಾರ್ಮಿಕರಿಗೂ ಬುದ್ಧಿಜೀವಿಗಳಿಗೂ ವ್ಯತ್ಯಾಸವಿದೆ. ದೇಹದ ಶ್ರಮ ಮತ್ತು ಪರಿಕರಗಳನ್ನು ಬಳಸಿ ಉತ್ಪಾದಿಸುವ ಕ್ರಮಗಳು ವ್ಯಕ್ತಿಯನ್ನು ನಿರ್ಧಾರ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸುತ್ತದೆ. ರೈತರು ತಮ್ಮ ಕೆಲಸವನ್ನು ಮಾಡುವಾಗ ದೇಹದ ಶ್ರಮವನ್ನು ಬಳಸುತ್ತಾರೆ. ಅದರ ಜೊತೆಗೆ ಅವರ ಕೆಲಸಗಳು ಒಂದು ಕಾಲಕ್ಕೆ ಒಂದು ಥರ ಇರುತ್ತದೆ. ಮತ್ತೊಂದು ಕಾಲಕ್ಕೆ ಮತ್ತೊಂದು ಥರ ಇರುತ್ತದೆ. ಕೆಲವು ವಿಶಿಷ್ಟವಾದ ಸನ್ನಿವೇಶದಲ್ಲಿ ಮಾತ್ರವೇ ಅವರ ಕೆಲಸವು ಇರುತ್ತದೆ. ಅವರ ಕೆಲಸಕ್ಕೆ ಯಾವುದೇ ಸಹಿಗಳು ಇರುವುದಿಲ್ಲ. ವಿಶಿಷ್ಟವಾದ ಒಂದು ಸನ್ನಿವೇಶ ಮತ್ತು ಒಂದು ವಿಶಿಷ್ಟವಾದ ಕಾಲದಲ್ಲಿ ಹಾಗೂ ಒಂದು ವಿಶಿಷ್ಟವಾದ ಸಾಮಾಜಿಕ ಸನ್ನಿವೇಶದಲ್ಲಿ ದೇಹ ಮತ್ತು ಅದರ ಶ್ರಮವು ಬೇಕಾಗುವುದಿಲ್ಲ, ಟೇಲರ್ ಒಂದು ಮಾತನ್ನು ಹೇಳಿದ್ದ: ತರಬೇತಿ ಹೊಂದಿದ ಗೊರಿಲ್ಲಾಗಳು. ಇದು ಒಂದು ರೂಪಕದಂತೆ ಕಂಡರೂ ಇಲ್ಲಿ ಸತ್ಯವಿದೆ. ನಾವು ಅನೇಕ ದೈಹಿಕ ಶ್ರಮದ ಕೆಲಸವನ್ನು ಮಹತ್ವದ ಕೆಲಸವೆಂದು

ಭಾವಿಸಿದ್ದೇವೆ. ಆದರೂ ಒಂದಲ್ಲಾ ಒಂದು ಅರ್ಥದಲ್ಲಿ ಜನರು ಬುದ್ಧಿವಂತರೇ ಆಗಿರುತ್ತಾರೆ. ಅವರೆಲ್ಲಾ ತಮ್ಮದೇ ಆದ ಕೆಲಸವನ್ನು ಮಾಡುತ್ತಾರೆ. ಅದರ ಮೂಲಕ ಅವರು ತಮ್ಮ ಅಸ್ತಿತ್ವವನ್ನು ಸೂಚಿಸುತ್ತಾರೆ.

ಬುದ್ಧಿಜೀವಿಗಳು ಮತ್ತು ಸಾಮಾನ್ಯರ ನಡುವೆ ಕೆಲವು ಅಂತರಗಳು ಇವೆ. ಈ ಗುಂಪುಗಳ ಜೀವನದ ಕ್ರಮವೂ ಬೇರೆಯಾಗಿರುತ್ತದೆ. ಇದನ್ನು ಅವರು ಮಾಡುವ ಕಾರ್ಯದ ವಿಧಾನದ ಮೂಲಕ ಗ್ರಹಿಸುವುದು ಒಂದು ಕ್ರಮ. ಇದನ್ನು ಗ್ರಾಂಶಿಯು ಸಮಾಜದ ಕ್ರಿಯೆ ಮತ್ತು ಅದರ ಚಹರೆಗಳು ಹಾಗೂ ಬುದ್ಧಿಜೀವಿಗಳ ಕ್ರಿಯೆಗಳುಎಂದು ಭಾವಿಸುತ್ತಾನೆ. ಅವುಗಳ ಪರಸ್ಪರ ಸಂಬಂಧವನ್ನು ಹೇಳುತ್ತಾನೆ. ಬುದ್ಧಿ ಹೇಳುವಂತೆ ನಡೆಯುವವರು ಬುದ್ಧಿಜೀವಿಗಳು ಆಗುತ್ತಾರೆ. ಮನುಷ್ಯನು ಸೃಷ್ಟಿಸುತ್ತಾನೆ. ಅದರ ಜೊತೆಗೆ ಮನುಷ್ಯನು ಯೋಚಿಸುತ್ತಾನೆ. ಮನುಷ್ಯನು ಯಾವ ಕೆಲಸವನ್ನು ಮಾಡುತ್ತಾನೆಯೋ ಅದಕ್ಕೆ ಅನುಗುಣವಾಗಿ ಅವವನ್ನು ಗಣಿಸಲಾಗುತ್ತದೆ. ವ್ಯಕ್ತಿಯು ದೇಹದ ಶ್ರಮವನ್ನು ಮಾಡುವುದಿದ್ದರೆ ಅವನ ದೇಹವು ಒಂದು ವಿನ್ಯಾಸವನ್ನು ಹೊಂದಿರುತ್ತದೆ. ಯಾರು ತಮ್ಮ ಕೆಲಸವನ್ನು ಬುದ್ಧಿಪೂರ್ವಕವಾಗಿ ಮಾಡುತ್ತಾರೆಯೋ ಅವರ ಅಸ್ತಿತ್ವ ಭಿನ್ನವಾಗುತ್ತದೆ. ಆದರೆ ಇಲ್ಲಿ ಗ್ರಾಂಶಿಯು ಮಾನವ ಮತ್ತು ಅವನ ವಿಕಾಸದ ಕ್ರಂವನ್ನು ಪ್ರಸ್ತುತ ಪಡಿಸುತ್ತಾನೆ. ಇದು ಅವನಿಗೆ ಯಾಕೆ ಮುಖ್ಯವಾಯಿತು ಎಂದರೆ ಮನುಷ್ಯ ತನ್ನ ಬುದ್ಧಿವಂತಿಕೆಯನ್ನು ಬಳಸಬಲ್ಲ. ಅದು ಅತ್ಯಂತ ಮುಖ್ಯವಾದ್ದು. ಅವನಿಗೆ ಈ ಜಗತ್ತು ಯಾವ ಕಡೆಗೆ ಹೋಗುತ್ತದೆ ಮತ್ತು ಅದರ ಪರಿಣಾಮವು ಏನು ಎನ್ನುವುದು ಗೊತ್ತಿದೆ.ಅದೇ ರೀತಿಯಲ್ಲಿ ಮನುಷ್ಯನು ತನ್ನ ನೈತಿಕವಾದ ನಿಲುವಿನಲ್ಲಿ ಇರಬಲ್ಲ,. ಅಷ್ಟೇ ಅಲ್ಲ ಒಬ್ಬ ವ್ಯಕ್ತಿಯು ತನ್ನ ಪಾಡಿಗೆ ತಾನೂ ಯೋಚಿಸಬಲ್ಲ.

ಸಮಾಜ ಮತ್ತು ಸಂಸ್ಕೃತಿಯನ್ನು ಒಂದು ವಿಮರ್ಶಾತ್ಮಕವಾದ ರೂಪದಲ್ಲಿ ವಿಮರ್ಶೆ ಮಾಡಬಲ್ಲವನು ಬುದ್ಧಿಜೀವಿಯು ಆಗಿರುತ್ತಾನೆ. ಸಮಾಜದಲ್ಲಿ ಕೆಲವನ್ನು ವಿಸ್ತಾರಮಾಡಲು ಮತ್ತು ಅದರ ಅಭಿವೃದ್ಧಿಯನ್ನು ರೂಪಿಸಲು ಸಾಮಾನ್ಯನಾದ ಮನುಷ್ಯ ಸಾಕಾಗುವುದಿಲ್ಲ, ಪ್ರತಿಯೊಬ್ಬ ಜೀವಿಗೂ ಒಂದಲ್ಲಾ ಒಂದು ಶಕ್ತಿ ಮತ್ತು ಕ್ರಿಯಾಶೀಲತೆಯು ಇರುತ್ತದೆ. ಅವರೂ ಜಗತ್ತು ಮತ್ತು ಅದರೆ ಅಭಿವೃದ್ಧಿಗೆ ಬೇಕಾದ ರೀತಿಯಲ್ಲಿ ದುಡಿಯುತ್ತಾರೆ. ಅದನ್ನು ನಾವು ಒಂದು ಅತ್ಯಂತ ಸಾಮಾನ್ಯವಾದ ಕ್ರಿಯೆ ಎಂದು ಹೇಳಬಹುದು ಆದರೆ ಅದನ್ನು ಅನೇಕರು ಮರೆಯುತ್ತಾರೆ. ಅವರ ಕೆಲಸವನ್ನು ನಾವು ಬರೀ ಭೌತಿಕವಾದ್ದು ಎಂದು ಹೇಳುತ್ತೇವೆ. ಆದರೆ ಇದೇ ಮಾತನ್ನು ನಾವು ಬುದ್ಧಿಜೀವಿಗಳಿಗೆ ಹೇಳುವುದಿಲ್ಲ. ಯಾರು ಬರೆಯುತ್ತಾರೆಯೋ ಅವರನ್ನು ನಾವು ಬುದ್ಧಿಜೀವಿಗಳು ಎಂದು

ಹೇಳುತ್ತೇವೆ. ಅದೇ ಸಾಲಿನಲ್ಲಿ ನಮಗೆ ವೈದ್ಯರು, ವಕೀಲರು, ಪತ್ರಿಕೆಯಲ್ಲಿ ಕೆಲಸ ಮಾಡುವವರು ಸಿಗುತ್ತಾರೆ. ಕಾರ್ಖಾನೆಯಲ್ಲಿ ದುಡಿಯುವುದು ಮತ್ತು ಕಾರ್ಖಾನೆಯಲ್ಲಿ ಇಂಜಿನಿಯರ್ ಆಗುವುದು ಎರಡೂ ಬೇರೆ ಇಂಜಿನಿಯರ್ ಒಂದು ಅರ್ಥದಲ್ಲಿ ಬುದ್ಧಿಜೀವಿ. ಆದರೆ ಕಾರ್ಖಾನೆಯಲ್ಲಿ ಕೆಲಸ ಮಾಡುವವನು ಕೇವಲ ಕಾರ್ಮಿಕ. ಕಾರ್ಮಿಕನಾಗಲು ಅವನಿಗೆ ಹೆಚ್ಚು ತಜ್ಞತೆಯು ಬೇಕಾಗಿಲ್ಲ. ಆದರೆ ಇಂಜಿನಿಯರ ಅಂದ ತಕ್ಷಣವೇ ಅವನಿಗೆ ಹೆಚ್ಚು ಮಹತ್ವ ಬರುತ್ತದೆ.

ನವೀನ ಮಾದರಿಯ ಬುದ್ಧಿಜೀವಿಗಳು

ಆಧುನಿಕ ಬುದ್ಧಿಜೀವಿವರ್ಗವು ಉದಯವಾಗುವುದಕ್ಕೂ ಸಮಕಾಲೀನ ಪರಿಸ್ಥಿತಿಗೂ ಒಂದು ಸಂಬಂಧವು ಇದೆ. ಆಧುನಿಕ ಯುಗ ಮತ್ತು ಅದರ ಪರಿಣಾಮಗಳು ನಮ್ಮ ಬುದ್ಧಿಜೀವಿಗಳನ್ನು ರೂಪಿಸುವಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ. ಅದರ ಜೊತೆಗೆ ಈವತ್ತು ಸಂಸ್ಕೃತಿಯಲ್ಲಿ ವಿವಿಧ ಮಾದರಿಯ ಪರಿಕಲ್ಪನೆಗಳು ಕೆಲವು ಕೆಲಸವನ್ನು ಮಾಡುತ್ತವೆ. ನಿಜವಾದ ನಮ್ಮ ಜೀವನದ ಕ್ರಮವು ಬೇರೆಯಾಗುತ್ತಾ ಹೋದಂತೆ ಜೀವನದ ಕುರಿತಾದ ಚಿಂತನೆಗಳು ಬದಲಾಗುತ್ತವೆ. ಈಗ ನಾವು ಅತ್ಯಂತ ಹೆಚ್ಚು ಬಂದು ಹೋಗುವ ಭಾವನೆಗಳು ಕೂಡಾ ಆಧುನಿಕ ಜಗತ್ತನ್ನು ಹೇಳುತ್ತದೆ. ಕ್ಷಣದಲ್ಲಿ ಇವುಗಳು ಬರುತ್ತವೆ. ಮತ್ತೊಂದು ಕ್ಷಣದಲ್ಲಿ ಇದು ಮರೆಯಾಗುತ್ತದೆ. ಆದರೆ ಬುದ್ಧಿಜೀವಿಗಳು ಕೆಲವು ವಿಷಯಗಳನ್ನು ರೂಪಿಸುವಲ್ಲಿ ಅತ್ಯಂತ ಹೆಚ್ಚು ಪರಿಣಿತರಾಗುತ್ತಾರೆ. ಅಂದರೆ ಚರತ್ರೆಯು ತನಗೆ ಯಾವುದು ಅಗತ್ಯವಿದೆಯೋ ಅದನ್ನು ಮಾತ್ರವೇ ಉತ್ಪಾದಿಸುತ್ತವೆ. ಈಗಾಗಲೇ ಹೇಳಿರುವಂತೆ ಆಧುನಿಕ ಬುದ್ಧಿಜೀವಿಗಳು ಹಾಗೂ ಅವನರ ಕೆಲಸವನ್ನು ಚರಿತ್ರೆಯು ರೂಪಿಸುತ್ತದೆ.ಇದನ್ನು ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ಗ್ರಾಂಶಿಯು ಹೇಳುತ್ತಾನೆ. ಈವತ್ತಿನ ತಾಂತ್ರಿಕತೆಗೆ ಮತ್ತು ವಿಜ್ಞಾನಕ್ಕೆ ಒಂದು ಸಂಬಂಧವು ಇದೆ. ಅದು ತಜ್ಞತೆಯ ಪ್ರಶ್ನೆಯೂ ಆಗಿದೆ. ಬುದ್ಧಿಜೀವಿಗಳ ಕ್ರಿಯೆಗೆ ಮತ್ತು ಸಮಾಜಕ್ಕೆ ಒಂದು ಸಂಬಂಧವಿದೆ. ಸಾಮಾಜಿಕ ಜೀವನ ಮತ್ತು ಅದರ ಜೊತೆಗೆ ಮಾತಾಡುವ ಬುದ್ಧಿಜೀವಿಗಳು– ಹೀಗೆ ಈ ಸಂಪರ್ಕಗಳು ಅತ್ಯಂತ ಸಂಕೀರ್ಣವಾಗಿರುತ್ತದೆ. ಯಜಮಾನಿಕೆಯನ್ನು ವಹಿಸುವ ಗುಂಪು ಮತ್ತೊಂದು ಗುಂಪಿನ ಮೇಳೆ ಸ್ಥಾಪಿಸಿಕೊಳ್ಳುವುದು ಇದೇ ಬಗೆಯ ನೀತಿಯನ್ನು. ಇವುಗಳ ಸಂಬಂಧವನ್ನು ನಾವು ತಾತ್ವಿಕವಾಗಿಯೂ ನೋಡಬೇಕಾಗುತ್ತದೆ.

ಮಧ್ಯಯುಗದ ಜ್ಞಾನ ಮತ್ತು ಅದರ ರೂಪಗಳು ಒಂದು ಥರ ಇದ್ದದ್ದು ಸ್ಪಷ್ಟ. ಆದರೆ ಆಧುನಿಕ ಯುಗಕ್ಕೆ ಬಂದ ಮೇಲೆ ಬುದ್ಧಿಜೀವಿಗಳು ಬೇರೆ ಥರದ ಕೆಲಸವನ್ನು ಮಾಡಬೇಕಾಗಿ ಬಂತು. ಇದು ಅತ್ಯಂತ ಮಹತ್ವದ ಬೆಳವಣಿಗೆಯೂ

ಹೌದು. ಆಧುನಿಕ ಯುಗವು ಬುದ್ಧಿ ಎನ್ನುವುದನ್ನು ಹೇಳಿದ್ದೇ ಬೇರೆ ಕ್ರಮದಲ್ಲಿ. ಆಧುನಿಕ ಯುಗವು ಬುದ್ಧಿಜೀವಿ ವರ್ಗವನ್ನು ಮತ್ತು ಅದರ ಸಂಸ್ಕೃತಿಯನ್ನು ನೋಡಿದ ಕ್ರಮಗಳು ಭಿನ್ನ. ಆಧುನಿಕ ಯುಗದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಮುಂಚೂಣಿಗೆ ಬಂದುದರಿಂದ ಶ್ರೇಷ್ಠವಾದ ಸಂಸ್ಕೃತಿ ಮತ್ತು ತಳವರ್ಗದ ಸಂಸ್ಕೃತಿ ಎನ್ನುವುದಕ್ಕೆ ಹೆಚ್ಚು ಮಹತ್ವವು ಬಂದಿತು.

ಶಿಕ್ಷಣ ಎನ್ನುವುದು ಇದಕ್ಕೆ ಮೂಲಕಾರಣವೂ ಆಗಿದೆ. ಅದು ಒಂದು ಪರಿಕರವೂ ಹೌದು. ಶಿಕ್ಷಣವು ಬೌದ್ಧಿಕತೆಯನ್ನು ರೂಪಿಸುವುದು ಎಂದರೆ ಮುಂದೆ ಜನರು ಒಂದು ಶಿಸ್ತನ್ನು ಕಲಿಯಲಿ ಎಂದು ಮಾತ್ರ. ಬೇರೆ ಬೇರೆ ಶಿಕ್ಷಣವು ಬೇರೆ ಬೇರೆ ಔದ್ಯಮಿಕ ಅವಕಾಶವನ್ನು ಹೇಳಿತು. ಮಕ್ಕಳಿಗೆ ಪರೀಕ್ಷೆ ಮಾಡುವುದು ಅಂದರೆ ಅವರಲ್ಲಿ ಒಂದು ಬುದ್ಧಿವಂತರು ಯಾರು ಮತ್ತು ಬುದ್ಧಿಹೀನರು ಎಂದು ಹೇಳುವುದು. ಇದರ ಜೊತೆಗೆ ಕೆಲವು ವಿಶೇಷವಾದ ತಜ್ಞತೆಯನ್ನು ರೂಪಿಸುವ ಶಾಲೆಗಳು ಮತ್ತು ಸಂಸ್ಥೆಗಳು ಬಂದವು. ಅದರ ಮೂಲಕ ನಾವು ಭಿನ್ನರಾಗಿದ್ದೇವೆ ಎಂದು ಸೂಚಿಸಲು ಅನುಕೂಲವಾಯಿತು. ಆದರೆ ಅದರ ಜೊತೆಗೆ ಒಂದು ವಿದ್ಯಮಾನವು ನಡೆದಿದನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳುವುದು ಅತ್ಯಂತ ಸೂಕ್ತ. ಇಲ್ಲಿ ನಾವು ಒಂದು ಲಂಬರೇಖೆಯನ್ನು ನೆನಪು ಮಾಡಿಕೊಂಡರೆ ಹೆಚ್ಚು ಅನುಕೂಲವಾಗುತ್ತದೆ. ಸರಳವಾದ ಲಂಬರೇಖೆಯಲ್ಲಿ ಅತ್ಯಂತ ಮೇಲ್ತುದಿಯಲ್ಲಿ ಇರುವವನು ಬುದ್ಧಿವಂತ. ಅತ್ಯಂತ ಕೆಳಗೆ ಇರುವವನು ದಡ್ಡ ಎನ್ನುವುದು ಇದರಲ್ಲಿ ಅತ್ಯಂತ ಸ್ಪಷ್ಟವಾಗಿ ಗೊತ್ತಾಗುತ್ತದೆ. ಶಾಲೆಯು ನಮ್ಮನ್ನು ಒಂದು ಸಾಂಸ್ಕೃತಿಕವಾದ ಜಗತ್ತಿಗೆ ಬೀಳುವಂತೆ ಮಾಡುತ್ತದೆ. ಆದರೆ ಅದರ ಜೊತೆಗೆ ಅದರಲ್ಲಿ ನಮಗೆ ಭಿನ್ನವಾದ ಒಂದು ಕೇಂದ್ರವೂ ದೊರೆಯುತ್ತದೆ. ಮನುಷ್ಯರಲ್ಲಿ ಭಿನ್ನತೆಗಳೂ ಕಾಣಿಸುತ್ತವೆ. ಜನರು ನಾಗರಿಕರಾಗುತ್ತಾರೆ. ಸಮಾಜದಲ್ಲಿ ನಾಗರಿಕ ಮತ್ತು ಅನಾಗರಿಕ ಎನ್ನುವುದು ಒಂದು ವ್ಯತ್ಯಾಸ ಮಾತ್ರ. ಬುದ್ಧಿಜೀವಿಗಳು ಕೆಲವನ್ನು ನೋಡುತ್ತಾರೆ. ಅದನ್ನು ಅವರು ತಮ್ಮ ಜ್ಞಾನದಿಂದ ಬೇರೆ ವಿಚಾರಗಳನ್ನು ಹೇಳಬಲ್ಲರು. ಲೇಖಕರು ಮತ್ತು ಬುದ್ಧಿಜೀವಿಗಳು ಸಮಾಜದಲ್ಲಿ ಹೀಗೆ ತಮ್ಮದೇ ಆದ ಒಂದು ಸಂಸ್ಕೃತಿಯನ್ನು ಕಟ್ಟುತ್ತಾರ. ಆದರೆ ಅದರ ಜೊತೆಗೆ ಅವರ ಜಗತ್ತು ಭಿನ್ನವಾದ್ದು. ಯಾರು ಅತ್ಯಂತ ಸಮರ್ಥವಾಗಿ ಕೈಗಾರಿಕೆಗಳಿಗೆ ಬೇಕಾದ ಜ್ಞಾನವನ್ನು , ಪರಿಕರವನ್ನು ಅವರಿಗೆ ಹೆಚ್ಚು ಮಾನ್ಯತೆಯು ಬಂದಿರುವುದು ಸತ್ಯ. ಇದನ್ನು ನಾವು ಈಗ ಪ್ರಯೋಗವನ್ನು ಆಧರಿಸಿದ ವಿಜ್ಞಾನ ಎಂದು ಹೇಳುತ್ತೇವೆ. ಸಮಾಜಕ್ಕೆ ಬೇಕಾದ ಜ್ಞಾನವನ್ನು ಪೂರೈಸುವುದು ಈ ಗುಂಪಿನ ಕೆಲಸ. ಅದರ ಜೊತೆಗೆ ಸಿದ್ಧತೆ

ಎನ್ನುವುದು ಇಲ್ಲಿ ಅತ್ಯಂತ ಮುಖ್ಯವಾದ ಒಂದು ಪರಿಕಲ್ಪನೆಯೂ ಆಗಿರುತ್ತದೆ. ಆದರೆ ಶಾಲೆಯಲ್ಲಿ ನಾವು ಕಾಣುವುದು ಅತ್ಯಂತ ಉನ್ನತವಾದ ಒಂದು ಸಂಸ್ಕೃತಿಯನ್ನು. ತಾಂತ್ರಿಕತೆಗೆ ಮತ್ತು ಸಂಸ್ಕೃತಿಗೆ ಒಂದು ಸಂಬಂಧವು ಬಂದುದರಿಂದ ಅದರ ಅರ್ಥಗಳೂ ಬೇರೆಯಾದವು. ಶಿಕ್ಷಣವು ವ್ಯಕ್ತಿಯನ್ನು ಉಚ್ಚ ಮಟ್ಟಕ್ಕೆ ಕರೆದುಕೊಂಡು ಹೋಗುತ್ತದೆ ಎನ್ನುವುದು ಇದರ ಹಿಂದೆ ಇದ್ದ ತಾತ್ವಿಕತೆ. ಆದರೆ ಇಲ್ಲಿ ಗ್ರಾಂಶಿಯು ಹೇಳಿದ ನಿಲುವು ನಮ್ಮ ಅನುಭವಕ್ಕೂ ಬರುತ್ತದೆ. ಯಾವುದೇ ಕೈಗಾರಿಕೆಯಲ್ಲಿ ಕೆಲಸ ಮಾಡುವಾಗ ಅರ ಕಾರ್ಮಿಕರು ಒಂದು ಥರ ಇರುತ್ತಾರೆ. ಅವರು ಉತ್ಪದನೆಯ ಜೊತೆಗೆ ನೇರ ಸಂಬಂಧವನ್ನು ಹೊಂದಿದ್ದಾರೆ. ಆದರೆ ಇಲ್ಲಿ ಕಲಸವನ್ನು ಮಾಡುವ ಇಂಜಿನಿಯರ್‌ಗಳು ಈ ದೃಷ್ಟಿಯಿಂದ ನೇರ ಸಂಬಂಧವನ್ನು ಹೊಂದಿಲ್ಲ. ನಾಗರಿಕ ಸಮಾಜದಲ್ಲಿ ಇದು ಅತ್ಯಂತ ಸಹಜವಾಗಿ ನಡೆಯುತ್ತದೆ. ನಾಗರುಕ ಸಮಾಜದಲ್ಲಿ ಬುದ್ಧಿಜೀವಿಗಳು ಅತ್ಯಂತ ಮಹತ್ವದ ಸ್ಥಾನವನ್ನು ಪಡೆಯುತ್ತಾರೆ. ಒಂದು ಪ್ರಶ್ನೆಯು ಬಹಳ ಹಿಂದಿನಿಂದಲೂ ಇದೆ: ಯಜಮಾನಿಕೆ ಮತ್ತು ಅದರ ಸ್ವರೂಪವನ್ನು ನೋಡಿದರೆ ನೇರವಾಗಿ ಇರುತ್ತವೆ. ಮತ್ತೆ ಕೆಲವು ನೇರವಾಗಿ ಇರುವುದಿಲ್ಲ. ಇದರಲ್ಲಿ ಕಾನೂನು ಎನ್ನುವುದು ಮುಖ್ಯವಾದ ಪರಿಕರವು ಆಗಿದೆ. ಅದರಲ್ಲಿಯೂ ಶಿಸ್ತು ಎನ್ನುವುದ ಅತ್ಯಂತ ಮಹತ್ವದ ಪದವಾಗಿದೆ. ಆಢಳಿತ ಮಾಡುವವರು ಮತ್ತು ಯಾವುದೇ ಆಢಳಿತದ ಮಾಡದೇ ಇರುವವರು ಎನ್ನುವುದರಲ್ಲಿ ಸಮಾಜ ಮತ್ತು ರಾಜಕೀಯ ದೃಷ್ಟಿಕೋನವೂ ಇರುತ್ತದೆ. ಇದರಲ್ಲಿ ಅತ್ಯಂತ ಮುಖ್ಯವಾಗಿ ನಾವು ನೋಡಬೇಕಾಗಿರುವುದು ಗುಣಾತ್ಮಕವಾದ ಒಂದು ವ್ಯತ್ಯಾಸವನ್ನು. ಆಧುನಿಕ ಜಗತ್ತಿನಲ್ಲಿ ಇದು ನಮಗೆ ಕಂಡುಬರುತ್ತದೆ. ಪ್ರಭುತ್ವದ ದೃಷ್ಟಿಯಲ್ಲಿ ಉತ್ಪಾದನೆ ಮಾಡುವ ವರ್ಗ ಮತ್ತು ಅದರ ಸ್ವರೂಪವು ಒಂದು ಮಾದರಿಯಲ್ಲಿ ಇರುತ್ತದೆ. ಪ್ರಭುತ್ವವು ಇದಕ್ಕೆ ಹೆಚ್ಚು ಮಾನ್ಯತೆಯನ್ನು ಕೊಡುವುದಿಲ್ಲ. ಆದರೆ ತನ್ನ ಬೌದ್ಧಿಕತೆಯಲ್ಲಿ ಪ್ರಭುತ್ವವನ್ನು ಪೋಷಣೆ ಮಾಡುವವರು ಹೆಚ್ಚು ಮಾನ್ಯತೆಯನ್ನು ಪಡೆಯುತ್ತಾರೆ. ಇದು ಒಮದು ಬಗೆಯಲ್ಲಿ ಸಮಾಜದ ನಡುವೆ ಇರುವ ವ್ಯಂಗ್ಯವೂ ಹೌದು. ಮಾರ್ಕ್ಸವದವು ಇದನ್ನು ಹೇಳುವಾಗ ಉತ್ಪಾದನೆ ಮಾಡುವ ವರ್ಗ ಮತ್ತು ಯಾವುದೇ ಉತ್ಪಾದನೆಯನ್ನು ಮಾಡದೆ ಇರುವ ವರ್ಗ ಎಂದು ಹೇಳುತ್ತದೆ. ಅದನ್ನು ನಾವು ಗಮನಿಸಬೇಕು.

ನಾಗರಿಕ ಬುದ್ಧಿಜೀವಿಗಳು ಮತ್ತು ಗ್ರಾಮೀಣ ಬುದ್ಧಿಜೀವಿಗಳು

ಗ್ರಾಂಶಿಯ ಅತ್ಯಂತ ಮಹತ್ವದ ಪರಿಕಲ್ಪನೆಯಲ್ಲಿ ಇದೂ ಒಂದು. ನಗರ ಕೇಂದ್ರಿತ ಬುದ್ಧಿಜೀವಿಗಳು ವಾಸ್ತವವಾಗಿ ಕೈಗಾರಿಕೆ ಮತ್ತು ಅದರ ಭವಿಷ್ಯವನ್ನು

ನಿರ್ಧಾರ ಮಾಡುತ್ತಾರೆ, ಮತ್ತೊಂದು ಅರ್ಥದಲ್ಲಿ ನಗರ ಮತ್ತು ಅದರ ಸ್ವರೂಪವನ್ನು ಈ ಬಗೆಯ ಬುದ್ಧಿಜೀವಿಗಳು ನಿರ್ಧಾರ ಮಾಡುತ್ತಾರೆ. ಇದನ್ನು ಹೇಳುವಾಗಲೇ ಸಬಾಲ್ಟ್ರನ್ ಪರಿಕಲ್ಪನೆಯನ್ನು ಬಳಸುತ್ತಾನೆ. ಸೇನೆಯಲ್ಲಿ ಇರುವ ಅತ್ಯಂತ ಸಾಮಾನ್ಯನಾದ ಒಬ್ಬ ಸೈನಿಕನು ಯಾವ ಮಾದರಿಯ ಕೆಲಸವನ್ನು ಮಾಡುತ್ತಾನೆ ಎನ್ನುವುದರ ಆಧಾರದ ಮೇಲೆ ಅವನಿಗೆ ಒಂದು ಸ್ಥಾನವು ಕಲ್ಪಿತವಾಗಿತ್ತದೆ. ಅವನು ಯಾವುದೇ ನಿರ್ಧಾರವನ್ನು ಕೈಗೊಳ್ಳುವುದಿಲ್ಲ. ಸಾಮಾನ್ಯನಾದ ಸೈನಿಕನು ಇಡೀ ಸೇನೆಯು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ತಿಳಿಯಲಾರ. ಮುಂದೆ ಯಾವ ಯೋಜನೆಯನ್ನು ಹಮ್ಮಿಕೊಳ್ಳಬೇಕು ಎನ್ನುವುದು ಅವನಿಗೆ ಗೊತ್ತಿರುವುದೂ ಇಲ್ಲ. ಗ್ರಾಮೀಣ ಬುದ್ಧಿಜೀವಿಗಳು ಮತ್ತು ನಾಗರಿಕ ಬುದ್ಧಿಯುಳ್ಳವರಿಗೆ ವ್ಯತ್ಯಾಸವಿದೆ. ಅವರ ದುಡಿಮೆ ಮತ್ತು ಜೀವನದ ಕ್ರಮಗಳೂ ಬೇರೆಯಾಗಿರುತ್ತವೆ. ಗ್ರಾಮ ಎನ್ನುವುದು ಜನರನ್ನು ರೂಪಿಸುತ್ತದೆ ಎನ್ನುವುದನ್ನು ಗ್ರಾಂಶಿಯು ಹೇಳುತ್ತಾನೆ. ಕಾರ್ಮಿಕರು ಅತ್ಯಂತ ತಳಹದಿಯ ಕೆಲಸವನ್ನು ಮಾಡುತ್ತಾರೆ. ಅವರ ಜೀವನದ ಪದ್ಧತಿಗಳು ಕೂಡಾ ಅದಕ್ಕೆ ಅನಗುಣವಾಗಿ ಇರುತ್ತದೆ. ನಮಗೆ ಕೇಂದ್ರಿತ ಬುದ್ಧಿಜೀವಿಗಳು ಹೆಚ್ಚಿನ ಸ್ಥಾನಮಾನವನ್ನು ಪಡೆದಿರುತ್ತಾರೆ.

ಗ್ರಾಮಜೀವನದ ಬುದ್ಧಿಜೀವಿಗಳು ಸಾಂಪ್ರದಾಯಿಕ ಜೀವನದ ಕ್ರಮವನ್ನು ಅನುಸರಿಸುತ್ತಾರೆ. ಸಮೂಹದ ಜೊತೆಗೆ ಅವರ ಅನನ್ಯತೆಯು ರೂಪುಗೊಳ್ಳುತ್ತದೆ. ಅದು ಮತ್ತೊಂದು ಅರ್ಥದಲ್ಲಿ ಅವರ ಉತ್ಪಾದನೆಗೆ ಮತ್ತು ಮಾರುಕಟ್ಟೆಗೆ ಸಂಬಂಧವು ಇದೆ. ರೈತ ಮತ್ತು ಅವನ ಜೀವನ ಎನ್ನುವುದು ಹೇಗೆ ರೂಪಿತವಾಗುತ್ತದೆಯೋ ಅದೇ ಮಾದರಿಯಲ್ಲಿ ಒಬ್ಬ ವೈದ್ಯ ಮತ್ತು ಅವನ ಜೀವನದ ಕ್ರಮವು ಇರುವುದಿಲ್ಲ. ರೈತನು ಒಂದು ಸಮಾಜ ಮತ್ತು ಅದರ ಸ್ಥಿತಿಗತಿಯನ್ನು ಸೂಚಿಸಬಲ್ಲ ಸಂಕೇತವೂ ಆಗಿರುತ್ತಾನೆ. ಉದ್ಯೋಗ ಮತ್ತು ವ್ಯಕ್ತಿತ್ವ ಎನ್ನುವುದಕ್ಕೆ ಸಂಬಂಧವು ಇದೆ. ಒಂದು ಕುತೂಹಲಕಾರಿಯಾದ ವಿಷಯವನ್ನು ಗ್ರಾಂಶಿಯು ಹೇಳುತ್ತಾನೆ: ಒಬ್ಬ ರೈತ ತನ್ನ ಮಕ್ಕಳಲ್ಲಿ ಒಬ್ಬನಾದರೂ ವೈದ್ಯರಂತೆ ಆಗಲಿ ಎಂದು ಭಾವಿಸುತ್ತಾನೆ. ರೈತನು ಬುದ್ಧಿಜೀವಿಗಳನ್ನು ಗೌರವಿಸುವುದು ಈ ಕಾರಣಕ್ಕೆ ಎಂದು ಅರ್ಥ ಮಾಡಿಕೊಳ್ಳಬೇಕು. ಯಾರನ್ನು ಪ್ರಭುತ್ವವು ತನ್ನ ಮಧ್ಯವರ್ತಿ ಎಂದು ಭಾವಿಸುತ್ತದೆಯೋ ಅದನ್ನು ಹೆಚ್ಚು ಚಾಲ್ತಿಗೆ ತರುವುದರಿಂದ ಗ್ರಾಮೀಣರು ಅವರಿಗೆ ಗೌರವವನ್ನು ಕೊಡುತ್ತಾರೆ.' ವಾಸ್ತವವಾಗಿ ಅವರು ಪ್ರಭುತ್ವದ ಪ್ರತಿನಿಧಿಗಳೂ ಆಗಿರುತ್ತಾರೆ. ಆದರೆ ರೈತರು ಬುದ್ಧಿಜೀವಿಗಳನ್ನು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆಯಾಗುತ್ತವೆ. ಇದನ್ನು ಗ್ರಾಂಶಿಯು ವೈರುದ್ಧ್ಯದಿಂದ ಕೂಡಿದ ನೋಟ ಎಂದು ಹೇಳುತ್ತಾನೆ.

ಒಂದು ಸಮಾಜದಲ್ಲಿ ಬುದ್ಧಿಜೀವಿಗಳ ಬಗ್ಗೆ ಒಂದು ಗೌರವವು ಇರುತ್ತದೆ. ಇದು ಒಂದು ಪ್ರಶ್ನೆ. ಇದು ಬುದ್ಧಿಜೀವಿಗಳಿಗೆ ಸಮಾಜದ ಸ್ಥಾನಮಾನದ ಕಾರಣದಿಂದ ಬರುತ್ತದೆ. ಆದರೆ ಅನೇಕ ಸನ್ನಿವೇಶದಲ್ಲಿ ಅವರ ಬಗ್ಗೆ ರೈತರಿಗೆ ಒಂದು ಬಗೆಯ ಸಿಟ್ಟು ಕೂಡಾ ಇರುತ್ತದೆ. ಒಂದು ನಿರ್ದಿಷ್ಟವಾದ ಸಂಗತಿಯ ವರೆಗೆ ಇದು ನಡೆಯುತ್ತದೆ. ಅನಂತರ ಅವರು ಮತ್ತೊಂದು ಅರ್ಥದಲ್ಲಿ ಬುದ್ಧಿ ಜೀವಿಗಳು ಯಾವುದನ್ನು ರೂಪಿಸುತ್ತಾರೆಯೋ ಅದನ್ನು ರೈತರ ಸಮೂಹವು ಅನುಸರಿಸುವುದೂ ಇದೆ. ಆದ್ದರಿಂದ ಗ್ರಾಂಶಿಯಲ್ಲಿ ಇವುಗಳ ಸಂಬಂಧವು ಅತ್ಯಂತ ಮುಖ್ಯವಾಗುತ್ತದೆ.

ನಗರ ಕೇಂದ್ರಿತವಾದ ಬುದ್ಧಿಜೀವಿಗಳು ಬೇರೊಂದು ಗುಣವನ್ನು ಹೊಂದಿರುತ್ತಾರೆ. ಕೈಗಾರಿಕೆಯ ಕರ್ಮಿಗಳು ಅನೇಕ ಸನ್ನಿವೇಶದಲ್ಲಿ ನೇರವಾದ ಒಂದು ರಾಜಕೀಯವಾದ ಚಟುವಟಿಕೆಯಲ್ಲಿ ಭಾಗವಹಿಸುವುದಿಲ್ಲ. ಇಲ್ಲಿ ಇನ್ನೊಂದು ಅಂಶವು ನಮಗೆ ಅತ್ಯಂತ ಮುಖ್ಯ. ಕಾರ್ಮಿಕರ ಹೋರಾಟಗಳಿಗೆ ವಿವಿಧ ಆಯಾಮಗಳು ಇರುತ್ತವೆ. ಆದರೆ ನಗರ ಕೇಂದ್ರಿತವಾದ ಬುದ್ಧಿಜೀವಿಗಳು ಮತ್ತು ಅವರ ನಿಲುವುಗಳು ಇನ್ನೊಂದು ಬಗೆಯಲ್ಲಿ ರಾಜಕೀಯ ಪ್ರಭಾವವನ್ನು ಹೊಂದಿರುತ್ತಾರೆ.

ಒಂದು ಅತ್ಯಂತ ಮುಖ್ಯವಾದ ಸಂಗತಿಯನ್ನು ನಾವು ಇಲ್ಲಿ ಪ್ರಸ್ತಾವಿಸಬೇಕಾದ ಅಗತ್ಯವಿದೆ. ಎರಡೂ ಬಗೆಯ ಬುದ್ಧಿಜೀವಿಗಳೂ ಸಮಾಜವನ್ನು ಕೇಂದ್ರ ಮಾಡಿರುತ್ತಾರೆ. ಆದರೆ ಇದರ ಜೊತೆಗೆ ನಾವು ಇನ್ನೂ ಒಂದು ಅಂಶವನ್ನು ಹೇಳಬಹುದು. ನಗರ ಮತ್ತು ಹಳ್ಳಿಯ ಬುದ್ಧಿಜೀವಿಗಳು ರಾಜಕೀಯ ಪಕ್ಷದ ಜೊತೆಗೆ ಯಾವ ಬಗೆಯ ಸಂಬಂಧವನ್ನು ಇಟ್ಟುಕೊಂಡಿರುತ್ತಾರೆ ಎನ್ನುವುದೂ ಅಷ್ಟೇ ಮುಖ್ಯ. ಯಾವಾಗ ರಾಜಕೀಯ ಮತ್ತು ತಾತ್ವಿಕವಾದ ಒಂದು ನಿಲುವು ಇದ್ದರೆ ಆಗ ಅದರಲ್ಲಿ ಒಂದು ಸಾಧ್ಯತೆಯೂ ಇರುತ್ತದೆ. ರಾಜಕಾರಣ, ಅದರ ಸ್ವಭಾವ ಮತ್ತು ಅದರ ಕ್ರಿಯಾಶೀಲತೆಗಳು ಹಾಗೂ ಅವುಗಳ ಉತ್ಪಾದನೆಯ ಕುರಿತ ವಿಚಾರಧಾರೆಗಳು ಸಾಮಾಜಿಕ ಗುಂಪುಗಳ ಮೇಲೆ ಪ್ರಭಾವವನ್ನು ಬೀರುತ್ತವೆ.

ನಾಗರಿಕ ಸಮಾಜವನ್ನು ನೋಡಿದರೆ ನಮಗೆ ಇದರ ಹಿಂದೆ ಯಾವುದು ಕೆಲಸವನ್ನು ಮಾಡುತ್ತದೆ ಎಂದು ತಿಳಿಯುತ್ತದೆ. ಅದರಲ್ಲಿ ರಾಜಕಾರಣವಿದೆ. ಅದರಲ್ಲಿ ನ್ಯಾಯಾಂಗವೂ ಇದೆ. ಅರ್ಥಶಾಸ್ತ್ರವೂ ಕೆಲಸವನ್ನು ಮಾಡುತ್ತದೆ. ಆದ್ದರಿಂದ ನಾವು ಅದನ್ನು ನೋಡಿ ನಗರ ಕೇಂದ್ರಿತ ಬುದ್ಧಿಜೀವಿಗಳನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಗ್ರಾಂಶಿಯು ಹೇಳುತ್ತಾನೆ. ಇಲ್ಲಿ ಇದಕ್ಕೆ ಪೂರಕವಾದ ಒಂದು ಸಂಗತಿಯನ್ನು ನಾವು ನೆನಪು ಮಾಡಿಕೊಳ್ಳಬೇಕು– ಒಂದು ಅರ್ಥದಲ್ಲಿ

ಸಂಸ್ಕೃತಿಯನ್ನು ಪ್ರಭುತ್ವವು ತನಗೆ ಬೇಕಾದ ರೀತಿಯಲ್ಲಿ ಬಗ್ಗಿಸುತ್ತದೆ. ಅದಕ್ಕೆ ಬೇಕಾದ ರೀತಿಯಲ್ಲಿ ವ್ಯಾಖ್ಯಾನಿಸುತ್ತದೆ. ಸಂಸ್ಕೃತಿಯಲ್ಲಿ ಆಚರಣೆಗಳು, ಸಂಪ್ರದಾಯಗಳು ಹಾಗೂ ಮೌಲ್ಯಗಳು ಹೀಗೆ ಬರುತ್ತವೆ. ನಾವು ಕೆಲವನ್ನು ಒಪ್ಪುವುದು ಮತ್ತು ಕೆಲವನ್ನು ದೂರ ಇಡುವುದು ಇದೇ ಕಾರಣಕ್ಕೆ . ಆದುದರಿಂದ ಆಧುನಿಕ ಸನ್ನಿವೇಶದಲ್ಲಿ ನಮಗೆ ಸಾಮಾನ್ಯ ವರ್ಗವನ್ನು ಹಾಗೂ ಮೇಲು ವರ್ಗವನ್ನು ಸಮಾಜವು ಭಿನ್ನವಾದ ರೀತಿಯಲ್ಲಿ ನೋಡುತ್ತದೆ ಎನ್ನುವುದು ನಮ್ಮ ಅರಿವಿಗೆ ಬರಬೇಕಾಗುತ್ತದೆ. ಮತ್ತೆ ರಾಜಕೀಯ ಪಕ್ಷಗಳನ್ನು ನೋಡಿದರೆ ನಮಗೆ ಒಂದು ಅಂಶವು ಗೊತ್ತಾಗುತ್ತದೆ. ಅದಕ್ಕೆ ಕೆಲವು ಕಾರಣಕ್ಕೆ ಬುದ್ಧಿಜೀವಿಗಳು ಬೇಕಾಗುತ್ತಾರೆ. ಬುದ್ಧಿಜೀವಿಗಳು, ನಾಯಕರು, ಸಂಘಟಕರು , ಅವರ ಕೌಶಲಗಳನ್ನು ರಾಜಕೀಯ ಪಕ್ಷಗಳು ಅವಲಂಬಿಸುತ್ತದೆ. ಬುದ್ಧಿಜೀವಿಗಳ ಕಾರ್ಯ ವಿಧಾನಗಳು ರಾಜಕಾರಣಕ್ಕೆ ಬೇಕಾಗುತ್ತದೆ. ಅದರ ಅವಿಭಾಜ್ಯ ಅಂಗ ಎಂದು ಹೇಳಿದರೂ ಸರಿಯಾಗುತ್ತದೆ. ಒಬ್ಬ ಬುದ್ಧಿಜೀವಿಯು ರಾಜಕೀಯ ಪಕ್ಷಕ್ಕೆ ಅನುಗುಣವಾಗಿ ಕೆಲಸವನ್ನು ಮಾಡುತ್ತಾನೆ ಎಂದರೆ ಅವನ ಹಿಂದೆ ಒಂದು ಗುಂಪು ಇದೆ ಎಂದು ಅರ್ಥವಾಗುತ್ತದೆ. ಇದು ಒಂದು ವ್ಯಂಗ್ಯವೂ ಹೌದು. ಇದನ್ನು ಗ್ರಾಂಶಿಯು ಹೇಳುವಾಗ ಇದೊಂದು ವಿಡಂಬನೆಯ ಥರ ಕಾಣಿಸುವ ಚಿತ್ರ ಎಂದು ಹೇಳುತ್ತಾನೆ. ಸಾಮಾಜಿಕ ಗುಂಪುಗಳಾಗಿ ವರ್ತಕರು, ಕೃಷಿಕರು ಅವರದೇ ಆದ ಸಮಸ್ಯೆಯನ್ನು ಹೊಂದಿರುತ್ತಾರೆ. ಅವರದೇ ಆದ ಒಂದು ಆರ್ಥಿಕವಾದ ಚಟುವಟಿಕೆಯು ಇರುತ್ತದೆ. ಸಾಂಪ್ರದಾಯಿಕ ಬುದ್ಧಿಜೀವಿಗಳು ಚರಿತ್ರೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದಾರೆ ಎನ್ನುವುದು ನಿಜ. ಹಳೆಯ ಕ್ರಮದ ಬುದ್ಧಿಜೀವಗಳನ್ನು ಚರಿತ್ರೆಯಲ್ಲಿ ಪ್ರಧಾನವಾದ ಒಂದು ಪಾತ್ರವನ್ನು ವಹಿಸಿದೆ. ಅವರ ಜೀವನವನ್ನು ನೋಡುವಾಗ ನಮಗೆ ಒಂದು ಅಂಶವು ಎದ್ದು ಕಾಣುತ್ತದೆ. ಅವರು ಹಿಂದೆ ನಮ್ಮ ಸಮಾಜದಲ್ಲಿ ಇದ್ದ ಗುಲಾಮರನ್ನು ನೆನಪಿಸುತ್ತಾರೆ. ಒಮ್ಮೆ ನಾವು ಪಂಪನನ್ನು ನೆನಪು ಮಾಡಿಕೊಳ್ಳಬೇಕು, ಅಥವಾ ಒಮ್ಮೆ ಗ್ರೀಕ್ ದುರಂತ ನಾಟಕಗಳನ್ನು ನೆನಪು ಮಾಡಬೇಕಾಗುತ್ತದೆ. ಅವರ ಜೀವನ ಎನ್ನುವುದು ಹೇಗೆ ಇದೆ ಎಂದು ಅವುಗಳು ನಮಗೆ ನೆನಪನ್ನು ಮಾಡುತ್ತವೆ. ಅನೇಕ ಸಾಮ್ರಾಜ್ಯಗಳು ಬುದ್ಧಿಜೀವಿಗಳಿಂದ ರಚಿತವಾಗಿದೆ

ಮೊದಲು ಹೇಳಿದ ಬುದ್ಧಿಜೀವಿಗಳ ಪಾತ್ರವು ಅತ್ಯಂತ ಮುಖ್ಯ. ಆದರೆ ಹಳ್ಳಿಯನ್ನು ಕೇಂದ್ರ ಮಾಡಿಕೊಂಡ ಬುದ್ಧಿಜೀವಿಗಳು ಹಳ್ಳಿ ಮತ್ತು ಅವರ ಅಗತ್ಯಗಳನ್ನು ಮನಗಂಡಿರುತ್ತಾರೆ. ಇದನ್ನು ಹೇಳುವಾಗ ಗ್ರಾಂಶಿಯು ರೋಮನ್ ಪರಂಪರೆಯನ್ನು ಮತ್ತು ಅದರ ಇತಿಹಾಸವನ್ನು ಹೇಳುತ್ತಾನೆ. ದೇಶ ದೇಶಗಳ

ವ್ಯತ್ಯಾಸಗಳು ಕಾನೂನುಗಳನ್ನು ರೂಪಿಸುತ್ತವೆ. ಅದೇ ಮಿತಿಗಳೂ ಆಗಬಹುದು. ಇಂಗ್ಲೆಂಡ್ ಹೇಗೆ ಫ್ರಾನ್ಸ್ ದೇಶಕ್ಕಿಂತ ಬೇರೆಯಾಗಿದೆ ಎಂದು ಉದಾಹರಣೆಯನ್ನು ಕೊಡುತ್ತಾನೆ. ಅದರಲ್ಲಿಯೂ ಪ್ರತಿಯೊಂದು ಪ್ರದೇಶವೂ ತನ್ನ ಭಿನ್ನತೆಗಳನ್ನು ಕಾಪಾಡುತ್ತದೆ ಎನ್ನುವುದನ್ನು ಹೇಳುತ್ತಾನೆ. ಅದರ ಮೂಲಕವೇ ನಮಗೆ ಕೆಲವು ಪಾಠಗಳನ್ನು ಹೇಳುತ್ತವೆ. ಅದರ ಜೊತೆಗೆ ಒಂದು ಪ್ರದೇಶಕ್ಕೆ ಒಂದು ರೀತಿಯ ತಜ್ಞತೆಯು ಬೇಕಾಗುತ್ತದೆ. ಅವು ರಾಜಕಾರಣ ಮತ್ತು ಆರ್ಥಿಕ ಕಾರಣವೂ ಆಗಬಹುದು. ಇದರ ಜೊತೆಗೆ ರಾಷ್ಟ್ರ ಮತ್ತು ಅದರ ಸಮಸ್ಯೆಗಳು ಇರುತ್ತವೆ. ಆದ್ದರಿಂದ ದೇಶ ಮತ್ತು ಅದರ ಬೌದ್ಧಿಕ ಜಗತ್ತು ಯಾವಾಗಲೂ ಬೇರೆಯಾಗುತ್ತವೆ. ಇದರಲ್ಲಿ ಅತ್ಯಂತ ಕುತೂಹಲವನ್ನು ಉಂಟು ಮಾಡುವ ಅನೇಕ ಸಂಗತಿಗಳನ್ನು ಗ್ರಾಂಶಿಯು ಹೇಳುತ್ತಾನೆ. ದೇಶವು ಬುದ್ಧಿಜೀವಿಗಳನ್ನು ಸಾಕುವುದು ಅದರ ಸ್ವಂತಕ್ಕೆ ಸಂಬಂಧ ಪಟ್ಟ ವಿಷಯವೂ ಆಗಿರುತ್ತದೆ. ಅದರಲ್ಲಿ ಅಧಿಕಾರದ ವರ್ಗವೂ ಸೇರಿರುತ್ತದೆ. ಯಾವುದೋ ಒಂದು ದೇಶವು ಒಂದು ಮೌಲ್ಯವನ್ನು ಶ್ರೇಷ್ಠ ಎಂದು ಹೇಳಿದರೆ ಅದನ್ನು ಮತ್ತೊಂದು ದೇಶವು ಅಂಗೀಕರಿಸುತ್ತದೆ.ಅದೇ ರೀತಿಯಲ್ಲಿ ಸಾಮಾಜಿಕ ಅಂತಸ್ತನ್ನು ಬೇರೆ ರೀತಿಯಲ್ಲಿ ನಿರೂಪಿಸುತ್ತವೆ. ರೋಮನ್ ರಾಜಕೀಯವನ್ನು ನಿರೂಪಿಸುವಾಗ ಅಲ್ಲಿನ ರಿಪಬ್ಲಿಕ್ ಪರಿಕಲ್ಪನೆಯು ಹೇಗೆ ಬಂತು ಎಂದು ಗ್ರಾಂಶಿಯು ವಿವರಿಸುತ್ತಾನೆ. ರೋಮನ್ ರಿಪಬ್ಲಿಕ್ ಅಲ್ಲಿಯ ನಾಗರಿಕತೆಯ ಬೆಳವಣಿಗೆಯನ್ನು ಹೇಳುತ್ತದೆ. ಜನರಿಗೆ ಮತ್ತು ಪ್ರಭುತ್ವಕ್ಕೆ ಇರುವ ಸಂಬಂಧವನ್ನು ಅದು ಹೇಳಿತು.ಅದರ ಆಢಳಿತದಲ್ಲಿ ಸಾಮಾನ್ಯ ಮನುಷ್ಯರಿಗೆ ಅಂಥಾ ಸ್ಥಾನಮಾನವು ಇದ್ದಿರಲಿಲ್ಲ. ಅದರಲ್ಲಿ ಬುದ್ಧಿಜೀವಿಗಳು ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದರು. ಅವರಿಗೆ ವಿಶೇಷವಾದ ಸ್ಥಾನವು ಕಲ್ಪಿತವಾಗಿತ್ತು. ಇದರ ಜೊತೆಗೆ ಭಾರತ, ಜಪಾನ್ ಮುಂತಾದ ದೇಶಗಳಲ್ಲಿ ಬುದ್ಧಿಜೀವಿಗಳು ರಾಷ್ಟ್ರ ಮತ್ತು ಅದರ ಕಲ್ಪನೆಯ ಜೊತೆಗೆ ಕೈಜೋಡಿಸಿದ್ದರು ಎಂದು ಗ್ರಾಂಶಿಯು ವಿವರಿಸುತ್ತಾನೆ.

ಗ್ರಾಂಶಿಯಲ್ಲಿ ಶಿಕ್ಷಣ

ಒಂದು ವೇಳೆ ನಮಗೆ ಶಾಲಾ ಕಾಲೇಜುಗಳಲ್ಲಿ ಯಾವುದೇ ಶಿಕ್ಷಣವು ಇಲ್ಲದೆ ಹೋಗಿದ್ದರೆ ಆಗ ನಮ್ಮ ಸ್ಥಿತಿಯು ಏನಾಗಿರುತ್ತಿತ್ತು ಎನುವುದು ಅತ್ಯಂತ ಮುಖ್ಯವಾದ ಪ್ರಶ್ನೆ. ನಮ್ಮಲ್ಲಿ ಓದುವವರು ಮತ್ತು ಓದದೇ ಇರುವವರು ಸಮ ಪ್ರಮಾಣದಲ್ಲಿ ಇಲ್ಲ. ಅಕ್ಷರವು ಗೊತ್ತಿಲ್ಲದೆ ಇರುವ ಅನೇಕರು ಇದ್ದಾರೆ. ಓದಿದವರ ಸಂಖ್ಯೆ ಅತ್ಯಂತ ಕಡಿಮೆಯು ಇದೆ. ಓದುವವರು ಮತ್ತು ಓದಿದವರು ಸಮಾಜದಲ್ಲಿ ಒಂದು ಪಾತ್ರವನ್ನು ವಹಿಸಿದ್ದಾರೆ. ಅಕ್ಷರ ಗೊತ್ತಿದ್ದವನ ಚಹರೆಯು ಒಂದು

ಬಗೆಯಲ್ಲಿ ಇರುತ್ತದೆ. ಮತ್ತು ಅವನ ಸ್ಥಾನಮಾನವೂ ಬೇರೆಯಾಗಿರುತ್ತದೆ. 1923ರ ಹೊತ್ತಿಗೆ ಮುಸಲೋನಿ ಸರಕಾರವು ಶಿಕ್ಷಣದ ಕುರಿತು ತನ್ನದೇ ಆದ ಒಂದು ನಿಯಮವನ್ನು ಜಾರಿಗೆ ತಂದಿತು. ಇದರ ಸೂತ್ರಧಾರಿ ಗಿಯೊನಿ ಗಂಟಲ್.. ಅವನು ಆಗ ಇದ್ದ ಶಿಕ್ಷಣದ ಕ್ರಮವನ್ನು ವಿರೋಧಿಸುತ್ತಾನೆ. ಅವನು ಆಗ ಇದರ ಜೊತೆಗೆ ಇದ್ದ ಕ್ರೋಸೆಯನ್ನು ಕೂಡಾ ತನ್ನ ಜೊತೆಗೆ ಸೇರಿಸಿಕೊಂಡಿದ್ದ. 'ಆಗ ಚಾಲ್ತಿಗೆ ಬಂದ ಅತ್ಯಂತ ಮುಖ್ಯವಾದ ಪರಿಕಲ್ಪನೆ ಎಂದರೆ ಶಿಕ್ಷಣವಲ್ಲ, ಸಲಹೆ ಮತ್ತು ಸೂಚನಗಳು. ನಮ್ಮ ಚಟುವಟಿಕೆ ಎನ್ನುವುದು ಸಹಜವಾಗಿರುತ್ತದೆ, ಅದು ಹಾಗೆ ಇರಬೇಕಾಗುತ್ತದೆ. ಅದಕ್ಕೂ ನಿಸರ್ಗ ನ್ಯಾಯಕ್ಕೂ ಒಂದು ಸಂಬಂಧವು ಇದ್ದೇ ಇರುತ್ತದೆ. ಈವತ್ತು ನಾವು ಶಿಕ್ಷಣ ಎನ್ನುವುದನ್ನು ಬೇರೆ ದೃಷ್ಟಿಯಲ್ಲಿ ನೋಡಬೇಕಾದ ಒಂದು ಅಗತ್ಯವಿದೆ. ಶಿಕ್ಷಣ ಮತ್ತು ರಾಜಕಾರಣಕ್ಕೆ ಒಂದು ಸಂಬಂಧವಿದೆ. ಅದಕ್ಕೂ ರಾಷ್ಟ್ರ ಎನ್ನುವ ವಾದಕ್ಕೂ ಒಂದು ಚೌಕಟ್ಟು ಇದೆ. ಶಿಕ್ಷಣ ಮತ್ತು ವ್ಯಕ್ತಿತ್ವವು ಜೊತೆಗೆ ಹೋಗುತ್ತವೆ ಎನ್ನುವುದು ನಿಜ ಎಂದು ಅವನು ಭಾವಿಸುತ್ತಾನೆ. ಒಂದು ಹಂತದಲ್ಲಿ ವಾಸ್ತವ ಎನ್ನುವುದೂ ಸಂವಾದಿಯಾಗಿದೆ. ಸ್ವಾತಂತ್ರ್ಯಕ್ಕೂ ನಾವು ಆಗುವ ಕ್ರಮಕ್ಕೂ ಒಂದು ನಿಕಟವಾದ ಸಂಬಂಧವು ಇದೆ ಎಂದು ಅವನು ಭಾವಿಸುತ್ತಾನೆ. ನಾವು ಏನಾಗಬೇಕೋ ಅದಕ್ಕು ನಮ್ಮ ಆಗುವಿಕೆಯ ಕ್ರಮಕ್ಕೂ ಒಂದು ಸಂಬಂಧವಿದೆ ಎಂದು ಅವನು ಪ್ರತಿಪಾದಿಸುತ್ತಾನೆ ಆಧುನಿಕ ಜಗತ್ತು ಮತ್ತು ಅದರ ಹಿಂದೆ ಇರುವ ಪ್ರಭುತ್ವವನ್ನು ನೋಡಿದರೆ ನಾವು ಮತ್ತೆ ಬೇರೆ ಅಂಶಗಳನ್ನು ಹೇಳಬೇಕಾಗುತ್ತದೆ. ಆಧುನಿಕ ಶಿಕ್ಷಣವು ನಮ್ಮನ್ನು ಬದಲಿಸುತ್ತದೆ. ಜಗತ್ತನ್ನು ನೋಡಲು ಹೊಸದಾದ ಅವಕಾಶವನ್ನು ಕಲ್ಪಿಸುತ್ತದೆ.ಅವರ ಪರಿಕಲ್ಪನೆಗಳು ಬೇರೆ ಶಾಲೆ ಮತ್ತು ಸ್ವಾತಂತ್ರ್ಯವನ್ನು ನಾವು ಈ ಹಿನ್ನೆಲೆಯಲ್ಲಿ ಗಮನಿಸಬೇಕು. (ಗಿಯೀವನನಿ ಗೆಂಟಿಲ್ಲೆ ಪುಟ 139-40) ಅವನು ಶಿಕ್ಷಣ ಮತ್ತು ಸಂಸ್ಥೆಗಳ ಸಂಬಂದವನ್ನು ಹೇಳುತ್ತಾನೆ. ಅದರ ಜೊತೆಗೆ ಒಂದು ಆದರ್ಶೀಕೃತವಾದ ಶಿಕ್ಷಣವು ಹೇಗೆ ಇರುತ್ತದೆ ಎಂದು ಹೇಳುತ್ತಾನೆ. ಅದರ ಜೊತೆಗೆ ಶಿಕ್ಷಣವು ಹೇಗೆ ಪ್ರತ್ಯೇಕತೆಗೆ ಕಾರಣವಾಗುತ್ತದೆ ಎಂದು ಚರ್ಚೆ ಮಾಡುತ್ತದೆ. ಸಿದ್ಧಾಂತಕ್ಕೂ ಪ್ರಯೋಗಗಳಿಗೂ ತುಂಬಾ ವ್ಯತ್ಯಾಸವಿದೆ. ಇಲ್ಲಿ ನಾವು ಮತ್ತೊಂದು ವಿಚಾರವನ್ನು ಗಮನಕ್ಕೆ ತಂದು ಕೊಳ್ಳಬೇಕು. ಗೆಂಟಿಲ್ಲೆ ಹೇಳುತ್ತಾನೆ: ಶಿಕ್ಷಣ ಮತ್ತು ಅದರ ಜೊತೆಗೆ ಸಾಕ್ಷರತೆ. ಇವು ಅವನಿಗೆ ಹೆಚ್ಚು ಮುಖ್ಯವಾದವು. ಅವನು ಅದನ್ನು ಒಂದು ನೈತಿಕವಾದ ನೆಲೆಯಲ್ಲಿ ನೋಡುತ್ತಾನೆ. ಅದರಲ್ಲಿ ಸಂಸ್ಕೃತಿ ಮತ್ತು ಧರ್ಮದ ಪ್ರಶ್ನೆಗಳೂ ಬಂದಿವೆ. ಇದನ್ನು ನೋಡಿದ ಗ್ರಾಂಶಿಯು ಅವನ ಕೆಲವು ವಿಚಾರಗಳಿಗೆ ಭಿನ್ನಾಭಿಪ್ರಾಯವನ್ನು ತಳೆದುದು ನಿಜ., ಗೆಂಟಿಲ್ಲೆ ತುಂಬಾ ಆಕರ್ಷಕವಾಗಿ ಮಾತಾಡುತ್ತಾನೆ. ಅದನ್ನು ಬಿಟ್ಟು

ಅವನಲ್ಲಿ ಹೆಚ್ಚು ಗಮನಿಸಬೇಕಾದ ಅಗತ್ಯವಿಲ್ಲ ಎನ್ನುವುದು ಗ್ರಾಂಶಿಯ ವಾದ. ಗ್ರಾಂಶಿಯಲ್ಲಿ ಇದು ತಾತ್ವಿಕವಾದ ಪ್ರಶ್ನೆಯು ಆಗಿದೆ. ಅವನು ಶಿಕ್ಷಣ ಮತ್ತು ತರಗತಿಗಳ ನಡುವೆ ಇರುವ ಸಂಬಂಧ, ಶಿಕ್ಷಣ ಮತ್ತು ತಾತ್ವಿಕತೆ, ಶಾಲೆಗಳು ಮತ್ತು ಅವುಗಳ ಸ್ವರೂಪವು ಅತ್ಯಂತ ಮುಖ್ಯವಾಗಿದೆ ಎಂದು ಹೇಳುತ್ತಾನೆ. ಹಾಗೆಯೇ ಚರಿತ್ರೆ ಮತ್ತು ನಮ್ಮ ಅಧ್ಯಯನದ ಕ್ರಮಗಳನ್ನು ಮತ್ತೆ ವಿವೇಚನೆ ಮಾಡಬೇಕು ಎನ್ನುವುದು ಗ್ರಾಂಶಿಯ ನಿಲುವು.,ಅವನು ಮೌಲ್ಯ ಎನ್ನುವುದು ಹೇಗೆ ಮುಖ್ಯವಾಗುತ್ತದೆ ಎಂದು ಚರ್ಚೆಮಾಡುತ್ತಾನೆ. ಅದರ ಜೊತೆಗೆ ಚರಿತ್ರೆ ಮತ್ತು ಮೌಲ್ಯ ಹಾಗೂ ಶಿಕ್ಷಣಕ್ಕೆ ಸಂಬಂಧವು ಇರುತ್ತದೆ. ಅದನ್ನು ಬಿಟ್ಟು ನಾವು ನೈತಿಕತೆಯನ್ನು ಮಾತ್ರವೇ ಹೇಳಲು ಸಾಧ್ಯವಿಲ್ಲ. ಶಾಲೆ ಎನ್ನುವುದು ಧರ್ಮವನ್ನು ಬೋಧಿಸಲು ಇರುವ ಜಾಗವೂ ಅಲ್ಲ. ಆದ್ದರಿಂದ ಗ್ರಾಂಶಿಗೆ ಚರಿತ್ರೆ ಎನ್ನುವುದು ಒಂದು ಮಾನದಂಡವೂ ಆಗಿರುತ್ತದೆ. ಶಾಲೆ ಎನ್ನುವುದು ಹೇಗೆ ಧರ್ಮವನ್ನು ಹೇಳಲು ಜಾಗ ಅಲ್ಲವೋ ಅದೇ ರೀತಿಯಲ್ಲಿ ಅದು ಕೇವಲ ತಂತ್ರಜ್ಞಾನವನ್ನು ಬೋಧಿಸಲು ಇರವ ಜಾಗವೂ ಅಲ್ಲ. ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾನಿಲಯುಗಳು ಯಾವ ಉದ್ದೇಶವನ್ನು ಹೊಂದಿವೆ ಎಂದು ನೋಡಬೇಕಾದ್ದು ಅಗತ್ಯ. ನಮ್ಮ ಸಾಂಪ್ರದಾಯಿಕ ಶಾಲೆಗಳು ಮತ್ತು ಶಿಕ್ಷಣ ಪದ್ಧತಿಗಳು ರೊಮ್ಯಾಂಟಿಕ್ ಆಗಿ ನೋಡಬಹುದಾದ ಸಂಗತಿಯೂ ಅಲ್ಲ. ಶಾಲೆ ಎನ್ನುವುದು ಮಗುವಿನ ಜೀವನದ ಮೇಲೆ ಪ್ರಭಾವವನ್ನು ಬೀರುತ್ತದೆ. ಶಿಕ್ಷಣ ಮತ್ತು ಬುದ್ಧಿಜೀವಿಗಳ ಪ್ರಶ್ನೆಯು ಜತೆಗೆ ಹೋಗುತ್ತದೆ. ಇವನ್ನು ಪಲ್ಲಟ ಮಾಡಲು ಬರುವುದಿಲ್ಲ. ಆದರೆ ಹಳೆಯ ಮಾದರಿಯ ಶಾಲೆಗಳು ಮತ್ತು ಅದರ ಪಠ್ಯ ಕ್ರಮವನ್ನು ಬದಲಿಸುವುದು ಅಗತ್ಯವಿದೆ. ಆದರೆ ಅಷ್ಟು ಸುಲಭವಾದ ಒಂದು ಪ್ರಶ್ನೆಯು ಅಲ್ಲ. ಇದು ಬರೀ ಪಠ್ಯದ ಕ್ರಮವನ್ನು ಹೇಳುವುದಿಲ್ಲ. ಅದರ ಹಿಂದೆ ಬೇರೆ ಸಂಗತಿಗಳೂ ಇವೆ ಎನ್ನುವುದರ ಅರಿವು ಗ್ರಾಂಶಿಗೆ ಇದೆ. ಮನುಷ್ಯರು ಮತ್ತು ಅವರ ಸಮಸ್ಯೆಯನ್ನೂ ಇದು ಹೊಂದಿದೆ. ಶಾಲಾ ವಲಯದಲ್ಲಿ ಇರುವವರು ಮನುಷ್ಯರು. ಆದ್ದರಿಂದ ಮನುಷ್ಯರಾಗಿಯೇ ಅವರಿಗೆ ಸಮಸ್ಯೆಯು ಇದೆ. ಅವರಿಗೆ ಮನುಷ್ಯರಾಗಿ ಕೆಲವನ್ನು ಅನುಭವಿಸುತ್ತಾರೆ. ಆದ್ದರಿಂದ ಅವರು ರೂಪಿಸುವ ಪಠ್ಯದ ಕ್ರಮವು ಅವರ ಅಭಿರುಚಿಯನ್ನು ಹೇಳುತ್ತದೆ. ಶಿಕ್ಷಣ ಎನ್ನುವುದು ಅತ್ಯಂತ ಸಂಕೀರ್ಣವಾಗಿದೆ. ಅದು ದ್ವಂದ್ವಾತ್ಮಕವೂ ಆಗಿರುತ್ತದೆ. ಈ ವಿಷಯದಲ್ಲಿ ಅವನು ಅತ್ಯಂತ ಸ್ಪಷ್ಟವಾಗಿದ್ದಾನೆ. ಶಿಕ್ಷಣವು ಜನರನ್ನು ಬುದ್ಧಿವಂತರನ್ನು ನಿರ್ಮಾಣ ಮಾಡುತ್ತದೆ.

ಶಿಕ್ಷಣ ಮತ್ತು ಸಂಸ್ಕೃತಿಗಳ ಸಂಘಟನೆಗಳು :

ಗ್ರಾಂಶಿಯು ಔಪಚಾರಿಕವಾದ ಒಂದು ಶಿಕ್ಷಣವನ್ನು ಹೇಳುವುದಿಲ್ಲ. ಅವನಲ್ಲಿ ಅದು ಬದಲಾಗುತ್ತದೆ. ಒಂದು ಹಂತದಲ್ಲಿ ಬೂರ್ಜ್ವಾ ಶಿಕ್ಷಣವು ಕೆಲವನ್ನು ಮಾತ್ರವೇ ಪ್ರತಿನಿಧಿಸುತ್ತದೆ. ಇದು ಕೆಲವು ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಅದನ್ನು ಅವನು ಹೇಳುತ್ತಾನೆ. ಶಿಕ್ಷಣ ಎನ್ನುವುದು ಹೇಗೆ ಹೊಸದಾದ ಒಂದು ವರ್ಗ ಅಥವಾ ಒಂದು ಗುಂಪು ಹೇಗೆ ಮಹತ್ವದ್ದು ಎನ್ನುವುದು ಅವನುಗೆ ತಿಳಿದಿದೆ. ಶಾಲೆಯು ಕೆಲವು ಮೌಲ್ಯಗಳನ್ನು ನಮ್ಮ ಮೇಳೆ ಹೇರುತ್ತವೆ. ಅನೇಕ ಸನ್ನಿವೇಶದಲ್ಲಿ ಹೇಗೆ ಕಡ್ಡಾಯ ಶಿಕ್ಷಣ ಎನ್ನುವುದನ್ನು ಹೇಳುವಾಗಲೂ ಅದರ ಜೊತೆಗೆ ಬೇರೆ ಪ್ರಣಾಳಿಗಳು ಇರುತ್ತವೆ. ಅದರಲ್ಲಿ ರಾಷ್ಟ್ರ ಮತ್ತು ಅದರ ಮಾನದಂಡಗಳು ಅತ್ಯಂತ ಮುಖ್ಯವಾಗುತ್ತವೆ. ನಮಗೆ ಗೊತ್ತಿರಬೇಕಾದ ಅತ್ಯಂತ ಮುಖ್ಯವಾದ ಒಂದು ಅಂಶವೆಂದರೆ ಬಂಡವಾಳವಾದ ಮತ್ತು ಸರಕಾರಗಳು ಜೊತೆಗೆ ಸೇರಿದರೆ ಆಗ ಅದರ ಸ್ವರೂಪವು ಬೇರೆಯಾಗುತ್ತದೆ. ಅಲ್ಲಿ ಒಂದು ಬಂಧವೂ ಇರುತ್ತದೆ. ಅದನ್ನು ನೋಡಿಯೇ ಗ್ರಾಂಶಿಯು ಪ್ರತಿಪ್ರಾಬಲ್ಯವನ್ನು ಹೇಳುತ್ತಾನೆ.. ಅದು ತಾತ್ವಿಕವೂ ಆಗಿರುತ್ತದೆ. ಜನರು ತಮ್ಮ ತಿಳುವಳಿಕೆಯನ್ನು ಹೆಚ್ಚು ಹೊಂದಿದ್ದರೆ ಆಗ ಅನೇಕ ಸಮಸ್ಯೆಯು ಬಗೆ ಹರಿಯುತ್ತದೆ. ಇದನ್ನು ಹೇಳುವಾಗ ನಾಗರಿಕ ಹೋರಾಟಗಳನ್ನು ನೋಡುವಾಗ ನಾವು ಅದರ ಹಿಂದೆ ಯಾವುದು ಇದೆ ಎಂದು ನೋಡುವುದು ಅತ್ಯಂತ ಅಗತ್ಯ ಎಂದು ಭಾವಿಸುವ ಗ್ರಾಂಶಿಯು ಒಂದು ಅನೌಪಚಾರಿಕವಾದ ಶಿಕ್ಷಣ ಮತ್ತು ಅದರ ಸಾಧ್ಯತೆಯನ್ನು ಹೇಳುತ್ತಾನೆ. ವಾಸ್ತವವಾಗಿ ಬುದ್ಧಿಜೀವಿಗಳ ನಡುವೆ ಒಂದು ಒಮ್ಮತವೂ ಇರಬೇಕಾಗುತ್ತದೆ. ಅದನ್ನು ರೂಪಿಸುವುದು ಅತ್ಯಂತ ಸುಲಭವಾದ ಒಂದು ಕೆಲಸವಲ್ಲ. ಅದನ್ನು ಹೇಳುವಾಗ ಜನರಿಗೆ ಒಂದು ಸಾಮಾನ್ಯವಾದ ಒಂದು ಅರಿವು ಇರಬೇಕಾಗುತ್ತದೆ. ಒಂದು ಸೈದ್ಧಾಂತಿಕವಾದ ಪ್ರಾಬಲ್ಯದಲ್ಲಿ ಇದು ಸಾಧ್ಯವಾಗುತ್ತದೆ. ಜನರಿಗೆ ಒಂದು ಅರಿವು ಬೇಕಾಗುತ್ತದೆ. ಅದು ಅವರಿಗೆ ಒಂದು ಸಾಧನವೂ ಹೌದು. ತಮ್ಮ ಯಜಮಾನರನ್ನು ಪ್ರಶ್ನೆ ಮಾಡುವುದು ಅಂದರೆ ಅದು ಪ್ರಜ್ಞೆಗೆ ಸಂಬಂಧ ಪಟ್ಟ ಒಂದು ಪ್ರಕ್ರಿಯೆ. ಅದನ್ನು ಪಡೆಯಲು ಜನರಿಗೆ ಒಂದು ಬಗೆಯ ಶಿಕ್ಷಣ ಅತ್ಯಂತ ಅಗತ್ಯ. ಒಂದು ತಾತ್ವಿಕವಾದ ಸಿದ್ಧತೆಯು ಯಾಕೆ ಮುಖ್ಯ ಎನ್ನುವುದನ್ನು ; ಈ ದೃಷ್ಟಿಯಿಂದ ನೋಡಬೇಕಾದ ಅಗತ್ಯವನ್ನು ಗ್ರಾಶಿಯು ಹೇಳುತ್ತಾನೆ. ಅವನಲ್ಲಿ ತಾತ್ವಿಕ ಎನ್ನುವುದು ಅತ್ಯಂತ ಮುಖ್ಯವಾದ ನಿಲುವೂ ಹೌದು. ಅವನಲ್ಲಿ ತಾತ್ವಿಕತೆ ಮತ್ತು ಅಲೋಚನೆ ಮತ್ತು ನಂಬಿಕೆಗಳ ಪ್ರಶ್ನೆಯೂ ಹೌದು. ಒಂದು ಸೈದ್ಧಾಂತಿಕವಾದ ನಿಯಂತ್ರಣ ಮತ್ತು ಇನ್ನೊಂದು

ಪ್ರಾಬಲ್ಯದ ಕಲ್ಪನೆಯಲ್ಲಿ ಗ್ರಾಂಶಿಯು ಇದನ್ನು ಹೇಳುತ್ತಾನೆ. ಅವನಲ್ಲಿ ಸಂಘಟಿಸುವ ತತ್ವ ಕೂಡಾ ಅತ್ಯಂತ ಮಹತ್ವದ್ದು. ನಮ್ಮ ನಿತ್ಯದ ಜೀವನ ಎನ್ನುವುದು ಬೇರೆ ಬೇರೆ ರೀತಿಯಲ್ಲಿ ಸಮಾಜದ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ನಿಜ. ಹೀಗೆ ನಾವು ಭಾಗವಹಿಸುವಾಗ ಅದರಲ್ಲಿ ಕೆಲವು ಸಾಮಾನ್ಯವಾದ ಜ್ಞಾನ ಎನ್ನುವುದೂ ಇರುತ್ತದೆ. ಸಮಾಜದಲ್ಲಿ ಬಹಳಷ್ಟು ಜನರು ಯಾವುದನ್ನು ಅರ್ಥ ಮಾಡಿಕೊಂಡಿದ್ದಾರೆಯೋ ಅದನ್ನು ನಾವು ಸಾಮಾನ್ಯವಾದ ಜ್ಞಾನ ಎಂದು ಕರೆಯಬಹುದು. ಮತ್ತೊಂದು ಬಗೆಯ ಜ್ಞಾನವನ್ನು ನಾವು ಇನ್ನೊಂದು ರೀತಿಯಲ್ಲಿ ಹೇಳಬಹುದು. ಆದ್ದರಿಂದಲೇ ಗ್ರಾಂಶಿಯು ಬುದ್ಧಿಜೀವಿಗಳು ಅಂದರೆ ಅವರು ಯಾವುದೋ ಒಂದು ದಂತ ಗೋಪುರದಲ್ಲಿ ಕುಳಿತುಕೊಳ್ಳುವವರು ಅಲ್ಲ ಎಂದು ಘೋಷಿಸುತ್ತಾನೆ. ಅವನು ಸಾಮಾನ್ಯವಾಗಿ ಬುದ್ಧಿಜೀವಿಗಳು ಎಲ್ಲರಿಗೂ ಅನ್ವಯವಾಗುವ ಹಾಗೆ ಹೇಳುತ್ತಾನೆ. ಅವನಲ್ಲಿ ಪ್ರತಿಯೊಬ್ಬ ಮನುಷ್ಯನೂ ಬುದ್ಧಿಯನ್ನು ಹೊಂದಿರುತ್ತಾನೆ. ಆದ್ದರಿಂದ ವಿಶಿಷ್ಟವಾದ ಒಂದು ಸಾಮಾಜಿಕ ವರ್ಗ ಎನ್ನುವುದನ್ನು ಅತ್ಯಂತ ವಿಶಾಲವಾದ ನೆಲೆಯಲ್ಲಿ ಹೇಳುತ್ತಾನೆ. ಸಾಂಪ್ರದಾಯಿಕವಾದ ಬುದ್ಧಿಜೀವಿಗಳು ಸ್ವಾಯತ್ತ ಮತ್ತು ಸ್ವತಂತ್ರ ಎಂದು ತಿಳಿಯುತ್ತಾರೆ. ಆದರೆ ಅದು ಅಷ್ಟು ಸರಳವದ್ದು ಅಲ್ಲ ಎನ್ನುವುದು ಗ್ರಾಂಶಿಯ ನಿಲುವು. ಅವರು ಪ್ರಭುತ್ವದ ಜೊತೆಗೆ ಒಂದು ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ಆಡಳಿತಕ್ಕೆ ಸಹಾಯವನ್ನು ಮಾಡುತ್ತಾರೆ. ಬೌದ್ಧಿಕ ಎನ್ನುವುದು ಹೇಗೆ ಸಮಾಜದಲ್ಲಿ ಅತ್ಯಂತ ಮುಖ್ಯವಾಗುತ್ತದೆ ಎಂದು ಅವನು ಹೇಳುತ್ತಾನೆ. ಒಂದು ವಿಮರ್ಶಾತ್ಮಕವಾದ ಎಚ್ಚರ ಎನ್ನುವುದನ್ನು ಈ ದೃಷ್ಟಿಯಿಂದ ಗ್ರಾಂಶಿಯು ಪರಿಶೀಲನೆ ಮಾಡುತ್ತಾನೆ. ಕಲಿಯುವವರು ಬರೀ ಸ್ವೀಕಾರಕ್ಕೆ ಮಾತ್ರವೇ ಸೀಮಿತವಾಗಿ ಇರುವುದಿಲ್ಲ.

ಸಾಂಪ್ರದಾಯಿಕವಾದ ಶಿಕ್ಷಣವು ತನ್ನ ಗುರಿಯನ್ನು ಎಷ್ಟು ಸಾಧಿಸಿದೆ ಎನ್ನುವುದು ಗ್ರಾಂಶಿಯಲ್ಲಿ ಒಂದು ಪ್ರಶ್ನೆ. ಅದು ಯಾವ ಗುರಿಯನ್ನು ಹೊಂದಿದೆಯೋ ಅಷ್ಟನ್ನು ಅದು ಸಾಧಿಸಿಲ್ಲ. ಆದರೆ ಯಾವಾಗ ಶಿಕ್ಷಣದಲ್ಲಿ ಹೊಸದಾದ ಮಾನದಂಡವು ಬಂದ ಮೇಲೆ ಶಾಲೆ ಮಕ್ಕಳು ಮತ್ತು ಅವರ ಸ್ವಭಾವದಲ್ಲಿ ಉಂಟಾದ ವ್ಯತ್ಯಾಸವನ್ನು ನಾವು ಇಲ್ಲಿ ಗಮನಿಸಬೇಕು. ಇದು ಈವತ್ತು ಭಾರತದಲ್ಲಿಯೂ ಕಾಣಿಸುತ್ತದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ಮನೆಗೂ ತೆಗೆದುಕೊಂಡು ಹೋಗುತ್ತಾರೆ. ಅದನ್ನು ನಾವು ಈವತ್ತು ಹೋಂವರ್ಕ್ ಎಂದು ಹೇಳುತ್ತೇವೆ. ಶಾಲೆ ಮತ್ತು ಮನೆ ಎನ್ನುವುದಕ್ಕೆ ಹೆಚ್ಚು ವ್ಯತ್ಯಾಸ ಉಳಿಯುವುದಿಲ್ಲ. ಮಕ್ಕಳ ಸಣ್ಣ ಅವಕಾಶಗಳನ್ನೂ ಆಧುನಿಕ ಶಿಕ್ಷಣವು ತಿಂದು

ಹಾಕಿದೆ. ಇದರ ಜೊತೆಗೆ ಆಧುನಿಕ ಶಿಕ್ಷಣವು ಜ್ಞಾನ ಮತ್ತು ಅಭಿವ್ಯಕ್ತಿಯನ್ನು ಮಾತ್ರವೇ ಹೇಳುತ್ತದೆ. ತಾಂತ್ರಿಕವಾಗಿ ಇದನ್ನು ಶ್ರೇಷ್ಠ ಎಂದು ಭಾವಿಸಲಾಗಿದೆ. ಶಾಲೆಯಲ್ಲಿ ನಾವು ಯಾರನ್ನು ಬುದ್ಧಿವಂತ ವಿದ್ಯಾರ್ಥಿ ಎಂದು ಹೇಳುತ್ತೇವೆ? ಪಟ್ಟಣದಲ್ಲಿ ಓದುವ ವಿದ್ಯಾರ್ಥಿಗೆ ಮತ್ತು ಸಾಮಾನ್ಯವಾದ ಒಂದು ಹಳ್ಳಿಯಲ್ಲಿ ಓದುವ ಮಗುವಿಗೆ ವ್ಯತ್ಯಾಸವಿದೆ. ಬುದ್ಧಿವಂತಿಕೆಯೂ ಬೇರೆಯಾಗಬಹುದು. ಅದರ ಜೊತೆಗೆ ನಾವು ಮತ್ತೊಂದು ಯೋಚನೆಯನ್ನು ಮಾಡಬಹುದು: ಶಾಲೆಯಲ್ಲಿ ಕಲಿಸುವುದು ಅಂದರೆ ಅದರಲ್ಲಿ ಶಿಸ್ತು ಕೂಡಾ ಇರುತ್ತದೆ. ಬೌದ್ಧಿಕವಾದ ಸಂಗತಿಗಳೂ ಇರುತ್ತವೆ. ಶಿಕ್ಷಣದಲ್ಲಿ ಮಾನವೀಯತೆ ಮತ್ತು ನೈತಿಕತೆ ಎನ್ನುವುದು ಕೂಡಾ ಈ ಮಾದರಿಯಲ್ಲಿ ಜಾರಿಗೆ ಬಂದುದು ನಿಜ. ಉನ್ನತ ಶಿಕ್ಷಣವು ದೊರೆತ ಮೇಲೆ ವಿದ್ಯಾರ್ಥಿಯು ಸಾಕಷ್ಟು ತಿಳುವಳಿಕೆಯನ್ನು ಪಡೆದಿರುತ್ತಾನೆ. ಆದ್ದರಿಂದ ಅನಂತರ ಅವನು ಸಮಾಜದಲ್ಲಿ ಮಾನ್ಯತೆಯನ್ನು ಪಡೆಯುತ್ತಾನೆ. ಅದರ ಜೊತೆಗೆ ಅವನು ಉತ್ಪಾದನೆಯನ್ನು ಪಡೆಯಲು ಬೇಕಾದ ಶಕ್ತಿಯನ್ನು ಹೊಂದಿರುತ್ತಾನೆ. ಒಂದು ಪ್ರಾಯೋಗಿಕವಾದ ಶಕ್ತಿಯಾಗಿ ಮಾರ್ಪಾಡುತ್ತನೆ., ಆದರೆ ಗ್ರಾಂಶಿಯು ಒಂದು ವ್ಯತ್ಯಾಸವನ್ನು ಮಾಡುತ್ತಾನೆ. ಸೃಜನಶೀಲವಾದ ಶಾಲೆ ಮತ್ತು ಕ್ರಿಯಾಶೀಲವಾದ ಶಾಲೆಗಳು ಎಂದು ನಾವು ಬೇರೆ ಮಾಡುವುದು ಅಗತ್ಯ ಎನ್ನುವುದು ಅವನ ನಿಲುವು.ಇದರಲ್ಲಿ ಉದಾರವಾದ ನಿಲವು ಇರುವುದು ಕ್ರಿಯಾಶೀಲವಾದ ಶಾಲೆಯಲ್ಲಿ. ವಿದ್ಯಾರ್ಥಿಗೆ ಯಾವುದು ಅಗತ್ಯ ಎಂದು ಅನಿಸುತ್ತದೆಯೋ ಅದಕ್ಕೆ ಹೋಗಲು ಅವಕಾಶ ಇರುವುದು ಇದರಲ್ಲಿ. ಸೃಜನಶೀಲವಾದ ಶಾಲೆ ಮತ್ತು ಅದರ ಸ್ವರೂಪವನ್ನು ನಾವು ಬೇರೆ ಥರ ನೋಡಲು ಸಾಧ್ಯ ಎನ್ನುವುದು ಅವನ ನಿಲುವು. ಸೃಜನಶೀಲವಾದ ಶಾಲೆಯಲ್ಲಿ ವಿದ್ಯಾರ್ಥಿ ಇದರಲ್ಲಿ ಪ್ರಯೋಗ ಎನ್ನುವುದು ಅತ್ಯಂತ ಮುಖ್ಯ. ಅದರ ಜೊತೆಗೆ ಇದು ಇದು ಇನ್ನೊಂದು ಸಂಗತಿಯನ್ನು ನಮ್ಮ ಮುಂದೆ ಇಡುತ್ತದೆ. ಹೊಸದಾದ ಆವಿಷ್ಕಾರಕ್ಕೆ ಇದರಲ್ಲಿ ಒಂದು ಮನ್ನಣೆಯು ಇರುತ್ತದೆ. ಸಮೂಹದ ಜೊತೆಗೆ ಇದರಲ್ಲಿ ಸಂಬಂಧವೂ ಇರುತ್ತದೆ.

ಯಾವುದನ್ನು ನಾವು ಸಾಮಾನ್ಯವಾದ ಶಾಲೆ ಎಂದು ಹೇಳುತ್ತೇವೆಯೋ ಅದರಲ್ಲಿ ಸಮಾಜವೂ ಅತ್ಯಂತ ಮುಖ್ಯವಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ವಿದ್ಯಾರ್ಥಿಯು ಇದರಲ್ಲಿ ಮುಖ್ಯವಾದ ಒಂದು ಪಾತ್ರವನ್ನು ವಹಿಸುತ್ತಾನೆ ಎನ್ನುವುದು ಇಲ್ಲಿ ಉಲ್ಲೇಖನೀಯ.

ಶೈಕ್ಷಣಿಕ ಸಂಹಿತೆಗಳು ಮತ್ತು ಅದರ ನಿಯಮಗಳು

ವಿದ್ಯಾರ್ಥಿಗೆ ಶಿಕ್ಷಣದಲ್ಲಿ ಯಾವುದು ಹೆಚ್ಚು ಮುಖ್ಯ ಎನ್ನುವುದನ್ನು ವಿವರಿಸುವಾಗ ಇದನ್ನು ಗ್ರಾಂಶಿಯು ಹೇಳುತ್ತಾನೆ. ಶಿಕ್ಷಣದ ಮೂಲಕ ವಿದ್ಯಾರ್ಥಿಯು ರೂಪುಗೊಳ್ಳುತ್ತಾನೆ. ಮಕ್ಕಳನ್ನು ಸಮಾಜಕ್ಕೆ ಬೇಕಾದಂತೆ ಅಣಿಗೊಳಿಸುವುದು ಶಿಕ್ಷಣದ ಅತ್ಯಂತ ಮಹತ್ವದ ಕೆಲಸ. ನಾಗರಿಕ ಹಕ್ಕು ಮತ್ತು ಕರ್ತವ್ಯಗಳನ್ನು ಇದು ಸೂಚಿಸುತ್ತದೆ. ಇದರ ಹಿಂದೆ ಪ್ರಭುತ್ವ ಮತ್ತು ನಾಗರಿಕ ಸಮಾಜದ ವ್ಯಾಖ್ಯೆಗಳೂ ಇರುತ್ತವೆ. ಆದರೆ ಯಾವುದನ್ನು ನಾವು ನಾಗರಿಕ ಹಕ್ಕು ಎಂದು ಹೇಳುತ್ತೇವೆಯೋ ಅದು ಆಧುನಿಕ ಸಮಾಜದ ಅತ್ಯಂತ ಅಗತ್ಯವಾದ ಒಂದು ವ್ಯವಸ್ಥೆ ಎಂದು ಎಲ್ಲರೂ ಭಾವಿಸುತ್ತಾರೆ. ಪ್ರಭುತ್ವ ಮತ್ತು ಅದರ ಕಾನೂನುಗಳು ಹಾಗೂ ಸಮಾಜ ಈ ಮೂರು ಸಂಗತಿಗಳು ಸೇರಿಕೊಂಡು ಒಂದು ವ್ಯವಸ್ಥೆಯನ್ನು ರೂಪಿಸುತ್ತಾರೆ. ಅದಕ್ಕೆ ಬೇಕಾದ ರೀತಿಯಲ್ಲಿ ಸಂಸ್ಕೃತಿಯೂ ಬದಲಾಗುತ್ತದೆ. ಅದನ್ನು ಶಿಕ್ಷಣವು ಶಿಕ್ಷಣ ಮತ್ತು ಅದರ ಕಾನೂನುಗಳು ಇರುತ್ತವೆ. ಅಧಿಕಾರ ಮತ್ತು ಉತ್ಪಾದನೆ ಎನ್ನುವುದು ಹೇಗೆ ಪ್ರಭಾವ ಶಾಲಿಯಾಗುತ್ತವೆ ಎಂದು ಗ್ರಾಂಶಿಯು ಇಲ್ಲಿ ಹೇಳುತ್ತಾನೆ. ಹಳೆಯ ಪ್ರಾಥಮಿಕ ಶಾಲೆಗಳು ಮತ್ತು ಅದರ ಧೋರಣೆಗಳು ಹೇಗೆ ಇವೆ ಎಂದರೆ ಅಧಿಕಾರ ಮತ್ತು ಅದರ ವಿಸ್ತರಣೆ, ಉತ್ಪಾದನೆ, ನಿಸರ್ಗ ನ್ಯಾಯಗಳು ಒಂದಕ್ಕೊಂದು ಮಿಶ್ರವಾಗಿರುತ್ತವೆ. ಆದರೆ ಶಿಕ್ಷಣದಲ್ಲಿ ಒಂದು ಮುಖ್ಯವಾದ ತಳಹದಿಯನ್ನು ನಾವು ಕಾಣಬಹುದು. ಸಿದ್ಧಾಂತ ಮತ್ತು ಪ್ರಯೋಗ ಅದರಲ್ಲಿ ಜೊತೆ ಜೊತೆಗೆ ಹೋಗುತ್ತವೆ. ಇನ್ನೊಂದು ಕಡೆಯಿಂದ ಹಕ್ಕುಗಳು ಮತ್ತು ಕರ್ತವ್ಯಗಳು ಅತ್ಯಂತ ಮುಖ್ಯವಾಗುತ್ತವೆ. ಯಾವುದು ನಮ್ಮ ಸಮಾಜವನ್ನು ಬದಲಿಸುತ್ತದೆ ಎನ್ನುವುದನ್ನು ಹೇಳಲು ಶಿಕ್ಷಣವು ಒಂದು ಮಾಧ್ಯಮವೂ ಹೌದು. ಆದ್ದರಿಂದ ಪ್ರಾಥಮಿಕ ಶಾಲೆಗಳು ಮಗುವನ್ನು ತಿದ್ದುತ್ತದೆ. ಈ ಹಂತದಲ್ಲಿ ವಿದ್ಯಾರ್ಥಿಯು ಸ್ವೀಕಾರ ಮಾಡುವವನೂ ಹೌದು. ಅವನನ್ನು ಶಿಕ್ಷಣವು ವ್ಯಕ್ತಿವಾದಿಯಾಗುವಂತೆ ರೂಪಿಸುವುದು ನಿಜ. ಅವನು ನಾಗರಿಕ ಸಮಾಜದ ಒಂದು ಭಾಗವೂ ಆಗಿರುತ್ತಾನೆ. ಶಿಕ್ಷಣದ ಮೂಲಕ ಮಗುವು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಹೊಂದುತ್ತಾನೆ. ಅದರಲ್ಲಿ ಒಂದು ನಿರ್ದಿಷ್ಟತೆ ಎನ್ನುವುದೂ ಇರುತ್ತದೆ. ಶಿಕ್ಷಣ ಕ್ರಮ ಎನ್ನುವುದು ನಮಗೆ ಒಂದು ಶಿಕ್ಷೆಯ ಮಾದರಿಯು ಆಗಬಾರದು ಎನ್ನುವುದು ಗ್ರಾಂಶಿಯ ನಿಲುವು.

ಹಳೆಯ ಶಾಲೆಗಳು ಗ್ರೀಕ್ ಮತ್ತು ರೋಮನ್ ಪರಂಪರೆಯನ್ನು ನಿರೂಪಿಸಿದ್ದು ನಿಜ. ಅದರಲ್ಲಿ ರಾಜಕೀಯ ಚರಿತ್ರೆ ಮತ್ತು ಗಣಿತಶಾಸ್ತ್ರ, ಸಾಮಾಜಿಕ ಜೀವನ ಮತ್ತು ಸಂಸ್ಕೃತಿಯನ್ನು ಕಲಿಸುವ ಕ್ರಮವೂ ಇತ್ತು. ತಕ್ಷಣಕ್ಕೆ ಉಪಯೋಗವು

ಬಾರದೇ ಇರುವ ಸಂಗತಿಗಳನ್ನು ಕಲಿಸುತ್ತಿದ್ದರು. ಆದರೆ ವಿದ್ಯಾರ್ಥಿಗಳು ವ್ಯಾಪಾರ ಸಂಬಂಧಿತವಾದ ಪತ್ರಗಳು ಮತ್ತು ಅದರ ಉಪಯೋಗವನ್ನು ಹೇಳಿಕೊಡುತ್ತಿದ್ದರು. ಆದರೆ ಗ್ರಾಂಶಿಯು ಮತ್ತೆ ಅನೇಕ ಸಂಗತಿಗಳನ್ನು ಹೇಳುತ್ತಾನೆ. ಅದರಲ್ಲಿ ತರ್ಕ, ಸೌಂದರ್ಯಶಾಸ್ತ್ರ, ಸಂಸ್ಕೃತಿಗಳ ಪ್ರಶ್ನೆಗಳು ಹೇಗೆ ಶಿಕ್ಷಣದ ಕ್ಷೇತ್ರವನ್ನು ಪ್ರವೇಶ ಮಾಡಿದವು ಎನ್ನುವುದೂ ಅವನ ಅರಿವಿನಲ್ಲಿ ಇದೆ. ಹೀಗೆ ಇದ್ದರೂ ಗ್ರಾಂಶಿಯ ಶಿಕ್ಷಣದ ಕುರಿತಾದ ನಿಲುವುಗಳು ಅನೇಕ ರೀತಿಯ ದ್ವಂದ್ವವನ್ನು ಹೊಂದಿತ್ತು ಎಂದೂ ಹೇಳುತ್ತಾರೆ.

ಆಧುನಿಕ ನಾಗರಿಕತೆ ಮತ್ತು ಅದರ ಚಟುವಟಿಕೆಗಳು ಅತ್ಯಂತ ಸಂಕೀರ್ಣವಾಗಿದೆ, ಅದರ ಜೊತೆಗೆ ಸಾಧ್ಯತೆಯು ಭಿನ್ನವಾಗಿದೆ. ಕೈಗಾರೀಕರಣದ ತರುವಾಯ ಸಮಾಜದಲ್ಲಿ ಅನೇಕ ಪರಿವರ್ತನೆಗಳು ಆಗಿವೆ. ನಮ್ಮ ನಿತ್ಯದ ಜೀವನದ ಮೇಲೆ ವಿಜ್ಞಾನ ಮತ್ತು ತಂತ್ರಜ್ಞಾನವು ವ್ಯಾಪಕವಾದ ಪ್ರಭಾವವನ್ನು ಬೀರಿದೆ. ಹೊಸದಾದ ಪ್ರಾಯೋಗಿಕ ಸಾಧ್ಯತೆಯು ನಮಗೆ ಹೊಸದಾದ ರೀತಿಯ ಶಿಕ್ಷಣವನ್ನು ಹೇಳಿತು. ಅದನ್ನು ಆವಿಷ್ಕಾರ ಮಾಡಬೇಕಾಯಿತು. ಕಾರ್ಯಕ್ಷೇತ್ರದಲ್ಲಿ ವಿಶಿಷ್ಟತೆಯು ಬಂದುದರಿಂದ ಅದಕ್ಕೆ ಬೇಕಾದ ತಜ್ಞರನ್ನು ರೂಪಿಸಬೇಕಾಗಿತ್ತು.. ಹೊಸ ಮಾದರಿಯ ಶಿಕ್ಷಣ ಮತ್ತು ಹೊಸದಾದ ಬುದ್ಧಿಜೀವಿಗಳ ಆವಶ್ಯಕತೆ ಎನ್ನುವುದು ಮುಖ್ಯವಾದ್ದರಿಂದ ಶಿಕ್ಷಣವನ್ನು ಮಾನವೀಯ ಮಾದರಿಯ ಶಿಕ್ಷಣ ಎಂದು ಹೇಳುವುದಕ್ಕೆ ಪ್ರಾರಂಭಿಸಿದರು. ಇದನ್ನು ನಾವು ಉದ್ಯೋಗ ಕೇಂದ್ರಿತ ಎಂದು ಹೇಳಿದರೂ ತಪ್ಪಾಗುವುದಿಲ್ಲ. ಅಭಿಜಾತ ಪರಂಪರೆ ಮತ್ತು ಅದರ ಶಿಕ್ಷಣದ ಕಲ್ಪನೆಯು ಬೇರೆ. ಬುದ್ಧಿಜೀವಿಗಳು ಮತ್ತು ಅವುಗಳ ಭಿನ್ನವಾದ ವರ್ಗಗಳಿಗೆ ಅನುಗುಣವಾಗಿ ಶಿಕ್ಷಣವೂ ಬಂದಿತು.ಇದಕ್ಕೆ ಅನುಗುಣವಾದ ಪಠ್ಯಕ್ರಮವು ಅಗತ್ಯವೂ ಇತ್ತು. ಆದ್ದರಿಂದ ಹೊಸದಾದ ಶಿಕ್ಷಣ ಎನ್ನುವುದು ಸಮಾಜದಲ್ಲಿ ಒಂದು ನಿರ್ದಿಷ್ಟವಾದ ಜಾಗಕ್ಕೆ ಬರುವಂತೆ ಆಯಿತು.

ಇಲ್ಲಿ ಇನ್ನೊಂದು ಅಂಶವನ್ನು ನಾವು ಮನಗಾಣಬೇಕಾಗಿದೆ. ಶಿಕ್ಷಣದಲ್ಲಿ ಎರಡು ಪರಂಪರೆಗಳು ಇವೆ. ಒಂದು ಅಭಿಜಾತ ಮತ್ತೊಂದು ಉದ್ಯೋಗ ಕೇಂದ್ರಿತ.. ಇವುಗಳೇ ಅತ್ಯಂತ ಮುಖ್ಯವಾದ ತಳಹದಿಯೂ ಹೌದು. ಅದರ ಜೊತೆಗೆ ನಗರವನ್ನು ಕೇಂದ್ರಮಾಡಿಕೊಂಡು ಸಮಾಜವು ಹೊಸತನವನ್ನು ಆಶಿಸಿದ ಸನ್ನಿವೇಶವೂ ಹೌದು. ನಗರ ಕೇಂದ್ರಿತವಾದ ಬುದ್ಧಿಜೀವಿಗಳು ಸಂಸ್ಕೃತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ ಸನ್ನಿವೇಶವೂ ಹೌದು. ಹಾಗೆ ನೋಡಿದರೆ ನಮಗೆ ಶಿಕ್ಷಣವು ನಮ್ಮ ಮನಸ್ಸಿನ ವಿಕಾಸಕ್ಕೆ ಅನುಕೂಲವನ್ನು ಉಂಟು ಮಾಡುತ್ತದೆ. ಇದರ ಅರಿವು ಗ್ರಾಂಶಿಗೆ ಇದೆ. ಶಾಲೆ ಎನ್ನುವುದು ಕೂಡಾ ಒಂದು ಅರ್ಥದಲ್ಲಿ

ನಮಗೆ ಸಂಸ್ಕೃತಿಯ ಸಂಕರವನ್ನು ಉಂಟು ಮಾಡುವ ಸ್ಥಳವೂ ಹೌದು. ಅದರ ಜೊತೆಗೆ ಅದು ಬುದ್ಧಿಜೀವಿಗಳನ್ನು ಸೃಷ್ಟಿ ಮಾಡುತ್ತದೆ. ಜ್ಞಾನವನ್ನು ಉಂಟು ಮಾಡುತ್ತದೆ. ಅದರಲ್ಲಿ ಒಂದು ಅವಕಾಶವೂ ಉಂಟಾಗುತ್ತದೆ. ಶಿಕ್ಷಣ ಎನ್ನುವುದು ನಮಗೆ ಉದ್ದೇಶಿತವಾದ ಚಟುವಟಿಕೆಯೂ ಹೌದು. ಅದರಲ್ಲಿ ಸಾಮಾಜಿಕ ಅವಕಾಶವೂ ಇರುತ್ತದೆ. ಇದನ್ನು ಗ್ರಾಂಶಿಯು ಮನಗಂಡಿದ್ದಾನೆ. ಹಾಗೆ ನೋಡಿದರೆ ನಮಗೆ ಶಿಕ್ಷಣ ಎನ್ನುವುದು ದೊರೆಯುವುದು ನಮ್ಮ ಜ್ಞಾನವನ್ನು ವಿಸ್ತಾರ ಮಾಡಲು. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಶಿಕ್ಷಣ ಎನ್ನುವುದು ಮತ್ತೊಂದು ಅರ್ಥದಲ್ಲಿ ವ್ಯಕ್ತಿತ್ವದ ವಿಸ್ತರಣೆಯೂ ಹೌದು. ನಿಜವಾದ ಜ್ಞಾನಿಗೆ ಒಂದು ಅರ್ಥದಲ್ಲಿ ಸಂಸ್ಥೆಯ ಅವಕಾಶವು ಬೇಕಾಗಿಲ್ಲ. ಈ ಮೊದಲು ಹೇಳಿರುವಂತೆ ಶಿಕ್ಷಣ ಎನ್ನುವುದು ಕ್ರಿಯಾಶೀಲತೆಯನ್ನು ಉಂಟು ಮಾಡುತ್ತದೆ. ಅದು ಸಮಾಜಕ್ಕೆ ಅಗತ್ಯವಾಗಿದೆ. ಶಿಕ್ಷಣವು ಒಂದೊಂದು ಕ್ಷೇತ್ರದ ಜ್ಞಾನಿಗಳನ್ನು ನಿರ್ಮಾಣ ಮಾಡುತ್ತದೆ. ಅದರ ಜೊತೆಗೆ ಅಧಿಕಾರಿಗಳನ್ನು ರೂಪಿಸುತ್ತದೆ. ನಿರ್ದಿಷ್ಟವಾದ ಒಂದು ಅಧಿಕಾರಿಗಳನ್ನು ನಿರ್ಮಾಣ ಮಾಡುವುದು ಅಂದರೆ ಅವರಿಗೆ ಕಾನೂನು ಮತ್ತು ಆಢಳಿತ ನಡೆಸುವುದು ಹೇಗೆ ಎಂದು ತಿಳುವಳಿಕೆಯನ್ನು ಕೊಡುವುದು. ಅಧಿಕಾರಿ ವರ್ಗ ಎನ್ನುವುದು ಒಂದೇ ಥರ ಇರುವುದಿಲ್ಲ. ಅವುಗಳು ಭಿನ್ನ ಬಗೆಯಲ್ಲಿ ಇರುತ್ತವೆ ಎನ್ನುವುದು ಸ್ಪಷ್ಟ. ಅದರಲ್ಲಿ ಕಾರಕೂನರು ಇರಬಹುದು, ಅಥವಾ ಅದರಲ್ಲಿ ಕಾನೂನು ಇಲಾಖೆಯಲ್ಲಿ ಸೇವೆ ಮಾಡುವವರೂ ಇರಬಹುದು, ಇಲ್ಲವೇ ಬ್ಯಾಂಕಿನಲ್ಲಿ ಕೆಲಸ ಮಾಡುವವರೂ ಇರಬಹುದು. ಈ ವರ್ಗಕ್ಕೆ ಮತ್ತು ರಾಜಕಾರಣಕ್ಕೆ ಒಂದು ಸಂಬಂಧವು ಇದೆ. ಇದಕ್ಕೂ ಒಂದು ಪ್ರಾಯೋಗಿಕ ಸಾಧ್ಯತೆಯು ಇರುತ್ತದೆ. ರಾಜಕಾರಣವು ಈ ದೃಷ್ಟಿಯಿಂದ ಒಂದು ತಂತ್ರವನ್ನು ರೂಪಿಸುತ್ತದೆ. ರಾಷ್ಟ್ರವನ್ನು ರೂಪಿಸಲು ಈ ಗುಂಪು ಹೆಚ್ಚು ಸಹಾಯವನ್ನು ಮಾಡುತ್ತದೆ.

ರಾಜಕಾರಣ ಮತ್ತು ಸಂಸ್ಕೃತಿಯು ಹೇಗೆ ಸಂಬಂಧವನ್ನು ಇಟ್ಟುಕೊಳ್ಳುತ್ತದೆ ಎನ್ನುವುದು ಎಲ್ಲರ ಅನುಭವಕ್ಕೆ ಬರುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಜನರಿಗೆ ಕೆಲವು ಮಾದರಿಯ ತರಬೇತಿಯನ್ನು ಕೊಡುವುದು ಈವತ್ತು ಎಲ್ಲಾ ಕಡೆಗೆ ನಾವು ಕಾಣುತ್ತೇವೆ. ತರಬೇತಿ ಎನ್ನುವುದು ವ್ಯಕ್ತಿಯನ್ನು ಒಂದು ನಿಯಮಕ್ಕೆ ಒಗ್ಗಿಸುವುದೂ ಹೌದು. ಇದು ರಾಜಕೀಯ ತಂತ್ರಗಾರಿಕೆಗೆ ಬೇಕಾಗುತ್ತದೆ. ಇದರ ಮೂಲಕವೇ ಒಂದು ತಾಂತ್ರಿಕವಾದ ಸಂಸ್ಕೃತಿಯು ಬೆಳೆಯುತ್ತದೆ. ಸಾಂಸ್ಕೃತಿಕ ಗುಂಪುಗಳು ಬೆಳೆಯುವುದು ಹೀಗೆ. ಆದರೆ ವ್ಯಕ್ತಿ ಮತ್ತು ಅವನ ಸಂಸ್ಕೃತಿಗೆ ಒಂದು ಮಹತ್ವವು ಬರುತ್ತದೆ. ನಾವು ಈವತ್ತು ಬಳಸುತ್ತಿರುವ ಅನೇಕ ಪದಗಳು ಇದನ್ನು ಸೂಚಿಸುತ್ತವೆ. ಸಂಸ್ಕೃತಿ

ತಜ್ಞರು, ಜಾನಪದ ತಜ್ಞರು. ಕಾನೂನು ತಜ್ಞರು ಇತ್ಯಾದಿ. ಆದರೆ ಒಂದು ಪ್ರಶ್ನೆಯು ಇರುತ್ತದೆ: ಯಾವ ಸಮಾಜದಲ್ಲಿ ಯಾವುದು ಅಗತ್ಯವು ಇದೆಯೋ ಅದನ್ನು ಮಾತ್ರವೇ ರೂಪಿಸಲಾಗುತ್ತದೆ. ಅದರಲ್ಲಿಯೂ ಇದೆಲ್ಲಾ ಕೆಲಸ ಮತ್ತು ಅದರ ವರ್ಗೀಕರಣವು ಇದ್ದೇ ಇರುತ್ತದೆ. ಚರ್ಚೆಗಳು ಇರುತ್ತವೆ. ಪ್ರತಿಕ್ರಿಯೆಗಳು ಇರುತ್ತವೆ. ವ್ಯಕ್ತಿಯ ಕೌಶಲ, ಅವನಿಗೆ ದೊರೆಯುವ ತರಬೇತಿ, ಅವನ ಆಯ್ಕೆಗಳು, ಅವನು ತನ್ನ ಕೆಲಸಗಳಲ್ಲಿ ತೋರಿಸುವ ಕಾರ್ಯಕ್ಷಮತೆ ಮುಂತಾದವು ಮಾನದಂಡಗಳೂ ಹೌದು. ಇದಕ್ಕೆ ಪೂರಕವಾಗಿ ಗ್ರಾಂಶಿಯು ಒಂದು ಉದಾಹರಣೆಯನ್ನು ಕೊಡುತ್ತಾನೆ – ಬರಹ ಎನ್ನುವುದು ಸಂಸ್ಕೃತಿಯಲ್ಲಿ ತನ್ನದೇ ಆದ ಒಂದು ಅಸ್ತಿತ್ವವನ್ನು ಹೊಂದಿರುತ್ತದೆ ಆದರೆ ಬರೆಯುವುದು ಎನ್ನುವುದೂ ಒಂದು ಬೌದ್ಧಿಕವಾದ ಚಟುವಟಿಕೆಯು ಆಗಿದೆ. ಅದು ನಮ್ಮ ಆಲೋಚನೆಯನ್ನು ಹೇಳುತ್ತದೆ. ಇನ್ನೊಂದು ಕಡೆಯಿಮದ ಅದು ನಮ್ಮ ಗ್ರಹಿಕೆ ಮತ್ತು ಜ್ಞಾನವನ್ನು ಹೇಳುತ್ತದೆ. ಮುಖ್ಯವಾಗಿ ಗ್ರಾಂಶಿಯು ಶಿಕ್ಷಣ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅದರಲ್ಲಿ ಒಂದು ವಿಮರ್ಶಾತ್ಮಕವಾದ ಎಚ್ಚರವು ಇರಬೇಕಾಗುತ್ತದೆ ಎಂದು ಭಾವಿಸುತ್ತಾನೆ. ನಿತ್ಯದಲ್ಲಿ ನಾವು ಬುದ್ಧಿಜೀವಿಗಳನ್ನು ಕಾಣುತ್ತೇವೆ. ಅವರು ಅನೇಕವನ್ನು ರೂಪಿಸುತ್ತಾರೆ. ಶಿಕ್ಷಣವನ್ನು ಹೇಳುವಾಗ ಅವನು ಒಂದು ಮಾತನ್ನು ಹೇಳುತ್ತಾನೆ – ಯಜಮಾನಿಕೆಯು ಯಾವ ಸನ್ನಿವೇಶದಲ್ಲಿ ಯಾವುದಕ್ಕೆ ಒಂದು ಬಗೆಯ ಶಿಕ್ಷಣವನ್ನು ಹೇರುತ್ತದೆ ಎನ್ನುವುದನ್ನು ಗ್ರಾಂಶಿಯು ಹೇಳುತ್ತಾನೆ. ವಿಶ್ವ ವಿದ್ಯಾಲಯವು ಒಂದು ಹಂತದಲ್ಲಿ ಪ್ರಭುತ್ವದ ಪರಿಕರವೂ ಆಗುತ್ತದೆ. ಅದು ಬೇರೆ ಪ್ರಶ್ನೆ. ಗ್ರಾಂಶಿಯು ಸಾರ್ವಜನಿಕವಾಗಿ ನಾವು ಏನು ಮಾತಾಡುತ್ತೇವೆಯೋ ಅದನ್ನು ನಿರಾಕರಿಸುವುದಿಲ್ಲ. ನಮ್ಮ ಬೌದ್ಧಿಕವಾದ ಚಟುವಟಿಕೆ ಎನ್ನುವುದು ಶೂನ್ಯವಾದ್ದು ಅಲ್ಲ. ನಮಗೆ ಶಾಲೆ ಎನ್ನುವುದು ಕಲಿಸಲು ಇರುವ ಸ್ಥಳವೂ ಹೌದು. ಅದು ಒಂದು ಬಗೆಯಲ್ಲಿ ಸಾಂಸ್ಥಿಕವಾದ ರೂಪವೂ ಹೌದು..ಅದರಲ್ಲಿ ನಾವು ಸಾಮಾಜಿಕ ಚಟುವಟಕೆಯನ್ನು ಕಾಣಬಹುದು. ಬುದ್ಧಿಜೀವಿಗಳು ಮತ್ತು ಅವರ ಕ್ರಿಯಾಶೀಲತೆಯು ರೂಪುಗೊಳ್ಳುವುದು ಇಲ್ಲಿಯೇ. ಶಾಲೆ ಮತ್ತು ಅದರ ಸ್ವರೂಪವನ್ನು ನಾವು ಒಂದು ರೀತಿಯಲ್ಲಿ ಗ್ರಹಿಸಬಹುದು. ಶಾಲೆಯಲ್ಲಿ ಕಲಿಸುವವರು ಮತ್ತು ಕಲಿಯುವವರು ಇರುತ್ತಾರೆ ಎನ್ನುವುದು ನಿಜ. ಆದರೆ ಕಲಿಯುವವರು ಮತ್ತು ಕಲಿಸವವರ ಮಧ್ಯೆ ಒಂದು ಶೇಕಡಾವಾರು ಸಂಖ್ಯೆ ಇರುತ್ತದೆ. ಎಲ್ಲರಿಗೂ ಒಬ್ಬ ಶಾಲೆಯ ಮಾಸ್ತರನು ಕಲಿಸಲಾರ. ನಮಗೆ ಗೊತ್ತಿರುವಂತೆ ಶಾಲೆಗಳಿಗೆ ವ್ಯತ್ಯಾಸವಿದೆ. ಅಷ್ಟೇ ಅಲ್ಲ ಪಠ್ಯಕ್ರಮಗಳಲ್ಲಿ ಭಿನ್ನತೆಯು ಇರುತ್ತದೆ. ಪ್ರಾಥಮಿಕ ಶಾಲೆ, ಹೈಸ್ಕೂಲ್, ಕಾಲೇಜು ಮತ್ತು ಮಾಸ್ಟರ್ ಪದವಿಗಳು. ಇವುಗಳಲ್ಲಿ ಕಲಿಸುವ ವಿಧಾನಗಳು ಬೇರೆ. ಬೇರೆ ಬೇರೆ ಪರಿಕರಗಳು ಇರುತ್ತವೆ. ಯಾವ ಜ್ಞಾನವನ್ನು

ಕೊಡಬೇಕು ಎನ್ನುವುದು ನಿರ್ಧಾರಿತವಾಗಿದೆ. ಓದುವುದು, ಬರೆಯುವುದು, ಚರಿತ್ರೆಯನ್ನು ಕಲಿಯುವುದು ಮುಖ್ಯ. ಇದನ್ನು ಒಂದು ಸರ್ವೇ ಸಾಧಾರಣವಾದ ಕ್ರಮವೂ ಹೌದು. ಹಕ್ಕುಗಳು ಮತ್ತು ಕರ್ತವ್ಯಗಳು ಶಾಲೆಯಲ್ಲಿ ಕಲಿಸುವ ವಿಷಯಗಳೂ ಹೌದು. ಶಾಲೆಯಲ್ಲಿ ವಿವಿಧ ಸಂಗತಿಗಳನ್ನು ಒಂದು ಸಂಯೋಜನೆ ಮಾಡಲಾಗುತ್ತದೆ. ಅದರಲ್ಲಿ ಗ್ರಂಥಾಲಯವಿರುತ್ತದೆ. ಪ್ರಯೋಗಕ್ಕೆ ಪ್ರಯೋಗ ಶಾಲೆಗಳು ಇರುತ್ತವೆ. ತರಗತಿಯನ್ನು ಮಾಡುವುದಕ್ಕೆ ಬೇಕಾದ ಕೊಠಡಿಗಳು ಇರುತ್ತವೆ., ಇವುಗಳು ಶಾಲೆ ಮತ್ತು ಅದರ ಕ್ರಿಯಾಶೀಲತೆಗೆ ಬೇಕಾಗುತ್ತದೆ.

ಆಧುನಿಕ ಅರಸು ಕುಮಾರರು

ವಾಸ್ತವವಾಗಿ ಮೆಕೆವಲ್ಲಿಯ ಒಂದು ಪರಿಕಲ್ಪನೆಯನ್ನು ಗ್ರಾಂಶಿಯು ಹೇಳುತ್ತಾನೆ. ಮೆಕೆವಲ್ಲಿ ಇಟಲಿಯ ಒಬ್ಬ ಮಹತ್ವದ ಚಿಂತಕ. ಅವನ ಚಿಂತನೆಯಲ್ಲಿ ಮಾಡರ್ನ್ ಪ್ರಿನ್ಸ್ ಎನ್ನುವುದು ಬರುತ್ತದೆ.ಗ್ರಾಂಶಿಯಲ್ಲಿ ಬರುವ ಅತ್ಯಂತ ವಿಶಿಷ್ಟವಾದ ಚರ್ಚೆಯು ಇದು . ಇದನ್ನು ನಾವು ಒಂದು ಮುಖದ ಚರ್ಚೆ ಎಂದು ಪರಿಗಣಿಸಿಕೊಳ್ಳಲು ಸಾಧ್ಯವಿಲ್ಲ. ಒಂದು ಕಡೆಯಿಂದ ಇದು ಸಾಮೂಹಿಕ ಜನವರ್ಗವನ್ನು ಹೇಳುತ್ತದೆ. ಮತ್ತೊಂದು ಕಡೆಯಿಂದ ಇದು ನಮಗೆ ಇಬ್ಬರು ಚಿಂತಕರ ನಡುವೆ ,ಇರುವ ಸಂಬಂಧವನ್ನು ಹೇಳುತ್ತದೆ. ಮಾರ್ಕ್ಸ್ ಮತ್ತು ಮೆಕೆವಲ್ಲಿ ಈ ಅಧ್ಯಯನದಲ್ಲಿ ವಿವರಣೆಗೆ ಗುರಿಯಾಗಿದ್ದಾರೆ. ಆಧುನಿಕ ರಾಜಕಾರಣದ ಮತ್ತು ಸಂಸ್ಕೃತಿಯ ಚರ್ಚೆಯಲ್ಲಿ ಅತ್ಯಂತ ಹೆಚ್ಚು ಕಾಣಿಸಿಕೊಳ್ಳುವ ಈ ಇಬ್ಬರನ್ನು ಗ್ರಾಂಶಿ ಹೇಳಿದ್ದಾನೆ. ಮೆಕೆವೆಲ್ಲಿ ಒಂದು ಅರ್ಥದಲ್ಲಿ ಮಾರ್ಕ್ಸನಷ್ಟು ಪ್ರಚಾರ ಹೊಂದಿಲ್ಲ. ಆದರೆ ಇಬ್ಬರೂ ನಮಗೆ ರಾಜಕೀಯ ಅರ್ಥಶಾಸ್ತ್ರವನ್ನು ಖಚಿತವಾಗಿ ನೋಡುತ್ತಾರೆ. ಅದು ಅವರ ತಾತ್ವಿಕವಾದ ಒಂದು ಆಸಕ್ತಿ ಕೂಡಾ ಆಗಿದೆ. ಅವರಿಬ್ಬರೂ ನಮಗೆ ಮತ್ತೊಂದು ನಿಲುವನ್ನು ಹೊಂದುತ್ತಾರೆ. ಒಂದು ವಾಸ್ತವ ಮತ್ತು ಅದನ್ನು ಸ್ಥಾಪಿಸುವ ವಿವರಗಳಿಗೆ ಅವರು ಹೆಸರುವಾಸಿಯಾಗಿದ್ದಾರೆ, ಮೆಕೆವಲ್ಲಿ ರಾಜಕೀಯ ಸಿದ್ಧಾಂತವು ಬೇರೆ ಮಾದರಿ ಎನ್ನುವುದು ಸ್ಪಷ್ಟ. ಇನ್ನೊಂದು ಸಮೂಹ ಮತ್ತು ಅದರ ನಿರ್ಧಾರ. ಆದರೆ ಇಲ್ಲಿ ಗ್ರಾಂಶಿಯು ಹೇಳಿದ ಈ ಮಾತುಗಳು ನಮಗೆ ಇನ್ನೊಂದು ವಿಚಾರವನ್ನು ನೆನಪು ಮಾಡುತ್ತದೆ. ಸಮೂಹ ಮತ್ತು ಅದರ ಅನೇಕ ನಿಲುವುಗಳು ಸಂಕೇತವೂ ಆಗಬಹುದು. ರಾಜಕೀಯ ಶಾಸ್ತ್ರ ಎನ್ನುವುದು ಈವತ್ತು ಏನಾಗಿದೆ ಎಂದು ವಿವರಿಸುವಾಗ ದ ಪ್ರಿನ್ಸ್ ಕೃತಿಯಲ್ಲಿ ಮೆಕೆವಲ್ಲಿಯು ಒಂದು ಐತಿಹ್ಯವನ್ನು ನೆನಪು ಮಾಡಿಕೊಳ್ಳುತ್ತಾನೆ. ಅರಸು ಕುಮಾರ ಎನ್ನುವುದು ಇದನ್ನು ಹೇಳುತ್ತದೆ. ಸಮೂಹ ಮತ್ತು ಅದರ ಸ್ವರೂಪವನ್ನು ಹೇಳುವಾಗ ಇದನ್ನು ಮೆಕೆವಲ್ಲಿಯು ಒಂದು ಕ್ರಮವನ್ನು ಕೂಡಾ ಪ್ರಸ್ತಾವಿಸುತ್ತಾನೆ, ಅವನಲ್ಲಿ ಜನ ಸಮೂಹ ಎಂದರೆ

ಅದು ನಿಷ್ಕ್ರಿಯವಾದ ಒಂದು ಗುಂಪು ಅಲ್ಲ. ಆದ್ದರಿಂದಲೇ ಮೆಕೆವೆಲ್ಲಿಯು ಜನರ ಕ್ರಿಯೆ ಮತ್ತು ಶಕ್ತಿಯನ್ನು ಕುರಿತು ಹೇಳುತ್ತಾನೆ. ಅದನ್ನು ಸ್ವಲ್ಪ ಐತಿಹ್ಯದ ಮಟ್ಟಕ್ಕೆ ತೆಗೆದುಕೊಂಡು ಹೋಗಿರುವುದು ನಿಜ.. ಇದಕ್ಕೆ ಸಂಬಂಧ ಪಟ್ಟ ಒಂದು ಮಾನದಂಡವೂ ಇದೆ. ಮೆಕೆವಲ್ಲಿಯಲ್ಲಿ ಮತ್ತೊಂದು ಮುಖ್ಯವಾದ ಅಂಶವೂ ಇದೆ.ಅನು ನಿಜವಾದ ಒಬ್ಬ ಅರಸು ಕುಮಾರನನ್ನು ಇಟ್ಟುಕೊಂಡು ಮಾತಾಡುವುದಿಲ್ಲ. ಅವನು ಇಟೆಲಿಯಾ ರಾಜಕುಮಾರನೂ ಅಲ್ಲ. ಆದ್ದರಿಂದ ಅದು ಕಲ್ಪಿತವಾದ್ದು ನಿಜ. ಮೆಕೆವಲ್ಲಿಯ ಉದ್ದೇಶವು ಕೂಡಾ ಅದರಂತೆ ಇದೆ ಎಂದು ಭಾವಿಸಲು ಆಗುವುದಿಲ್ಲ. ಅದು ಒಂದು ನಿಲುವು. ಅವನು ಅಮೂರ್ತವಾದ ಸಂಗತಿಯನ್ನು ಹೇಳಲು ಈ ರೂಪಕವನ್ನು ಬಳಸುತ್ತಾನೆ. ಅವನು ಸಮೂಹ ಮತ್ತು ಅದರ ಸ್ವರೂಪವನ್ನು ಹೇಳುವಾಗ ಈ ಸಮೂಹವು ಹೇಗೆ ತಿಳಿವನ್ನು ಪಡೆಯುತ್ತದೆ ಮತ್ತು ಅದರ ಮೂಲಕ ಅದು ಹೇಗೆ ಕ್ರಿಯಾಶೀಲವಾಗಿರುತ್ತದೆ ಎಂದು ಹೇಳುತ್ತಾನೆ. ಅದನ್ನು ಅವನು ಜನರಿಕ್ ಎನ್ನುವ ಪದವನ್ನು ಈ ಸನ್ನಿವೇಶದಲ್ಲಿ ಬಳಸುತ್ತಾನೆ. ಅರಸು ಕುಮಾರ ಎನ್ನುವಾಗ ಅದರಲ್ಲಿ ಒಂದು ನೈತಿಕವಾದ ನಿಲುವುದು ಇದೆ ಎಂದು ಹೇಳುತ್ತಾರೆ. ಅದು ಬೇರೆ ಪ್ರಶ್ನೆ. ಅವನು ಪ್ರಿನ್ಸ್ ಎನ್ನುವುದನ್ನು ಬರೆದುದು ೧೫೧೩ರ ಕೊನೆಯ ವೇಳೆಗೆ. ಅದು ಬೇರೆ ಪ್ರಶ್ನೆ. ಅವನ ಧೋರಣೆಗಳನ್ನು ಅನೇಕರು ಅತ್ಯಂತ ಕಟುವಾಗಿ ಟೀಕೆ ಮಾಡಿದರು. ಆದರೆ ಮೆಕೆವಲ್ಲಿಯು ಅತ್ಯಂತ ಅನಿವಾರ್ಯವಾದ ಸನ್ನಿವೇಶದಲ್ಲಿ ಹಿಂಸೆಯು ಅನಿವಾರ್ಯವಾಗುತ್ತದೆ ಅತ್ಯಂತ ಕೆಟ್ಟ ಆಢಳಿತಗಾರನು ಕೇಡನ್ನು ತರುತ್ತಾನೆ. ಇದು ಮೆಕೆವಲ್ಲಿಯಲ್ಲಿ ಬರುವ ಒಂದು ಮಾತು. ಇದನ್ನು ನಾವು ಈವತ್ತೂ ಕಾಣುತ್ತೇವೆ. ಅವನು ಇದನ್ನು ಒಂದು ಹಂತಕ್ಕೆ ನಿಲ್ಲಿಸುವುದಿಲ್ಲ. ಅದನ್ನು ಮುಂದುವರಿಸುತ್ತಾನೆ.,ರೈತರು, ಸಾಮಾನ್ಯರು ಮತ್ತು ಅವಿದ್ಯಾವಂತರು ಕೂಡಾ ಜನರೇ ಆಗಿದ್ದಾರೆ. ಜನರು, ಅವರ ಪ್ರಜ್ಞೆ ಮತ್ತು ಅವರ ಅಭಿವ್ಯಕ್ತಿಯು ಹೇಗೆ ಇದೆ ಎಂದು ಅವನಿಗೆ ಮುಖ್ಯವಾಗಿದೆ. ಅದರ ಜೊತೆಗೆ ಭಾವನೆಗಳು ಮತ್ತು ನಮ್ಮ ಕ್ರಿಯೆಗಳಿಗೆ ಒಂದು ಸಂಬಂಧವು ಇದೆ ಎನ್ನುವುದು ಅವನ ನಿಲುವು. ಆದ್ದರಿಂದ ಅವನು ಹೇಳುವ ಅರಸು ಕುಮಾರ ಎನ್ನುವ ಪರಿಕಲ್ಪನೆಗೆ ವಿಭಿನ್ನವಾದ ಆಯಾಮವು ದೊರೆಯುತ್ತದೆ. ಕ್ರಿಯೆ ಮತ್ತು ರಚನೆ ಎನ್ನುವುದಕ್ಕೆ ಒಂದು ಸಂಬಂಧವೂ ಇದೆ.

ಚರಿತ್ರೆ ಮತ್ತು ಅಚಾರಿತ್ರಿಕ ಎನ್ನುವುದನ್ನು ಅವನು ವಿವರಿಸುವಾಗ ರಾಜಕಾರಣ ಮತ್ತು ರಾಜಕೀಯ ಪಕ್ಷಗಳು ಹೇಗೆ ಕೆಲಸವನ್ನು ಮಾಡುತ್ತವೆ ಎಂದು ಹೇಳುತ್ತಾನೆ. ರಾಜಕಾರಣದಲ್ಲಿ ಅತ್ಯಂತ ಮುಖ್ಯವಾದ ಒಂದು ಪಾತ್ರವನ್ನು ರಾಜಕೀಯ ಪಕ್ಷಗಳು ಮಾಡುತ್ತವೆ. ಅದರ ಜೊತೆಗೆ ಅವು ಚರಿತ್ರೆಯಲ್ಲಿ ಒಂದು

ವಾಹಿನಿಯೂ ಆಗಿದೆ. ಕ್ರೋಸೆಯನ್ನು ಹೇಳುವಾಗ ಗ್ರಾಂಶಿಯು ಇದನ್ನು ಹೇಳುತ್ತಾನೆ. ಆದರೆ ಅದು ಜೊತೆಗೆ ಇನ್ನೊಂದು ಮಾತನ್ನು ಸೇರಿಸುತ್ತಾನೆ - ಬೂರ್ಜ್ವಾ ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ನಿಲುವುಗಳನ್ನು ಜನರ ಮೇಲೆ ಹೇರುತ್ತವೆ. ಇದರಲ್ಲಿ ಗ್ರಾಂಶಿಯು ಫಿಲಾಸಫಿ ಆಫ್ ಪ್ರಾಕ್ಸಿಸ್ ಎನ್ನುವುದನ್ನು ಹೇಳುತ್ತಾನೆ. ಈ ಪ್ರಶ್ನೆಯು ಮೊದಲು ಬಂದಿರುವುದು ಗ್ರೀಕ್ ಚರ್ಚೆಯಲ್ಲಿ. ಪ್ರಾಕ್ಸಿಸ್ ಎಂದರೆ ಸಿದ್ಧಾಂತ, ಪಾಠ, ಕೌಶಲ, ತೊಡಗಿಸಿಕೊಳ್ಳುವುದು, ಹಾಗೆಯೇ ವಾಸ್ತವವನ್ನು ಅರ್ಥ ಮಾಡಿಕೊಳ್ಳುವುದು ಎಂದಾಗುತ್ತದೆ. ಇದು ಪ್ರಾಯೋಗಿಕವಾದ ಒಂದು ಬುದ್ಧಿವಂತಿಕೆಯನ್ನು ಸೂಚಿಸುತ್ತದೆ. ಗ್ರಾಂಶಿಯಲ್ಲಿ ಇದು ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಲು ಇರುವ ಅತ್ಯಂತ ಮುಖ್ಯವಾದ ಸಂಗತಿಯೂ ಹೌದು. ಇದು ಅವನ ಸಾಂಸ್ಕೃತಿಕ ಪ್ರಜ್ಞೆಯ ದ್ಯೋತಕವೂ ಹೌದು. ಪ್ರಾಕ್ಸಿಸನ ತತ್ವಜ್ಞಾನ ಎಂದರೆ ಗ್ರಾಂಶಿಯಲ್ಲಿ ಒಂದು ಸೈದ್ಧಾಂತಿಕವಾದ ತಿಳುವಳಿಕೆಯೂ ಹೌದು. ಚಿಂತನೆ ಮತ್ತು ವಾಸ್ತವತೆಯು ಜೊತೆಗೆ ಹೋಗುತ್ತದೆ. ಮನುಷ್ಯನ ಅತ್ಯಂತ ಸಂವೇದನಾಶೀಲವಾದ ಒಂದು ಪ್ರಕ್ರಿಯೆ ಇದು ಎಂದು ಅವನು ತಿಳಿಯುತ್ತಾನೆ. ಪ್ರಾಕ್ಸಿಸ್ ಎನ್ನುವುದು ಇಚ್ಛಾಶಕ್ತಿಯ ದ್ಯೋತಕವೂ ಹೌದು.ವಿರೋಧಾಭಾಸದ ಗುರುತು ಮತ್ತು ಭೌತಿಕವಾದ ಏಕತ್ವ ಎನ್ನುವುದೂ ಇಲ್ಲಿ ಪ್ರಧಾನ. ಮತ್ತೆ ಕ್ರೋಸೆಯ ಅಭಿಪ್ರಾಯವನ್ನು ಉಲ್ಲೇಖಿಸುವುದಾದರೆ ರಾಜಕಾರಣ ಎನ್ನುವುದು ಒಂದು ಸ್ವತಂತ್ರವಾದ ವಿಜ್ಞಾನ. ಮತ್ತೆ ಹೇಳುವಾದರೆ ಚರಿತ್ರೆ ಮತ್ತು ವಿಜ್ಞಾನ ಹಾಗೂ ಸಮಾಜಗಳ ಸಹಯೋಗವು ಅತ್ಯಂತ ಅನಿವಾರ್ಯವೂ ಹೌದು. ಇದನ್ನು ಹೇಳುವಾಗ ಜೇಕೊಬನ ಸಂಗತಿಯನ್ನು ಪ್ರಸ್ತಾವಿಸುತ್ತಾನೆ. ಅದರಲ್ಲಿ ಅವನು ಗಣಿತವನ್ನು ಹೇಳುತ್ತಾನೆ. ಗಣಿತ ಎನ್ನುವುದು ಸೂತ್ರವೂ ಹೌದು. ಅಷ್ಟೇ ಅಲ್ಲ ಅದರಲ್ಲಿ ಕೆಲವು ವರ್ಗಗಳೂ ಇರುತ್ತವೆ. ಅದರ ಜೊತೆಗೆ ಒಂದು ಮಾತನ್ನು ಹೇಳಬೇಕು: ಸಮೂಹ ಮತ್ತು ಅದರ ಹಿಂದೆ ಇರುವ ನಿಜವಾದ ಒಂದು ಇಚ್ಛಾಶಕ್ತಿಯನ್ನು ಮೆಕೆವೆಲ್ಲಿ ಪ್ರಸ್ತಾವಿಸುತ್ತಾನೆ. ಸಮೂಹ ಮತ್ತು ಅದರ ಇಚ್ಛಾಶಕ್ತಿಯನ್ನು ಹೇಳುವಾಗ ಪ್ರಾತಿನಿಧಿಕತೆ ಎನ್ನುವುದು ಹೇಗೆ ಮುಖ್ಯವಾಗುತ್ತದೆ ಎಂದು ವಿವರಿಸುತ್ತಾನೆ. ಆದರೆ ಮೆಕೆವಲ್ಲಿ ಕಾಲದಲ್ಲಿ ಪ್ರಭುತ್ವ ಎನ್ನುವುದು ಏಕ ಮುಖವಾಗಿತ್ತು. ಪ್ರಭುತ್ವ ಎನ್ನುವುದು ಅತ್ಯಂತ ಹೆಚ್ಚು ಪ್ರಭಾವಶಾಲಿಯಾಗಿದ್ದ ಸನ್ನಿವೇಶದಲ್ಲಿ ಮೆಕೆವಲ್ಲಿ ತನ್ನ ಅಭಿಪ್ರಾಯವನ್ನು ನೆಲೆಗೊಳಿಸಿದ್ದ. ಅವನು ಬರೆಯುತ್ತಿದ್ದ ಸನ್ನಿವೇಶದಲ್ಲಿ ರಾಜಪ್ರಭುತ್ವ ಎನ್ನುವುದು ಮಾತ್ರವೇ ಮುಖ್ಯವಾಗಿರಲಿಲ್ಲ. ಆದರೆ ರೋಮನ್ ಪ್ರಭುತ್ವ ಎನ್ನುವುದು ಒಂದು ಅರ್ಥದಲ್ಲಿ ನಿಜವಾದ ಪ್ರಭುತ್ವ ಮತ್ತು ಅದರ ರೂಪಗಳು ಇದ್ದವು. ರೋಮನ್ ಸಾರ್ವಭೌಮತ್ವ ಎನ್ನುವುದು ಇತ್ತು ಅದರಲ್ಲಿ ಭಾಷೆ ಮತ್ತು ಸ್ಥಳಗಳ ಪ್ರಶ್ನೆಗಳೂ ಇದ್ದವು.

ಬುದ್ಧಿಜೀವಿಗಳು ಮತ್ತು ಅವರ ಪಾತ್ರವು ಯಾವುದು ಎನ್ನುವುದೂ ಅತ್ಯಂತ ಮುಖ್ಯವಾಗಿದ್ದವು. ಮಧ್ಯಯುಗದ ಅತ್ಯಂತ ಮುಖ್ಯವಾದ ಪ್ರಶ್ನೆಗಳಲ್ಲಿ ಧರ್ಮವು ಮುಖ್ಯವಾದ ಪಾತ್ರವನ್ನು ವಹಿಸಿತ್ತು ಅದರಲ್ಲಿಯೂ ಕಥೋಲಿಕ್ ಪಂಥವು ಕೆಲವು ಸಮಸ್ಯೆಗಳನ್ನು ಎದುರಿಸಿತ್ತು. ಇದನ್ನು ಹೇಳಲು ಒಂದು ಕಾರಣವೂ ಇದೆ. ಆಗ ಸಮಸ್ಯೆಗಳು ಬೇರೆಯಿದ್ದವು. ಚರಿತ್ರೆಯನ್ನು ನೋಡಲು ನಮಗೆ ಬೇರೆ ಪರಿಕರವನ್ನು ಆಗಿನ ಸನ್ನಿವೇಶವೇಶವೇ ಕೊಟ್ಟಿತ್ತು. ಈ ಸನ್ನಿವೇಶವನ್ನು ನೆನಪು ಮಾಡಿಕೊಂಡು ಗ್ರಾಂಶಿಯು ಹೇಳುತ್ತಾನೆ. ಲ್ಯಾಟಿನ್ ಭಾಷೆಯು ಆಗ ವಿಶ್ವಾತ್ಮಕವಾದ ಭಾಷೆ ಎನ್ನುವ ಮಾನ್ಯತೆಯನ್ನು ಪಡೆದುಕೊಂಡಿತ್ತು. ಇದು ಗ್ರಾಂಶಿಗೆ ಮುಖ್ಯ. ಇದರಿಂದ ಭಾಷೆಯೇ ಒಂದು ಯಜಮಾನಿಕೆ ಎನ್ನುವುದನ್ನು ಸಾಧಿಸಿತು. ಭಾಷೆ ಮತ್ತು ಅದರ ಯಜಮಾನಿಕೆಯು ಯಾವಾಗಲೂ ಬೇರೆ ಥರ ಇರುತ್ತದೆ ಎನ್ನುವುದನ್ನು ಗ್ರಾಂಶಿಯು ಹೇಳುತ್ತಾನೆ ಇದರ ನಡುವೆ ಓದುವ ಭಾಷೆ ಮತ್ತು ಬರಹದ ಭಾಷೆ ಎನ್ನುವ ವರ್ಗೀಕರಣಗಳು ನಮಗೆ ಭಾಷೆಯ ಕಲ್ಪನೆಯನ್ನು ಬೇರೆ ಥರ ನಿರೂಪಿಸಿತು. ಇದರ ನಡುವೆ ಕೆಲವು ಸಂಗತಿಗಳು ಏನು ನಡೆದಿವೆಯೋ ಅದನ್ನು ನಾವು ಇಲ್ಲಿ ಮತ್ತೆ ನೆನಪುಮಾಡಿಕೊಳ್ಳುವುದು ಅತ್ಯಂತ ಸೂಕ್ತ. ಬೌದ್ಧಿಕ ಯಜಮಾನಿಕೆಗೆ ಮತ್ತು ಭಾಷೆಗೆ ಒಂದು ಸಂಬಂಧವು ಇದೆ. ಅದನ್ನು ಗ್ರಾಂಶಿ ನೆನಪು ಮಾಡಿಕೊಳ್ಳುತ್ತಾನೆ. ಅದರಲ್ಲಿ ಒಂದು ಸಂಗತಿ ಮುಖ್ಯ. ಒಮ್ಮೆ ಲ್ಯಾಟೀನ್ ಭಾಷೆಗೆ ಹೆಚ್ಚು ಮಾನ್ಯತೆಯು ಇತ್ತು ಅದನ್ನು ಹೇಳುವಾಗಲೇ ಲ್ಯಾಟೀನ್ ಮತ್ತು ಇಟಾಲಿಯನ್ ಭಾಷೆಗೆ ಇದ್ದ ತಾರತಮ್ಯವನ್ನು ಗ್ರಾಂಶಿಯು ಗಮನಿಸುತ್ತಾನೆ. ಆಗ ಮತ್ತೆ ಬಂದ ಪ್ರಶ್ನೆಯೆಂದರೆ ಯಾವುದು ಅನುಕರಣೆಗೆ ಯೋಗ್ಯವಾದ ಭಾಷೆ ಮತ್ತು ಯಾವುದರಲ್ಲಿ ಬರೆದರೆ ಮಾನ್ಯತೆಯು ಬರುತ್ತದೆ? ಈ ಪ್ರಶ್ನೆಯು ಅತ್ಯಂತ ಸುಲಭವಾದ ಹಾಗೂ ತಕ್ಷಣವೇ ಉತ್ತರಿಸಬಹುದಾದ ಪ್ರಶ್ನೆಗಳು ಅಲ್ಲ. ಸಾಹಿತ್ಯದಲ್ಲಿ ಶ್ರೇಷ್ಟ ಭಾಷೆ ಮತ್ತು ಕನಿಷ್ಟವಾದ ಭಾಷೆ ಎಂದು ಹೇಳುವಾಗ ಅದರಲ್ಲಿ ಕೆಲವು ಪ್ರಭುತ್ವ ಮತ್ತು ಅದರ ಸೂಚನೆಗಳೂ ಇರುತ್ತವೆ. ಗ್ರಾಂಶಿಯು ಇದನ್ನು ಹೇಳುತ್ತಾನೆ. ಜನರು ಮತ್ತು ಅವರ ಭಾಷೆ ಎನ್ನುವುದಕ್ಕೆ ಒಂದು ನಿರ್ದಿಷ್ಟವಾದ ಅರ್ಥವು ಇರುತ್ತದೆ. ಬರಹ ಮತ್ತು ಮಾತು ಎನ್ನುವುದಕ್ಕೆ ಏನು ಅಂತರು ಇದೆ ಎನ್ನುವುದು ಮಾತ್ರವೇ ಆಗಿ ಉಳಿಯಿತು. ಅದು ಸರಳೀಕರಣಕ್ಕೆ ಗುರಿಯಾದ್ದು ನಿಜ. ಒಂದು ಮಹತ್ವದ ಪ್ರಶ್ನೆಯನ್ನು ಗ್ರಾಂಶಿಯು ಎತ್ತುತ್ತಾನೆ. ಹತ್ತೊಂತ್ತನೆಯ ಶತಮಾನದ ತರುವಾಯ ಭಾಷೆ ಎನ್ನುವುದು ಹೇಗೆ ಸರಳೀಕರಣಕ್ಕೆ ಗುರಿಯಾಯಿತು ಎನ್ನುವುದು ಅವನ ಗಮನಕ್ಕೆ ಬಂದಿದೆ. ಅದು ಎಷ್ಟು ಮುಂದುವರಿಯಿತು ಎಂದರೆ ಲ್ಯಾಟೀನ್ ಭಾಷೆಯನ್ನು ಕಲಿಯಲು ಬೇಕಾದ ಅತ್ಯಂತ ಅಗತ್ಯವಾದ ಭಾಷೆ ಎಂದು ಅನೇಕರು ಭಾವಿಸಿದ್ದರು. ಆದರೆ

ಇಟಾಲಿಯನ್ ಭಾಷೆ ಎನ್ನುವುದು ಒಂದು ಸೀಮಿತವಾದ ಮತ್ತು ಒಂದು ಪ್ರದೇಶಕ್ಕೆ, ಒಂದು ರಾಷ್ಟ್ರೀಯತೆಗೆ ಮಾತ್ರವೇ ಸೀಮಿತವಾದ್ದು ಎಂದು ಹೇಳಿದರು. ಇಂಥಾ ಸಮಯದಲ್ಲಿ ಮಾತೃ ಭಾಷೆ ಎನ್ನುವ ಕಲ್ಪನೆಗೆ ಹೆಚ್ಚು ಒತ್ತು ಬಿದ್ದಿತು. ಇಲ್ಲಿ ಭಾಷೆಗೆ ಮತ್ತು ಕಮ್ಯೂನ್ ಎನ್ನುವುದಕ್ಕೂ ಸಂಬಂಧವು ಬಂದಿರುವುದು ಗಮನಾರ್ಹ. ಕೋಮುವಾದಿ ಬೂರ್ಜ್ವಾ ವರ್ಗ ಮತ್ತು ಭಾಷೆಗೆ ಇರುವ ಸಂಬಂಧವನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಇದನ್ನು ಇನ್ನೊಂದು ಥರ ಹೇಳುವುದಿದ್ದರೆ ನಮ್ಮ ದೇಶದಲ್ಲಿ ಮಂತ್ರಗಳು ಒಂದು ವರ್ಗಕ್ಕೆ ಸೀಮಿತವಾಯಿತು. ಪವಿತ್ರ ಭಾಷೆ ಮತ್ತು ಅಪವಿತ್ರವಾದ ಭಾಷೆ ಎನ್ನುವ ಕಲ್ಪನೆಯು ಹೇಗೆ ಇರುತ್ತದೆ ಎನ್ನುವುದು ಅತ್ಯಂತ ಮುಖ್ಯ ಎನ್ನುವುದು ಗ್ರಾಂಶಿಯ ನಿಲುವೂ ಹೌದು. ಕೋಮುವಾದಿ ಬೂರ್ಜ್ವಾವರ್ಗವು ತನ್ನ ಅಗತ್ಯಕ್ಕೆ ಅನುಸಾರವಾಗಿ ಭಾಷೆಯನ್ನು ಒಂದು ಪರಿಕರವಾಗಿ ಬಳಸುತ್ತದೆ. ಅದು ಕೆಲವನ್ನು ಉನ್ನತ ಮಾಡುತ್ತದೆ. ಕೆಲವನ್ನು ಅತ್ಯಂತ ಪವಿತ್ರವಾದ್ದು ಎಂದು ಹೇಳುತ್ತದೆ. ಆದ್ದರಿಂದ ಭಾಷೆಯು ಹೇಗೆ ಭಿನ್ನವಾದ ಚಹರೆಯನ್ನು ಹೊಂದುತ್ತದೆ ಎನ್ನುವುದು ಗ್ರಾಂಶಿಯಲ್ಲಿ ಅತ್ಯಂತ ಮುಖ್ಯ.

ಯಾವುದೇ ಪ್ರಭುತ್ವವು ತನ್ನ ಅಗತ್ಯಕ್ಕಾಗಿ ಕೆಲವನ್ನು ರೂಢಿಗತ ಮಾಡುತ್ತದೆ. ಅದರಲ್ಲಿ ಆರ್ಥಿಕವಾದ ಕ್ರಿಯೆ ಮತ್ತು ಅದರ ಸ್ವರೂಪವೂ ಇರುತ್ತದೆ. ಆದರೆ ಇಟಲಿಯಲ್ಲಿ ಇದ್ದ ಸಮಸ್ಯೆ ಬೇರೆ. ಅಲ್ಲಿ ಭೂಮಿ ಮತ್ತು ಅದರ ಹಕ್ಕುಗಳು ಹೇಗೆ ಬೇರೆ ರೀತಿಯ ಸಂಬಂಧವನ್ನು ಹುಟ್ಟು ಹಾಕಿತ್ತು ಎಂದು ಅವನು ಹೇಳುತ್ತಾನೆ. ಅದರಲ್ಲಿ ಒಂದು ನಮೂನೆಯು ಮಾತ್ರವೇ ಇಲ್ಲ. ಅದು ಆಧುನಿಕ ಪ್ರಭುತ್ವವನ್ನು ಮಾತ್ರವೇ ಹೊಂದಿರಲಿಲ್ಲ. ಆಗ ಸಮಾಜವು ಬೇರೆ ಮಾದರಿಯ ಸಂಬಂಧವನ್ನು ಕೂಡಾ ಹೊಂದಿತ್ತು. ಅದು ಸಂಪೂರ್ಣವಾಗಿ ಆಧುನಿಕವಾದ ಪ್ರಭುತ್ವದ ಮಾದರಿಯನ್ನು ಹೊಂದಿರಲಿಲ್ಲ. ಸಮಾಜದಲ್ಲಿ ಆಧುನಿಕವಾದ ಸಂಬಂಧವನ್ನು ನಾವು ನೋಡುವುದು ಅಸಾಧ್ಯವಿತ್ತು. ಆದ್ದರಿಂದ ಅದನ್ನು ಗ್ರಾಂಶಿಯು ಮಾಡ್ರನ್ ಪ್ರಿನ್ಸ್ ಒಂದು ವಿಚಾರವನ್ನು ನಮ್ಮ ಮುಂದೆ ಇಡುತ್ತದೆ. ಬುದ್ಧಿಜೀವಿಗಳು, ನೈತಿಕತೆ ಮತ್ತು ಧರ್ಮ ಹಾಗೂ ಲೋಕ ದೃಷ್ಟಿಗಳು ಜೊತೆಗೆ ಕೆಲಸವನ್ನು ಮಾಡಿದರೆ ಆಗ ಅದರ ಸ್ವರೂಪವು ಹೇಗೆ ಇರುತ್ತದೆ ಎನ್ನುವುದನ್ನು ಇದು ಹೇಳುತ್ತದೆ. ಒಂದು ಸಮೂಹ ಮತ್ತು ಅದರ ಇಚ್ಛಾ ಶಕ್ತಿ. ಇದು ಸಂಘಟನೆ, ಕ್ರಿಯೆ ಹಾಗೂ ಅಭಿವ್ಯಕ್ತಿಯನ್ನು ಹೇಳುತ್ತದೆ. ಯಾವುದೇ ರೀತಿಯಲ್ಲಿ ಸಾಂಸ್ಕೃತಿಕವಾದ ಒಂದು ಪುನರ್ ನಿರ್ಮಾಣ ಎನ್ನುವುದು ಅದರ ಪಾಡಿಗೆ ಅದು ಆಗುವುದಿಲ್ಲ. ಅದರ ಹಿಂದೆ ಬೇರೆ ಶಕ್ತಿಗಳು ಇರುತ್ತವೆ ಎನ್ನುವುದು ಗ್ರಾಂಶಿಯ

ವಾದ. ಆರ್ಥಿಕತೆಯಲ್ಲಿ ಒಂದು ನವೀಕರಣವು ಆಗದೆ ಸಾಂಸ್ಕೃತಿಕ ನವೀಕರಣವು ಆಗುವುದಿಲ್ಲ. ಇದನ್ನು ನೈತಿಕ ಹಾಗೂ ಬೌದ್ಧಿಕ ನವೀಕರಣ ಎಂದೂ ಕರೆಯಬಹುದು. ಬೌದ್ಧಿಕ ಮತ್ತು ನೈತಿಕ ನವೀಕರಣ ಎನ್ನುವುದು ಆರ್ಥಿಕವಾದ ಒಂದು ನವೀಕರಣವನ್ನು ಸೂಚಿಸುತ್ತದೆ. ಅದು ಅತ್ಯಂತ ಮುಖ್ಯವಾದ್ದು. ಅಷ್ಟೇ ಅಲ್ಲ ಅದು ಒಂದು ಸಮಾಜದಲ್ಲಿ ನಿರ್ದಿಷ್ಟವಾದ ಸಂಬಂಧವನ್ನು ಹೇಳುತ್ತದೆ.

ಮೆಕೆವೆಲ್ಲಿ ಮತ್ತು ಮಾರ್ಕ್ಸವಾದ

ರಾಜಕೀಯ ವಿಜ್ಞಾನ ಮತ್ತು ಚರಿತ್ರೆ ಎರಡೂ ಒಂದು ಅರ್ಥದಲ್ಲಿ ಮನುಷ್ಯ ಮತ್ತು ಅವನ ಅಸ್ತಿತ್ವದ ದ್ಯೋತಕವೂ ಆಗಿರುತ್ತದೆ, ಅವನನ್ನು ಹೊರತು ಮಾಡಿಕೊಂಡು ಈ ಎರಡೂ ವಿಜ್ಞಾನಗಳು ಬೆಳೆಯುವುದು ಸಾಧ್ಯವೇ ಇಲ್ಲ. ಇದರಲ್ಲಿ ಚರಿತ್ರೆಯೂ ಒಂದು ದ್ಯೋತಕ.

ಭಾಗ ೨

(ಮಾರ್ಕ್ಸವಾದಕ್ಕೆ ಸಂಬಂಧಪಟ್ಟ ಪರಿಕಲ್ಪನೆಗಳನ್ನು ಇಲ್ಲಿ ಕೊಡಲಾಗಿದೆ. ಇದು ಗ್ರಾಂಶಿಯ ಅಧ್ಯಯನಕ್ಕೆ ಪೂರಕವಾಬಹುದು. ಇದನ್ನು ನಾನು ನನ್ನ ಮಾರ್ಕ್ಸ್‌ವಾದಿ ಮೀಮಾಂಸೆಯಿಂದ ಆಯ್ದು ಕೊಂಡಿದ್ದೇನೆ)

ಯಜಮಾನಿಕೆ ಮತ್ತು ಸಾಂಸ್ಕೃತಿಕ ಪರಂಪರೆ

ರಾಜ ಮತ್ತು ಅವರ ಧರ್ಮದಲ್ಲಿ ದಂಡ ಮತ್ತು ನೀತಿ ಎರಡೂ ಇದೆ. ಆದರೆ ಅದು ಒಂದು ನಿಯಮವೂ ಹೌದು. ರಾಜ ಧರ್ಮ ಎನ್ನುವುದಕ್ಕೆ ಕೆಲವು ಮಿತಿಗಳೂ ಇವೆ. ರಾಜ ಮತ್ತು ಪ್ರಜೆಗಳ: ಸಂಬಂಧವು ಬೇರೆ ಥರ ಇರುತ್ತದೆ. ಜನರು ಕಷ್ಟವಾದರೆ ರಾಜನಲ್ಲಿ ಹೇಳುತ್ತಾರೆ. ಆದ್ದರಿಂದ ಜನರು ರಾಜನಲ್ಲಿ ನೀತಿಯನ್ನು ನಿರೀಕ್ಷೆ ಮಾಡುತ್ತಾರೆ. ದೇವರು, ರಾಜ ಮತ್ತು ಜನರ ಸಂಬಂಧವು ಈ ದೃಷ್ಟಿಯಿಂದ ಅತ್ಯಂತ ಮುಖ್ಯ. ರಾಜನಿಗೆ ಇರುವ ಧರ್ಮವನ್ನು ಜನರು ಅನುಸರಿಸಿದರೆ ಅದು ಅತ್ಯಂತ ಸಹಜವೂ ಆಗಿದೆ. ರಾಜ ಮತ್ತು ಅವನ ಯಜಮಾನಿಕೆಯನ್ನು ಅಂಗೀಕಾರ ಮಾಡುವುದು ಅವನು ಸಲಹುತ್ತಾನೆ ಎನ್ನುವ ಕಾರಣಕ್ಕೆ. ಇದನ್ನು ಆಳಿಸಿಕೊಳ್ಳುವ ಒಂದು ಪ್ರಜ್ಞೆ ಎಂದೂ ಹೇಳಬಹುದು. ಆಳಿಸಿಕೊಳ್ಳುವ ಪ್ರಜ್ಞೆ ಅತ್ಯಂತ ಸಂಕೀರ್ಣ. (ಗ್ರಾಂಶಿಯ ವಾದವನ್ನು ನೆನಪು ಮಾಡಿಕೊಳ್ಳುವುದು ಅಗತ್ಯ) ಆಧುನಿಕ ಕನ್ನಡ ಸಾಹಿತ್ಯದಲ್ಲಿ ಯಜಮಾನಿಕೆ ಮತ್ತು ಅದರ ರೂಪಗಳು ಬದಲಾಗಿವೆ. ತನ್ನನ್ನು ತಾನೇ ಒಂದು ಯಜಮಾನಿಕೆಗೆ ಅರ್ಪಿಸುವುದು ಒಂದು ಕ್ರಮ ಒಂದು ವರ್ಗವು ಮತ್ತೊಂದು ವರ್ಗವನ್ನು ತಾನೇ ಆಳುವುದು ಮತ್ತೊಂದು ಕ್ರಮ. ಆದರೆ ಆಳಿಸಿಕೊಳ್ಳುವ ಪ್ರಜ್ಞೆಗೆ ವಿವಿಧ ಆಯಾಮ ಇರುತ್ತದೆ. ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗಗಳು ಆಯಾ ಕಾಲಕ್ಕೆ ಬೇರೆಯಾಗಿವೆ. ಯಜಮಾನಿಕೆ ಮತ್ತು ಸಂಹಿತೆಗಳು ಬದಲಾಗುತ್ತವೆ. ಆದರೆ ಇದು ಜಾತಿಯಲ್ಲಿ ಇದು ಬೇರೆ ಥರ ವ್ಯಕ್ತವಾಗುತ್ತದೆ. ಜಾತಿ ಮತ್ತು ಅದರ ಜೊತೆಗೆ ಇರುವ ಉತ್ಪಾದನೆಯ ಸಂಗತಿಗಳನ್ನು ನಾವು ಅರ್ಥ ಮಾಡಬೇಕಾಗುತ್ತದೆ. ಅದಕ್ಕೂ ಒಂದು ನಿಯಮವು ಇದೆ. ಜಾತಿ ಮತ್ತು ಅದರ

ಪದ್ಧತಿಗೆ ಹಾಗೂ ಭಾರತೀಯ ಸಮಾಜಕ್ಕೂ ಒಂದು ಸಂಬಂಧವಿದೆ. ಸತ್ಯವೂ ಹೌದು. ಅದರ ಜೊತೆಗೆ ಜಾತಿಗಳ ನಡುವೆ ಸಂಬಂಧಗಳೂ ಇವೆ. ಭಾರತದಲ್ಲಿ ಹೀಗೆ ಸಾಂಸ್ಕೃತಿಕ ಪರಂಪರೆಗಳು ಬಂದಿವೆ.

ಥಿಯಾಡರ್ ಅಡರ್ನೊ:

ಇವನ ಕುರಿತು ಯಾರೂ ಹೆಚ್ಚು ಮಾತಾಡಿದ ಹಾಗೆ ಕಾಣುವುದಿಲ್ಲ. ಇದಕ್ಕೆ ಮಹತ್ವದ ಕಾರಣವೆಂದರೆ ಅವನು ಆಧುನಿಕತೆಯನ್ನು ಅದರ ದೌಬರ್ಲ್ಯವನ್ನು ಅತ್ಯಂತ ಚೆನ್ನಾಗಿಯೇ ವಿವರಿಸಿದವನೂ ಹೌದು. ಯಾರು ಮಾರ್ಕ್ಸವಾದವನ್ನು ವಿರೋಧಿಸುತ್ತಾರೆಯೋ ಅವರು ಅಡರ್ನೊ ಅಷ್ಟಾಗಿ ಇಷ್ಟ ಪಡುವುದು ಸಾಧ್ಯವಿರಲಿಲ್ಲ. ವಾಸ್ತವವಾಗಿ ಅವನು ಸಂಸ್ಕೃತಿಯ ಅರ್ಥವನ್ನು ವಿವಿಧ ಮಾದರಿಗಳಲ್ಲಿ ಹುಡುಕಲು ಹೊರಟವನು. ಆದರೆ ಅವನ ತಾತ್ವಿಕವಾದ ನಿಲುವನ್ನು ನಾವು ನೋಡು ಅಗತ್ಯವಿದೆ. ಇದರ ಕಾರಣವಿಷ್ಟೇ – ನಮಗೆ ಈ ಮಾದರಿಯಲ್ಲಿ ಯೋಚಿಸಲೇ ಬೇಕಾದ ವಿದ್ವಾಂಸರ ಅಗತ್ಯವಿದೆ. ನಾವು ಅತ್ಯಂತ ಸರಳವಾಗಿ ಯೋಚಿಸುವ ಪೂರ್ವ ಮತ್ತು ಪಶ್ಚಿಮ ಎನ್ನುವುದು ಹೆಚ್ಚು ದೂರ ಹೋಗಲಾರದು. ಅಡರ್ನೊ ಒಬ್ಬ ಸಂಗೀತದ ತಜ್ಞ, ಮತ್ತೊಂದು ಕಡೆಯಿಂದ ಅವನು ಪುನರುಜ್ಜೀವನ ಮತ್ತು ಅದರ ವಿರಾಟ್ ಸ್ವರೂಪವನ್ನು ಜಗತ್ತಿಗೆ ತಿಳಿಸಿಕೊಟ್ಟವನು. ಅವನು ಬುದ್ಧಿವಂತ. ಅವನ ಕಾಲ ೧೯೦೩– ೬೯. ಆದರೆ ಇಲ್ಲಿ ನಾವು ಮತ್ತೊಂದು ವಿಚಾರವನ್ನು ಗಮನಿಸಬಹುದು. ಗ್ರಾಂಶಿ, ಹೊರ್ಕೆಮಾರ್, ಅಡರ್ನೊ ಸಂಸ್ಕೃತಿ ಮತ್ತು ಅದರ ಪರಿಣಾಮವನ್ನು ವಿವರವಾಗಿ ಚರ್ಚೆ ಮಾಡಿದ್ದಾರೆ.

ಸಂಸ್ಕೃತಿ ಮತ್ತು ಕಾರ್ಮಿಕರ ಹೋರಾಟ

ಈಗ ಯಾರೂ ಬೇಕಾದರೂ ಸಂಸ್ಕೃತಿಯನ್ನು ಕುರಿತು ಹೇಳಬಹುದು. ತಮಗೆ ಬೇಕಾದಂತೆ ಸಂಸ್ಕೃತಿ ಪದವನ್ನು ಬಳಸಬಹುದು ಎನ್ನವಷ್ಟು ಈ ಪದವು ಸಡಿಲವಾಗಿದೆ. ಗ್ರಾಂಶಿಯು ಇದನ್ನು ಅಷ್ಟು ಸಲೀಸಾಗಿ ಸಂಸ್ಕೃತಿಯನ್ನು ಮಾತಾಡುವುದಿಲ್ಲ. ಸಂಸ್ಕೃತಿಯನ್ನು ಮಾರ್ಕ್ಸವಾದವು ಬಹಳ ದೊಡ್ಡದಾದ ನಿರೂಪಣೆಯಂತೆ ನೋಡುವುದಿಲ್ಲ. ಅದು ಅದರ ಉದ್ದೇಶವೂ ಅಲ್ಲ. ಆದರೆ ಅದನ್ನು ಅದು ಅನೇಕ ರೂಪಕಗಳ ಮೂಲಕವೂ ಮಾತಾಡುವುದಿಲ್ಲವೆಂದು ಅರ್ಥಮಾಡಿಕೊಳ್ಳುವುದು ಸೂಕ್ತ. ಸಂಸ್ಕೃತಿಯ ಚರ್ಚೆಗೆ ಯಾವುದೇ ರೀತಿಯ ಗೋಡೆಗಳೇ ಇಲ್ಲ. ಹಸಿವೆಯನ್ನು ಮಾತಾಡದೇ ಕೇವಲ ಸಂಸ್ಕೃತಿಯನ್ನು ಕುರಿತು ಮಾತಾಡುವುದು ಮಾರ್ಕ್ಸವಾದಕ್ಕೆ ಒಪ್ಪಿತವಲ್ಲ. ಆದರೆ ಸಂಸ್ಕೃತಿಯನ್ನು ಅನೇಕರು ಬೇರೆ ಬೇರೆ ಕಾರಣಗಳಿಗೆ ವೈಭವೀಕರಿಸುವುದು ಹೆಚ್ಚು. ಅನೇಕರು ಅದನ್ನು

ಜೀವನದ ಸರ್ವಸ್ವ ಎಂದೂ ಹೇಳುತ್ತಾರೆ. ಅದನ್ನು ಜೀವನದ ಅಂತಿಮವಾದ ಗುರಿಯೆಂದೂ ಹೇಳುತ್ತಾರೆ. ಆದರೆ ವಿಷಯವು ಹಾಗೆ ಅಲ್ಲ. ಅದು ಭಿನ್ನವಾದ ರೀತಿಯಲ್ಲಿ ಇದೆ. ಜೀವನ ಮತ್ತು ಮಾರುಕಟ್ಟೆ, ಜೀವನ ಮತ್ತು ಸಂಸ್ಕೃತಿ, ಜೀವನ ಮತ್ತು ಅದರ ಹಿನ್ನೆಲೆ, ಜೀವನ ಮತ್ತು ಅದರ ಆದರ್ಶ ಎಲ್ಲವೂ ಜೊತೆಗೆ ಸೇರಿಕೊಂಡು ಯಾವುದನ್ನು ಯಾವುದರಿಂದ ಹೇಗೆ ಬಿಡಿಸಿಕೊಳ್ಳಬೇಕು ಎನ್ನವುದೇ ಅರ್ಥವಾಗದ ಸ್ಥಿತಿಯು ಉಂಟಾಗಿದೆ. ಆದ್ದರಿಂದ ಅವನು ಸಂಸ್ಕೃತಿ ಮತ್ತು ಅದರ ಯಜಮಾನಿಕೆಯ ಸ್ವರೂಪವನ್ನು ಬೇರೆ ಥರ ಗ್ರಹಿಸುತ್ತಾನೆ. ಆದರಲ್ಲಿಯೂ ಆಧುನಿಕ ಪರಿಸ್ಥಿತಿಯು ಹೇಗೆ ಇದೆ ಎಂದು ಕೇಳಿದರೆ ಗುರುತಿಸುವುದು ಕಷ್ಟವಾಗಿದೆ. ಮಾರುಕಟ್ಟೆಯು ನಮ್ಮನ್ನು ಆವರಿಸಿಕೊಂಡಿದೆ. ಜೀವನದ ಅನೇಕ ಸಂಗತಿಗಳನ್ನು ಮಾರುಕಟ್ಟೆಯು ನಿಯಂತ್ರಿಸುವುದು ಮಾತ್ರವೇ ಅಲ್ಲ, ಮಾರುಕಟ್ಟೆಯು ಹತ್ತಿಯ ಗಿರಣಿಯನ್ನು ಮತ್ತು ಅದರ ಕಾರ್ಮಿಕರನ್ನು ಮಾತಾಡುವುದು ಬಿಟ್ಟು ಅದು ಹೆಚ್ಚಾಗಿ ಮಾರುಕಟ್ಟೆಯ ದಲ್ಲಾಳಿ ಸ್ವರೂಪದ ಮಾಧ್ಯಮವನ್ನು ನಂಬುತ್ತದೆ. ಹಸಿವೆಯನ್ನು ಮಾತಾಡುವುದು ಈಗ ಅಗತ್ಯವಿಲ್ಲವೆಂದು ಮಾರುಕಟ್ಟೆಯು ಹೇಳುತ್ತದೆ. ಅಭಿವೃದ್ಧಿ ಎಂದರೇನು ಅಂತ ಯಾರಾದರೂ ಹೇಳಲು ಹೊರಟರೆ ಅದರಲ್ಲಿ ಸಿಗುವುದು ಮಾರುಕಟ್ಟೆ ಮತ್ತು ಅದರ ವ್ಯಾಪಕವಾದ ಜಾಲ. ಅನೇಕರು ಹಸಿವೆಯನ್ನು ಮಾತಾಡುವುದು ಸಂಸ್ಕೃತಿ ಚಿಂತನೆಯಲ್ಲವೆಂದು ತಿಳಿದಿದ್ದಾರೆ. ಸಂಸ್ಕೃತಿಯ ಪ್ರಶ್ನೆ ಎನ್ನುವುದು ಒಂದು ಪದದಲ್ಲಿ ಮಾತ್ರವೆ ವಿವರಿಸಬೇಕಾದ ಸಂಗತಿಯು ಅಲ್ಲ. ಸುಖ, ದುಃಖ, ಕಲೆ, ಭಾಷೆ, ಮಾಧ್ಯಮ, ಲೈಂಗಿಕ ವ್ಯತ್ಯಾಸ ಮುಂತಾದವುಗಳು ಸಂಸ್ಕೃತಿಯ ಪ್ರಶ್ನೆಯೇ ಆಗಿದೆ. ಇದನ್ನು ಗಮನಿಸಿ ಅವನು ಸಂಸ್ಕೃತಿ ಮತ್ತು ಬುದ್ಧಿಜೀವಿಗಳನ್ನು ವಿವರಿಸುತ್ತಾನೆ. ಸಂಸ್ಕೃತಿ ಮತ್ತು ಅದರ ಸ್ಥಿತ್ಯಂತರಗಳು ಬೇರೆ ಬೇರೆ ಒತ್ತಡದಿಂದ ರೂಪು ಪಡೆಯುತ್ತದೆ. ಮತ್ತು ಅದನ್ನು ನಿಘಂಟಿನಲ್ಲಿ ನೋಡುವಂತೆ ನೋಡಲಾರೆವು. ಸಂಸ್ಕೃತಿ ಮತ್ತು ಅದರ ಬಗೆಗೆ ನಾವು ಮಾಡುವ ಅನೇಕ ಚರ್ಚೆಗಳು ಮೂಲಭೂತವಾಗಿ ಒಂದು ಗವಾಕ್ಷಿಯನ್ನು ಹೊಂದಿರುವುದಿಲ್ಲವೆನ್ನವುದರ ಅರಿವು ಮಾರ್ಕ್ಸವಾದಿಗಳಿಗೆ ಇದೆ. ಮತ್ತು ಅದನ್ನು ಯಾವುದಾದರೂ ರೀತಿಯಲ್ಲಿ ಸಂಸ್ಕೃತಿಯು ಬಹಳ ಮುಖ್ಯವಾದದು ಮತ್ತು ಅದನ್ನು ನಾವು ಅರ್ಥಮಾಡಿಕೊಳ್ಳುವಾಗ ಬೇರೆ ರೀತಿಯಲ್ಲಿ ನೋಡಬೇಕಾದ ಅಗತ್ಯವೇ ಇಲ್ಲವೆಂದು ಭಾವಿಸಿಕೊಳ್ಳುವವರು ಜಡರಾಗಿರುತ್ತಾರೆ. ಮತ್ತು ಅವರು ಒಂದು ವ್ಯವಸ್ಥೆಯ ಪರವಾಗಿಯೂ ಇರುತ್ತಾರೆ. ಒಬ್ಬ ವ್ಯಕ್ತಿಯನ್ನು ನೋಡಿ ಅವನು ಮಾತ್ರವೇ ಪ್ರತಿನಿಧಿಸುತ್ತಾನೆ ಎಂದು ಹೇಳುವಂತಿಲ್ಲ. ಸಂಸ್ಕೃತಿ ಮತ್ತು ಅದರ ಅಭಿವ್ಯಕ್ತಿಗಳು ಬೇರೆ ಬೇರೆ ಮಾಧ್ಯಮದಲ್ಲಿ ಬೇರೆ ಬೇರೆ ರೀತಿಯಲ್ಲಿ ಇರಲು ಸಾಧ್ಯ. ಆದರೆ

ಅದನ್ನು ಮಾತ್ರವೇ ನಾವು ಒಂದು ಮಾನದಂಡವೆಂದು ಪರಿಗಣಿಸಲು ಸಾಧ್ಯವಿಲ್ಲ. ಬೇರೆ ಬೇರೆ ವ್ಯಕ್ತಿಗಳು ಬೇರೆ ರೀತಿಯಲ್ಲಿ ಇರುತ್ತಾರೆ ಎಂದರೆ ಅವರ ವ್ಯಕ್ತಿತ್ವವು ಬೇರೆ ಮತ್ತು ಭಿನ್ನವಾಗಿದೆ ಎಂದು ಹೇಳಬಹುದು. ಆದರೆ ಅದಕ್ಕೆ ಸಂಸ್ಕೃತಿಯೊಂದೇ ಕಾರಣವಲ್ಲ. ಇದನ್ನು ನಾವು ವಿಶ್ಲೇಷಣೆ ಮಾಡುವಾಗ ಬಹಳ ಎಚ್ಚರದಲ್ಲಿ ಇರಬೇಕಾದ್ದು ಇದೇ ಕಾರಣಕ್ಕೆ. ಮತ್ತು ಸಂಸ್ಕೃತಿ ಮತ್ತು ಅದರ ಅಭಿವ್ಯಕ್ತಿಯು ಒಂದು ಮಾದರಿಯದು ಅಲ್ಲ. ಹಾಗು ಅದನ್ನು ಹೇಳುವಾಗ ನಾವು ಅನೇಕ ಭಿನ್ನತೆ ಮತ್ತು ವ್ಯಕ್ತಿತ್ವದ ನಡುವಣ ಸಂಘರ್ಷಗಳನ್ನೂ ಅರ್ಥಮಾಡಿಕೊಳ್ಳಬೇಕು. ಇದನ್ನು ಗ್ರಾಂಶಿಯು ಹೇಳುತ್ತಾನೆ. ಅನೇಕ ಜನರು ಮತ್ತು ಅವರ ವ್ಯಕ್ತಿತ್ವವನ್ನು ತೂಗಿ ಅಳೆಯಲು ನಮ್ಮ ಬಳಿಯಲ್ಲಿ ಸರಳವಾದ ಮಾರ್ಗ ಎನ್ನವುದೂ ಇಲ್ಲ. ಅನೇಕ ರೀತಿಯ ಭಿನ್ನತೆಯಿಂದಲೇ ವ್ಯಕ್ತಿತ್ವವು ರೂಪುಗೊಳ್ಳುತ್ತದೆ. ಅದು ನಾವು ಮತ್ತೆ ದೂರವಿಡುವಂತೆ ಇಲ್ಲವೆಂದು ನೀಶೆಯು ಹೇಳುತ್ತಾನೆ. ಆದರೆ ಇದನ್ನೂ ನಾವು ಯೋಚಿಸಬೇಕು. ಪ್ರಭುತ್ವವು ತನಗೆ ಬೇಕಾದಂತೆ ಕಾನೂನು ಮಾಡುತ್ತದೆ. ಮತ್ತು ಅದರ ಎದುರು ಎಲ್ಲರೂ ಒಂದೇ. ಆದರೆ ಕಾನೂನು ಒಂದು ಅತ್ಯಂತ ಕ್ರಾಂತಿಕಾರಕ ಮತ್ತು ಅದರಿಂದಲೇ ನಿಜವಾದ ಸಮಾನತೆಯು ಸಾಧ್ಯವೆಂದು ಹೇಳಲಾಗಿತ್ತು. ಆದರೆ ಅದು ಆಗಲಿಲ್ಲ. ಬಹುತೇಕ ಜನರ ವಿಶ್ವಾತ್ಮಕವಾದ ನಂಬಿಕೆಯನ್ನೂ ನಾವು ಇದೇ ಹಿನ್ನೆಲೆಯಲ್ಲಿ ಪರಿಶೀಲಿಸಬೇಕಾಗುತ್ತದೆ. ಒಂದು ನಿರ್ದಿಷ್ಟವಾದ ಸಾಂಸ್ಕೃತಿಕ ಹಿನ್ನಲೆಯನ್ನು ನಾವು ಈಗ ಪರಿಶೀಲಿಸಬೇಕಾದ ಅಗತ್ಯವೂ ಇದೆ. ಗ್ರಾಂಶಿಯ ಯಜಮಾನಿಕೆ, ಬುದ್ಧಿಜೀವಿಗಳು ಹಾಗೂ ವಾರ್ ಆಫ್ ಪೊದಿಶನ್ ಇದನ್ನು ವಿವರವಾಗಿ ಚರ್ಚೆ ಮಾಡಿದೆ.ಅದೇ ರೀತಿಯಲ್ಲಿ ಕಾನೂನು ಮತ್ತು ಪ್ರಭುತ್ವ ಹಾಗೂ ಸಂಸ್ಕೃತಿಗಳ ನಡುವೆ ಇರುವ ಸಂಬಂಧದ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಬೇಕಾದ ಅಗತ್ಯವೂ ಇದೆ. ಹಾಗೆ ನೋಡುವುದಿದ್ದರೆ ಯಾವುದೇ ಸಂಸ್ಕೃತಿಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾದರೆ ಚರಿತ್ರೆಯ ಖಚಿತವಾದ ಅರಿವು ಇರಬೇಕಾದ ಅಗತ್ಯಎದೆ. ಉಪ ಸಂಸ್ಕೃತಿ ಮತ್ತು ಅದರ ವಿವಾದಗಳನ್ನು ನಾವು ಚರಿತ್ರೆಯ ಅರಿವಿನಲ್ಲಿಯೇ ಮಾಡಬೇಕಾಗುತ್ತದೆ. ಆಯಾ ಕಾಲಘಟ್ಟದಲ್ಲಿ ಉಪ ಸಂಸ್ಕೃತಿಯ ಪ್ರಶ್ನೆಯು ಬರುತ್ತದೆ. ಅದು ಇದ್ದಕ್ಕಿದ್ದಂತೆ ಹುಟ್ಟುವ ಪ್ರತಿಕ್ರಿಯೆಯೂ ಅಲ್ಲ. ಅದನ್ನು ನಾವು ರಾಜಕೀಯವಾದ ಹಿನ್ನೆಲೆಯಲ್ಲಿಯೂ ನೋಡಬಹುದು. ಆದರೆ ಅನೇಕರು ಭಾವಿಸುವ ಹಾಗೆ ಉಪಸಂಸ್ಕೃತಿಯ ಪ್ರಶ್ನೆಯನ್ನು ಅನೇಕರು ಒಂದು ಬದಲಾಗದ ಪ್ರಕ್ರಿಯೆ ಎಂದು ಭಾವಿಸುತ್ತಾರೆ. ಅದಕ್ಕೆ ಯಾವುದೇ ರೀತಿಯ ಒಂದು ಸ್ಥಿರವಾದ ಅರ್ಥವೂ ಇಲ್ಲ. ಆದರೆ ಯಾವುದನ್ನು ನಾವು ಮತ್ತೆ ಸಂಸ್ಕೃತಿಯೆಂದು ಕರೆಯುತ್ತಾ ಬಂದಿದ್ದೇವೆಯೋ ಅದನ್ನು ಈಗ ಸಂಪ್ರದಾಯ, ಜೀವನ ಕ್ರಮ, ಪರಂಪರೆ

ಎಂದು ಹೇಳುತ್ತಾ ಬಂದಿದ್ದೇವೆ. ಸಿನಿಮಾ ಕೂಡಾ ಮತ್ತೆ ಸಂಸ್ಕೃತಿಯನ್ನು ರೂಪಿಸಿದೆ. ಆದರೆ ಅದನ್ನು ಸಂಪ್ರದಾಯವಾದಿಗಳು ನಿರಾಕರಿಸುತ್ತಾ ಬಂದಿದ್ದಾರೆ. ಆಧುನಿಕ ಸಿನಿಮಾಗಳು ಹೇಗೆ ಇವೆ ಮತ್ತು ಅದರ ಸ್ವರೂಪವು ಏನು ಅವನಿಗೆ ಹೆಚ್ಚು ಮುಖ್ಯವಾಗಿತ್ತು. (ಅಮೇರಿಯಕಾಸಿಂ ಮತ್ತು ಫೋರ್ಡಿಸಂನಲ್ಲಿ ಚರ್ಚೆ ಮಾಡಿದ್ದಾನೆ) ಅದೇ ರೀತಿಯಲ್ಲಿ ಸಂಪ್ರದಾಯವಾದೀ ಬೂರ್ಜ್ವಾಗಳು ಸಂಸ್ಕೃತಿಯನ್ನು ಹೇಳುವ ಕ್ರಮವೇ ಬೇರೆ. ಅವರು ಎತ್ತಿಕೊಳ್ಳುವ ಪ್ರಶ್ನೆಗಳು ವಾಸ್ತವವಲ್ಲ. ಮತ್ತು ಅದು ಪ್ರಯೋಗಕ್ಕೆ ಸಂಬಂಧ ಪಟ್ಟದ್ದೂ ಅಲ್ಲ. ಸಂಸ್ಕೃತಿಯೆನ್ನವುದು ಕಲ್ಪಿತವಲ್ಲ. ಅದು ನಾವು ಹೇಳುವ ಕತೆಯೂ ಅಲ್ಲ. ಸಂಸ್ಕೃತಿಯು ಹುಟ್ಟಿಕೊಳ್ಳುವುದು ಸಾಮಾಜಿಕ ವ್ಯವಸ್ಥೆಯ ಭಾಗವಾಗಿ. ಸಂಸ್ಕೃತಿ ಮತ್ತು ಅದರ ವ್ಯಾಖ್ಯಾನಗಳನ್ನು ಸಂಪ್ರದಾಯಿಕರು ಈ ದೃಷ್ಟಿಯಿಂದ ಚಲನವಿಲ್ಲದ ಸಂಸ್ಕೃತಿಯಂತೆ ಚರ್ಚಿಸುತ್ತಾರೆ. ಸಾಂಸ್ಕೃತಿಕ ಬಹುತ್ವವು ಅನೇಕ ಸಂದರ್ಭದಲ್ಲಿ ವಿಶ್ವಾತ್ಮಕತೆಯನ್ನು ಸೂಚಿಸುವುದೂ ಇಲ್ಲ. ಸಂಸ್ಕೃತಿ ಸಿದ್ಧಾಂತವು ಸಂಸ್ಕೃತಿಯನ್ನು ಮಾತ್ರವೇ ಕೇಂದ್ರವಾಗಿ ಇರಿಸಿಕೊಳ್ಳುವುದರ ಕುರಿತು ಹೇಳುವ ಬರೀ ಮಾತುಗಳನ್ನು ನೋಡಿದರೆ ಅದಕ್ಕೆ ಯಾವ ಅರ್ಥವೂ ಇಲ್ಲ. ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಸ್ನೆಯನ್ನು ಬರೀ ಸ್ವಾಯತ್ತ ಪ್ರಶ್ನೆಗಳು ಎಂದು ಭಾವಿಸಬೇಕಾಗಿಲ್ಲ. ಒಂದು ಕೃತಿಯನ್ನು ನಾವು ನಿರ್ಧರಿಸಲು ಸಂಸ್ಕೃತಿಯನ್ನು ಮಾತ್ರವೇ ಮಾನದಂಡವಾಗಿ ಇರಿಸಿಕೊಳ್ಳಬೇಕಾಗಿಲ್ಲ. ಹಾಗೇ ಸಂಸ್ಕೃತಿಯ ಹೆಸಎನಲ್ಲಿ ಅರಾಜಕತೆಯೂ ಬೇಕಾಗಿಲ್ಲ. ಕೃತಿಯೊಂದರ ಆನ್ವಯಿಕತೆಯೆಂದರೆ ಅದು ಪ್ರಮೇಯವೂ ಅಲ್ಲ. ಸಂಸ್ಕೃತಿಯ ಕುರಿತು ನಾವು ಕೆಲವು ಪ್ರಮೇಯವನ್ನು ರಚಿಸಿಕೊಂಡು ಅದರ ಆಧಾರದ ಮೇಲೆ ಕೃತಿಯನ್ನು ವಿವರಿಸುವುದು ಸರಿಯಾದ ಕ್ರಮವೂ ಅಲ್ಲ. ಸಾಂಸ್ಕೃತಿಕ ಎಡವೆಂದರೆ ಅದು ವಿಶ್ವಾತ್ಮಕ. ಅದರಲ್ಲಿ ಸಂಸ್ಕೃತಿಯ ಪ್ರಶ್ನೆಯನ್ನು ಸಣ್ಣ ವಿವರಣೆಯೆಂದು ಭಾವಿಸಬೇಕಾಗಿಲ್ಲ. ಅದು ಬಂಡವಾಳವಾದದ ಸ್ವರೂಪವನ್ನು ವಿರೋಧಿಸುತ್ತದೆ. ಮಾರ್ಕ್ಸವಾದಿ ವಿವರಣೆಯನ್ನು ನಾವು ಸ್ಥಳೀಯತೆಯನ್ನು ಆಧರಿಸಿಕೊಂಡದ್ದು ಎಂದು ಹೇಳಬೇಕಾಗಿಲ್ಲ. ಈ ದೃಷ್ಟಿಯಿಂದ ಸಂಸ್ಕೃತಿಯನ್ನು ವಿವರಿಸುವಾಗ ಜಾಗತಿಕ ವಿದ್ಯಮಾನವನ್ನು ಕೂಡಾ ಗಮನಿಸುವುದು ಅವಶ್ಯಕ. ಈಗಿನ ನಮ್ಮ ಪರಿಸ್ಥಿತಿಯು ಹೇಗಿದೆ ಎಂದರೆ ಜಾಗತಿಕ ಬಂಡವಾಳವಾದವು ನಮ್ಮನ್ನು ಆಕ್ರಮಿಸಿದೆ. ಉದಾರವಾದಿಗಳು ಸಂಸ್ಕೃತಿಯನ್ನು ಮತ್ತು ಅಧಿಕಾರವನ್ನು ಪ್ರತ್ಯೇಕವೆಂದು ಹೇಳುತ್ತಾರೆ. ಮನುಷ್ಯನ ಸಾಂಪ್ರದಾಯಿಕ ನಂಬಿಕೆ ಮತ್ತು ಪ್ರಗತಿಪರತೆಗೆ ಸಂಘರ್ಷವಿದೆ. ವಾಸ್ತವವಾಗಿ ಬಂಡವಾಳವಾದವು ನಿರ್ದಿಷ್ಟವಾಗಿ ಯಾವುದನ್ನೂ ಹೇಳುವುದಿಲ್ಲ. ಅದು ಸಂಸ್ಕೃತಿಯನ್ನು ಒಂದು ಸರಕು ಎಂಬಂತೆ ನೋಡುತ್ತದೆ. ಬೇರೆ ಬೇರೆ ಸಂಸ್ಕೃತಿಯು ಅದಕ್ಕೆ ಕಚ್ಚಾ ಸಾಮಾಗ್ರಿ ಮಾತ್ರವೇ ಆಗಿದೆ. ಮನುಷ್ಯ ಯಾವಾಗ ಸಂಸ್ಕೃತಿಯನ್ನು ನಿಸರ್ಗಕ್ಕೆ

ವಿರುದ್ಧವಾಗಿ ಕಟ್ಟಿದನೋ ಅಲ್ಲಿಂದ ಚರ್ಚೆಯು ಪ್ರಾರಂಭವಾಗಿದೆ. ಸಂಸ್ಕೃತಿಯನ್ನು ಅನೇಕರು ಯಾವುದೇ ರೀತಿಯಿಂದ ಮಡಿಚಿದ ಸಂಗತಿಯೆಂದು ಹೇಳುತ್ತಾರೆ. ಆದರೆ ಅದಕ್ಕೆ ನೈತಿಕ ಮತ್ತು ರಾಜಕೀಯವಾದ ಪಾತ್ರವೆನ್ನುವುದೂ ಇದೆ ಎನ್ನುವುದು ಮಾರ್ಕ್ಸ್‌ವಾದದ ನಿಲುವಾಗಿದೆ. ಅನೇಕ ಸಾಂಸ್ಕೃತಿಕ ಸಿದ್ಧಾಂತಗಳು ಸಂಸ್ಕೃತಿಯನ್ನು ಅಧ್ಯಯನ ಮಾಡುವಾಗ ಅದರ ಭೌತಿಕ ಸಂಗತಿಯೂ ಅಗತ್ಯವೆನ್ನುವುದನ್ನು ಮರೆತಿರುತ್ತವೆ. ಸಂಸ್ಕೃತಿಗೆ ತಾರ್ಕಿಕತೆಯು ಇಲ್ಲವೆಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಸಮಸ್ಕೃತಿ ಮತ್ತು ಅದರ ಸ್ವರೂಪವನ್ನು ಅನೇಕರು ತಾರ್ಕಿಕದ ಸಂಗತಿಯೆಂದು ಹೇಳಬೇಕಾಗಿಲ್ಲ. ಆದರೆ ಅದಕ್ಕೂ ಅದರದೇ ಆದ ಕ್ರಿಯಾತ್ಮಕ ಸ್ವರೂಪವೂ ಇದೆ. ನಮ್ಮ ಕೆಲಸಗಳು ಸಮಾಜದಲ್ಲಿ ಮುಖ್ಯವಾಗಿವೆ. ನಾವು ಯಾವಾಗ "ಆಗಿದ್ದೇವೆಯೋ" ಆಗ ಅದರ ಅರ್ಥಗಳು ಭಿನ್ನವಾಗುತ್ತದೆ. ಮತ್ತು ಅದೇ ಪ್ರಶ್ನೆಯು ಸಂಸ್ಕೃತಿಗೂ ಅನ್ವಯವಾಗುತ್ತದೆ. ಸಂಸ್ಕೃತಿಯು ಮನುಷ್ಯತ್ವಕ್ಕಿಂತ ಹೊರಗೆ ಇಲ್ಲ. ಅದು ಸಾದ್ಯವೂ ಇಲ್ಲ. ಬೇರೆ ಬೇರೆ ಚಾರಿತ್ರಿಕ ಸನ್ನಿವೇಶದಲ್ಲಿ ಮನುಷ್ಯರಾಗಿ ನಾವು ಬೇರೆ ಬೇರೆ ಕಾರ್ಯವನ್ನು ನಿರ್ವಹಿಸುತ್ತೇವೆ. ಮತ್ತು ಅದು ನಮ್ಮ ಅಗತ್ಯವೂ ಹೌದು. ಆದುದರಿಂದ ಯಾವುದನ್ನು ನಾವು ಮನುಷ್ಯತ್ವವೆಂದು ಹೇಳುತ್ತೇವೆಯೋ ಅದನ್ನು ನಾವು ನಿರ್ದಿಷ್ಟವಾಗಿ ಗುರುತಿಸಬೇಕಾಗುತ್ತದೆ. ನಮಗಿರುವ ಕೌಶಲಕ್ಕೂ ಚಾರಿತ್ರಿಕ ಸನ್ನಿವೇಶಕ್ಕೂ ಸಂಬಂಧವಿದೆ. ಆದುದರಿಂದ ನಾವು ಯಾವುದನ್ನು ಮಾಡುತ್ತಿದ್ದೇವೆಯೋ ಅದು ನಮ್ಮ ಅಗತ್ಯ. ಮನುಷ್ಯತ್ವ ಮತ್ತು ಸಂಸ್ಕೃತಿಯ ಚರ್ಚೆಯನ್ನು ಈ ಅರ್ಥದಲ್ಲಿಯೇ ಮಾಡಬೇಕಾಗುತ್ತದೆ.

ನಡವಳಿಕೆ

ಮನುಷ್ಯರ ನಡವಳಿಕೆಯು ಯಾವಾಗಲೂ ಒಂದು ಸೀಮಿತ ಚೌಕಟ್ಟು ಅಲ್ಲ. ನಮ್ಮ ನಡವಳಿಕೆಗಳು ಭೌತಿಕ ಮತ್ತು ಮಾನಸಿಕವೂ ಹೌದು. ಮನುಷ್ಯನು ಪ್ರಾಣಿಯಲ್ಲ. ಪ್ರಾಣಿಯನ್ನು ನಾವು ಸಂಸ್ಕೃತಿಯ ವಕ್ತಾರವೆಂದು ಹೇಳುವಂತೆ ಇಲ್ಲ. ಅದು ಸಂಸ್ಕೃತಿಯನ್ನು ಕಟ್ಟುವುದೂ ಇಲ್ಲ. ಯಾವ ಮನುಷ್ಯನು ಪ್ರಾಣಿಯಂತೆ ವರ್ತಿಸುತ್ತಾನೆಯೋ ಅವನನ್ನು ನಾವು ಕಾಡು ಮೃಗವೆಂದು ಹೇಳುತ್ತೇವೆ. ವ್ಯಕ್ತಿ ಮತ್ತು ವ್ಯಕ್ತಿಯ ನಡುವೆ ಇರುವ ಅಂತರವೇ ಮನುಷ್ಯತ್ವದ ಲಕ್ಷಣ. ಆದರೆ ಆ ಭಿನ್ನತೆಯನ್ನು ನಾವು ಗ್ರಹಿಸುವಾಗ ಭಿನ್ನತೆಯು ಯಾವ ಕಾರಣಕ್ಕೆ ಬಂದಿದೆ ಎಂದೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅಂತರವು ರಚಿತವಾಗಿದೆ. ಭಿನ್ನತೆಯು ರೂಪಿತವಾಗಿದೆ. ಅದನ್ನು ಸಹಜವೆಂದು ಹೇಳುವುದಕ್ಕಿಂತ ಬೇರೆ ರೀತಿಯಲ್ಲಿಯೂ ನೋಡಿ ಒಂದು ನಿಲುವಿಗೆ ಬರುವುದು ಅಗತ್ಯ. ಸಹಜತೆ ಮತ್ತು ಕಟ್ಟುವಿಕೆ ಎರಡೂ ನಮ್ಮ ನಡುವೆ ಇದೆ. ಮನುಷ್ಯರ ಸ್ವಭಾವ ಎನ್ನುವುದು ಕ್ರಿಮಿಗಳ

ರೀತಿಯಲ್ಲಿ ಅಲ್ಲ. ಅದು ನಮ್ಮ ನಡತೆಗೆ ಸಂಬಂಧಪಟ್ಟಿದೆ. ಆದ್ದರಿಂದ ನಮ್ಮ ನಿಜವಾದ ನಡವಳಿಕೆಯು ಹುಟ್ಟಿಕೊಳ್ಳುವುದು ನಮ್ಮನ್ನು ನಾವು ಅರ್ಥ ಮಾಡಿಕೊಂಡಾಗ ಮಾತ್ರವೇ. ಜೂಡೋ ಕ್ರಿಶ್ಚಿಯನ್ ನಂಬಿಕೆಯು ಜೀವನ ಮತ್ತು ಪ್ರೇಮವನ್ನು ಒಂದು ಸಮಪಾತಳಿಯಲ್ಲಿ ನೋಡುತ್ತದೆ. ಇನ್ನೊಬ್ಬರನ್ನು ಉದಾರವಾಗಿ ನಡೆಸಿಕೋ ಎಂದು ಅದು ಹೇಳುತ್ತದೆ. ಅದರ ಪ್ರಕಾರ ನೀತಿಯೆಂದರೆ ಸಮಾಜವಾದವಲ್ಲ. ಒಂದು ಹಂತದಲ್ಲಿ ಅದು ಜೀವನ ಮತ್ತು ಪ್ರೇಮ, ನೀತಿ ಮತ್ತು ಪಾಪ ನಿವೇದನೆ ಮುಂತಾದವುಗಳನ್ನು ಅದು ರಾಜಕಾರಣಗೊಳಿಸಿದೆ. ಆದರೆ ಒಂದು ಹಂತದಲ್ಲಿ ನಮ್ಮ ಜೀವನಕ್ಕೆ ನಮ್ಮದೇ ಆದ ಘನತೆಯು ಇದೆ ಎಂದು ಅರಿಸ್ಟಾಟಲ್ ಹೇಳುತ್ತಾನೆ. ಆ ಘನತೆಯು ನಮ್ಮನ್ನು ಪ್ರಾಣಿಗಳಿಗಿಂತ ಭಿನ್ನವಾಗುವಂತೆ ನೋಡಿದೆ. ವ್ಯಕ್ತಿ ಮತ್ತು ವ್ಯಕ್ತಿಗಳ ನಡುವೆ ಇರುವ ಸಂಬಂಧಗಳು ಈ ಘನತೆಯನ್ನು ಸೂಚಿಸುತ್ತದೆ. ಈ ಘನತೆಯೇ ವಾಸ್ತವವಾಗಿ ನಮ್ಮ ಸಂಬಂಧಗಳನ್ನು ಸೂಚಿಸುತ್ತದೆ. ಕೊಡುಕೊಳ್ಳುವಿಕೆಗೆ ಸಂಬಂಧ ಪಟ್ಟದ್ದೂ ಹೌದು. ನಾವು ಇದನ್ನು ಅನುಸರಿಸಿದಾಗ ಮಾತ್ರವೇ ಸಮಾಜವಾದ ಸಾಧ್ಯವಾಗುತ್ತದೆ. ಆದರೆ ಅನೇಕರು ಈ ರೀತಿಯ ಸಂಬಂಧವನ್ನು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದಲೇ ಅನೇಕರಿಗೆ ಸಮಾಜವಾದದ ಬಗ್ಗೆ ಗೌರವವಿಲ್ಲ. ಉದಾರವಾದಕ್ಕಿಂತ ಸಮಾಜವಾದವು ಯಾಕೆ ಮುಖ್ಯವಾಗಿದೆ ಎಂದರೆ ಅದು ಮನುಷ್ಯತ್ವವನ್ನು ಗೌರವದಿಂದ ಕಾಣುತ್ತದೆ. ಉದಾರವಾದವು ಮಾತ್ರ ವ್ಯಕ್ತಿಯನ್ನು ಕರುಣೆಯಿಂದ ಕಾಣುತ್ತದೆ. ಆದರೆ ಆ ಮೂಲಕ ವ್ಯವಸ್ಥೆಯನ್ನು ಸ್ವಲ್ಪ ಮಟ್ಟಿಗೆ ಒಪ್ಪಿಕೊಳ್ಳುತ್ತದೆ. ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಉದಾರವಾಗಿ ಕಾಣುವುದರಿಂದ ಮತ್ತು ವ್ಯಕ್ತಿಯು ಹಣವನ್ನು ಇನ್ನೊಬ್ಬನಿಗೆ ದಾನ ಮಾಡುವುದರಿಂದ ಯಾವ ಅರ್ಥವೂ ಉಳಿಯುವುದೂ ಇಲ್ಲ. ದಾನವೇ ಮುಖ್ಯವಲ್ಲ. ಉದಾರವಾದವು ಜೀವನವನ್ನು ನೋಡುವ ಕ್ರಮವು ಬೇರೆ. ಅದು ಜೀವನದ "ಒಳ್ಳೆಯತನವನ್ನು" ಮಾತ್ರವೇ ಪರಿಗಣಿಸುತ್ತದೆ. ಆದರೆ ಅದು ಹೇಳುವಂತೆ ನಮ್ಮ ಜೀವನವು ಇರುವುದಿಲ್ಲ. ಸ್ವಂತಿಕೆ ಮತ್ತು ಉದಾರತೆಯು ಆಧುನಿಕ ಯಗದಲ್ಲಿ ಬೇರೆಯಾಗಿದೆ. ಆಧುನಿಕ ಯಗದ ನಮ್ಮ ವ್ಯಕ್ತಿತ್ವವು ಒಂದು ಅರ್ಥದಲ್ಲಿ ಚಲ್ಲಾಪಿಲ್ಲಿಯಾಗಿದೆ. ಮತ್ತೊಂದು ಕಡೆಗೆ ನಾವು ಕೆಲಸವು ವಿಷಯಗಳಲ್ಲಿ ಮಾತ್ರವೇ ಪರಿಣಿತಿಯನ್ನು ಸಾಧಿಸಿದ್ದೇವೆ. ನಮ್ಮ ವ್ಯಕ್ತಿತ್ವದಲ್ಲಿಯೇ ಅನೇಕತೆಯೂ ಇದೆ. ಆಧುನಿಕ ಯುಗದಲ್ಲಿ ನಾವು ತೆಗೆದುಕೊಳ್ಳುವ ನಿರ್ಧಾರಗಳು ವಿಶಿಷ್ಟವಾದ ತಜ್ಞತೆಗೆ ಸಂಬಂಧಪಟ್ಟಿರುವುದೂ ಅಷ್ಟೇ ನಿಜ. ಆಧುನಿಕ ಯುಗದ ನಮ್ಮ ನಿರ್ಧಾರಗಳೂ ಹಾಗೇ ಇವೆ. ನಾವು ಯಾವ ಕ್ಷೇತ್ರದಲ್ಲಿ ಪರಿಣಿತಿಯನ್ನು ಸಾಧಿಸಿದ್ದೇವೆಯೋ ಅದಕ್ಕೆ ಅನುಸಾರವಾಗಿ

ಬದುಕುತ್ತಿದ್ದೇವೆ. ಈ ದೃಷ್ಟಿಯಿಂದ ನಮ್ಮ ಆಧುನಿಕ ಚಿಂತನೆಗಳನ್ನು ಮತ್ತು ನಮ್ಮ ನೀತಿಗಳನ್ನು ಸಾಂಪ್ರದಾಯಿಕವಾಗಿ ನೋಡಲು ಬರುವುದೂ ಇಲ್ಲ.

ಸನ್ನಿವೇಶ

ಮನುಷ್ಯ ಮತ್ತು ಅವನ ದೇಹವು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ವಿವರಿಸುವಾಗ ಗ್ರಾಂಶಿಯು ಇದನ್ನೂ ವಿವರಿಸಿದ್ದಾನೆ. ಅವನು ಪರಿಸರ ಮತ್ತು ಅದರ ಪರಿಣಾಮಗಳನ್ನು ಹೇಳಿದ್ದಾನೆ. ಸನ್ನಿವೇಶ ಎನ್ನುವುದು ಹೆಚ್ಚು ಪ್ರಭಾವಶಾಲಿಯೂ ಆಗಿದೆ ಎನ್ನುವುದು ಅವನ ನಿಲುವು. ಅದರಲ್ಲಿಯೂ ಯಾರು ದೈಹಿಕ ಕೆಲಸವನ್ನು ಮಾಡುತ್ತಾರೆಯೋ ಅವರ ಮೇಲೆ ಗತದ ಚರಿತ್ರೆಯು ಪ್ರಭಾವವನ್ನು ಬೀರುತ್ತದೆ.

ವಸ್ತುನಿಷ್ಟ

ನಮ್ಮ ಖಾಸಗಿ ಜೀವನದಲ್ಲಿ ಯಾವುದು ನಿಜವಾಗಿಯೂ ವಸ್ತು ಮತ್ತು ಯಾವುದು ನಿಜವಾಗಿಯೂ ವಿಷಯ? ವಿಷಯನಿಷ್ಟ ಮತ್ತು ವಸ್ತುನಿಷ್ಟವೆಂದು ಅಂಗೀಕರಿಸುವುದು ಹೇಗೆ? ಈ ಪ್ರಶ್ನೆಯನ್ನು ಗ್ರಾಂಶಿಯು ಕೇಳುತ್ತಾನೆ. ಅವನು ಇದನ್ನು ಮೂಲಭೂತವಾದ ಒಂದು ಪ್ರಶ್ನೆ ಎಂದು ಹೇಳುತ್ತಾನೆ ಇದರ ಚರ್ಚೆಯಲ್ಲಿ ಕೆಲವು ನೈಸರ್ಗಿಕ ಕಾನೂನೂ ಇರುತ್ತದೆ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಮತ್ತೊಂದು ಅಂಶವನ್ನು ಅವನು ಸೂಚಿಸುತ್ತಾನೆ. ಪರಿಸರ, ಕುಟುಂಬ ಮತ್ತು ಅದರ ಸಂಬಂಧಿಸಿದ ಸಂಗತಿಗಳು ಭಾವನಾತ್ಮಕ ಸಂಗತಿಗಳು ಇರುತ್ತವೆ. ಆಧುನಿಕತಾವಾದಿಗಳು ಇವುಗಳನ್ನು ಪ್ರತ್ಯೇಕವೆಂದು ಹೇಳುತ್ತಾರೆ. ಅವರು ವ್ಯಕ್ತವಾದುದನ್ನು ಮಾತ್ರವೇ ಬಹಳ ಮುಖ್ಯವೆಂದು ನಿರೂಪಿಸುತ್ತಾರೆ ಕೂಡಾ. ಅಭಿವ್ಯಕ್ತಿ ಮತ್ತು ಅದರ ಕಾರ್ಯ ನಿರ್ವಹಣೆಗಳನ್ನು ಮಾತ್ರವೇ ಮುಖ್ಯವೆಂದು ನಿರೂಪಿಸಲು ಯತ್ನಿಸುತ್ತಾರೆ. ಯಾವಾಗಲೂ ಅಭಿವ್ಯಕ್ತಿ ಮತ್ತು ಅದರ ನಿರೂಪಣೆಗಳು ಹಾಗೂ ಕಾರ್ಯ ರೂಪಗಳು ಭಿನ್ನವಾಗಿರುತ್ತವೆ ಯಾವುದನ್ನು ನಾವು ಕಾರ್ಯವೆಂದು ಹೇಳುತ್ತೇವೆಯೋ ಅದು ನಮ್ಮಲ್ಲಿ ಹೇಗೆ ರೂಪುಗೊಳ್ಳುತ್ತದೆ ಎನ್ನುವುದು ನಿಜವಾದ ಪ್ರಶ್ನೆ. ಕಲೆ ಮತ್ತು ಅದರ ವಾಸ್ತವೀಕರಣವು ಯಾವಾಗಲೂ ಬಹಳ ಮುಖ್ಯವೇ ಆಗಿದೆ. ಮಾನವೀಯ ಸಂಗತಿಗಳನ್ನು ನಾವು ಕಲೆಯಲ್ಲಿ ಹೇಳುವಾಗ ಅದು ಸ್ಥಳಾಂತರ ಹೊಂದುತ್ತದೆ. ಹೀಗೆ ಸ್ಥಳಾಂತರ ಹೊಂದುವಾಗ ಅದು ಪ್ರತ್ಯೇಕವಾಗಿ ಕಂಡರೂ ಆಶ್ಚರ್ಯವೇನಿಲ್ಲ. ಕೃತಿಯಲ್ಲಿ ವ್ಯಕ್ತವಾಗುವ ಪ್ರಾತಿನಿಧೀಕರಣವೇ ಮೂಲತಃ ಸ್ವಯಂ ಸಂಪೂರ್ಣವಾದಂತೆ ಅನಿಸಿದರೆ ಅದು ಅದರ ಸಹಜ ಗುಣದಿಂದ ಮಾತ್ರ. ಕಲಾತ್ಮಕತೆ ಎಂದರೆ ಅದು ಉದ್ದೇಶ

ರಹಿತವೆಂದು ನಾವು ಹೇಳಬೇಕಾಗಿಲ್ಲ. ಅದಕ್ಕೂ ಒಂದು ಉದ್ದೇಶವಿರುತ್ತದೆ ಮತ್ತು ಅದಕ್ಕೆ ತಕ್ಕಂತೆ ಅದು ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದಲೇ ಮಾರ್ಕ್ಸವಾದಿಗಳು ಕಲೆಯು ಕೂಡಾ ಮನುಷ್ಯರ ಹತ್ತಿರ ಹೋಗಬೇಕಾದುದರ ಅಗತ್ಯವನ್ನು ಎತ್ತಿ ಹಿಡಿಯುತ್ತಾರೆ. ಹಾಗಿದ್ದರೆ ನಮ್ಮ ಅಸ್ತಿತ್ವ ಯಾವ ರೀತಿಯಲ್ಲಿ ಇರುತ್ತದೆ ಎನ್ನುವುದೂ ಕೂಡಾ ಅಷ್ಟೇ ಮುಖ್ಯ. ಮನುಷ್ಯನಾಗುವುದು ಮತ್ತು ಮನುಷ್ಯತ್ವಕ್ಕೆ ಇರುವ ಚಾರಿತ್ರಿಕ ಅಸ್ತಿತ್ವವನ್ನು ಪಡೆಯುವುದು ಎರಡೂ ಅಷ್ಟೇ ಮುಖ್ಯ. ಮನುಷ್ಯತ್ವ ಎಂದರೆ ಈಗಾಗಲೇ ನಾವು ನಮ್ಮ ಮನುಷ್ಯತ್ವವನ್ನು ರೂಪಿಸಿಕೊಂಡಿದ್ದೇವೆ ಎಂದಲ್ಲ. ಚರಿತ್ರೆಯು ನಮ್ಮ ವ್ಯಕ್ತಿತ್ವನ್ನು ಚರಿತ್ರೆಯು ಕೂಡಾ ರೂಪಿಸುತ್ತದೆ ಎಂದು ಅರ್ಥ. ನಮ್ಮ ಮನುಷ್ಯತ್ವವನ್ನು ನಾವು ರೂಪಿಸಿಕೊಂಡಿದ್ದೇವೆ. ಅದಕ್ಕೆ ನಮ್ಮ ಚಾರಿತ್ರಿಕ ಅಗತ್ಯಗಳೇ ಕಾರಣವಾಗಿದೆ. ನಮ್ಮ ವ್ಯಕ್ತಿತ್ವವನ್ನು ಚರಿತ್ರೆಯಿಂದ ಹೊರತು ಪಡಿಸಿ ನೋಡಲು ಬರುವುದಿಲ್ಲ. ಆದರೆ ಚಾರಿತ್ರಿ ಭೌತವಾದವನ್ನು ಅನೇಕರು ಸರಳವಾಗಿ ಚರ್ಚಿಸಿರುವುದೂ ಇದೆ. ಚಾರಿತ್ರಿಕ ಭೌತವಾದದ ಪ್ರಮುಖ ಗುರಿಯಿರುವುದು ಮನುಷ್ಯನೇ ಆಗಿದ್ದಾನೆ. ಚರಿತ್ರೆಯೆಂದರೆ ಅದು ನಮ್ಮ ಭೂತಕಾಲ. ಮತ್ತು ಅದುವೇ ನಮ್ಮ ವರ್ತಮಾನದ ಮೇಲೆ ಪ್ರಭಾವವನ್ನು ಬೀರುತ್ತದೆ. ಇದನ್ನು ಗ್ರಾಂಶಿಯೂ ಪ್ರಸ್ತಾವಿಸಿದ್ದಾನೆ. ನೀತಿಶಾಸ್ತ್ರದಲ್ಲಿ ದೇವರ ಪ್ರಶ್ನೆಗಳು ಬರುತ್ತವೆ. ಅದರಲ್ಲಿ ದೇವರು ನಿಗೂಢ. ಆದರೆ ವಾಸ್ತವ ಅಲ್ಲ ಎನ್ನುವುದನ್ನು ಒತ್ತಿ ಹೇಳಿದ್ದಾನೆ. ಅನ್ನ ಬಟ್ಟೆಯು ಮೊದಲನೆಯದು. ದೇವರ ಸಂಗತಿಯು ಅನಂತರ. ನಮ್ಮ ಅನುಭವಗಳನ್ನು ನಾವು ಇದರ ಬೆಳಕಿನಲ್ಲಿ ನೋಡಬಹುದು. ಪರಿವರ್ತನೆಯನ್ನು ಕೂಡಾ ಈ ಹಿನ್ನೆಲೆಯಿಂದಲೇ ನೋಡಬೇಕಾಗುತ್ತದೆ. ನಮ್ಮ ಧೈರ್ಯ, ನಾಚಿಕೆ, ಮತ್ತು ಅಪರಾಧಗಳು ಕೂಡಾ ಚರಿತ್ರೆಯ ಅಡಿಯಲ್ಲಿಯೇ ಬರುತ್ತದೆ. ಆದರೆ ಈ ಸಂಗತಿಗಳು ಕೂಡಾ ಮನಷ್ಯರದೇ ಆಗಿದೆ ಎನ್ನುವುದು ಮಾರ್ಕ್ಸವಾದದ ನಿಲುವು. ಯಾವುದನ್ನು ಚರಿತ್ರೆಯೆಂದು ಹೇಳುತ್ತಾ ಬಂದಿದ್ದೇವೆಯೋ ಅದು ಕೂಡಾ ನಮ್ಮನ್ನು ಮರೆಯುವಂತೆ ಮಾಡುವುದಿಲ್ಲ. ಅನೇಕ ಸಾಂಪ್ರದಾಯಿಕ ಚಿಂತನೆಗಳು ಚರಿತ್ರೆಯಿಂದ ಓಡಿಹೋಗುವಂತೆ ಮಾಡುವುದಿಲ್ಲ. ನಾವು ಚರಿತ್ರೆಯನ್ನು ಕೂಡಾ ನಮ್ಮ ಬೆನ್ನಿಗೆ ಕಟ್ಟಿಕೊಂಡಿದ್ದೇವೆ. ಅದು ನಮ್ಮ ಅಗತ್ಯ.

ಚರಿತ್ರೆ ಮತ್ತು ಜ್ಞಾನ

ಚರಿತ್ರೆಯೆಂದರೆ ಅದು ಒಂದು ಸ್ಥಿರವಾದ ಚಿತ್ರವಲ್ಲ. ನಮಗೆ ಸರಿಯಾದ ಜ್ಞಾನವು ಇಲ್ಲದೇ ಹೋದರೆ ನಾವು ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಲಾರೆವು. ನಮ್ಮ ಆಲೋಚನೆಯೆಂದು ಯಾವುದನ್ನು ಹೇಳುತ್ತೇವೆಯೋ ಅದು ಕೂಡಾ ಚರಿತ್ರೆಯಿಂದ ಹುಟ್ಟಿಕೊಂಡಿದೆ. ಅದೂ ಒಂದು ಜ್ಞಾನವೇ ಆಗಿದೆ.

ಚರಿತ್ರೆ ಮತ್ತು ಕಲೆಯ ಪ್ರಶ್ನೆಗಳು

ಚರಿತ್ರೆ ಮತ್ತು ಅದರ ಮೌಲ್ಯಗಳನ್ನು ಕಲೆಯು ಅನುಸರಿಸುತ್ತದೆ.,ಅದಕ್ಕೆ ನಿರ್ದಿಷ್ಟವಾದ ಗತಿಯೂ ಇರುತ್ತದೆ. ಅದು ನಿರ್ದಿಷ್ಟವಾದ ಚಹರೆಯನ್ನು ಕಟ್ಟಿಕೊಡುತ್ತದೆ. ಇದು ಗ್ರಾಂಶಿಯ ವಾದ. ನಾವು ಕಲೆಯನ್ನು ಸನ್ನಿವೇಶದಿಂದ ಜನ್ಯವಾದುದು ಅಂತಲೇ ಹೇಳುತ್ತೇವೆ ಎಂದು ಮಾರ್ಕ್ಸವಾದಿಗಳು ಹೇಳುತ್ತಾರೆ. ಯಾವಾಗ ಕಲೆಯನ್ನು ಚರಿತ್ರೆಯಿಂದ ಹೊರತುಪಡಿಸಿ ನೋಡುತ್ತೇವೆಯೋ ಆಗ ಅದರ ಅರ್ಥವು ಬೇರೆಯಾಗಿ ಕಾಣಿಸುತ್ತದೆ. ಕಲೆಯ ಯಾವ ಅನುಭವವನ್ನು ಬೇರೆ ಮಾಡಿ ನೋಡುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಯಾವ ಅನುಭವವನ್ನು ನಾವು ಕಲೆಯಲ್ಲಿ ಹೇಳುತ್ತೇವೆ ಯಾವುದನ್ನು ನಾವು ಬಿಡುತ್ತೇವೆ ಎನ್ನುವುದು ನಮ್ಮ ಆಯ್ಕೆಗೆ ಸಂಬಂಧಪಟ್ಟಿದೆ. ಅನುಭವದ ಅತ್ಯಂತ ಸಂಕೀರ್ಣವಾದ ಒತ್ತಡವೇ ನಮ್ಮ ಬರಹಗಳಿಗೆ ಕಾರಣವಾಗುತ್ತದೆ. ಈ ದೃಷ್ಟಿಯಿಂದಲೇ ಮಾರ್ಕ್ಸವಾದಿಗಳು ಕಲೆಯ ಸಾಮಾಜಿಕೀಕರಣವನ್ನು ಹೇಳುತ್ತಾರೆ. ಯಾವುದೇ ಕಲೆಗಳು ಕೇವಲ ಪ್ರಶ್ನೆಯನ್ನು ಮಾತ್ರವೇ ಎತ್ತುವುದಿಲ್ಲ. ಹಾಗೆ ನೋಡುವುದಿದ್ದರೆ ಕಲೆಯನ್ನು ನಾವು ಪ್ರತ್ಯೇಕವಾದ ಚೌಕಟ್ಟು ಎಂದು ಭಾವಿಸುವಂತಿಲ್ಲ. ಚರಿತ್ರೆಯ ಅಗತ್ಯಕ್ಕೆ ತಕ್ಕಂತೆ ಕಲೆಯು ತನ್ನ ನಿಯಮಾವಳಿಯನ್ನು ಬದಲು ಮಾಡುತ್ತದೆ. ಈ ದೃಷ್ಟಿಯಿಂದಲೇ ಕಲೆಯಲ್ಲಿ ಪ್ರಯೋಗವೆಂದರೆ ಅದು ಕೇವಲ ಸುಪ್ತಚಿತ್ತಕ್ಕೆ ಸಂಬಂಧಪಟ್ಟದ್ದು ಅಲ್ಲವೆಂದು ಮಾರ್ಕ್ಸವಾದಿಗಳು ಹೇಳುತ್ತಾರೆ. ಪ್ರಯೋಗವು ಮನಸ್ಸಿನ ಸೂಚನೆಯು ಮಾತ್ರವೇ ಅಲ್ಲ. ಒಂದು ಕ್ಷಣವನ್ನು ಮಾತ್ರವೇ ಅದು ಹೇಳುವುದಿಲ್ಲ. ಅದು ಪ್ರಜ್ಞೆಯ ಸೂಚನೆಯೂ ಹೌದು. ಹಾಗೆಯೇ ಅದು ಇಗೋವನ್ನು ಕೂಡಾ ಹೇಳುತ್ತದೆ. ನವ್ಯಕ್ಕೆ ಮಾತಿಲ್ಲದ ಅಥವಾ ಮಾತಿನಲ್ಲಿ ಹೇಳಲಾಗದ ನೋವು ಮುಖ್ಯವಾಯಿತು. ಚರಿತ್ರೆಗೆ ಮತ್ತು ಅದರ ಮೌಲ್ಯಗಳು ಹೇಗೆ ಇರುತ್ತವ, ಅದು ಹೇಗೆ ಜೀವನದ ಮೇಲೆ ಪ್ರಭಾವವನ್ನು ಬೀರುತ್ತದೆ ಎಂದು ಅವನು ಹೇಳುತ್ತಾನೆ.

ಸತ್ಯ ಮತ್ತು ಚರಿತ್ರೆ

ಕಲೆಯ ಸತ್ಯ ಮತ್ತು ಚರಿತ್ರೆಗಳು ಯಾವಾಗಲೂ ತುಂಬಾ ಆಳದಲ್ಲಿ ಇರುತ್ತವೆ. ಅದನ್ನು ಬಗೆಯುವುದು ಬಹಳ ಮುಖ್ಯವೂ ಹೌದು. ಸತ್ಯ ಎನ್ನುವುದು ಕೂಡಾ ಒಮ್ಮೊಮ್ಮೆ ಸಂವಾದಿಯಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ಕಲೆಯ ಮಾನದಂಡ, ಅದರ ಸ್ವರೂಪ, ಅದರ ಮಾರುಕಟ್ಟೆ, ಅದರ ವಸ್ತು, ಅದರ ಹಿಂದಿರುವ ಅನುಭವಗಳು, ಕಲೆಯ ಮೌಲ್ಯ ಎಲ್ಲವೂ ಮಹತ್ವದ ಪ್ರಶ್ನೆಗಳೇ ಆಗಿವೆ. ಕಲೆಯ ತಾಂತ್ರಿಕ ಕುಶಲತೆ, ಅದರ ತಾಂತ್ರಿಕ ಪರಿಣಿತಿ, ಅದರ ಸಾಧ್ಯತೆಗಳು

ಬದಲಾಗುತ್ತಾ ಹೋಗುತ್ತವೆ. ಸನ್ನಿವೇಶವೇ ಕಲೆಯ ಅಭಿವ್ಯಕ್ತಿಯನ್ನು ಸೂಚಿಸುತ್ತದೆ. ಕಲೆಯಲ್ಲಿ ಅನುಕರಣೆ ಎನ್ನುವುದು ಕೂಡಾ ಈ ದೃಷ್ಟಿಯಿಂದ ಪ್ರಶ್ನೆಗಳೇ ಆಗಿವೆ. ಹಾಗೆಯೇ ಕಲೆಯು ಸಾಮಾಜಿಕ ಅನುಭವವನ್ನು ತ್ಯಾಗ ಮಾಡುವುದೂ ಇಲ್ಲ. ಈ ಕಾರಣದಿಂದಲೇ ಸಾಮಾಜಿಕ ಮತ್ತು ವಿಶ್ವಾತ್ಮಕ ಎನ್ನುವುದನ್ನು ನಾವು ಸರಳವಾಗಿ ವರ್ಗೀಕರಿಸಲು ಬರುವುದಿಲ್ಲ. ಕಲೆಯೊಂದರ ಸಾಮಾಜಿಕ ಪ್ರತಿಫಲ ಎನ್ನುವುದು ಯಾವಾಗಲೂ ಈಗಾಗಲೇ ಸಿದ್ಧವಾದ ಉತ್ತರವಲ್ಲ. ಹಾಗೂ ಅದು ಅನುಕರಣೆಯನ್ನು ಮಾಡುವಾಗ ಸರಳವಾದ ಅಭಿವ್ಯಕ್ತಿಯ ವಿಧಾನವೆಂದು ಹೇಳಬೇಕಾಗಿಲ್ಲ. ಒಂದು ದೃಷ್ಟಿಯಿಂದ ಸಮಾಜವು ಕಲೆಯಲ್ಲಿ ವ್ಯಕ್ತವಾಗುವುದು ವಿಭಿನ್ನ ನೆಲೆಗಟ್ಟುಗಳಲ್ಲಿ. ಪ್ರತಿಯೊಂದು ಅಭಿವ್ಯಕ್ತಿಗೂ ಇದೇ ರೀತಿಯ ಮಿತಿಗಳು ಎನ್ನುವುದು ಇದೆ.ಮತ್ತು ಕಲೆಯು ಆಯಾ ಕಾಲಕ್ಕೆ ತಕ್ಕಂತೆಯೇ ಸೆನ್ಸಾರಿಗೆ ಗುರಿಯಾಗುತ್ತದೆ. ಈ ಅರ್ಥದಲ್ಲಿಯೇ ಕಲೆಯಲ್ಲಿ ಅನುಕರಣೆ ಮತ್ತು ರಚನೆಯ ನಡುವೆ ಒಂದು ಸಮತೋಲನ ಇರುತ್ತದೆ. ಅದು ತಾತ್ವಿಕ ಪ್ರಶ್ನೆಯೂ ಹೌದು. ನಮ್ಮ ಅನುಭವಗಳ ಸಮಗ್ರವಾದ ಅಭಿವ್ಯಕ್ತಿ ಎನ್ನುವುದು ಸಾಧ್ಯವಾಗಲಾರದು. ಅದಕ್ಕಿರುವ ಪ್ರದರ್ಶನಾತ್ಮಕ ಗುಣ ಮತ್ತು ಅದರ ಮಾರುಕಟ್ಟೆಗೂ, ಹಾಗೂ ಅದು ಸಂಸ್ಕೃತಿಯಲ್ಲಿ ಪಡೆದುಕೊಂಡಿರುವ ಸ್ಥಾನಕ್ಕೂ ಸಂಬಂಧವಿರುತ್ತದೆ. ಮತ್ತು ವಿನಿಮಯಕ್ಕೆ ಅನುಸಾರವಾಗಿ ಅದು ವಿಭಿನ್ನವಾದ ಜಾಗವನ್ನು ಪಡೆಯುತ್ತದೆ. ಕಲೆಯು ಒಂದು ಹಂತದಲ್ಲಿ ಏನಾಗುತ್ತದೆ ಎಂದರೆ ತನ್ನನ್ನು ತಾನೇ ಬಿಡುಗಡೆ ಮಾಡಲು ಯತ್ನಿಸುತ್ತದೆ. ಸ್ತ್ರೀವಾದ, ಮಾರ್ಕ್ಸವಾದ ಮುಂತಾದವು ವ್ಯಕ್ತಿವಾದವನ್ನು ನಿರಾಕರಿಸುತ್ತದೆ ಎನ್ನುವ ಕಾರಣಕ್ಕೆ ಅದನ್ನು ನಾವು ನಿರಾಕರಿಸುತ್ತೇವೆ.

ಬದ್ಧತೆ ಮತ್ತು ಕಲಾಕೃತಿ ಹಾಗೂ ಅದರ ಇತರ ಚಟುವಟಿಕೆಗಳು

ಗ್ರಾಂಶಿಯು ಎತ್ತಿಕೊಳ್ಳುವ ಪ್ರಮುಖ ಪ್ರಶ್ನೆ ಬದ್ಧತೆಗೆ ಸಂಬಂಧಪಟ್ಟಿದೆ. ಕಲಾತ್ಮಕ ಸಂಸ್ಕೃತಿಗೆ ಬದ್ಧನಾದರೆ ಕಲಾವಿದನು ಅದನ್ನು ಆಯ್ಕೆ ಮಾಡಿಕೊಂಡಿದ್ದಾನೆ ಎಂದು ಅರ್ಥ. ಇಲ್ಲಿ ಮತ್ತೆ ನಾವು ಪ್ರತಿಪಾದಿಸಬೇಕಾದ ಮಹತ್ವದ ಅಂಶವೆಂದರೆ ಮಾರ್ಕ್ಸವಾದದ ಪ್ರಕಾರ ಶೈಲಿ ಮತ್ತು ತಂತ್ರ ಎರಡೂ ಬಹಳ ಮುಖ್ಯವಾದ ಪ್ರಶ್ನೆಯೇ ಆಗಿದೆ.

ಕಲಾತ್ಮಕ ಸಂಸ್ಕೃತಿಗೆ ಬದ್ಧನಾದರೆ ಕಲಾವಿದನು ಅದನ್ನು ಆಯ್ಕೆ ಮಾಡಿಕೊಂಡಿದ್ದಾನೆ ಎಂದು ಅರ್ಥ. ಯಾರಾದರೂ ಕಾರ್ಮಿಕರ ಪರವಾಗಿ ಅಥವಾ ರೈತರ ಪರವಾಗಿ ಧ್ವನಿಯನ್ನು ಎತ್ತಿಕೊಂಡರೆ ಅವರನ್ನು ನಾವು ಪಾರ್ಟಿಯವರು ಎಂದು ಹೇಳಬೇಕಾಗಿಲ್ಲ. 1834ರ ಅನಂತರ ಸಾಮಾಜಿಕ ವಾಸ್ತವತಾವಾದವು ಬಂದಾಗ ಕೆಲವು ಪ್ರಮುಖ ಪ್ರಶ್ನೆಗಳು ಮುಂಚೂಣಿಗೆ

ಬಂತು-ಅದರಲ್ಲಿ ಕ್ರಾಂತಿವಾದಿ ರೊಮಾಂಟಿಕ್ ಪರಂಪರೆಯೂ ಒಂದು. ಇದನ್ನು ಒಂದು ಹಂತದಲ್ಲಿ ತುಂಬಾ ಉಪಯುಕ್ತವೆಂದು ಹೇಳಲಾಯಿತು. ಆದರೆ ಸಾಮಾಜವಾದಿ ದೃಷ್ಟಿಕೋನದಲ್ಲಿ ವ್ಯಕ್ತಿವಾದವು ಮುಖ್ಯವಲ್ಲ. ಹಾಗೆಯೇ ಅದು ಏಕ ಸಂಸ್ಕೃತಿಯನ್ನು ಬಿತ್ತುವುದೂ ಇಲ್ಲ. ನವ್ಯವು ವ್ಯಕ್ತಿಯನ್ನು ಗ್ರಹಿಸುವ ನೆಲೆಗಳು ಬೇರೆಯಾಗಿದೆ. ಅದರ ಪ್ರಕಾರ ವ್ಯಕ್ತೀಕರಣವೆನ್ನುವುದು ಕಲೆಯಲ್ಲಿ ಬರುವಾಗ ಅದು ಮನುಷ್ಯರನ್ನು ಹೇಗೆ ಸೂಚಿಸುತ್ತದೆ ಎನ್ನುವುದೂ ಅಷ್ಟೇ ಮುಖ್ಯ.

ಯಾರಾದರೂ ಕಾರ್ಮಿಕರ ಪರವಾಗಿ ಅಥವಾ ರೈತರ ಪರವಾಗಿ ಧ್ವನಿಯನ್ನು ಎತ್ತಿಕೊಂಡರೆ ಅವರನ್ನು ನಾವು ಪಾರ್ಟಿಯವರು ಎಂದು ಹೇಳಬೇಕಾಗಿಲ್ಲ. 1834ರ ಅನಂತರ ಸಾಮಾಜಿಕ ವಾಸ್ತವತಾವಾದವು ಬಂದಾಗ ಕೆಲವು ಪ್ರಮುಖ ಪ್ರಶ್ನೆಗಳು ಮುಂಚೂಣಿಗೆ ಬಂತು-ಅದರಲ್ಲಿ ಕ್ರಾಂತಿವಾದಿ ರೊಮಾಂಟಿಕ್ ಪರಂಪರೆಯೂ ಒಂದು. ಇದನ್ನು ಒಂದು ಹಂತದಲ್ಲಿ ತುಂಬಾ ಉಪಯುಕ್ತವೆಂದು ಹೇಳಲಾಯಿತು. ಆದರೆ ಸಾಮಾಜವಾದಿ ದೃಷ್ಟಿಕೋನದಲ್ಲಿ ವ್ಯಕ್ತಿವಾದವು ಮುಖ್ಯವಲ್ಲ. ಹಾಗೆಯೇ ಅದು ಏಕ ಸಂಸ್ಕೃತಿಯನ್ನು ಬಿತ್ತುವುದೂ ಇಲ್ಲ. ನವ್ಯವು ವ್ಯಕ್ತಿಯನ್ನು ಗ್ರಹಿಸುವ ನೆಲೆಗಳು ಬೇರೆಯಾಗಿದೆ. ಅದರ ಪ್ರಕಾರ ವ್ಯಕ್ತೀಕರಣವೆನ್ನುವುದು ಕಲೆಯಲ್ಲಿ ಬರುವಾಗ ಅದು ಮನುಷ್ಯರನ್ನು ಹೇಗೆ ಸೂಚಿಸುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಶುದ್ಧ ಕಲೆ ಮತ್ತು ಬದ್ಧತೆ ಅವನಲ್ಲಿ ಬೇರೆ ಚರ್ಚೆಗೆ ಕಾರಣವಾಗಿದೆ .

ಸ್ಫೂರ್ತಿ ಮತ್ತು ಶಿಸ್ತಿಗೆ ಸಂಬಂಧವಿದೆ ಇದೇ ಹಂತದಲ್ಲಿ ರೊಮಾಂಟಿಸಿಸಂ ಕುರಿತು ಹೇಳುವಾಗ ಅದು ಒಂದು ಆದರ್ಶವಾದ ಪ್ರತೀಕವನ್ನು ಹುಟ್ಟು ಹಾಕುತ್ತದೆ ಎಂದು ಹೇಳಿದರು. ರೊಮಾಂಟಿಕ್ ಆದರ್ಶವು ವಿಶ್ವಾತ್ಮಕತೆಯನ್ನು ಹುಟ್ಟು ಹಾಕುತ್ತದೆ ಎಂದೂ ಹೇಳಿದರು. ಕಾಲ್ಡ್‌ವೆಲ್ ರೊಮ್ಯಾಂಟಿಕ್ ಕಾವ್ಯದಲ್ಲಿ ಬರುವ ಕನಸುಗಾರಿಕೆಯ ಕುರಿತು ಹೇಳುತ್ತಾ ಅದು ಕನಸುಗಾರಿಕೆಯ ಒಂದು ಸಾಧ್ಯತೆ ಮಾತ್ರ ಎಂದು ಹೇಳುತ್ತಾನೆ. ಆದರೆ ಇಲ್ಲಿ ಗ್ರಾಂಶಿಯು ರೊಮ್ಯಾಂಟಿಕ್ ಎನ್ನುವುದು ವ್ಯಕ್ತಿತ್ವ, ಸ್ವಾಯತ್ತತೆ, ಉತ್ಸಾಹ ಅದರ ಸಾಧ್ಯತೆ ಎಂದು ಹೇಳುತ್ತಾನೆ. ರೊಮ್ಯಾಂಟಿಕ್ ಪರಂಪರೆಯ ಆದರ್ಶವು ಒಂದು ಕಡೆಯಿಂದ ಸಾಮಾಜಿಕ ಶಕ್ತಿಯನ್ನು (ಸೋಶಿಯಲ್ ಎನರ್ಜಿ) ಮತ್ತೊಂದು ಕಡೆಯಿಂದ ಯಟೋಪಿಯನ್ ಕನಸುಗಾರಿಕೆಯನ್ನು ಹುಟ್ಟು ಹಾಕುತ್ತದೆ ಎಂದು ಮಾರ್ಕ್ಸವಾದಿಗಳು ಹೇಳುತ್ತಾರೆ. ಆದರೆ ನಾವು ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ ರೊಮ್ಯಾಂಟಿಕ್ ಪಂಥವು ಹೊಸ ನಮೂನೆಯ ಮೌಲ್ಯವನ್ನು ತೋರಿಸಿಕೊಟ್ಟಿತು. ಅದರಲ್ಲಿ ಮನುಷ್ಯರ ಸಣ್ಣತನಗಳೇ ಇಲ್ಲ. ಹಾಗೂ ಅದು ತಾನು ಉಳಿದ ಮೌಲ್ಯಕ್ಕಿಂತ ಉದಾತ್ತವಾದುದನ್ನು ಹೇಳುತ್ತಿದ್ದೇನೆ ಎಂದೂ ಪ್ರತಿಪಾದಿಸಿತು.

ಕಲೆ ಸಮಾಜ ಮತ್ತು ಸೌಂದರ್ಯಶಾಸ್ತ್ರ

ಕಲೆ, ವ್ಯಕ್ತಿತ್ವ ಮತ್ತು ಸೌಂದರ್ಯಕ್ಕೆ ಒಂದು ಸಂಬಂಧವಿದೆ ಎಂದು ಗ್ರಾಂಶಿಯು ಹೇಳುತ್ತಾನೆ. ಕಲೆ ಹಾಗೂ ಸೌಂದರ್ಯ ಶಾಸ್ತ್ರದ ಕುರಿತಂತೆ ಈಗಾಗಲೇ ಹೇರಳವಾದ ವಾಗ್ವಾದಗಳು ನಡೆದಿವೆ. ಯಾವುದನ್ನು ನಾವು ಕಲೆಯೆಂದು ಕರೆಯುತ್ತೇವೆಯೋ ಅದರ ಸ್ವರೂಪವು ಕೂಡಾ ಅನೇಕ ವಿಧದ ಚರ್ಚೆಗಳಿಗೆ ಗುರಿಯಾಗಿವೆ. ಯಾವುದನ್ನು ನಾವು ಕಲೆಯೆಂದು ಕರೆಯುತ್ತೇವೆಯೋ ಅದು ತನ್ನನ್ನು ತಾನೇ ಅನೇಕ ಸರ್ತಿ ವ್ಯಾಖ್ಯಾನ ಮಾಡಿರುವುದೂ ಅಷ್ಟೇ ನಿಜ. ಕಲೆಯ ಕುರಿತು ಯೋಚಿಸುವಾಗ ಅದರ ವಿಶಿಷ್ಟ ಸಾಧ್ಯತೆಯನ್ನು ಮಾರ್ಕ್ಸವಾದಿಗಳು ಚರ್ಚಿಸಿದ್ದಾರೆ. ಕಲೆಯೆನ್ನುವುದು ಬರಿಯ ಸೌಂದರ್ಯದ ಪ್ರತೀಕವಲ್ಲ. ಮತ್ತು ಅದನ್ನು ನಾವು ಅದರಷ್ಟಕೆ ಸ್ವಯಂ ಸಂಪೂರ್ಣವೆಂದು ಕರೆಯಬೇಕಾಗಿಲ್ಲ. ವಾಸ್ತವವಾಗಿ ಕಲೆಯು ಜೀವನದ ಸಂಘರ್ಷಗಳನ್ನು ಬೇರೆ ಬೇರೆ ವಿಧದಲ್ಲಿ ಮಂಡಿಸುತ್ತದೆ. ಕಲೆಯು ಜೀವನದ ಅನೇಕದ ಮುಖಗಳನ್ನು ವಿವಿಧ ರೀತಿಯಲ್ಲಿ ಹೇಳುತ್ತದೆ. ಯಾವುದನ್ನು ನೋಡಲು ಚೆನ್ನಾಗಿದೆಯೋ ಅದನ್ನು ನಾವು ಸೌಂದರ್ಯವೆಂದು ಕರೆಯುತ್ತೇವೆ. ಕಲೆ ಮತ್ತು ಸೌಂದರ್ಯದ ನಡುವಣ ಸಂಬಂಧವು ಸಂಕೀರ್ಣವಾಗಿದೆ. ಯಾವುದನ್ನು ನಾವು ಆಧುನಿಕೋತ್ತರ ವಾದವೆಂದು ಹೇಳುತ್ತಾ ಬಂದಿದ್ದೇವೆಯೋ ಅದನ್ನು ಅದು ಕೂಡಾ ಚಾರಿತ್ರಿಕ ಬೆಳವಣಿಗೆಯನ್ನು ಸೂಚಿಸುತ್ತದೆ. ಆಧುನಿಕೋತ್ತರ ವಾದವೂ ಕೂಡಾ ಈಗ ತನ್ನ ಅನನ್ಯತೆಯನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದೆ. ಅಧುನಿಕೋತ್ತರವಾದವು ಸಂಸ್ಕೃತಿಯನ್ನು ಉನ್ನತ ಸಂಸ್ಕೃತಿ ಮತ್ತು ಜನಪ್ರಿಯ ಸಂಸ್ಕೃತಿಯೆಂಬ ವರ್ಗೀಕರಣವನ್ನು ಮಾಡುತ್ತದೆ. ಆದರೆ ಜನಪ್ರಿಯವೆಂದು ಕರೆಯುವುದು ದೈನಂದಿನ ಸಂಸ್ಕೃತಿಯನ್ನು ನೋಡಿಕೊಂಡು ಮಾತ್ರ. ಅದು ಕೆಲವು ಸೀಮಾರೇಖೆಗಳನ್ನು ಹಾಕಿಕೊಂಡು ತನ್ನ ಚರ್ಚೆಯನ್ನು ಮಾತ್ರವೇ ಮಾಡುತ್ತದೆ. ಕಲೆಯೆನ್ನವುದು ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದ ರೂಪುಗೊಳ್ಳುತ್ತದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ನಂಬಿಕೆಗಳು ಒಂದೇ ಅರ್ಥವನ್ನು ಕೊಡುವುದಿಲ್ಲವೆನ್ನುವುದು ತಿಳಿಯುತ್ತದೆ. ಆದರೆ ಅದನ್ನು ಅರ್ಥ ಮಾಡಿಕೊಳ್ಳುವುದು ಎಂದರೆ ಅದರ ನಿರಂತರತೆಯನ್ನು ಅರ್ಥ ಮಾಡಿಕೊಳ್ಳುವುದು. ನಿಸರ್ಗ ಮತ್ತು ಸಂಸ್ಕೃತಿಗೆ ಇರುವ ವ್ಯತ್ಯಾಸವನ್ನು ಈ ದೃಷ್ಟಿಯಿಂದ ಪರಿಶೀಲಿಸಲೂ ಬಹುದು. ನಮ್ಮ ವ್ಯಕ್ತಿತ್ವಕ್ಕೆ ಮತ್ತು ನಾವು ಬರೆಯುವ ವಿಷಯಗಳಿಗೆ ಒಂದು ಸಂಬಂಧವು ಇರುತ್ತದೆ.

ನಮ್ಮಲ್ಲಿ ಒಂದು ವಾದವಿದೆ–ಕಲೆಯೆನ್ನುವುದು ಜೀವನದ ಪ್ರತಿಬಿಂಬ. ಆದರೆ ಜೀವನವನ್ನು ಅದು ಹೇಳುವುದು ಭಿನ್ನ ರೀತಿಯಲ್ಲಿ. ಪ್ರತಿಬಿಂಬವೆಂದರೆ ಕಲೆಯ

ಒಂದು ಆಯಾಮ ಮಾತ್ರ. ಕಲೆಗೆ ಒಂದು ಸಾಂಸ್ಕೃತಿಕವಾದ ಕೆಲಸವೆನ್ನುವುದು ಇದೆಯೆಂದು ಮಾರ್ಕ್ಸವಾದವು ಹೇಳುತ್ತದೆ. ಯಾಕೆ ನಾವು ಕಲೆಯನ್ನು ಮಹತ್ವದ್ದು ಎಂದು ಹೇಳುತ್ತೇವೆ ಎಂದರೆ ಅದು ನಮ್ಮಲ್ಲಿ ಭಾವನೆಗಳನ್ನು ವಿಶಿಷ್ಟವಾದ ರೀತಿಯಲ್ಲಿ ಮಂಡಿಸುತ್ತದೆ ಎನ್ನುವ ಕಾರಣಕ್ಕೆ ಮಾತ್ರ. ಅಂದರೆ ಕಲೆಗಿರುವ ಮಹತ್ವವು ಭಿನ್ನ. ಹಾಗೆಂದು ಕಲೆಯು ಸಮಾಜದಲ್ಲಿ ಮಾಡುವ ಕೆಲಸವನ್ನು ನಾವು ನಿಶ್ಚಿತಗೊಳಿಸಲು ಆಗುವುದಿಲ್ಲ. ಕೆಲಸಕ್ಕೆ ಇರುವ ನಿಶ್ಚಿತತೆಯು ಕಲೆಗೆ ಅನ್ವಯವಾಗುವುದಿಲ್ಲ. ಬೇರೆ ಕೆಲಸಗಳಿಗೆ ನಾವು ನಿರ್ದಿಷ್ಟವಾದ ಅರ್ಥಗಳಿವೆ ಎಂದು ಹೇಳಬಹುದು. ಆದರೆ ಕಲೆಗೆ ಸಂಬಂಧಪಟ್ಟಂತೆ ಹೀಗಿದೆ ಎಂದು ವಿವರಿಸಲು ಸಾಧ್ಯವಾಗುವುದಿಲ್ಲ. ಕಲೆಯು ಅದರದೆ ಆದ ನಿಗದಿತ ಕೆಲಸವನ್ನು ಮಾತ್ರ ಮಾಡುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಕಲೆಯೆಂದರೆ ಇರುವ ಜಗತ್ತಿನ ಒಂದು ವಿವರಣೆಯೆಂದು ಕರೆಯುವಂತಿಲ್ಲ. ಕಲೆಗೆ ಅದರದೇ ಆದ ನಿಯಮಗಳಿವೆ. ಬೂರ್ಜ್ವಾಗಳು ಕಲೆಯ ಕುರಿತು ತೆಗೆದುಕೊಳ್ಳುವ ನಿಲುವಿಗೂ ಮಾರ್ಕ್ಸವಾದವು ಕಲೆಯ ಕುರಿತು ತೆಗೆದುಕೊಳ್ಳುವ ನಿಲುವಿಗೂ ಭಿನ್ನತೆಯಿದೆ. ಬೂರ್ಜ್ವಾಗಳು ಕಲೆಯನ್ನು ಕುರಿತು ಹೇಳುವಾಗ ಅದನ್ನು ಬರಿಯ ಸೌಂದರ್ಯದ ಹಿನ್ನೆಲೆಯಲ್ಲಿ ಮಾತ್ರ ಪರಿಗಣಿಸುತ್ತಾರೆ. ಕೆಲವರು ಕಲೆಯನ್ನು ಬರಿಯ ನೀತಿ ಶಾಸ್ತ್ರದ ಹಿನ್ನೆಲೆಯಿಂದ ಮಾತ್ರ ಪರಿಗಣಿಸುತ್ತಾರೆ. ಆದರೆ ಕಲೆಯು ಬರಿಯ ನೀತಿಶಾಸ್ತ್ರವಲ್ಲ. ನೀತಿಯನ್ನು ಹೇಳುವುದು ಅದರ ಉದ್ದೇಶವಾಗಲು ಸಾಧ್ಯವಿಲ್ಲ. ಬಾಹ್ಯದ ಅನೇಕ ಸಂಗತಿಗಳು ಕಲೆಯಲ್ಲಿ ವರ್ಗಾವಣೆಗೆ ಕಾರಣವಾಗುತ್ತದೆ. ಹಾಗೆಂದು ಜೀವನದ ವಿಮುಖತೆಯನ್ನು ಸೂಚಿಸುವುದು ಕಲೆಯ ಉದ್ದೇಶವಲ್ಲ. ಜೀವನವೆನ್ನುವುದು ಸರಳ ತೀರ್ಮಾನಕ್ಕೆ ಬದ್ಧವಲ್ಲ. ಆದುದರಿಂದ ಕಲೆಯನ್ನು ನಾವು ಬರಿಯ ಸೌಂದರ್ಯದ ಹಿನ್ನೆಲೆಯಿಂದ ಪರಿಗಣಿಸುವುದಕ್ಕೆ ಬರುವುದಿಲ್ಲ. ಕಲೆಗೆ ಒಂದು ಅಂತಃಸತ್ವ ಎನ್ನುವುದು ಇದೆ. ಅದನ್ನು ಮಾರ್ಕ್ಸವಾದವು ಅಲ್ಲಗಳೆಯುವುದಿಲ್ಲ. ಕಲೆಗೆ ಒಂದು ಗುಣಾತ್ಮಕವಾದ ಪರಂಪರೆಯಿದೆ. ಆದರೆ ಅದು ಎಲಿಯಟ್ ಹೇಳುವ ರೀತಿಯಲ್ಲಿ ಅಲ್ಲ. ಹಾಗೆ ನೋಡುವುದಿದ್ದರೆ ಕಲೆಯನ್ನು ನಾವು ಒಂದು ಚಾರಿತ್ರಿಕ ಪರಂಪರೆಯ ಹಿನ್ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಬೇಕು. ಎಲ್ಲಾ ಕಲೆಗಳಿಗೆ ಅನ್ವಯವಾಗುವ ಒಂದು ಕಾನೂನು ಎನ್ನುವುದೂ ಇಲ್ಲ. ಚರಿತ್ರೆಯು ಬದಲಾಗುತ್ತಾ ಹೋದಂತೆ ಕಲೆಯ ಅಸ್ತಿತ್ವ ಮತ್ತು ಕಲೆಯ ಪ್ರಾತಿನಿಧಿಕ ಅಂಶಗಳು ಬದಲಾಗುತ್ತಾ ಹೋಗುತ್ತವೆ. ಅಂದರೆ ಕಲೆಯನ್ನು ಒಂದು ರೀತಿಯ ವ್ಯಾಖ್ಯಾನಕ್ಕೆ ನಾವು ಜೋಡಿಸಲು ಬರುವುದಿಲ್ಲ. ಕಲೆಗೆ ಒಂದು ನಿದಿಷ್ಟವಾದ, ಹಾಗೂ ಎಲ್ಲಾ ಕಾಲಕ್ಕೂ ಅನ್ವಯವಾಗುವ ಸೂತ್ರವಿದೆ ಎಂದು ಹೇಳುವುದು ಕಷ್ಟ. ನಾವು ಮಾಡಬೇಕಾದುದು ಏನೆಂದರೆ ಕಲೆಗೂ ಒಂದು ಚರಿತ್ರೆಯಿದೆ ಎಂದು ಅರ್ಥಮಾಡಿಕೊಳ್ಳುವುದು.

ಹೀಗೆ ಚರಿತ್ರೆಯಲ್ಲಿ ಕಲೆಯನ್ನು ಇಟ್ಟು ನೋಡಿದರೆ ಅದರ ಅರ್ಥವು ಭಿನ್ನವಾಗಬಹುದು. ರಚನಾವಾದಿಗಳು ಕಲೆಯನ್ನು ನೋಡುವ ರೀತಿಯೇ ಬೇರೆ. ಅವರು ಕಲೆಯನ್ನು ಒಂದು ಸ್ವತಂತ್ರ ಘಟಕವೆಂದು ಪರಿಭಾವಿಸುತ್ತಾರೆ. ಅದು ಸ್ವಯಂಸಂಪೂರ್ಣವಾದ ಘಟಕವಲ್ಲ. ರಚನೆಯು ಸ್ವಾಯತ್ತವೆಂದು ಹೇಳುವಾಗ ನಾವು ಈ ಅಂಶಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಒಂದು ಕಲೆಯು ಮತ್ತೊಂದು ಕಲೆಯಿಂದ ಭಿನ್ನವೆಂದು ಹೇಳುವಾಗ ನಾವು ಈ ಅಂಶಗಳನ್ನು ಮನದಟ್ಟು ಮಾಡಬೇಕಿದೆ. ಒಂದು ಕಲೆಯು ಮತ್ತೊಂದು ಕಲೆಯಿಂದ ಭಿನ್ನವಾಗುವುದು ಅದರಲ್ಲಿ ಅಡಕವಾಗಿರುವ ಅಂಶಗಳಿಂದ. ಇದನ್ನು ಮಾರ್ಕ್ಸವಾದವು ಗುಣಾತ್ಮಕವಾದ ಮೌಲ್ಯವೆಂದು ಹೇಳುತ್ತದೆ. ನವ್ಯರು ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳುವಾಗ ಅದನ್ನು ಸ್ವಾಯತ್ತ ಎಂದು ಕರೆಯುವುದು ಮಾತ್ರವೇ ಅಲ್ಲ, ಅದನ್ನು ಸ್ವಾಭಿವ್ಯಕ್ತ ಮಾದರಿಯದು ಎಂದೂ ಹೇಳುತ್ತಾರೆ. ನವ್ಯರ ಪ್ರಕಾರ ಸಾಹಿತ್ಯವೂ ಅದರ ರಚನೆಯೂ ಒಂದು ಪೂರ್ಣವಾದ ಲೋಕ. ಅದರೆ ನಾವು ಗಮನಿಸಬೇಕಾದ ಮತ್ತೊಂದು ಅಂಶವಿದೆ. ಅದೆಂದರೆ ಸಾಹಿತ್ಯ ಮತ್ತು ಹೊರಗಿನ ಪ್ರಪಂಚಕ್ಕೆ ಯಾವುದೇ ರೀತಿಯ ಸಂಬಂಧವಿಲ್ಲವೆಂದೂ ಅದನ್ನು ಒಂದು ಕಲಾಕೃತಿಯಾಗಿಯೂ ನೋಡಬೇಕೆಂದೂ ನವ್ಯವು ಹೇಳುತ್ತದೆ. ಪರೋಕ್ಷವಾಗಿ ಏನು ಹೇಳಲಾಯಿತು ಎಂದರೆ ಸಾಹಿತ್ಯವು ಒಂದು ಪರ್ಯಾಯವಾದ ಜಗತ್ತು. ಆದರೆ ಹಾಗಿರುವುದು ಸಾಧ್ಯವೇ ಇಲ್ಲ. ಮತ್ತೆ ನಾವು ಈ ಅಂಶಗಳನ್ನು ಮನಗಾಣಬೇಕು–ಸಾಹಿತ್ಯವು ಸ್ವಯಂ ಸಂಪೂರ್ಣ ಎನ್ನುವುದನ್ನು ಅವರು ಹೇಳುವುದು ನಿಜ. ಫ್ರೈನ ವಾದಗಳು ಸರಳವಾದ ತೀರ್ಮಾನಗಳಾಗಿವೆ. ಅವನು ತನ್ನ ವಾದವನ್ನು ಮಂಡಿಸುವಾಗ ವರ್ಗವನ್ನು ಪರಿಗಣನೆಗೆ ತರುವುದಿಲ್ಲ. ಅವನಿಗೆ ಅದು ಮುಖ್ಯವೂ ಅಲ್ಲ. ಕೃತಿಯೊಳಗೆ ಬರುವ ಪ್ರತೀಕಗಳಿಗೆ ಮತ್ತು ಸಂಕೇತಗಳಿಗೆ ಬರಿಯ ಕೃತಿಯೊಳಗೆ ಮಾತ್ರವೇ ಅರ್ಥವಿಲ್ಲ. ಆದುದರಿಂದ ಅವುಗಳ ಅರ್ಥವು ಸಂವಾದಿಯಾದುದು.ಆದರೆ ನವ್ಯ ದೃಷ್ಟಿಕೋನದ ವಿಮರ್ಶಕರಿಗೆ ಕೃತಿಯೊಂದರ ಅರ್ಥವೇ ಮುಖ್ಯ. ನವ್ಯ ದೃಷ್ಟಿಯ ರಚನಾವಾದಿಗಳಿಗೆ ಕೇವಲ ಆಂತರಿಕ ದೃಷ್ಟಿಯೇ ಮುಖ್ಯವಾಗಿರುವುದರಿಂದ ಅವರು ಉಳಿದ ವಿಷಯಗಳಿಗೆ ಗಮನವನ್ನು ಹರಿಸುವುದಿಲ್ಲ. ಇಲ್ಲಿ ಮತ್ತೆ ಆಂತರಿಕ ಮತ್ತು ಬಹಿರ್ಮುಖ ಎನ್ನುವುದನ್ನು ಯೋಚಿಸಬೇಕು. ಈ ರೀತಿಯ ಚರ್ಚೆಗಳಿಗೆ ಮೌಲ್ಯಮಾಪನವು ಮುಖ್ಯವಲ್ಲ. ಆಂತರಿಕ ವಿಮರ್ಶೆಗೆ ಕೃತಿಯೊಳಗಿನ ಸತ್ಯವು ಮಾತ್ರವೇ ಮುಖ್ಯ. ಅದು ಕೃತಿಯ ಹೊರಗಿನದನ್ನು ಚರ್ಚಿಸಲು ಹೋಗುವುದಿಲ್ಲ. ಕೃತಿಯ ಒಳಗೆ ಒಂದು ಸತ್ಯವಿದೆ ಅದನ್ನು ಮಾತ್ರವೇ ನಾವು ಚರ್ಚಿಸಿದರೆ ಸಾಕು ಎನ್ನುವುದು ಅದರ ಧೋರಣೆಯಾಗಿದೆ. ಕೃತಿಯ ಒಳಗೆ ಯಾವುದನ್ನು ಹೇಳಲಾಗಿದೆಯೋ ಅದರ

ವಿಮರ್ಶೆಯು ಬಹಳ ಮುಖ್ಯವಾಗಿದೆ. ಯಾವುದು ಸತ್ಯವೆಂದು ಈ ಮಾದರಿಯ ವಿಮರ್ಶೆಗೆ ಕೇಳಿದರೆ ಅದು ಪಠ್ಯವನ್ನು ಮಾತ್ರವೇ ಸತ್ಯವೆಂದು ಹೇಳುತ್ತದೆ. ಬರಹವೇ ಇದಕ್ಕೆ ಆಧಾರ. ಅದನ್ನು ಹೊರತು ಪಡಿಸಿಕೊಂಡು ಯಾವುದನ್ನು ಚರ್ಚಿಸುವುದು ಅನಗತ್ಯವೆಂದು ಈ ಮಾದರಿಯ ವಿಮರ್ಶಾ ಪದ್ಧತಿಯು ಹೇಳುತ್ತದೆ. ಸತ್ಯವನ್ನು ಹೇಳಲು ಯಾವುದು ಮಾನದಂಡವೆಂದು ಕೇಳಿದರೆ ಈ ಮಾದರಿಯ ವಿಮರ್ಶಾ ಪದ್ಧತಿಯು ಅಕ್ಷರವೇ ಮಾಧ್ಯಮವೆಂದು ಪ್ರತಿಪಾದಿಸುತ್ತದೆ. ಅದೇ ರೀತಿಯಲ್ಲಿ ಮತ್ತೆ ಅದು ಹೇಳುವ ಮತ್ತೊಂದು ವಿಚಾರವೆಂದರೆ ಯಾವುದೇ ಕೃತಿಯು ಮೂಲತಃ ಒಂದು ಮುಕ್ತಾಯವನ್ನು ಪ್ರತಿಪಾದಿಸುತ್ತದೆ. ಮುಕ್ತಾಯವಿಲ್ಲದ ಪಠ್ಯವೆನ್ನುವುದು ಇಲ್ಲ. ಕೃತಿಯಲ್ಲಿ ಸತ್ಯವೆಂದರೆ ಅದು ಕೃತಿಯೊಳಗಿನ ಸೂಚನೆ ಮಾತ್ರ. ಆಂತರಿಕ ವಿಮರ್ಶೆಯು ಕೃತಿಯ ಮುಕ್ತಾಯವನ್ನೂ ಗಮನಿಸುತ್ತದೆ. ಹೀಗೆ ಮಾಡಿದಾಗ ಸಹಜವಾಗಿಯೇ ಕೃತಿಯೊಳಗಿನ ಸಂವಹನ ಮಾತ್ರವೇ ಮುಖ್ಯವಾಗಿದೆ. ಮತ್ತು ಸಂವಹನವನ್ನು ಅದು ಮಿತಿಗೊಳಿಸುತ್ತದೆ. ಇನ್ನೊಂದು ಸಂಗತಿಯನ್ನು ನಾವಿಲ್ಲಿ ಗಮನಕ್ಕೆ ತಂದು ಕೊಳ್ಳಬೇಕು. ಕೃತಿಯೊಳಗಿನ ಆಂತರಂಗಿಕ ವಿವರಗಳನ್ನು ಮಂಡಿಸುವುದು ಎಂದರೆ ಅದು ಕೃತಿಯನ್ನೇ ಸರ್ವಸ್ವ ಎಂದು ಭಾವಿಸುವುದು. ಅಂದರೆ ಕೃತಿಯೊಂದರ ಆಂತರಿಕ ಮಾನದಂಡವನ್ನು ಇಟ್ಟುಕೊಂಡೇ ಆಂತರಿಕವಾದ ಮೀಮಾಂಸೆಯನ್ನು ಕಟ್ಟಲು ಯತ್ನವನ್ನು ಮಾಡುವುದು. ಮತ್ತು ಅದರ ಮೂಲಕವೇ ಒಂದು ರೀತಿಯಿಂದ ಒಂದು ಪಠ್ಯವನ್ನು ಸೃಷ್ಟಿಸುವುದು. ಪಠ್ಯವನ್ನು ಮತ್ತೆ ಕಟ್ಟುವುದು ಅಂದರೆ ಅದರ ಸ್ವರೂಪವೂ ಬೇರೆಯಾಗಿರುತ್ತದೆ. ನಾವು ಇದನ್ನು ಹೇಳಬೇಕಾಗಿದೆ ಎಂದರೆ ಕೃತಿಯೂ ಒಂದು ಮೌನವನ್ನು ಇಟ್ಟುಕೊಂಡಿರುತ್ತದೆ. ನಿಲುವನ್ನು ಮತ್ತೆ ಹೇಳಬೇಕೆಂದರೆ ಯಾವುದನ್ನು ಆಂತರಿಕ ವಿಮರ್ಶೆಯೆಂದು ಕರೆಯುತ್ತಾರೆಯೋ ಅದು ಒಂದು ವಿಮರ್ಶಾತ್ಮಕ ಪರಿಕರವನ್ನು ರೂಪಿಸಿಕೊಂಡಿರುತ್ತದೆ. ಈ ದೃಷ್ಟಿಯಿಂದ ಅವನ ನಿಲುವನ್ನು ಮತ್ತೆ ಚರ್ಚೆಮಾಡಬೇಕಾಗುತ್ತದೆ. ಸೌಂದರ್ಯ ಮತ್ತು ಅದರ ಚಹರೆಗಳನ್ನು ನಿರ್ಣಯಿಸುವಾಗ ಅದಕ್ಕೆ ಕೆಲವು ನಿಬಂಧನೆಗಳನ್ನು ಹಾಕಿಕೊಳ್ಳುವುದೇ ಬಹಳ ದೊಡ್ಡ ಸಮಸ್ಯೆಯಾಗಿದೆ. ಇಲ್ಲಿ ಅಡರ್ನೊನ ವಾದಗಳನ್ನು ಗಮನಿಸಬೇಕಾಗಿದೆ. ಸೌಂದರ್ಯ ಎನ್ನುವುದು ಆಯಾ ಸಂದರ್ಭದಲ್ಲಿ ತನ್ನ ಅರ್ಥಗಳನ್ನು ಬದಲಿಸಿದೆ. ಯಾವುದನ್ನು ಗುಣ ಮಟ್ಟವನ್ನು ಮಾತ್ರವೇ ಅವಲಂಬಿಸಿಕೊಂಡಿದೆಯೋ ಅದನ್ನು ಮಾತ್ರವೇ ನಾವು ಸೌಂದರ್ಯವೆಂದು ಕರೆಯುತ್ತೇವೆ. ಆದರೆ ಅದಕ್ಕಿರುವ ಮೌಲ್ಯವನ್ನು ಮಾರ್ಕ್ಸವಾದವು ಅಲ್ಲಗಳೆಯುತ್ತಿಲ್ಲ. ಅಸಹ್ಯ ಎನ್ನುವುದಕ್ಕೆ ಕೂಡಾ ಬೇರೆ ಬೇರೆ ಸಂಯೋಜನೆಯು ಇರುತ್ತದೆ. ಅದು ನಮ್ಮ ವಿಷಯ ನಿಷ್ಠವಾದ ಗ್ರಹಿಕೆಗೆ ಸಂಬಂಧ ಪಟ್ಟದ್ದು ಅನ್ನುವುದೇ ಇಲ್ಲಿ ಉಲ್ಲೇಖನೀಯ. ಸುಂದರ ಮತ್ತು ಕೊಳಕು ಎನ್ನುವುದರ

ಸ್ವರೂಪವನ್ನು ನಾವು ಹೇಗೆ ವಿವರಿಸುತ್ತೇವೆ ಎನ್ನುವುದನ್ನು ವರ್ಗೀಕರಿಸುವುದು ನಮ್ಮ ಸಾಮಾಜಿಕವಾದ ನಿಯಮಗಳಿಗೆ ಅನುಸಾರವಾಗಿಯೂ ಇರುತ್ತದೆ. ಅದು ವಿಷಯ ನಿಷ್ಠವಾದ ಗ್ರಹಿಕೆಗೆ ಅನುಸಾರವಾಗಿಯು ಬೇರೆಯಾಗುತ್ತದೆ. ಯಾವುದನ್ನು ಗುಣಾತ್ಮಕ ಮೌಲ್ಯಕ್ಕೆ ಒಪ್ಪಿಕೊಳ್ಳುವುದಿಲ್ಲವೋ ಅದನ್ನು ನಾವು ಅಸಹ್ಯವೆಂದು ಕರೆಯುತ್ತೇವೆ. ಕೊಳಕು ಮತ್ತು ಸುಂದರ ಎಂಬ ವರ್ಗೀಕರಣಗಳೇ ಸಂಯೋಜನೆಗೆ ಅನುಸಾರವಾಗಿ ಭಿನ್ನವಾಗುತ್ತದೆ. ಸೌಂದರ್ಯ ಎನ್ನುವುದಕ್ಕೆ ಹೇಗೆ ವಿಶಿಷ್ಟವಾದ ಸಂಯೋಜನೆಯು ಇರುತ್ತದೆಯೋ ಅದೇ ರೀತಿಯಲ್ಲಿ ಸಂಯೋಜನೆಯಲ್ಲಿನ ವಿಕೃತಿಯು ಅಸಹ್ಯವೆಂದು ಕರೆಯಲ್ಪಡುತ್ತದೆ. ಇಲ್ಲಿ ಸಾಮಾಜಿಕ ಮಾನ್ಯತೆಯೇ ಬಹಳ ಮುಖ್ಯವಾಗಿದೆ. ಯಾವುದು ನಮಗೆ ಸುಖವನ್ನು ಕೊಡುತ್ತದೆಯೋ ಅದನ್ನು ನಾವು ಸೌಂದರ್ಯವೆಂದು ಕರೆದೆವು. ನೋಡುವಾಗಲೇ ಯಾವುದು ನಮಗೆ ಹೆಚ್ಚು ಉದ್ವಿಗ್ನವಾಗಿ ಮಾಡುತ್ತದೆಯೋ ಅದನ್ನು ಅಸಹನೀಯ ಎಂಬ ಕಾರಣಕ್ಕೆ ಸೌಂದರ್ಯಶಾಸ್ತ್ರದಲ್ಲಿ ದೂರವಿಟ್ಟೆವು. ಸೌಂದರ್ಯವೆಂದರೆ ಅದು ನಮ್ಮನ್ನು ಹೆಚ್ಚು ಸಂತೋಷವನ್ನು ನೀಡಬೇಕು ಎಂದು ಬಯಸಿದ್ದರಿಂದ ಅದರ ನಮ್ಮ ಚಿಂತನೆಯ ಕ್ರಮವು ಬೇರೆಯಾಯಿತು. ಕುರೂಪವೆಂದರೆ ಅದು ನಮ್ಮನ್ನು ಬೇರೆಡೆಗೆ ಕರೆದೊಯ್ಯುತ್ತದೆ ಎಂದು ಭಾವಿಸಿದೆವು. ಕುರೂಪವನ್ನು ಸೌಂದರ್ಯಶಾಸ್ತ್ರವು ತನ್ನ ವ್ಯಾಪ್ತಿಯಿಂದ ಹೊರಗಿಟ್ಟಿತು. ಸಹನೀಯ ಮತ್ತು ಅಸಹನೀಯ ಎನ್ನುವುದು ಮನೋವೃತ್ತಿಗೆ ಮಾತ್ರವೇ ಸಂಬಂಧ ಪಟ್ಟಿಲ್ಲ. ಅದು ವಿಷಯನಿಷ್ಠವೂ ಹೌದು. ಸೌಂದರ್ಯವೆನ್ನುವುದನ್ನು ನಾವು ಸಾಮಾಜಿಕ ಹಿನ್ನಲೆಯಿಂದಲೇ ವ್ಯಾಖ್ಯಾನಿಸುತ್ತೇವೆ. ಅದಕ್ಕೆ ಸಾಮಾಜಿಕ ಮಾನ್ಯತೆಯು ಇರುತ್ತದೆ. ಯಾವುದಕ್ಕೆ ಈ ಮಾನ್ಯತೆಯು ಇಲ್ಲವೋ ಅದನ್ನು ನಾವು ಅಸಹ್ಯವೆಂದು ಹೇಳುತ್ತೇವೆ. ಹಾಗೆಂದು ಕಲೆಯು ನಮ್ಮ ಜೀವನದಲ್ಲಿ ನಡೆಯುವ ಎಲ್ಲಾ ವಿಚಾರಗಳನ್ನು ಹೇಳುತ್ತದೆ ಎಂದು ಅರ್ಥವಲ್ಲ. ಕಲೆಯು ಜಗತ್ತಿನ ಕುರಿತು ತನ್ನದೇ ಆದ ನಿಲುವನ್ನು ಹೊಂದಿರುತ್ತದೆ. ಆದರೆ ಅದನ್ನು ನಾವು ಹೀಗೆ ಎಂದು ಹೇಳುವಂತಿಲ್ಲ. ಕಲೆಯು ಜಗತ್ತಿನ ವಿವರಣೆಯನ್ನು ನೀಡುವುದು ಕಲಾವಿದನ ಮನೋಸ್ಥಿತಿಯ ಹಿನ್ನೆಲೆಯಿಂದ ಮಾತ್ರವೇ ಎನ್ನವುದೂ ಅಷ್ಟೇ ಮುಖ್ಯ. ಕಲೆಯು ಇರುವ ಜಗತ್ತನ್ನು ಮಾತ್ರವೇ ಹೇಳುವುದಿಲ್ಲ. ಅದು ಜಗತ್ತು ಹೇಗೆ ಆಗಬೇಕು ಎಂದೂ ಹೇಳುತ್ತದೆ. ಅದು ನಿಯಮಗಳನ್ನು ಕೂಡಿಕೊಂಡಿದೆ. ಕಲೆಗೆ ಅರ್ಥವೂ ಇದೆ. ಆದರೆ ಅದನ್ನು ನಾವು ನಗಣ್ಯವೆಂದು ಹೇಳುತ್ತಿಲ್ಲ. ಕಲೆಯ ನಿಯಮವೆಂದರೆ ಅದು ನಿರಂಕುಶವೆಂದು ಭಾವಿಸಬೇಕಾಗಿಲ್ಲ. ಅದು ಸ್ವತಂತ್ರ ಮತ್ತು ಅದಕ್ಕೆ ಯಾವುದೇ ತಾತ್ವಿಕ ನಂಬಿಕೆಗಳು ಬೇಕಾಗಿಲ್ಲವೆಂದು ಬೂರ್ಜ್ವಾಗಳು ಮಾತ್ರವೇ ನಂಬುತ್ತಾರೆ. ಅದೇ ರೀತಿಯಲ್ಲಿ ನೀತಿ ಶಾಸ್ತ್ರಜ್ಞರು ಕಲೆಯಲ್ಲಿ ನೀತಿ ಮಾತ್ರವೇ ಅಗತ್ಯವೆಂದು ಹೇಳುತ್ತಾರೆ. ಆದರೆ ಅದು ಸರಿಯಾದ

ನಿಲುವಲ್ಲ. ಪ್ರತಿಮಾವಾದಿಗಳು ಜೀವನದ ಅನುಭವ ಸಂಕೀರ್ಣವಾಗಿದೆ. ಆದುದರಿಂದ ಅದನ್ನು ಪ್ರತಿಮೆಯ ಹಿನ್ನೆಲೆಯಲ್ಲಿ ಮಾತ್ರವೇ ಅರ್ಥ ಮಾಡಿಕೊಳ್ಳಬೇಕು. ಅನುಭವವನ್ನು ಸಂಕೇತವು ಹೇಳುವುದು ಜೀವನದ ಅಮೂರ್ತ ಅನುಭವನ್ನು ಸೂಚಿಸುತ್ತದೆ. ಅಂದರೆ ಅನುಭವ ಎನ್ನುವುದು ಪ್ರತಿಮೆಯ ಮೂಲಕ ಕಾವ್ಯವನ್ನು ಪ್ರವೇಶಿಸುತ್ತದೆ ಎಂದು ಹೇಳಿದ ಹಾಗೆ ಆಯಿತು. ಆದರೆ ಒಂದು ಅಂಶವನ್ನು ಗಮನಿಸಬೇಕು ಕಲೆಯು ಈ ರೀತಿಯ ಜೀವನದ ನಿರಾಕರಣೆಯ ಮೂಲಕವೇ ಕಲಾಕೃತಿಯನ್ನು ಪ್ರವೇಶಿಸುವುದೂ ಇಲ್ಲ. ಜೀವನವನ್ನು ಯಾಕೆ ನಿರಾಕರಿಸಬೇಕು ಎನ್ನುವುದು ಮಾರ್ಕ್ಸವಾದಿಗಳ ಪ್ರಶ್ನೆ. ಹಾಗೆ ನೋಡಿದರೆ ಕಲೆಯನ್ನು ನಾವು ಒಂದು ಟ್ರೆಡಿಶನ್ ಮೂಲಕವೂ ಅರ್ಥ ಮಾಡಿಕೊಳ್ಳಲು ಯತ್ನ ಮಾಡುತ್ತೇವೆ. ಆದರೆ ಇಲ್ಲಿ ಟ್ರೆಡಿಶನ್ ಅಂದರೆ ಅದರ ಸ್ವರೂಪವನ್ನು ನಾವು ಎಲಿಯಟ್ ರೀತಿಯಲ್ಲಿ ಹೇಳಲು ಬರುವುದೂ ಇಲ್ಲ. ಯಾವುದನ್ನು ಎಲಿಯಟ್ ಪರಂಪರೆ ಎಂದು ಕರೆಯುತ್ತಾನೆಯೋ ಅದರನ್ನು ಅವನು ಆಯ್ಕೆಯ ಪ್ರಶ್ನೆಯಾಗಿ ಇಟ್ಟುಕೊಂಡಿದ್ದಾನೆ ಎನ್ನುವುದೂ ಅಷ್ಟೇ ಮುಖ್ಯ. ಹಾಗೆ ನೋಡುವುದಿದ್ದರೆ ಕಲೆಗೆ ಅನ್ವಯವಾಗುವ ಒಂದು ಸಾಮಾನ್ಯ ಮಟ್ಟದ ಕಾನೂನು ಎನ್ನುವುದೇ ಇಲ್ಲ. ಅದು ಕಾನೂನಿಗೆ ಸಂಬಂಧ ಪಟ್ಟದ್ದು ಅಲ್ಲ.

ಚರಿತ್ರೆ ಮತ್ತು ಕಲಾತ್ಮಕವಾದ ಅಭಿವ್ಯಕ್ತಿ

ಕೈಗಾರಿಕಾ ಸಂಸ್ಕೃತಿಯು ಕಲೆಯನ್ನು ನೋಡುವ ಕ್ರಮವು ಬೇರೆ ಆಗುತ್ತದೆ. ಅದು ಪರಂಪರೆಯನ್ನು ಅವಲಂಬಿಸಿಕೊಂಡು ಇರುವುದಿಲ್ಲ. ಚರಿತ್ರೆಯ ಬದಲಾಗುತ್ತಾ ಹೋದಂತೆ ಕಲೆಯೂ ಕೂಡಾ ಬದಲಾಗುತ್ತಾ ಹೋಗುತ್ತದೆ. ಕಲೆಯ ಅಸ್ತಿತ್ವ ಮತ್ತು ಅದರ ಅರ್ಥವೂ ಚರಿತ್ರೆಗೆ ಅನುಸಾರವಾಗಿಯೇ ಬೇರೆಯಾಗುತ್ತದೆ. ವಿಶಿಷ್ಟವಾಗಿಯೇ ಈ ಸಂಗತಿಗಳನ್ನು ಕುರಿತು ಯೋಚಿಸಬೇಕು ಕಲೆಯು ಒಂದು ರೀತಿಯಿಂದ ಸಾಮಾನ್ಯ ಎನ್ನಬಹುದಾದ ಸೂತ್ರವನ್ನು ಇಟ್ಟುಕೊಳ್ಳಲು ಬರುವುದೂ ಇಲ್ಲ. ಚರಿತ್ರೆಯನ್ನು ಹೊರತುಪಡಿಸಿಕೊಂಡು ಯಾವುದನ್ನೂ ನಿಭಾಯಿಸಲೂ ಬರುವುದಿಲ್ಲ. ನಮಗೆ ಗೊತ್ತಿರಬೇಕಾದ ಅಂಶವೆಂದರೆ ಚರಿತ್ರೆಯನ್ನು ನಾವು ಒಂದು ಸ್ಥಳಕ್ಕೆ ನಿಗದಿ ಪಡಿಸುವುದರಿಂದಲೇ ಕಲೆಯ ಚರ್ಚೆಯ ಅಂಶಗಳು ಬದಲಾಗುತ್ತಾ ಹೋಗುತ್ತವೆ. ಆದರೆ ಕಲೆಗೆ ಯಾವಾಗ ಒಂದು ರೀತಿಯ ಸ್ವಾಯತ್ತತೆಯನ್ನು ಕೊಡಲು ಹೊರಡುತ್ತೇವೆಯೋ ಆಗ ಅದರ ಚರ್ಚೆಯು ಬದಲಾಗುತ್ತದೆ. ಇರುವ ಪ್ರಶ್ನೆಯೆಂದರೆ ಕಲೆಯನ್ನು ಅದರ ಪಾಡಿಗೆ ನಾವು ಮುಕ್ತಗೊಳಿಸುತ್ತೇವೆ ಎಂದು ಹೇಳಿದರೆ ಕಲೆಯನ್ನು ಎಲ್ಲಾ ಅಂಶಗಳಿಂದ ಬಿಡುಗಡೆ ಮಾಡಿದಂತೆ. ಅದು ಯಾವಾಗಲೂ ಸ್ವಾಯತ್ತವಲ್ಲ.

ಅದು ಸ್ವತಂತ್ರವೂ ಅಲ್ಲ. ಮತ್ತು ಅದಕ್ಕೆ ನಿಜವಾದ ಚರಿತ್ರೆಯ ಅಂಶವೂ ಇರುತ್ತದೆ. ಹಾಗೆಯೇ ಅನೇಕರು ಕಲೆಯನ್ನು ಸಮಗ್ರವೆಂದು ಹೇಳಿರುತ್ತಾರೆ. ಅದೂ ಕೂಡಾ ಪ್ರಶ್ನಾರ್ಹವಾದುದು. ಒಂದು ಕಲೆಯು ಮತ್ತೊಂದು ಕಲೆಯಿಂದ ಭಿನ್ನವಾಗುವುದು ಅದರ ಗುಣ ಮಟ್ಟದ ದೆಸೆಯಿಂದಲೇ ಹೊರತು ಮತ್ತೆ ಯಾವುದೇ ಕಾರಣಕ್ಕಾಗಿಯೂ ಅಲ್ಲವೆನ್ನುವುದು ಇಲ್ಲಿ ಗಮನಾರ್ಹ. ಇದಕ್ಕೆ ಪೂರಕವಾಗಿ ಮತ್ತೊಂದು ಅಂಶವನ್ನು ಹೇಳಬೇಕು– ಒಂದು ಕಲೆಯು ಯಾವಾಗ ತುಂಬಾ ನೀರಸ ಅಥವಾ ಸತ್ವಹೀನವೆಂದು ಅನಿಸಿದಾಗ ಮತ್ತೆ ಬೇರೊಂದು ಕಲಾರೂಪವು ಜನ್ಮವನ್ನು ತಳೆಯುತ್ತದೆ. ಮಾಮೂಲಿಯಾದ ತಾತ್ವಿಕ ಪ್ರಶ್ನೆಯು ಹುಟ್ಟಿಕೊಂಡಾಗ ಅದು ಕಲೆಯನ್ನು ಚರ್ಚಿಸುವ ವಿಧಾನಕ್ಕೂ ಮಾರ್ಕ್ಸವಾದವು ಕಲೆಯನ್ನು ವಿವರಿಸುವ ಕ್ರಮಕ್ಕೂ ಭಿನ್ನತೆಯಿದೆ. ಅದು ಮಾಮೂಲಿಯಾಗಿ ಕಲೆಯನ್ನು ಆದರ್ಶಗೊಳಿಸುವ ಪ್ರಯತ್ನಕ್ಕೆ ಹೋಗುವುದಿಲ್ಲ. ಅದು ಪರಿಕಲ್ಪನಾತ್ಮಕವೂ ಹೌದು. ಜಡವಾದ ಕಲಾ ಮೀಮಾಂಸೆಯನ್ನು ಮಾರ್ಕ್ಸವಾದವು ಒಪ್ಪಿಕೊಳ್ಳುವುದಿಲ್ಲ. ಮಾರ್ಕ್ಸವಾದಕ್ಕೆ ಕಲೆ ಮತ್ತು ಅದರ ಅರ್ಥವೆಂದರೆ ಬರೀ ಪಠ್ಯವಲ್ಲ. ಪಠ್ಯ ಮಾತ್ರವೇ ಚರ್ಚೆಗೆ ಗುರಿಯಾಗಬೇಕು ಅನ್ನುವುದನ್ನು ಅದು ಒಪ್ಪಿಕೊಳ್ಳುವುದಿಲ್ಲ. ಕಲೆಯು ಆಗುವಿಕೆಗೆ ಸಂಬಂಧಪಟ್ಟದ್ದು. ಕಲೆಯು ಆಗುವುದು ಮತ್ತು ಪರಿವರ್ತನೆ ಹೊಂದುವುದು ಬಹಳ ಮುಖ್ಯ. ಈ ವಿಷಯವನ್ನು ಮಾರ್ಕ್ಸವಾದವು ಅಲ್ಲಗಳೆಯುವುದೂ ಇಲ್ಲ. ಕಲೆಯೆನ್ನುವುದು ಚಾರಿತ್ರಿಕ ಅಗತ್ಯಕ್ಕೆ ಅನುಸಾರವಾಗಿಯೇ ರೂಪುಗೊಳ್ಳುತ್ತದೆ. ಕಲೆಯೆಂದು ಯಾವುದನ್ನು ಕರೆದಿದ್ದೇವೆಯೋ ಅದು ತನ್ನ ಆಂತರಿಕ ಸ್ವರೂಪವನ್ನು ಬದಲಿಸಿಕೊಂಡಿದೆ. ಆಂತರಂಗಿಕ ವ್ಯಾಪ್ತಿಯನ್ನು ಅದು ಬದಲಿಸಿಕೊಂಡಿದೆ. ಅದರ ವಸ್ತುಗಳಲ್ಲಿ ಬದಲಾವಣೆಯೂ ಇದೆ. ಕಲೆಯಲ್ಲಿ ಅದು ಸಾಂಸ್ಕೃತಿಕ ಭಿನ್ನತೆಯನ್ನು, ಚಹರೆಗಳನ್ನು ಬದಲಿಸಿಕೊಂಡಿದೆ. ಕಲೆಯ ಥೀಮೆಟಿಕ್ ವಸ್ತು ಅಂತ ಯಾವುದು ಇದೆಯೋ ಅದು ಬದಲಾಗಿದೆ. ಕಲೆಯೆನ್ನುವುದು ಮನುಷ್ಯನ ಅಸ್ತಿತ್ವವನ್ನು ಕೂಡಾ ಬದಲು ಮಾಡಿ ನೋಡಿದೆ. ಮನುಷ್ಯನ ಅಸ್ತಿತ್ವವನ್ನು ಕಲೆಯು ನೋಡುವ ಕ್ರಮವೂ ಬೇರೆಯಾಗಿದೆ. ಆದುದರಿಂದ ನಾವು ಕಲೆಯನ್ನು ಕುರಿತು ವಿವರಿಸುವಾಗ ಗಮನಿಸಬೇಕಾದ ಅಂಶವೆಂದರೆ ಅದನ್ನು ಹೇಗೆ ನಿರ್ವಚಿಸಬೇಕು ಎನ್ನುವುದು ಮಾತ್ರ. ನಮ್ಮ ಜೀವನ ಕ್ರಮವನ್ನು ನಾವು ಹೇಗೆ ನಿರೂಪಿಸಿದ್ದೇವೆ ಎನ್ನುವುದು ತಿಳಿಯುವುದು ಕಲೆಯ ಮೂಲಕವೇ ಎನ್ನವುದು ಗಮನಾರ್ಹ.

ವಿಚಾರವಾದ ಮತ್ತು ಆಶಯ

ವಿಚಾರವಾದ ಎನ್ನುವುದು ಅನೇಕ ಕ್ಷೇತ್ರಗಳಿಗೆ ಅನ್ವಯವಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ಅದರ ಜೊತೆಗೆ ಕಲೆಯು ಬದಲಾಗುವಾಗ ಅದರ

ಆಶಯಗಳೂ ಬದಲಾಗುತ್ತವೆ. ಕಲೆಯ ವಸ್ತು ಮತ್ತು ಅದರ ಹಿಂದಿರುವ ಚಿಂತನೆಯ ಕ್ರಮವು ಬೇರೆಯಾಗಿರುತ್ತದೆ. ಯಾವುದನ್ನು ನಾವು ಸಾರ್ವಜನಿಕ ನಂಬಿಕೆಯೆಂದು ಹೇಳುತ್ತೇವೆಯೋ ಅದು ನಿಜವಾದ ವಿಜ್ಞಾನದ ಬುನಾದಿಯಿಂದ ರಚಿತವಾದುದಲ್ಲ. ಕೆಲವು ನಂಬಿಕೆಗಳಿಗೆ ಯಾವುದೇ ಸಾಕ್ಷಿ ಮತ್ತು ಆಧಾರಗಳು ಇರುವುದೂ ಇಲ್ಲ. ಆದರೆ ಜನ ಅದನ್ನು ನಂಬುತ್ತಾರೆ. ಅಷ್ಟೆ. ಹಾಗೇ ಅದನ್ನು ವಿಚಾರವಂತರು ಸರಿ ಮತ್ತು ತಪ್ಪು ಎಂದು ವರ್ಗೀಕರಿಸುತ್ತಾರೆ. ವಿಚಾರವಂತರು ಹೇಳಿರುವ ಸಂಗತಿಯನ್ನು ಉಳಿದವರು ಅನುಸರಿಸಲಾರರು. ಇದನ್ನೆ ನಾವು ವಿಶಿಷ್ಟವಾದ ನೆಲೆಯೆಂದು ಹೇಳುತ್ತೇವೆ. ಇದನ್ನು ಹುಟ್ಟು ಹಾಕಿದ ನೆಲೆಗಳನ್ನು ನಾವು ಈಗ ಬೇರೆ ಎಂದೂ ಕರೆಯಬಹುದು. ಇದನ್ನು ಅತ್ಯಂತ ರಾಡಿಕಲ್ ಎಂದೂ ಹೇಳುತ್ತಾರೆ. ಅದು ಸ್ವಲ್ಪ ಮಟ್ಟಿಗೆ ನಿಜವೂ ಹೌದು. ವಿಚಾರವಾದ ಮತ್ತು ಅದರ ಪರಿಣಾಮಗಳು ಭಿನ್ನ ಭಿನ್ನ ಕಾಲಗಳಲ್ಲಿ ಭಿನ್ನ ಭಿನ್ನವಾದ ಚಹರೆಯನ್ನು ಪಡೆದುಕೊಂಡಿವೆ ಎನ್ನುವುದೂ ಇಲ್ಲಿ ಉಲ್ಲೇಖನಾರ್ಹ. ಕಲ್ಪನೆ ಮತ್ತು ಅದರ ವಾಸ್ತವಗಳನ್ನು ಒಂದು ವಿಚಾರವಾದವು ಗ್ರಹಿಸುವ ನೆಲೆಗಳು ಭಿನ್ನವಾಗಿದೆ. ಅದಕ್ಕೆ ಭ್ರಮೆಗಳ ಅಗತ್ಯವು ಇಲ್ಲ.

ವಿಶ್ವಾತ್ಮಕ ಮತ್ತು ರಾಷ್ಟ್ರೀಯತೆ

ವ್ಯಕ್ತಿಯು ಒಂದು ದೇಶದಲ್ಲಿ ಪ್ರಜೆಯು ಆಗಿರುತ್ತಾನೆ. ಆದರೆ ವಿಶ್ವಕ್ಕೆ ಬಂದಾಗ ಅವನ ಅಸ್ತಿತ್ವವು ಬೇರೆ ಅರ್ಥವನ್ನು ಪಡೆಯುತ್ತದೆ. ಈ ದೃಷ್ಟಿಕೋನದಲ್ಲಿ ಗ್ರಾಂಶಿಯು ಚರ್ಚೆ ಮಾಡುತ್ತಾನೆ. ವ್ಯಕ್ತಿಯ ವಿಶ್ವಾತ್ಮಕ ಸತ್ಯವನ್ನು ಕೂಡಾ ವರ್ಗೀಕರಣಕ್ಕೆ ಅನುಸಾರವಾಗಿ ರೂಪಿಸುವ ಅಗತ್ಯವಿದೆ ಎನ್ನುವುದು ಮುಖ್ಯ. ಬಂಡವಾಳವಾದದ ಮುಖ್ಯ ಸಂಗತಿಯೆಂದರೆ ಅದು ಬುದ್ಧಿ ಜೀವಿಗಳನ್ನು ಮತ್ತು ದೈಹಿಕ ಶಕ್ತಿಯನ್ನು ಬಳಸುವವರನ್ನು ಬೇರೆ ಬೇರೆಯಾಗಿ ನೋಡುತ್ತದೆ ಇಲ್ಲಿಯೇ ನಾವು ಮತ್ತೊಂದು ಮಾತನ್ನು ಗಮನಿಸಬೇಕು. ಅದು ವ್ಯಕ್ತಿ ಮತ್ತು ಅವನ ವ್ಯಕ್ತಿತ್ವದ ಕುರಿತು ಮಾರ್ಕ್ಸವಾದವು ತಳೆಯುವ ನಿಲುವು. ವ್ಯಕ್ತಿ ಮತ್ತು ಅವನ ಸ್ಥಾನವನ್ನು ಮಾರ್ಕ್ಸವಾದವು ಹೇಳುವ ವಿಧಾನವು ಬೇರೆ. ಉದಾರವಾದಿ ಮಾನವತಾವಾದವು ವ್ಯಕ್ತಿಯನ್ನು ಭಿನ್ನವಾಗಿ ಗ್ರಹಿಸುತ್ತದೆ. ಅದರಲ್ಲಿ ವ್ಯಕ್ತಿತ್ವದ ಚಿಂತನೆಯು ತಾತ್ವಿಕವಲ್ಲ. ಅದು ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಲು ಹೋಗುವುದಿಲ್ಲ. ಆದರೆ ಮಾರ್ಕ್ಸವಾದವು ವ್ಯಕ್ತಿಯನ್ನು ನೋಡುವಾಗಲೇ ಅವನ ವ್ಯಕ್ತಿತ್ವವನ್ನು ಯಾವುದು ನಿಯಂತ್ರಿಸಿದೆ ಎನ್ನುವುದನ್ನೂ ಗಮನಿಸುತ್ತದೆ. ಉದಾರವಾದಿಗಳಿಗೆ ಸ್ವಾತಂತ್ರ್ಯವೆನ್ನುವುದು ಒಂದು ಆದರ್ಶ. ಆದರೆ ಸ್ವಾತಂತ್ರ್ಯವು ಕೇವಲ ಒಂದು ಕಲ್ಪನೆ ಮಾತ್ರ. ವ್ಯಕ್ತಿ ಮತ್ತು ಅವನ ಹಿನ್ನೆಲೆಯು ಬಹಳ

ಮುಖ್ಯವಾಗಿದೆ. ವ್ಯಕ್ತಿಯನ್ನು ಒಂದು ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯು ನಿಯಂತ್ರಿಸುತ್ತದೆ ಎನ್ನುವುದು ಮಾರ್ಕ್ಸವಾದದ ನಿಲುವು. ಅದು ತತ್ವಜ್ಞಾನವೂ ಹೌದು. ಹೀಗಾಗಿಯೇ ಮಾರ್ಕ್ಸವಾದವು ಸಮಾಜವಾದಿ ದೃಷ್ಟಿಕೋನದ ಮಾನವೀಯತೆಯನ್ನು ಎತ್ತಿ ಹಿಡಿಯುತ್ತದೆ. ಮನುಷ್ಯತ್ವ ಅನ್ನುವುದು ಕೇವಲ ಮಾನವೀಯತೆಯನ್ನು ಒಳಗೊಂಡ ಸಮಸ್ಯೆ ಅಲ್ಲ. ಅದು ವೈಜ್ಞಾನಿಕವಾದ ಕಲ್ಪನೆಯೂ ಹೌದು.ವಿವರಣೆಯು ಮಾತ್ರವೇ ಸಾಕಾಗುವುದಿಲ್ಲ. ಅದರ ರಾಜಕೀಯ ಪ್ರಶ್ನೆಗಳು ಸಮಾಜದ ಹೊರಗಿನ ಪ್ರಶ್ನಗಳು ಅಲ್ಲವೆನ್ನುವುದನ್ನು ಗಮನಿಸಬೇಕು. ರಾಜಕೀಯವಾಗಿ ಯಾವುದನ್ನು ಎಡವೆಂದು ಹೇಳುತ್ತೇವೆಯೋ ಅದು ಕೇವಲ ಎಡ ಮಾತ್ರವೇ ಅಲ್ಲ. ಅದು ರಾಜಕೀಯ ಪ್ರಶ್ನೆಯೆಂದೂ ಭಾವಿಸಬೇಕಾಗಿಲ್ಲ. ಅದು ಸಮಾಜಿಕ ಜೀವನದ ಪ್ರಶ್ನೆಯೂ ಹೌದು.

ಜ್ಞಾನ

ತತ್ವಜ್ಞಾನಕ್ಕೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ವರೂಪಕ್ಕೂ ಒಂದು ಸಂಬಂಧವಿದೆ. ಪುನರುಜ್ಜೀವನ ಕಾಲಘಟ್ಟದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಬೆಳವಣಿಗೆಯನ್ನು ಕಂಡುಕೊಂಡಿತು. ಇದರ ಪರಿಣಾಮವಾಗಿ ಆಗ ವ್ಯಕ್ತಿಯನ್ನು ಸ್ವತಂತ್ರ ಮತ್ತು ಮುಕ್ತಜೀವಿ ಎಂದು ಪರಿಗಣಿಸಲಾಯಿತು. ವ್ಯಕ್ತಿಯನ್ನು ದೇವರ ಸೃಷ್ಟಿಯೆಂಬ ನಂಬಿಕೆಯು ಹೊರಟುಹೋಯಿತು. ಅದರ ಬದಲು ವ್ಯಕ್ತಿಯನ್ನು ಮತ್ತು ಅವನ ಅಸ್ತಿತ್ವವನ್ನು ಮುಖ್ಯವಾದ ಸಂಗತಿಯೆಂದು ಹೇಳಲಾಯಿತು. ವಸ್ತು ನಿಷ್ಟತೆಗೆ ಹೆಚ್ಚಿನ ಪ್ರಾಶಸ್ತ್ಯವು ಬಂದಿರುವುದರಿಂದ ಉಳಿದವುಗಳನ್ನು ಗೌಣವೆಂದು ಪರಿಗಣಿಸಲಾಯಿತು. ಇದರಿಂದ ಜ್ಞಾನವನ್ನು ಮತ್ತೆ ಭಿನ್ನವಾದ ರೀತಿಯಲ್ಲಿ ಪರಿಶೀಲಿಸಲಾಯಿತು. ಪುನರುಜ್ಜೀವನ ಕಾಲಘಟ್ಟದ ಚಿಂತನೆಯನ್ನು ಜ್ಞಾನ ಯುಗವೆಂದು ಹೇಳಿದರು ಹಾಗೂ ಇದನ್ನು ಹೇಳುವಾಗ ಕಾರ್ಯ ಮತ್ತು ಕಾರಣದ ಚರ್ಚೆಯು ಬೇರೆಯಾಯಿತು. ಇದನ್ನು ಹೀಗೆಂದು ಹೇಳಿದಾಗ ಮುಖ್ಯವಾದ ಪ್ರಶ್ನೆಯು ಎದುರಾಯಿತು. ಪುನರುಜ್ಜೀವನ ಕಾಲಘಟ್ಟದ ಜ್ಞಾನವನ್ನು ಮುಖ್ಯವಾಗಿ ಭೌತಿಕ ಸತ್ಯವನ್ನು ಅಳೆಯಿತು ಅದರ ಪ್ರಮಾಣಗಳೇ ಬೇರೆಯಾದವು. ಮೂರ್ತ ರೂಪದ ಸತ್ಯವೆನ್ನುವುದಕ್ಕೆ ವಿಶೇಷ ಅರ್ಥವು ಬಂದಿತು. ಅದೇ ವೇಳೆಗೆ ಬಂಡವಾಳವಾದವು ಕೆಲವು ರೀತಿಯ ಭ್ರಮೆಯನ್ನು ಕೂಡಾ ರೂಪಿಸಿತು. ನೈತಿಕ ವ್ಯಾಖ್ಯಾನವೂ ಭಿನ್ನವಾಯಿತು. ಆಧುನಿಕ ಸಮಾಜದಲ್ಲಿ ನೈತಿಕತೆಯೇ ಭಿನ್ನವಾದ ರೀತಿಯದು. ಇವುಗಳ ಪರಿಣಾಮ ಸಂಸ್ಕೃತಿಯ ಮೇಲೂ ಆಯಿತು. ಆಧುನಿಕ ಸಮಾಜದಲ್ಲಿ ವಸ್ತುನಿಷ್ಟ ಜ್ಞಾನ ಮತ್ತು ವಿಷಯನಿಷ್ಟ ಜ್ಞಾನದ ಪ್ರಶ್ನೆಯು ಬೇರೆಯಾಗಿದೆ. ಅಡರ್ನೊ ಒಂದು ಕಡೆಗೆ ಹೇಳಿದ ವಿಷಯವೆಂದರೆ ತತ್ವ ಜ್ಞಾನಕ್ಕೂ ಒಂದು ನಿಯಮವೆನ್ನುವುದು ಇದೆ.

ಪುನರುಜ್ಜೀವನ ಚಳುವಳಿ

ಕಲೆಗೂ ಪುನರುಜ್ಜೀವನ ಚಳುವಳಿಗೂ ಸಂಬಂಧವಿದೆ. ಅನುಕರಣೆಯು ನಿಜವಾಗಿಯು ಮಾಡುವುದೇನನ್ನು ಎನ್ನುವುದೇ ಬಹಳ ಮುಖ್ಯವಾದ ಅಂಶ ಎನ್ನುವುದೂ ಆಗ ಬಂದ ಬಹಳ ಮುಖ್ಯವಾದ ಪ್ರಶ್ನೆ. ಅದನ್ನೇ ಮನುಷ್ಯನ ಅನುಭವದ ಹಿನ್ನೆಲೆಯಿಂದ ಶೋಧಿಸುವ ಪ್ರಯತ್ನವು ನಡೆಯಿತು. ಕಲೆಯು ಹೇಳುವ ಸಾಮಾಜಿಕ ವಾಸ್ತವವು ಇದಕ್ಕಿಂತ ಭಿನ್ನವೆಂದು ಕಲಾವಿದರು ಪ್ರತಿಪಾದಿಸಿದರು. ವಾಸ್ತವವು ಕಲೆಗೆ ಬಂದಾಗ ಅದು ಸ್ಥಳಾಂತರ ಹೊಂದುತ್ತದೆ. ಅದನ್ನು ನಾವು ಮರೆಯಬಾರದು. ಜೀವನದ ಕೆಲವು ಮುಖಗಳು ಮಾತ್ರವೇ ಕಲೆಯಲ್ಲಿ ವ್ಯಕ್ತವಾಗುತ್ತದೆ. ಅದನ್ನು ಸೂಚಿಸುವಾಗ ಕಲೆಯು ಯಾವುದನ್ನು ದಾಖಲಿಸುತ್ತದೆ ಅದನ್ನು ಮಾತ್ರವೇ ಜೀವನ ಮತ್ತು ಜೀವನದ ನಿಜವಾದ ಸನ್ನಿವೇಶವೆಂದು ಕರೆಯಲಾಗದು ಎಂದು ಮಾರ್ಕ್ಸವಾದಿಗಳು ಹೇಳುತ್ತಾರೆ. ಯಾವುದನ್ನು ನಾವು ಬರಹದಲ್ಲಿ ಹೇಳುತ್ತೇವೆಯೋ ಅದರ ಮತ್ತೊಂದು ಮುಖ ಚರಿತ್ರೆಯಲ್ಲಿ ಇದೆ. ಅದು ವ್ಯಕ್ತವಾಗಿಲ್ಲವೆಂದು ಗೊತ್ತಿರಬೇಕು. ಅಂದರೆ ನಾವು ಯಾವು ಯಾವುದನ್ನು ಹೇಳಿದ್ದೇವೆಯೋ ಅದು ನಮ್ಮ ಅಭಿವ್ಯಕ್ತಿಯ ಒಂದು ರೂಪ ಮಾತ್ರ. ಕೃತಿಯಲ್ಲಿ ಹೇಳಿದ ಅನುಭವ ಮಾತ್ರವೇ ನಿಜ ಉಳಿದುದು ನಿಜವಲ್ಲ ಎಂದು ಪರಿಭಾವಿಸುವುದು ಕಷ್ಟ. ಹಾಗೆಯೇ ಕೃತಿಯಲ್ಲಿ ನಿರೂಪಿಸಿದ ಅನುಭವಗಳನ್ನು ಮಾತ್ರವೇ ಸತ್ಯವೆಂದು ಉಳಿದುದು ಮಿಥ್ಯವೆಂದು ಯಾಕೆ ಹೇಳಲು ಸಾಧ್ಯವಾಗುವುದಿಲ್ಲವೆಂದರೆ ನಮ್ಮ ಅನುಭವಗಳನ್ನು ಸುಲಭವಾಗಿ ಹೀಗೆ ಎಂದು ನಿರೂಪಿಸಲು ಬರುವುದೇ ಇಲ್ಲ. ಈ ಅರ್ಥದಲ್ಲಿಯೇ ನಾವು ವಾಸ್ತವ ಎಂದರೆ ಇಷ್ಟು ಸಂಕೇತವೆಂದರೆ ಇಷ್ಟು ಎಂದು ವಿವರಿಸಲು ಬರುವುದೇ ಇಲ್ಲ.ಇವುಗಳ ಹಿಂದೆ ಇರುವ ಅನುಭವಗಳೂ ಬೇರೆ. ಅಮೂರ್ತ ಅನುಭವ ಮತ್ತು ಅಸ್ಪಷ್ಟವಾದ ಅನುಭವ ಇವುಗಳಿಗೆ ವ್ಯತ್ಯಾಸವಿದೆ.ಹಾಗೇ ಇವುಗಳಿಗೆ ಇರುವ ಸಾಮಾಜಿಕ ಸಂಬಂಧಗಳು ಕೂಡಾ.ಸಂಕೇತವಾದವು ಅಮೂರ್ತ ಅನುಭವಗಳನ್ನು, ಅಮೂರ್ತ ಸಾಮಾಜಿಕ ವಿಷಯಗಳನ್ನು ನೋಡುತ್ತದೆ. ಆಧುನಿಕ ಕಲೆಗಳು ಹೇಳುವ ವಿಧಾನವು ಬೇರೆ. ಒಂದು ಹಂತದಲ್ಲಿ ಪ್ರತಿಯೊಂದು ಕಲೆಯೂ ವ್ಯಕ್ತಿಯ ಸಾಧ್ಯತೆಯೇ ಆಗಿರುತ್ತದೆ. ವಿಷಯದ ನಿರೂಪಣೆಗೆ ಅನುಸಾರವಾಗಿ ಅದರ ವ್ಯಾಖ್ಯೆಗಳು ಬದಲಾಗುತ್ತವೆ. ನಾವಿಲ್ಲಿ ಕೊಂಚ ಎಚ್ಚರದಲ್ಲಿಯೂ ಇರಬೇಕು. ಅದು ಜ್ಞಾನಕ್ಕೆ ಸಂಬಂಧಪಟ್ಟ ವಿಷಯ. ಯಾವುದನ್ನು ನಾವು ಸಾಮಾನ್ಯವಾದ ಅನುಭವ ,ಯಾವುದು ಸಾಮಾನ್ಯವಾದ ಜ್ಞಾನ ಎಂದು ಹೇಳುವುದು ಹೇಗೆ? ಯಾವುದನ್ನು ಭಾಷೆಯಲ್ಲಿ ಮಾತ್ರವೇ ನಿಜವಾಗಿದೆ ಹೇಳುವುದು ಹೇಗೆ? ಭಾಷೆಯಲ್ಲಿ

ವ್ಯಕ್ತವಾದುದಕ್ಕೂ ಅದರ ಆಚೆಗಿನ ಸಂಗತಿಗೂ ಬಹಳ ವ್ಯತ್ಯಾಸವಿದೆ. ಕಲೆಯ ಹಿಂದಿರುವ ಸತ್ಯವನ್ನು ನಾವು ಹೊರತು ಪಡಿಸಿ ನೋಡುವ ಮತ್ತು ಬೇರೆ ಮತದವರ ನಂಬಿಕೆಯನ್ನು ನಾವು ಹೇಗೆ ಗ್ರಹಿಸುತ್ತೇವೆ ಮತ್ತು ಅದರ ಹಿನ್ನೆಲೆಯೇನು ಎನ್ನುವುದೂ ಅಷ್ಟೇ ಮುಖ್ಯ. ಪುನರುಜ್ಜೀವನದ ಅನಂತರ ಬಂದ ವಿಚಾರವಾದವು ಗ್ರಹಿಸಿದ ನೆಲೆಗಳು ಭಿನ್ನವಾಗಿದೆ. ಆಗಿನ ತಪ್ಪಿದ ನಂಬಿಕೆಯನ್ನು ಪ್ರಶ್ನಿಸಲಾಯಿತು. ಅದು ಬಹಳ ಮುಖ್ಯವಾದ ಪ್ರಕ್ರಿಯೆಯೂ ಆಗಿತ್ತು. ವಿಚಾರವಾದವು ಊಹೆಯನ್ನು ಆಧರಿಸಿಕೊಂಡು ಇರುವುದಿಲ್ಲ.

ಆಲೋಚನೆ ಮತ್ತು ಸೃಜನಶೀಲತೆ

ಕಲೆಯೆನ್ನುವುದು ಬಹಳ ಮಟ್ಟಿಗೆ ವಿಚಾರವಾದದ ತಳಹದಿಯನ್ನು ರೂಪಿಸುತ್ತದೆ ಎಂದು ಅರ್ಥವಲ್ಲ. ಯಾವುದನ್ನು ಆಲೋಚನೆಯೆಂದು ಹೇಳುತ್ತೇವೆಯೋ ಅದನ್ನು ನಾವು ಸೃಜನಶೀಲವೆಂದು ಕರೆಯುವುದು ಅಗತ್ಯವಿದೆ. ಯಾಕೆಂದರೆ ಯಾವುದನ್ನು ಆಲೋಚನೆಯೆಂದು ಕರೆಯುತ್ತೇವೆಯೋ ಅದು ಹೊಸತನ್ನು ಕಾಣುತ್ತದೆ. ಆದರೆ ಇರುವ ಸಮಸ್ಯೆಯೆಂದರೆ ನಾವು ಯಾವುದನ್ನು ಆಲೋಚನೆಯೆಂದು ಹೇಳುತ್ತೇವೆಯೋ ಅದು ಮತ್ತೆ ಮತ್ತೆ ಸೃಷ್ಟಿಸುತ್ತದೆ. ಆದರೆ ಆಲೋಚನೆಯು ನಮ್ಮ ನಿಜದಿಂದ ಹುಟ್ಟುತ್ತದೆ. ಆದರೆ ಇದನ್ನೂ ವಿಚಾರವಾದವನ್ನು ಒಟ್ಟಿಗೆ ನೋಡುವುದು ಕಷ್ಟ. ವಿಚಾರವಾದವನ್ನು ನಾವು ಅವಾಸ್ತವವೆಂದು ಹೇಳಿದರೆ ಮಾತ್ರವೇ ಈ ಸಮಸ್ಯೆಯು ಹುಟ್ಟುತ್ತದೆ. ವಿಚಾರವಾದವು ನಮಗೆ ಸರಿಯಾದ ದಿಕ್ಕನ್ನು ಸೂಚಿಸುತ್ತದೆ. ಅಂದರೆ ನಾವು ವಿಚಾರ ಮತ್ತು ಆಲೋಚನೆಯೆನ್ನುವುದನ್ನು ಬೇರೆ ಬೇರೆ ಮಾಡಿ ನೋಡುವುದರಿಂದ ಸಮಸ್ಯೆಯು ಹುಟ್ಟುತ್ತದೆ. ಇಲ್ಲಿ ನಾವು ಒಂದು ಚರ್ಚೆಯನ್ನು ಗಮನಿಸಬೇಕು–ಪುನರುಜ್ಜೀವನ ಕಾಲ ಘಟ್ಟದಿಂದ ನಮ್ಮ ಜೀವನವು ಬದಲಾಯಿತು. ಸಾಮಾಜಿಕ ಸಂಬಂಧಗಳೂ ಬದಲಾದವು. ಆಧುನಿಕ ಮಾಧ್ಯಮಗಳ ದೆಸೆಯಿಂದ ಮಾತುಗಳು ಬರಹಗಳಾದವು. ಮಾತಾಡಲು ನಮಗೆ ಬೇರೆ ಬೇರೆ ರೀತಿಯ ಪರಿಕರಗಳು ಬಂದವು. ಯಾರಿಗೆ ಬರೆಯುವುದಕ್ಕೆ ಮತ್ತು ಓದುವುದಕ್ಕೆ ಬರುತ್ತದೆಯೋ ಅವರಿಗೆ ಮಾತ್ರ ಬರಹಗಳು ಉಪಯುಕ್ತವಾಗಿರುತ್ತದೆ. ಈ ದೃಷ್ಟಿಯಿಂದ ಬರಹ ಮತ್ತು ಅದರ ಸಾಧ್ಯತೆಗಳು ಒಂದು ರೀತಿಯಲ್ಲಿರುತ್ತದೆ. ಚಿತ್ರವು ಹಾಗಲ್ಲ ಅದನ್ನು ಓದುವ ಅಗತ್ಯವಿಲ್ಲ. ಕಲೆಯು ನಮ್ಮ ಪ್ರಾತಿನಿಧಿಕ ಪ್ರತಿಕ್ರಿಯೆ ಎಂದ ಕೂಡಲೇ ಅದಕ್ಕೆ ಎಲ್ಲಾ ರೀತಿಯ ಸಾಮರ್ಥ್ಯ ಇದೆ ಎಂದು ಹೇಳಲು ಬರುವುದಿಲ್ಲ. ಕಲೆಯು ಜೀವನವನ್ನು ನೋಡುವುದು ತನ್ನದೇ ದೃಷ್ಟಿಕೋನದಿಂದ. ಕಲೆಗೆ ಅದರದೇ ಆದ ಕಾರಣವಿರುತ್ತದೆ. ಕಲೆಯು ಜೀವನವನ್ನು ನೋಡುವುದು ತನ್ನದೇ ಕಾರಣಗಳಿಂದ. ಕಲೆಗೆ ಇರುವ ಕಾರಣಗಳು ಯಾವುದು

ಎಂದು ಕೇಳಿದರೆ ಅದು ಸ್ಫೂರ್ತಿಯಿಂದ ಬಂದಿರುವಂಥದ್ದು ಎಂದು ರೊಮಾಂಟಿಕರು ಹೇಳುತ್ತಾರೆ. ಆದರೆ ಅದು ಹಾಗಲ್ಲ–ಕಲೆಯು ಹುಟ್ಟಿಕೊಳ್ಳುವುದು ನಮ್ಮ ಮನಸ್ಸಿನ ಸಂಘರ್ಷ,

ಒಂದು ಕಲೆಯು ನಿರ್ದಿಷ್ಟ ಪುನರುಜ್ಜೀವನ ಕಾಲದ ಅನೇಕ ಕಲಾರೂಪಗಳು ಆ ಕಾಲದ ಸನ್ನಿವೇಶಗಳಿಗೆ ನೇರವಾದ ಪ್ರತಿಕ್ರಿಯೆಯನ್ನು ನೀಡಿರಲಿಲ್ಲ. ಮತ್ತು ಆ ಸಂದರ್ಭದಲ್ಲಿ ನೀಡಿದ ಪ್ರತಿಕ್ರಿಯೆಗಳು ಒಂದು ಚಹರೆಯನ್ನು ಹೊಂದಿರಲಿಲ್ಲ. ಈಗ ಮತ್ತೊಂದು ಸಂಗತಿಯನ್ನು ಹೇಳಬಹುದು–ಕಲೆಯು ನಮಗೆ ಸಂತೋಷವನ್ನು ನೀಡುತ್ತದೆ ಎಂದು ಹೇಳುತ್ತೇವೆ, ಆದರೆ ಈ ಸಂತೋಷವು ನಮಗೆ ದೊರಕುವುದು ನಮ್ಮ ಮನಸ್ಸಿನ ಕಾರಣದಿಂದ.ಅದು ಮನುಷ್ಯನ ನಿಜ ಮಾತ್ರವೇ ಅಲ್ಲ, ಅವನು ಕಲೆಯಲ್ಲಿ ಯಾವುದನ್ನು ಹೇಳುತ್ತಾನೋ ಅದು ಅವನ ಜಾಗವನ್ನು ನಿರ್ಣಯಿಸುತ್ತದೆ. ಕಲೆಯ ಅನುಭವವು "ಆಗು"ವಿಕೆಗೆ ಸಂಬಂಧಪಟ್ಟದ್ದೇ ವಿನಃ ಅದು ಅಲೌಕಿಕವಲ್ಲ. ವೈಯಕ್ತಿಕ ಸಾಧನೆಯನ್ನು ನಾವು ಕಲೆಯ ಮೂಲಕ ವಿನಿಮಯ ಮಾಡುತ್ತೇವೆ. . ಪುನರುಜ್ಜೀವನ ಕಾಲದ ಅನಂತರ ಬಂದ ನವ ಬಂಡವಾಳವಾದ, ಸಾಂಸ್ಕೃತಿಕ ಕೈಗಾರಿಕೆಗಳು ಮತ್ತು ಅನನ್ಯತೆಗಳು ವಿಚಾರವಾದಕ್ಕೆ ಭದ್ರವಾದ ಬುನಾದಿಯನ್ನು ಒದಗಿಸಿದೆ.

ನಾಗರಿಕತೆ ಮತ್ತು ವಿನಿಮಯ ಮೌಲ್ಯ

ನಾಗರಿಕತೆಯು ನಮ್ಮಲ್ಲಿ ವಿನಿಮಯದ ಮೌಲ್ಯವನ್ನು ಬದಲಿಸಿದೆ. ಪುನರುಜ್ಜೀವನ ಕಾಲದಿಂದ ನಮ್ಮ ಅಭಿವೃದ್ಧಿಯ ಕಲ್ಪನೆಯು ಬದಲಾಯಿತು. ಮಾತ್ರವೇ ಅಲ್ಲ–ಅದರಿಂದ ನಮ್ಮ ಸಾಹಿತ್ಯ ಮತ್ತು ಸಂಸ್ಕೃತಿಯ ತಿಳುವಳಿಕೆಗಳೂ ಬದಲಾದವು ಅನುಭವದಿಂದ ಅಹಮಿಕೆ, ನೋವು, ಮಾತಿನ ಕೌಶಲ, ಪ್ರಜ್ಞೆಯ ಅಭಿವ್ಯಕ್ತಿ ಮುಂತಾದವುಗಳಿಂದ. ಹಾಗೆ ನೋಡುವುದಿದ್ದರೆ ಕಲೆಯು ನಮ್ಮ ಪ್ರಜ್ಞೆಯ ಪ್ರಾತಿನಿಧಿಕ ರೂಪ. ಅದು ನಮ್ಮ ಸೆಲ್ಫ್‌ನ ರೂಪವೂ ಹೌದು. ಕಲೆಯು ನಮ್ಮ ಸಮಾಜಕ್ಕೆ ಕೊಡುವ ಪ್ರತಿಕ್ರಿಯೆಯೂ ಹೌದು. ಕಲೆಗೆ ಒಂದು ಸ್ವತಂತ್ರ ಅಸ್ತಿತ್ವ ಎನ್ನುವುದು ಇಲ್ಲ. ಕಲೆಯು ಭೌತಿಕ ಜೀವನದ ಒಂದು ಕ್ರೋಢೀಕೃತವಾದ ರೂಪ. ಜೀವನದ ಅನೇಕ ಸಂಗತಿಗಳನ್ನು ನಾವು ನಮಗೆ ಬೇಕಾದಂತೆ ವ್ಯಾಖ್ಯೆಗೆ ಗುರಿಪಡಿಸುತ್ತೇವೆ. ಅನುದ್ದೇಶಿತವಾದ ಕಲೆಯೆಂದು ಯಾವುದನ್ನು ಹೇಳಬಹುದು ಎಂದು ಕೇಳಿದರೆ ನಮ್ಮಲ್ಲಿ ಅದಕ್ಕೆ ಯಾವುದೇ ಉತ್ತರವಿಲ್ಲ. ಕಲೆಯು ಜೀವನದ ಪ್ರತಿಪ್ರಮೇಯವಾಗಿದೆ. ಸಾಹಿತ್ಯದ ವ್ಯಾಖ್ಯಾನವು ಬದುಕಿನಿಂದ ಪ್ರಾರಂಭವಾಗಬೇಕೇ ವಿನಃ ಮತ್ತೆ ಬೇರೆ ಎಲ್ಲಿಯೂ ಅಲ್ಲ. ಎಷ್ಟೋ ಸಲ ನಮ್ಮ ಜೀವನ ನಂಬಿಕೆಗಳು ಕಲೆಯ ನಂಬಿಕೆಗಳು ಆಗದೇ ಹೋಗಬಹುದು. ಸಾಮಾಜಿಕ ರಚನೆ ಮತ್ತು

ಕಲೆಯ ರಚನೆಗೆ ದ್ವಂದ್ವಾತ್ಮಕ ಸಂಬಂಧವಿದೆ ಎನ್ನವುದನ್ನು ನಾವು ಮರೆಯಬಾರದು. ಕಲೆಯು ನಮ್ಮ ಬದುಕನ್ನು ವಿವರಿಸುವಾಗ ಅದಕ್ಕೆ ಅದರದೇ ಕ್ರಮಗಳನ್ನು ರೂಪಿಸಿಕೊಂಡಿರುತ್ತದೆ. ಪುನರುಜ್ಜೀವನದ ಅನಂತರ ಕಲೆಯಲ್ಲಿ ಸೌಂದರ್ಯ ಮತ್ತು ಕುರೂಪವೆನ್ನುವುದಕ್ಕೆ ವ್ಯಾಖ್ಯಾನಗಳು ಬದಲಾದವು. ಇಲ್ಲಿಯೇ ಮತ್ತೆ ಕೆಲವು ವಿಷಯಗಳನ್ನು ಪ್ರಸ್ತಾವಿಸಬೇಕು– ಚಿತ್ರಕಲೆಯಲ್ಲಿ ಮತ್ತೆ ಬೇರೆ ಬೇರೆ ರೀತಿಯ ಚರ್ಚೆಗಳು ನಡೆಯುತ್ತಿದೆ. ಅದನ್ನೂ ಸೌಂದರ್ಯಕ್ಕೆ ಸಂಬಂಧ ಪಟ್ಟಂತೆ ಅನ್ವಯಿಸುವ ಅಗತ್ಯವಿದೆ. ಚಿತ್ರ ಕಲೆಯಲ್ಲಿ ಲ್ಯಾಂಡ್ ಸ್ಕೇಪ್ ಪದ್ಧತಿಗೆ ಸಂಬಂಧಪಟ್ಟಿದೆ. ಅದರಲ್ಲಿ ಸೌಂದರ್ಯವನ್ನು ಒಂದು ಮಾನದಂಡವನ್ನಾಗಿ ಮಾಡಲಾಗಿದೆ. ಲಾಂಡ್ ಸ್ಕೇಪ್ ಸುಂದರವಾದುದನ್ನು ಮಾತ್ರವೇ ಚಿತ್ರಿಸುತ್ತದೆ. ಆದುದರಿಂದ ಅದರ ಹಿನ್ನೆಲೆಯಲ್ಲಿ ಇರುವ ಸೌಂದರ್ಯಶಾಸ್ತ್ರದ ಪ್ರಶ್ನೆಯು ಬೇರೆಯಾಗಿದೆ. ಇಲ್ಲಿ ಮತ್ತೆ ಕೆಲವು ಅಂಶಗಳನ್ನು ನಾವು ಉಲ್ಲೇಖಿಸಬಹುದು ಯಾವುದನ್ನು ನಾವು ಸುಂದರವೆಂದು ಕರೆಯುತ್ತೇವೆಯೋ ಅದು ನಮ್ಮ ಸಂವೇದನೆಗೆ ಸಂಬಂಧ ಪಟ್ಟದ್ದು ಎಂದು ಹೆಗೆಲ್ ಹೇಳುತ್ತಾನೆ. ಹಾಗೆ ನೋಡುವುದಿದ್ದರೆ ಸುಂದರವೆಂದರೆ ಅದು ನಾವು ಯಾವುದನ್ನು ಗ್ರಹಿಸುತ್ತೇವೆಯೋ ಅದರೆ ಒಂದು ರೂಪ ಮಾತ್ರ. ಸೌಂದರ್ಯವೆಂದರೆ ಅದು ನಮ್ಮ ಆಲೋಚನೆಗೆ ಸಂಬಂಧ ಪಟ್ಟದ್ದು ಎನ್ನುವುದು ಇಲ್ಲಿ ಉಲ್ಲೇಖನೀಯ. ಪ್ರತಿಯೊಂದು ಸಮಾಜವೂ ತನಗೆ ಬೇಕಾದ ಅಂಶಗಳನ್ನು ಮಾತ್ರವೇ ಸೌಂದರ್ಯವೆಂದು ಹೇಳುತ್ತದೆ. ಅದು ಮನುಷ್ಯ ಸಮಾಜಕ್ಕೆ ಸಂಬಂಧ ಪಟ್ಟದ್ದೂ ಹೌದು. ಮಾನವೀಚಿಮ ಚಟುವಟಿಕೆಯ ಒಂದು ಭಾಗವಾಗಿಯೇ ಸೌಂದರ್ಯದ ಕಲ್ಪನೆಯು ಬಂದಿದೆ. ಸುಂದರ ಮತ್ತು ಕುರೂಪವನ್ನುವುದು ನಾವು ನೋಡುವ ಮತ್ತು ಅದನ್ನು ಗ್ರಹಿಸುವ ನೆಲೆಗೆ ಸಂಬಂಧ ಪಟ್ಟಿದೆ. ಜೀವನದಲ್ಲಿ ಯಾವುದು ಸುಂದರವಾಗಿದೆ, ಯಾವುದು ಕುರೂಪವಾಗಿದೆ ಎನ್ನವುದು ಕೂಡಾ ನಮ್ಮ ತಾತ್ವಿಕತೆಗೆ ಸಂಬಂಧ ಪಟ್ಟಿದೆ ಎನ್ನುವುದು ಬಹಳ ಮುಖ್ಯವಾಗಿದೆ. ಸಹಜ ಸೌಂದರ್ಯವು ತನ್ನದೇ ಆದ ಪರಿಕಲ್ಪನೆಯನ್ನು ಹೊಂದಿದೆ. ಒಂದು ಅರ್ಥದಲ್ಲಿ ಸಹಜ ಸೌಂದರ್ಯವು ಮಡಿ ಅಥವಾ ಪಾವಿತ್ರ್ಯವನ್ನು ಹೊಂದಿದೆ. ಅದು ಅಶುದ್ಧವಲ್ಲ. ಕೃತಕತೆಯನ್ನು ಅದು ನಂಬುವುದೂ ಇಲ್ಲ. ಸಹಜ ಸೌಂದರ್ಯವು ತನ್ನದೇ ಆದ ಪರಿಕಲ್ಪನೆಯನ್ನು ಹೊಂದಿದೆ. ಒಂದು ಅರ್ಥದಲ್ಲಿ ಸಹಜ ಸೌಂದರ್ಯವು ಮಡಿ ಅಥವಾ ಪಾವಿತ್ರ್ಯವನ್ನು ಹೊಂದಿದೆ. ಅದು ಅಶುದ್ಧವಲ್ಲ. ಕೃತಕತೆಯನ್ನು ಅದು ನಂಬುವುದೂ ಇಲ್ಲ. ಯಾವುದನ್ನು ನಾವು ಸೌಂದರ್ಯವೆಂದು ಹೇಳುತ್ತೇವೆಯೋ ಅದು ಮನಸ್ಸಿನ ಆಹ್ಲಾದಕ್ಕೆ ಸಂಬಂಧ ಪಟ್ಟದ್ದು. ಆನಂದವೇ ಮುಖ್ಯವಾದ ಮಾನದಂಡವಾಗಿದೆ. ನೈಜಕಲೆಯಲ್ಲಿ ಸೌಂದರ್ಯವು ಅಭಿವ್ಯಕ್ತಿಯ ಕ್ರಮಕ್ಕೆ ಸಂಬಂಧ ಪಟ್ಟದ್ದೂ ಹೌದು.ಅನೇಕ ಸರ್ತಿ ಯಾವುದು ನಮ್ಮ ನಿಸರ್ಗದಲ್ಲಿ ಇಲ್ಲವೋ ಅದನ್ನು ಮಾತ್ರವೇ ಚಿತ್ರದಲ್ಲಿ ಹೇಳುತ್ತೇವೆ.

ಹೀಗೆ ಹೇಳುವಾಗ ಅದರ ಸ್ವರೂಪವನ್ನು ಈಗಾಗಲೇ ಯಾವುದನ್ನು ಒಪ್ಪಿಕೊಳ್ಳಲಾಗಿದೆಯೋ ಅದು ಮಾತ್ರವೇ ಚಿತ್ರಿವಾಗಿರುವಂತೆ ನೋಡಲಾಗುತ್ತದೆ. ಆದುದರಿಂದಲೇ ನೈಜಕಲೆಯಲ್ಲಿ ನೈಜತೆಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಅದರಲ್ಲಿ ಕೃತಕತೆಗೆ ಯಾವುದೇ ಅವಕಾಶವಿಲ್ಲ. ಮತ್ತು ಅದರಲ್ಲಿ ಬರುವ ಮಾಧ್ಯಮಕ್ಕೂ ಭಿನ್ನತೆಯಿದೆ.

ಪ್ರಾತಿನಿಧೀಕರಣ ಮತ್ತು ನೈಜಕಲೆ

ನೈಜಕಲೆಯಲ್ಲಿ ಪ್ರಾತಿನಿಧೀಕರಣವನ್ನುವುದು ಬಹಳ ಮುಖ್ಯ. ಈ ಪ್ರಾತಿನಿಧೀಕರಣವೇ ನೈಜತೆಯಲ್ಲಿ ಬಹಳ ಮುಖ್ಯವಾಗಿದೆ. ನೈಜವಾಗುವುದೂ ಒಂದು ತಾತ್ವಿಕತೆಯೇ ಆಗಿದೆ. ನೈಜತೆಯನ್ನು ನಾವು ಹೀಗೆಯೂ ಹೇಳಬಹುದು- ನೈಜವಾದದಲ್ಲಿ ಸ್ವಾಯತ್ತತೆಯು ಬಹಳ ಮುಖ್ಯವಾದುದೂ ಹೌದು. ಹಾಗೆಂದರೆ ನೈಜತೆ ಎನ್ನುವುದು ಬಹಳ ಮುಖ್ಯವಾಗಿ ಕನ್ನಡಿಯಂತೆಯೇ ಕೆಲಸವನ್ನು ಮಾಡುತ್ತದೆ. ನೈಜವಾದದಲ್ಲಿ ವಿವರಣೆಯೇ ಬಹಳ ಮುಖ್ಯ. ಅದನ್ನು ನಾವು ಇತರ ಪ್ರಕಾರಗಳಲ್ಲಿ ಕಾಣುವುದು ಬಹಳ ಕಷ್ಟ. ಮತ್ತು ನೈಜತೆ ಎನ್ನುವುದು ಒಳ್ಳೆಯತನವನ್ನು ಮಾತ್ರವೇ ಬಿಂಬಿಸುತ್ತದೆ. ಅದಕ್ಕೆ ಆದರ್ಶವು ಬಹಳ ಮುಖ್ಯ. ಯಾವುದನ್ನು ಜನರು ನಿಜವಾದ ಆದರ್ಶವೆಂದು ಕರೆಯುತ್ತಾರೆಯೋ ಅದನ್ನು ಕಲೆಯು ಬಿಂಬಿಸುತ್ತದೆ. ಕಲೆಯ ಕರ್ತವ್ಯವೆಂದರೆ ಯಾವುದು ಚೆನ್ನಾಗಿದೆಯೋ ಅದನ್ನು ಮಾತ್ರವೇ ಪ್ರತಿಫಲಿಸುವುದು. ಹೇಗೆಂದರೆ ಅದು ತನ್ನನ್ನು ತಾನು ಬೇರೆ ರೀತಿಯಲ್ಲಿ ಬಿಂಬಿಸುತ್ತದೆ. ನೈಜಕಲೆಯ ಹಿಂದಿರುವ ಮನೋಭಾವವು ಭಿನ್ನ. ನೈಜಕಲೆಯು ಒಳ್ಳೆಯದನ್ನು ಮಾತ್ರವೇ ಹೇಳುತ್ತದೆ. ಮತ್ತು ತನ್ನ ಕೆಲಸವು ನೀತಿಯುತವಾದುದು ಎಂದೂ ಭಾವಿಸಿಕೊಳ್ಳುತ್ತದೆ. ಅದರ ಆನ್ವಯಿಕತೆಯೂ ಕೂಡಾ ಬೇರೆ ರೀತಿಯದು ಎನ್ನವುದು ಇಲ್ಲಿ ಉಲ್ಲೇಖನೀಯ. ಅಷ್ಟೇ ಅಲ್ಲದೆ ಅದರ ಪ್ರಕಾರ ನೈಜತೆ ಎನ್ನವುದು ಮನೋಭಾವದ ಸಂಗತಿಯೂ ಹೌದು. ಯಾವುದನ್ನು ನಾವು ನಿಜವಾಗಿಯೂ ನೋಡಿದ್ದೇವೆಯೋ ಅದನ್ನು ಸಹಜವಾಗಿ ಹೇಳಿದರೆ ಸಾಕು. ಅದರಾಚೆಗೆ ಬೇರೆ ಯಾವುದನ್ನೂ ರೂಪಿಸಬೇಕಾಗಿಲ್ಲ. ಈ ದೃಷ್ಟಿಯಿಂದ ನೈಜತೆಯೆನ್ನುವುದು ಅದರ ರೂಪೀಕರಣದಲ್ಲಿದೆ. ಈ ದೃಷ್ಟಿಯಿಂದ ಕಲೆಯೆನ್ನುವುದು ಪ್ರತಿರೂಪೀಕರಣದ ಪ್ರಕ್ರಿಯೆಯನ್ನು ಹೊಂದಿರುತ್ತದೆ. ಕಲೆಯೆನ್ನುವುದು ಬಹಳ ಮುಖ್ಯವಾಗಿ ವಿಷಯನಿಷ್ಠವಾಗಿದೆ. ಯಾವುದನ್ನು ನಾವು ಕಲೆಯೆಂದು ಕರೆಯುತ್ತೇವೆಯೋ ಅದು ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದೆ. ಮತ್ತೆ ಇಲ್ಲಿಯೇ ಮತ್ತೆ ಬೇರೆ ಸಂಗತಿಯನ್ನು ಯೋಚಿಸುತ್ತದೆ. ನೈಜತೆಯನ್ನು ಆಧುನಿಕತಾವಾದವು ಅಲ್ಲಗಳೆಯಿತು. ಹಾಗೆ ನೋಡುವುದಿದ್ದರೆ ಆಧುನಿಕತಾವಾದದಲ್ಲಿ ಕಲೆಯು ಮನುಷ್ಯನ ಮನೋಲೋಕವನ್ನು ವಿಭಿನ್ನವಾಗಿಯೇ

ಹೇಳುತ್ತದೆ. ಆಧುನಿಕೋತ್ತರ ಚಳುವಳಿಯು ಮನಸ್ಸನ್ನು ಕೇಂದ್ರ ಮಾಡಿಕೊಂಡಿದೆ. ಅದರ ಮಹತ್ವವಿರುವುದು ಅಮೂರ್ತವಾದ ಆಲೋಚನೆಯನ್ನು ಬಿಂಬಿಸುವುದರಲ್ಲಿ. ಅದಕ್ಕೆ ವಿಶಿಷ್ಟತೆಂಯು ಇರುವುದೂ ಕೂಡಾ ಅಮೂರ್ತವನ್ನು ದಾಖಲಿಸಿಕೊಳ್ಳುವುದರಲ್ಲಿ ಮಾತ್ರವೇ ಅನ್ನುವುದನ್ನು ನಾವು ನೆನಪಿಟ್ಟುಕೊಳ್ಳಬೇಕು. ನೈಜತೆ ಎನ್ನುವುದು ಮುಖ್ಯವಾಗಿ ಸಹಜತೆಯನ್ನು ಮಾತ್ರವೇ ಹೇಳುತ್ತದೆ ಹಾಗೂ ಅದಕ್ಕೆ ಅದು ಮಾತ್ರವೇ ಬಹಳ ಮುಖ್ಯವಾಗಿದೆ. ಆದುದರಿಂದ ಅದು ಯಾವುದನ್ನೂ ಅಡಗಿಸುವುದೂ ಇಲ್ಲ. ಸರಳತೆ ಮತ್ತು ಸ್ಪಷ್ಟತೆಯು ಅದರ ಶಕ್ತಿಯೂ ಆಗಿದೆ. ಇದನ್ನು ಚರ್ಚಿಸುವಾಗ ಮಾರ್ಕ್ಸವಾದಿಗಳು ಹೇಳುವ ಮತ್ತೊಂದು ಅಂಶವು ಗಮನಾರ್ಹ. ನೈಜತೆಯು ಅದರ ಪಾಡಿಗೆ ಅದು ಸುಂದರವಾಗಿದೆ. ಯಾಕೆಂದರೆ ಅದಕ್ಕೆ ಯಾವುದೇ ರೀತಿಯ ಆನ್ವಯಿಕತೆಯು ಬೇಕಾಗಿಲ್ಲ. ಯಾವುದನ್ನು ಸಹಜ ಮತ್ತು ಸುಂದರವೆಂದು ಹೇಳಲಾಯಿತೋ ಅದರ ವಿವರಗಳನ್ನು ಅನಂತರ ನಿರಾಕರಿಸಲಾಯಿತು. ನೈಜತೆ ಎಂದರೆ ಅದು ನಾವು ನೋಡುವ ದೃಷ್ಟಿಕೋನವನ್ನು ಅವಲಂಬಿಸಿದೆ ಎಂದೂ ಹೇಳುತ್ತಾರೆ. ಆಧುನಿಕತಾವಾದದಲ್ಲಿ ಇರುವ ಅಂಶಗಳಿಗೂ ನೈಜ ಕಲೆಗೆ ಇರುವ ಅಂಶಗಳಿಗೂ ಅನೇಕ ಭಿನ್ನತೆಯಿದೆ. ಇಲ್ಲಿ ಮತ್ತೆ ನಾವು ಹೇಳಬೇಕಾದ ಕೆಲವು ಅಂಶಗಳಿವೆ– ಯಾವುದನ್ನು ಸೌಂದರ್ಯವೆಂದು ಕರೆದರೋ ಅದು ಕೂಡಾ ಅನೇಕ ಮಿತಿಗಳಿಗೆ ಒಳಗಾಗಿದೆ. ನೈಜ ಕಲೆಯನ್ನು ಅದರ ಪ್ರತಿಪಾದಕರು ಹೇಳಿದ ಕ್ರಮವೇ ಬೇರೆ. ಅವರ ಪ್ರಕಾರ ಈ ಜಗತ್ತಿನಲ್ಲಿ ಸುಂದರವಾದುದು ಮಾತ್ರವೇ ಇದೆ. ಅದನ್ನು ನಾವು ಹೇಳಿದರೆ ಸಾಕು. ಅದರಾಚೆಗೆ ಸಾಹಿತ್ಯ ಅಥವಾ ಚಿತ್ರಗಳಿಗೆ ಯಾವ ಕೆಲಸವೂ ಇಲ್ಲ. ಅದರ ಪ್ರತಿಪಾದಕರು ಮತ್ತೆ ಒಂದು ಮಾತನ್ನು ಹೇಳುತ್ತಾರೆ – ಯಾವುದನ್ನು ನಾವು ಕಲೆಯೆಂದು ಹೇಳಿದೆವೋ ಅದು ಸ್ವಾಯತ್ತ. ಅದಕ್ಕೆ ಬೇರೆ ಹಂಗುಗಳಿಲ್ಲ. ನೈಜವೆಂದರೆ ಅದು ಸಾಧ್ಯವಾದಷ್ಟು ಮಟ್ಟಿಗೆ ನಿಜವಾಗಿರಬೇಕು. ನಿಜದ ನೆರಳಿನಂತೆ ಅದು ಇರಬೇಕು. ಅದು ಮಾತ್ರವೇ ಅದರ ಶಕ್ತಿಯಾಗಿದೆ. ನೋಡಲು ಅಸಹ್ಯವಾದುದನ್ನು ನಾವು ಕಲೆಯೆಂದು ಯಾಕೆ ಕರೆಯಬೇಕು ಎನ್ನುವುದು ಅವರ ಪ್ರಶ್ನೆ. ಇದು ನೈತಿಕವಾದಿ ನಿಲುವು ಎನ್ನುವುದು ಗಮನಾರ್ಹ. ನೈಜವಾಗ ಬೇಕಾದರೆ ಅದನ್ನು ಚಿತ್ರಿಸುವಾಗ ನಾವು ಬಹಳ ಎಚ್ಚರವಿರಬೇಕು ಎನ್ನುವುದು ಅದರ ಪರವಾಗಿರುವವರ ನಿಲುವು. ಸಹಜ ಕಲೆಯ ಮಾಧ್ಯಮವು ಬೇರೆ. ಮಾಧ್ಯಮವೇ ಭಿನ್ನವಾಗಿರುವುದರಿಂದ ಅದು ಕೊಡುವ ಅರ್ಥವೂ ಭಿನ್ನವಾಗಿ ಬಿಡುತ್ತದೆ. ಆದುದರಿಂದಲೇ ಅದರ ಅರ್ಥ ವ್ಯಾಖ್ಯಾನವೂ ಬೇರೆಯಾಗಿ ಬಿಡುತ್ತದೆ. ನಿಜದ ಹತ್ತಿರವಿದೆ ಎನ್ನುವುದೇ ಅದರ ತಾತ್ವಿಕತೆಯಾಗಿದೆ. ಯಾವುದೋ ನಿಜವಾದ ಪ್ರದೇಶ, ನಿಜವಾದ ಕಾಲ, ನಿಜವಾದ ಅವಕಾಶವನ್ನು ಅದು ಸೂಚಿಸುತ್ತದೆ ಎಂಬ ಭ್ರಮೆಯನ್ನು ಅದು

ಕೊಡುತ್ತದೆ. ಅದರಲ್ಲಿ ಸತ್ಯವಿದೆ ಎಂದು ಅನಿಸುತ್ತದೆ. ಆದರೆ ಅದು ಹಾಗಲ್ಲ. ಅದು ಕಾಲವನ್ನು ಒಂದು ಗ್ರಹಿಕೆಯನ್ನು ಮಾತ್ರವೇ ಮಂಡಿಸುತ್ತದೆ. ಚರಿತ್ರೆಯನ್ನು ನಿಲ್ಲಿಸುತ್ತದೆ. ಆಧುನಿಕತಾವಾದ ಹೇಳುವುದೇ ಬೇರೆ. ಆಧುನಿಕತಾವಾದವು ಅಮೂರ್ತತೆಯ[illegible] ಎತ್ತಿ ಹಿಡಿಯುತ್ತದೆ. ಅದರ ಪ್ರಕಾರ ಅಂತರಂಗದ ಅಭಿವ್ಯಕ್ತಿಯೇ ಪ್ರಧಾನವಾಗಿದೆ. ಸ್ರೃಜವಾದದಲ್ಲಿ ಇರುವ ಸಂವೇದನೆಯೇ ಬೇರೆಯಾಗಿದೆ. ಸಹಜತೆಯೆಂದರೆ ಅದು ಯಾವುದೇ ವಿಕೃತಿಗೆ ಜಾಗವನ್ನು ಕೊಡಬಾರದು ಎಂದು ಹೇಳುತ್ತದೆ. ಮತ್ತು ಅದುವೇ ಅದರ ನೈತಿಕವಾದ ನಿಲುವೂ ಹೌದು. ಅದು ಹೊರಡುವುದೇ ಒಂದು ಸುಖದ ಚಿತ್ರಣವನ್ನು ಹೇಳುವುದಕ್ಕೆ. ಅದು ಅದರ ಲಕ್ಷಣವಾಗಿದೆ. ಹಾಗೆ ನೋಡುವುದಿದ್ದರೆ ನೈಜತೆಯೇ ಮೂಲತಃ ಒಂದು ಸಂಕೇತ ಮಾತ್ರ. ಅದು ಒಂದು ಸೂಚನೆ. ಯಾವುದನ್ನು ಲೇಖಕ ಅಥವಾ ಕಲಾವಿದ ಯಾವುದನ್ನು ಇಷ್ಟ ಪಡುತ್ತಾನೆ ಅದನ್ನು ಮಾತ್ರವೇ ಸುಂದರವೆಂದು ಹೇಳುತ್ತಾನೆ. ಅದು ವಿವರಣೆಯನ್ನು ನೀಡುತ್ತದೆ. ನೀವು ಯಾವುದನ್ನು ನೋಡುತ್ತಿರೋ ಅದರ ಸೌಂದರ್ಯವು ಹೀಗೆ ಇದೆ; ಹೊರಗಣ ಜಗತ್ತನ್ನು ನೀವು ಹೀಗೆ ನೋಡಿ ಆಗ ನಿಜವಾದ ಆನಂದವನ್ನು ಪಡೆಯ ಬಲ್ಲಿರಿ ಎಂದು ನೈಜಕಲೆಯು ಹೇಳುತ್ತದೆ. ಮೂಲಭೂತವಾಗಿ ನವ್ಯತೆಯು ಹೊರಡುವ ಕೇಂದ್ರವೇ ಬೇರೆ. ಅದರಂತೆ ನೈಜ ಕಲೆಯೂ ಕೂಡಾ. ನೈಜಕಲೆಯು ಹೊರಗಣ ಜಗತ್ತನ್ನು ಅನುಸರಿಸುವ ಕ್ರಮವೇ ಬೇರೆ. ಅದು ಚಿತ್ರವಾಗುವುದರ ನೆಲೆಯೇ ಬೇರೆಯಾಗಿದೆ. ಚರಿತ್ರೆ ಮತ್ತು ನಿಸರ್ಗದ ಚಹರೆಯು ಅದಕ್ಕೆ ಇದೆ ಎನ್ನವುದೂ ನಿಜ. ನಿಸರ್ಗವೇ ಅದಕ್ಕೆ ಕಚ್ಚಾ ಸಾಮಾಗ್ರಿಯಾಗಿದೆ. ನೈಜಕಲೆಯ ಬುನಾದಿಯಿರುವುದು ಭಾವನಾತ್ಮಕತೆಯಲ್ಲಿ ಎನ್ನವುದೂ ಅಷ್ಟೇ ನಿಜ. ಅದು ನೀಡುವ ಅತ್ಯಂತ ಸಣ್ಣದಾದ ವಿವರವೂ ಕೂಡಾ ಅದರ ಸೌಂದರ್ಯಕ್ಕೆ ಕಾರಣವಾಗಿದೆ. ಎಲ್ಲಿಯಾದರೂ ಅದು ಅಸಹಜವಾದ ಸಣ್ಣದಾದ ಅಂಶವನ್ನು ಹೇಳಲು ಹೊರಟರೆ ಅದರ ಸೌಂದರ್ಯವು ಹಾಳಾಗುತ್ತದೆ. ಇಲ್ಲಿ ಮತ್ತೊಂದು ಅಂಶವನ್ನು ದಾಖಲಿಸಬೇಕು- ಅದು ನಿಸರ್ಗವನ್ನು ಅನುಕರಿಸುತ್ತದೆ. ಅದಕ್ಕೆ ಉದ್ಧೇಶವಿದೆ. ಅದನ್ನು ಬಿಟ್ಟು ಬೇರೆ ಯಾವುದನ್ನೂ ಹೇಳಲಾರದು. ಆದರೆ ಅದರಲ್ಲಿ ಬರುವುದು ನಮ್ಮದಾದ ವಿಷಯ ನಿಷ್ಟವಾದ ಸಂಗತಿಗಳು ಮಾತ್ರ. ಅದರಲ್ಲಿ ಬರುವ ಕಲಾವಿದನ ಮನೋಸ್ಥಿತಿಯು ಸರಳ ಪ್ರಜ್ಞೆಗೆ ಸೂಚನೆಯಾಗಿದೆ. ಈ ಸರಳತೆಯು ಮೂಲಭೂತವಾಗಿ ಎದುರು ಬಂದಿರುವ ಸಂಗತಿಗಳನ್ನು ಮಾತ್ರವೇ ಹೇಳುತ್ತದೆ. ಅದರಲ್ಲಿ ಕಲಾವಿದನ್ನು ನಿಸರ್ಗವನ್ನು ಬಿಟ್ಟು ಭಿನ್ನವಾದುದನ್ನು ಹೇಳಲಾರದು. ಕಲಾವಿದನಿಗೆ ಈ ಮಾದರಿಯ ನಿರೂಪಣೆಯಲ್ಲಿ ಸ್ವಾತಂತ್ರವಿಲ್ಲ ಎನ್ನುವುದೂ ನಿಜ. ಹೊರಗಣ ಸಂಗತಿಗಳನ್ನು ಮಾತ್ರವೇ ಹೇಳುವುದರಿಂದ ಅದರ ಸ್ವರೂಪವೂ ಬೇರೆಯಾಗಿದೆ.

ಕಲಾವಿದನು ಹೊಸತನ್ನು ಸೃಜಿಸಲಾರ. ಮತ್ತು ಹೊಸತನ್ನು ಅವನು ಕಲ್ಪಿಸಿಕೊಂಡು ಬರೆಯಲಾರ. ಸಹಜ ಕಲೆಯು ದ್ವಿತೀಯ ಪ್ರತಿಫಲನವಾಗಿದೆ. ಈ ಪ್ರತಿಫಲನವು ಕೇವಲ ಸ್ವಚ್ಛತೆ ಮತ್ತು ನೈತಿಕತೆಗೆ ಸಂಬಂಧ ಪಟ್ಟಿರುವುದರಿಂದ ಅವನು ಸಾಮಾಜಿಕ ಬದಲಾವಣೆಯನ್ನು ಸೂಚಿಸಲಾರ. ಹಾಗಿದ್ದರೆ ಯಾವುದನ್ನು ಸುಂದರ ಯಾವುದನ್ನು ಕಳಪೆ ಎಂದು ಕರೆಯುತ್ತೇವೆ? ಇಲ್ಲಿ ಒಂದು ಉದಾಹರಣೆಯನ್ನು ಅಡರ್ನೋ ನೀಡುತ್ತಾನೆ – ಸಾಕಷ್ಟು ಮೇಕಪ್ ಮಾಡಿದ ಕಲಾವಿದೆಯೊಬ್ಬಳ ಎದುರು ಸಹಜ ಸುಂದರಿಯೇ ಯಾಕೆ ಕುರೂಪಿಯೆಂದು ಅನಿಸುತ್ತದೆ. ಯಾಕೆ ಹೀಗೆ? ಮತ್ತೆ ಮತ್ತೊಂದು ಅಂಶವನ್ನು ಇಲ್ಲಿ ಉಲ್ಲೇಖಿಸಬೇಕು – ಚಿತ್ರ ಕಲೆಯಲ್ಲಿ ಬರುವ ಬಣ್ಣಗಳು ಹೊರಗನ್ನು ಚಿತ್ರಿಸುವಾಗ ಬಳಸುವ ಬಣ್ಣಗಳು ವಿಶೇಷವಾಗಿದೆ. ಮೋಡವನ್ನು ಚಿತ್ರಿಸಲು ನೀಲಿಯನ್ನು ಬಳಸುತ್ತೇವೆ. ಅದೇ ರೀತಿಯಲ್ಲಿ ಕಾಗೆಯ ಬಣ್ಣವು ಕಪ್ಪು ಗಿಳಿಯ ಬಣ್ಣವು ಹಸಿರು , ಸೂರ್ಯಾಸ್ಥವು ಕೆಂಪು ಎಂದು ಹೇಳುತ್ತೇವೆ. ಆದರೆ ಈ ಬಣ್ಣಗಳನ್ನು ಸೂಚಿಸಲು ಹೇಳುತ್ತೇವೆ. ಇವುಗಳು ಚಹರೆಗಳು ಮಾತ್ರವೇ ಹೊರತು ಮತ್ತೇನೂ ಅಲ್ಲ. ಸೂರ್ಯಾಸ್ಥದ ಸಣ್ಣ ಕ್ಷಣವನ್ನು ಚಿತ್ರಿಸಲು ನಾವು ಈ ಬಣ್ಣಗಳನ್ನು ಬಳಸುತ್ತೇವೆ. ಆದರೆ ಇವುಗಳು ಕೇವಲ ನಮ್ಮ ಒಂದು ಒಂದು ಕ್ಷಣದ ಅನುಭವವು ಮಾತ್ರವಾಗಿದೆ. ಆದರೆ ಸೂರ್ಯಾಸ್ತದ ಬಣ್ಣವು ಅರೆ ಕೆಂಪು ಎನ್ನುವುದನ್ನು ಅರೆ ಕೆಂಪಿನಲ್ಲಿ ಮಾತ್ರವೇ ಸೂಚಿಸಲು ಸಾದ್ಯ. ಎಲ್ಲವನ್ನೂ ನಾವು ಬಣ್ಣಗಳಲ್ಲಿ ಸೂಚಿಸುವುದು ಅಸಾಧ್ಯ. ಅಷ್ಟೇ ಅಲ್ಲ ಯಾವುದು ನಮ್ಮ ಪ್ರಜ್ಞೆಯ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರುತ್ತದೆಯೋ ಅದನ್ನು ಮಾತ್ರವೇ ನಾವು ವಿವರಿಸವುದು ಸಾಧ್ಯವಾಗುತ್ತದೆ. ನಮಗೆ ಯಾವುದನ್ನು ಹೇಳಲು ಸಾದ್ಯವಾಗುವುದಿಲ್ಲವೋ ಅದನ್ನು ಹೇಳಿಕೊಳ್ಳಲು ಸಾಧ್ಯವೂ ಆಗುವುದಿಲ್ಲ. ಹಾಗೆಂದು ನೈಜತೆಯೆಂದರೆ ಮನಸ್ಸಿನ ಒಂದು ಭಾವ ಮಾತ್ರ. ಅದು ಬಹಿರಂಗದ ಅಭಿವ್ಯಕ್ತಿ. ನೈಜತೆ ಎಲ್ಲಾ ಅಂಶಗಳ ಬಗ್ಗೆ ಗಮನ ನೀಡುವುದು ಸಾಧ್ಯವಿಲ್ಲ. ಆದರೆ ನೈಜತೆಯೆನ್ನುವುದು ಮೂಲಭೂತವಾಗಿ ಒಂದು ಸಾಧ್ಯತೆ ಮಾತ್ರ. ಇದರಲ್ಲಿ ಯಾವುದೇ ಸಂಗತಿಗಳ ಕುರಿತು ನಾವು ವಿಶ್ಲೇಷಣೆಯನ್ನು ಮಾಡುವುದು ಸಾಧ್ಯವಿಲ್ಲ. ಇದರಲ್ಲಿ ಯಾವುದನ್ನು ಒಂದು ಸಮಾಜವು ಒಪ್ಪಿಕೊಂಡಿದೆಯೋ ಅದರ ಚಿತ್ರಣ ಮಾತ್ರವೇ ಸಿಗುತ್ತದೆ. ಅಂಗೀಕೃತವಾದ ಮೌಲ್ಯವು ಮಾತ್ರವೇ ಪ್ರಧಾನವಾಗಿದೆ. ಮತ್ತು ಅದನ್ನು ಒಪ್ಪಿತ ಮೌಲ್ಯವೆಂದು ಹೇಳಬೇಕೇ ಹೊರತು ಅನ್ಯಥಾ ಬೇರೆಯಲ್ಲ. ನೈಜತೆಯು ಸಾಮಾಜಿಕ ಅಗತ್ಯಕ್ಕೆ ಅನುಗುಣವಾಗಿ ಬರುವುದರಿಂದ ಅದರ ಸಮಾಜವು ಯಾವುದನ್ನು ಕಲೆಯೆಂದು ಹೇಳುತ್ತದೆಯೋ ಅದನ್ನು ಸುರುಳೀತವಾಗಿ ಅಂಗೀಕರಿಸಲಾಗುತ್ತದೆ. ನಮಗೆ ಯಾವುದು ಹೆಚ್ಚು ಆನಂದವನ್ನು ನೀಡುತ್ತದೆಯೋ ಅದನ್ನು ಮಾತ್ರವೇ ನಾವು ಸೌಂದರ್ಯವೆಂದು ಹೇಳುತ್ತೇವೆ. ಈ ಕಲೆಯು ನಮ್ಮ

ಮೇಲೆ ಯಾವುದೇ ಪ್ರಶ್ನೆಗಳನ್ನು ಸೃಷ್ಟಿ ಮಾಡುವುದೂ ಇಲ್ಲ. ಆನಂದವನ್ನು ನೀಡುವುದು ಮಾತ್ರವೇ ಅದರ ಗುರಿ. ಯಾವುದನ್ನು ಒಂದು ಸಮಾಜದ ಶೀಲವೆಂದು ಹೇಳುತ್ತೇವೆಯೋ ಅದನ್ನು ಮಾತ್ರವೇ ಇದು ಅಂಗೀಕರಿಸುವುದರಿಂದ ಯಾವುದೇ ಸೆನ್ಸಾರ್‌ನ ಅಗತ್ಯವು ಇರುವುದೂ ಇಲ್ಲ. ಇರುವ ಸಂಗತಿಯನ್ನೇ ಈ ಕಲೆಯು ವ್ಯಕ್ತ ಪಡಿಸುವುದರಿಂದ ಇದರ ಅಸ್ತಿತ್ವವು ಭಿನ್ನ ಬಗೆಯದು. ಅದು ಮೋರಲ್ ಲಾವನ್ನು ಅವಲಂಬಿಸಿದೆ. ಕಣ್ಣಿಗೆ ಅಥವಾ ಮನಸ್ಸಿಗೆ ಯಾವುದು ನೆಮ್ಮದಿಯನ್ನು ತರುವುದೋ ಅದು ಮಾತ್ರವೇ ನೈಜ ಸೌಂದರ್ಯವೆಂದು ಪರಿಗಣಿತವಾಗಿದೆ. ನೈಜಕಲೆಗೆ ವರ್ಣದ ಸಂಯೋಜನೆಯೇ ಮುಖ್ಯವಾಗಿದೆ. ಅದು ಅದರ ವಿಶಿಷ್ಟತೆಗಳಲ್ಲಿ ಒಂದು. ಅಭಿವ್ಯಕ್ತಿಯಲ್ಲಿ ಈ ಸಂಯೋಜನೆಯು ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ. ಮತ್ತು ಅದುವೇ ಅದರ ಅರ್ಥವನ್ನು ಸೂಚಿಸುತ್ತದೆ.

ಹಾಗೆಯೇ ಕವಿತೆಯಲ್ಲಿ ಕೂಡಾ. ಕವಿತೆಯು ಅದರ ಪಾಡಿಗೆ ಅದು ತನ್ನ ಅರ್ಥವನ್ನು ಸೂಚಿಸುತ್ತದೆ. ಭಾಷೆಯೇ ನಿಸರ್ಗದ ಸೂಚಕವೂ ಹೌದು. ಸಾಹಿತ್ಯದ ರೂಪ ಮತ್ತು ಅದರ ವಸ್ತುವು ನಿಸರ್ಗದ ಅನುಕರಣೆಯಲ್ಲಿ ಇರುತ್ತದೆ. ನೈಜವೆಂದು ಕರೆಯಬಹುದಾದ ಕವಿತೆಯಲ್ಲಿ ಧನಾತ್ಮಕ ಅಂಶಗಳಿರುತ್ತವೆ. ನೈಜ ಕವಿತೆಯಲ್ಲಿ ದುಃಖವಿಲ್ಲ. ಅದು ನಿರಾಶೆಯನ್ನು ಹೇಳುವುದೂ ಇಲ್ಲ. ಹಾಗೆಂದು ಅದರ ವಸ್ತುವು ನಿರ್ದಿಷ್ಟವಾಗಿರಬೇಕೆಂದೇನೂ ಇಲ್ಲ. ಆದರೆ ಅದರ ವಸ್ತುವು ಸುಂದರವಾಗಿದ್ದರೆ ಮುಗಿಯಿತು.

ನೈಜ ಕವಿತೆ

ಯಾವುದನ್ನು ನಾವು ನೈಜ ಕವಿತೆಯೆಂದು ಹೇಳುತ್ತೇವೆಯೋ ಅದರ ಭಾಷೆಯೂ ನೈಜವಾಗಿರಬೇಕು. ನೋವಿಗೆ ಯಾವುದೇ ಅವಕಾಶವಿಲ್ಲ. ಮತ್ತು ಅದರ ವಸ್ತುವು ಒಂದು ಪರಿಕಲ್ಪನೆಯಾಗಿ ಪರಿವರ್ತನೆ ಹೊಂದುತ್ತದೆ. ಸುಂದರ ಅನುಭವದ ಪ್ರಾತಿನಿಧೀಕರಣವೇ ಅದರ ಆಂಶಿಕ ಸತ್ಯವಾಗಿದೆ. ಕಲಾವಿದನು ಯಾವುದನ್ನು, ಎಷ್ಟು ಸುಂದರವಾಗಿ ಹೇಳುತ್ತಾನೆ ಎನ್ನುವುದೂ ಬಹಳ ಮುಖ್ಯ. ತನಗೆ ಕಂಡ ಸುಂದರವಾದ ರೂಪವನ್ನು ಅಥವಾ ನಿಸರ್ಗವನ್ನು ಅವನು ಎಷ್ಟು ಚೆನ್ನಾಗಿ ಸಂವಹನ ನಡೆಸುತ್ತಾನೆ ಎನ್ನುವುದು ಬಹಳ ಮುಖ್ಯವಾಗಿದೆ. ನೈಜ ಕವಿತೆಯಲ್ಲಿ ಕವಿಯು ಯಾವುದೇ ಮೌಲ್ಯ ಮಾಪನಕ್ಕೆ ಹೋಗುವುದೂ ಇಲ್ಲ. ಸಹಜತೆ, ಅದರ ಸೌಂದರ್ಯ ಮತ್ತು ಅದನ್ನು ಸುಂದರವಾಗಿ ಹೇಳುವ ಕ್ರಮವೇ ಬಹಳ ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ. ಈ ರೀತಿಯ ಕವಿತೆಗಳಲ್ಲಿ ಉದ್ದೇಶವಿಲ್ಲವೆಂದು ಹೇಳಲು ಬರುವುದೂ ಇಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಕಾವ್ಯದಲ್ಲಿ ಶುದ್ಧತೆಯನ್ನು ಕಾಪಾಡಲು ಯತ್ನಿಸುತ್ತದೆ.

ಪುನರುಜ್ಜೀವನ ಮತ್ತು ವಸ್ತುನಿಷ್ಠತೆ

ಪುನರುಜ್ಜೀವನದ ಕಾಲದಲ್ಲಿ ಬಂದ ಪ್ರಮುಖ ಸಮಸ್ಯೆ. ಆಗಿನ ಸ್ಥಿತಿಯಲ್ಲಿ ಬಂದ ಪ್ರಮುಖ ಪರಿಕಲ್ಪನೆಯೆಂದರೆ ವಸ್ತುನಿಷ್ಠತೆ. ಅದು ಅನೇಕ ಸಂಗತಿಗಳನ್ನು ವಿವರಿಸುವುದಕ್ಕೆ ಒಂದು ಮಾನದಂಡವಾಯಿತು. ಯಾವುದು ಅದರ ಚೌಕಟ್ಟಿನಲ್ಲಿ ಬಂದಿಲ್ಲವೋ ಅದನ್ನು ವಿಷಯನಿಷ್ಠವೆಂದು ಸ್ವಲ್ಪ ಮಟ್ಟಿಗೆ ದೂರವಿಡಲಾಯಿತು. ಅದು ಎಷ್ಟು ಪ್ರಚಲಿತವಾಯಿತು ಎಂದರೆ ಅದನ್ನು ಬಿಟ್ಟು ಅನೇಕ ಸಂಗತಿಯನ್ನು ವಿಶ್ಲೇಷಿಸುವುದು ಅಸಾಧ್ಯವೆಂದೇ ಭಾವಿಸಲಾಯಿತು. ಕಲೆ ಮತ್ತು ಅದರ ಅಸ್ತಿತ್ವವನ್ನು ಹೇಳುವಾಗಲೇ ಈ ಮಾನದಂಡವನ್ನು ಬಳಸಲಾಯಿತು. ವಸ್ತು ನಿಷ್ಠತೆಯನ್ನು ಕಲೆಯನ್ನು ವಿಶ್ಲೇಷಿಸುವಾಗ ಇದನ್ನು ಪರಿಕರವಾಗಿಯೂ ಬಳಸಲಾಯಿತು. ಇಲ್ಲಿ ಇದನ್ನು ಹೇಗೆ ಬಳಸಲಾಯಿತು ಎನ್ನವುದು ಮುಖ್ಯವಾದ ಪ್ರಶ್ನೆಯಾಯಿತು ಮತ್ತು ಅದರ ಪ್ರಸ್ತಾವನೆಯು ಸಾಹಿತ್ಯದ ಮೀಮಾಂಸೆಗೆ ಬಹಳ ಅಗತ್ಯವೆಂದೇ ಹೇಳಲಾಯಿತು. ಆದರೆ ಈ ಪ್ರಶ್ನೆಯೇ ವಸ್ತುನಿಷ್ಠತೆಯನ್ನು ಮಾತ್ರವೇ ಹೇಳಲಿಲ್ಲ ಅದರ ಬದಲು ಇದು ಏಕಾಂಗಿತನವನ್ನು ಹೇಳಲಾಯಿತು. ಇದಕ್ಕೂ ಪರಕೀಯತೆಗೂ ಸಂಬಂಧವಿದೆ. ವರವನ್ನು ಮಂಡಿಸುತ್ತಾರೆ. ಅದೆಂದರೆ ಜೀವನವೆಂದರೆ ಅಸಂಗತವೆಂದು ಅವರ ಅಭಿಪ್ರಾಯವಾಗಿದೆ. ಆದರೆ ವಿಷಯವು ಹಾಗಲ್ಲ. ಪುನರುಜ್ಜೀವನದ ಅನಂತರ ಬಂದ ಅನೇಕ ವಾಗ್ವಾದಗಳಲ್ಲಿ ಇವುಗಳೂ ಸೇರಿಕೊಂಡಿವೆ. ಆಗ ಉದಯವಾದ ಬಂಡವಾಳವಾದಿ ವ್ಯವಸ್ಥೆಯೇ ಈ ಮಾತುಗಳಿಗೆ ಕಾರಣವಾಗಿವೆ. ಅನನ್ಯತೆ ಮತ್ತು ಅದರ ಚಹರೆಗಳಿಗೂ ಆಗಿನ ಇತಿಹಾಸಕ್ಕೂ ಒಂದು ಸಂಬಂಧವಿದೆ.ಹಾಗೆ ನೋಡುವುದಿದ್ದರೆ ಸಂಸ್ಕೃತಿಯ ಸಿದ್ಧಾಂತಗಳು ಈಗ ಮಾರುಕಟ್ಟೆಗೆ ಬಂದಿವೆ, ಯಾರು ಯಾವ ಸಿದ್ಧಾಂತವನ್ನು ಕೊಂಡುಕೊಳ್ಳಬಹುದು. ಮತ್ತು ಅದನ್ನು ಸ್ವಂತದ ಸಿದ್ಧಾಂತ ಎನ್ನುವ ರೀತಿಯಲ್ಲಿ ಮಾತಾಡಲೂಬಹುದು. ಆದರೆ ಯಾವುದೇ ಸಿದ್ಧಾಂತಗಳು ನಮ್ಮನ್ನು ಮತ್ತು ನಮ್ಮ ಆಸಕ್ತಿಯನ್ನು ರೂಪಿಸುತ್ತದೆ. ಅವುಗಳು ಮಾರುಕಟ್ಟೆಗೆ ಬಂದಾಗ ನಾವು ಬರೀ ಗಿರಾಕಿಗಳು ಎನ್ನವ ಥರ ಕೃತಿಯನ್ನು ಓದುತ್ತೇವೆ. ಆದರೆ ಸಂಸ್ಕೃತಿಯ ಸಿದ್ದಾಂತಕ್ಕೂ ಒಂದು ಚರಿತ್ರೆಯು ಇದೆ. ಸಂಸ್ಕೃತಿಯ ಅಧ್ಯಯನವು ಈಗ ವಿಶ್ವವನ್ನು ನೋಡುವ ಕ್ರಮವನ್ನು ನಿರ್ದೇಶಿಸುತ್ತದೆ. ಮತ್ತು ಅವುಗಳನ್ನು ನಾವು ಗ್ರಹಿಸುವಾಗ ಅದರ ಅಗತ್ಯ ಮತ್ತು ಅದರ ತಾತ್ವಿಕತೆಯನ್ನು ಅನೇಕರು ಗ್ರಹಿಸಲು ಹೋಗುವುದೂ ಇಲ್ಲ. ಸಂಸ್ಕೃತಿ ಚಿಂತನೆಗೂ ಅದರ ಹಿಂದೆ ಇರುವ ಸನ್ನಿವೇಶಕ್ಕೂ ಒಂದು ಸಂಬಂಧವಿದೆ. ಅದು ಅದರಿಂದ ಹೊರತಾಗಿ ಇರವುದು ಸಾಧ್ಯವಿಲ್ಲ. ಬರೆದಿರುವುದು ಮಾತ್ರವೇ ಸಂಸ್ಕೃತಿಯಲ್ಲ. ಅದರಾಚೆಗೂ ಸಂಸ್ಕೃತಿಯು ಇರುತ್ತದೆ. ಒಂದು

ಸಾಂಸ್ಕೃತಿಕ ಸನ್ನಿವೇಶವು ಒಂದು ಸಾಮಾಜಿಕ ಮತ್ತು ಆರ್ಥಿಕ ನೆಲೆಗೆ ಅನುಸಾರವಾಗಿ ರೂಪುಗೊಂಡಿರುತ್ತದೆ. ಆದರೆ ಅದು ಅದರ ಪಾಡಿಗೆ ಸ್ವತಂತ್ರವಲ್ಲ. ಅದನ್ನು ಗ್ರಹಿಸಲು ನಮಗೆ ಬೇರೆ ಅನ್ವಯಗಳ ಕ್ರಮಗಳು ಗೊತ್ತಿರಬೇಕಾಗುತ್ತದೆ. ಮತ್ತು ಜನರ ನಂಬಿಕೆಗೂ ಸಂಸ್ಕೃತಿಗೂ ಇರುವ ಸಂಬಂಧವನ್ನು ನಾವು ಗ್ರಹಿಸಲು ಬೇರೆ ಆನ್ವಯಿಕ ಕ್ರಮವನ್ನೂ ಇಟ್ಟುಕೊಳ್ಳಬೇಕಾಗುತ್ತದೆ. ಆದರೆ ಅದು ಯಾವುದು ಎನ್ನುವುದೇ ಬಹಳ ದೊಡ್ಡ ಪ್ರಶ್ನೆ ಆಗಿದೆ. ಜನರ ನಂಬಿಕೆಯನ್ನು ನಾವು ಹೇಗೆ ಅನ್ವಯಿಸಬೇಕು ಎನ್ನುವುದೇ ತಾತ್ವಿಕ ನಿಲುವು. ಇದನ್ನು ಮಾರ್ಕ್ಸವಾದವು ಹೇಳುತ್ತದೆ. ನಮಗೆ ಗೊತ್ತಿರುವ ಪರಿಕರವು ಯಾವ ಬಗೆಯದು ಎನ್ನುವುದೇ ಮುಖ್ಯ.

ಪುನರುಜ್ಜೀವನ ಕಾಲ ಮತ್ತು ಜ್ಞಾನ ಹಾಗೂ ದ್ವಂದ್ವಾತ್ಮಕತೆ

ಪುನರುಜ್ಜೀವನ ಕಾಲ ಮತ್ತು ಜ್ಞಾನ ಹಾಗೂ ದ್ವಂದ್ವಾತ್ಮಕತೆಯನ್ನು ಅಡರ್ನೊ ವಿವರಿಸುತ್ತಾನೆ. ಬುದ್ಧಿಜೀವಿಗಳು ಪುನರುಜ್ಜೀವನದ ಕಾಲದಲ್ಲಿ ಲೇಖಕರು ಮತ್ತು ಬುದ್ಧಿಜೀವಿಗಳು ಅತ್ಯಂತ ವಿಶಿಷ್ಟವಾದ ಪಾತ್ರವನ್ನು ವಹಿಸಿದ್ದಾರೆ. ಈ ಚಳುವಳಿಯು ನಮಗೆ ಮಧ್ಯಕಾಲೀನವಾದ ಚಿಂತನೆಗೂ ಈ ಯುಗಕ್ಕೂ ಅನೇಕ ವ್ಯತ್ಯಾಸವಿದೆ. ಅದು ಚಿಂತನೆಯು ನಮಗೆ ಕಾರಣ ಎನ್ನುವುದನ್ನು ಮುಂದೆ ತಂದಿತು. ಆದ್ದರಿಂದ ಪುನರುಜ್ಜೀವನ ಎನ್ನುವುದನ್ನು ಕಾರಣವನ್ನು ಮುಂದೆ ತಂದಿತು. ಅದರ ಮೂಲಕ ಅದು ಒಂದು ಸಂದೇಶವನ್ನು ಸಮಾಜಕ್ಕೆ ಕೊಟ್ಟಿತು. ಇದು ಕಾಂಟನಲ್ಲಿ ಭಿನ್ನವಾದ ಅರ್ಥದಲ್ಲಿ ಬಳಕೆಯೂ ಆಗಿದೆ. ಮನುಷ್ಯರು ಮತ್ತು ಅವರ ಜೀವನವನ್ನು ಇದು ಸೂಚಿಸಿತು. ನಮಗೆ ಹೊಸ ಅನುಭವ ಎನ್ನುವುದು ಹೇಗೆ ಬರುತ್ತದೆ ಮತ್ತು ಅದರ ಮೇಲೆ ಪುನರುಜ್ಜೀವನದ ಪರಿಣಾಮವು ಏನು ಎನ್ನುವುದನ್ನು ಕಾಂಟ್ ಹೇಳುತ್ತಾನೆ ನಾವು ಅದರ ಮೂಲಕ ಏನನ್ನು ಸಾಧಿಸಬಹುದು ಎನ್ನುವುದು ಇಲ್ಲಿ ಅತ್ಯಂತ ಮುಖ್ಯವಾದ ಪ್ರಶ್ನೆ ಎಂದು ಅವನು ಭಾವಿಸುತ್ತಾನೆ. ಅದು ಹೊಸಬಗೆಯ ಹೊಳಪು ಎನ್ನುವುದು ಅವನ ನಿಲುವು. ಕಾರಣ ಎನ್ನುವುದು ನಮಗೆ ಅನ್ವೇಷಣೆ ಸೂಚನೆಯನ್ನು ಕೊಡುತ್ತದೆ. ಮತ್ತೊಂದು ಪ್ರಶ್ನೆಯು ಆಗ ಬಂದಿತ್ತು. ಸ್ವಾತಂತ್ರ್ಯ ಮತ್ತು ವಿಚಾರವಾದ. ಮನುಷ್ಯನಿಗೆ ಯಾವುದು ಸ್ವಾತಂತ್ರ್ಯವನ್ನು ಕೊಡುತ್ತದೆ ಎನ್ನುವುದು ಮತ್ತೊಂದು ದೃಷ್ಟಿಯಲ್ಲಿ ಒಂದು ತಾತ್ವಿಕವಾದ ಪ್ರಶ್ನೆಯೂ ಹೌದು. ಮಧ್ಯಕಾಲೀನ ಸಮಾಜ ಮತ್ತು ಪುನರುಜ್ಜೀವನ ಕಾಲಘಟ್ಟದ ಸಮಾಜಕ್ಕೆ ಬಹಳ ವ್ಯತ್ಯಾಸವಿದೆ. ಆಗ ಇದ್ದ ಸಮಾಜ ಮತ್ತು ಪುನರುಜ್ಜೀವನದ ಸಮಾಜ ಎರಡಕ್ಕೂ ಬಹಳ ವ್ಯತ್ಯಾಸವಿದೆ. ಅಡರ್ನೊ ಮತ್ತು ಹೊರ್ಕೆಮಾರ್ ಪುನರುಜ್ಜೀವನ ಮತ್ತು ಅದರ ಹಿಂದೆ ಇರುವ ಆಲೋಚನೆ, ಅದರ ಪರಿಕಲ್ಪನೆಗಳನ್ನು ಹೇಳುತ್ತಾರೆ. ಮೊದಲನೆಯದಾಗಿ ಅದು ಪುರಾಣ ಮತ್ತು ಐತಿಹ್ಯಗಳನ್ನು ಹೆಚ್ಚು ನಂಬುವುದೂ

ಇಲ್ಲ. ಮನುಷ್ಯನಿಗೆ ಮತ್ತು ಲೋಕಕ್ಕೆ ಯಾವ ಬಗೆಯ ಸಂಬಂಧವು ಇದೆ ಎಂದು ಇವರು ವಿವರಿಸುತ್ತಾರೆ. ಆದರೆ ಇದರಲ್ಲಿ ನಾವು ಇನ್ನೂ ಒಂದು ಅಂಶವನ್ನು ಗಮನಿಸುವುದು ಅತ್ಯಂತ ಸೂಕ್ತ. ಪುನರುಜ್ಜೀವನ ಎನ್ನುವುದೇ ಹೊಸತರ ಉದಯ ಎಂದು ಹೇಳುತ್ತದೆ. ಅದು ಪರಿಕಲ್ಪನಾತ್ಮಕ ಎನ್ನುವುದನ್ನು ಮತ್ತೊಮ್ಮೆ ನೆನಪು ಮಾಡಿಕೊಳ್ಳಬೇಕಾಗುತ್ತದೆ. ಪುನರುಜ್ಜೀವನ ಮತ್ತು ಮತ್ತು ಅದರ ಸ್ವಭಾವ ಮನುಷ್ಯನನ್ನು ನಿಯಂತ್ರಣ ಮಾಡುತ್ತದೆ ಎನ್ನುವುದು ಅವನ ನಿಲುವೂ ಹೌದು. ಆದರೆ ಯಾವುದನ್ನು ನಾವು ಐತಿಹ್ಯ ಎಂದು ಹೇಳುತ್ತೇವೆಯೋ ಅದು ಐತಿಹ್ಯಗಳನ್ನು ಅಷ್ಟು ಒಪ್ಪಿಕೊಂಡಿರಲಿಲ್ಲ. ಹಾಗೆ ನೋಡಿದರೆ ನಮಗೆ ಪುನರುಜ್ಜೀವನ ಮತ್ತು ಅದರ ಹಿಂದೆ ಇರುವ ಚಾರಿತ್ರಿಕತೆಗೆ ಬೇರೆ ಆಯಾಮವೂ ಇತ್ತು. ವಾಸ್ತವ ಮತ್ತು ಅದರ ಸಾಧ್ಯತೆಯನ್ನು ಪುನರುಜ್ಜೀವನದ ಸನ್ನಿವೇಶವು ನಮಗೆ ಹೇಳಿದ್ದು ಈವತ್ತು ಅತ್ಯಂತ ಮಹತ್ವದ್ದೂ ಹೌದು.

ಪುನರುಜ್ಜೀವನ ಮತ್ತು ಹೊಸ ಜೀವನದ ಕ್ರಮ

ಒಂದು ಅತ್ಯಂತ ವಿಶಿಷ್ಟವಾದ ಸಂಗತಿಯನ್ನು ನಾವು ಇಲ್ಲಿ ಗಮನಿಸಬೇಕು: ಅದು ನಮಗೆ ಹೊಸದಾದ ಜೀವನವನ್ನು ಕೊಟ್ಟಿದೆ. ಅಷ್ಟೇ ಅಲ್ಲ ಅದು ಜನರನ್ನು ಭಯದಿಂದ ಮುಕ್ತರನ್ನಾಗಿ ಮಾಡಿದೆ. ಅದರ ಗುರಿಯೂ ಅಷ್ಟೇ ಮುಖ್ಯವಾದ್ದು. ಮನುಷ್ಯನನ್ನು ಭಯದಿಂದ ಮುಕ್ತರನ್ನಾಗಿ ಮಾಡುವುದು ಅತ್ಯಂತ ದೊಡ್ಡದಾದ ಕೆಲಸವೂ ಹೌದು. ಇದು ಯಾಕೆ ಮುಖ್ಯವಾಗಿದೆ ಎಂದರೆ ಇದರ ಮೂಲಕ ನಾವು ಸಮಾಜ ಮತ್ತು ನಮ್ಮ ತಿಳುವಳಿಕೆಯನ್ನು ಗಮನಿಸಲು ಸಾಧ್ಯವಾಗುತ್ತದೆ. ಈ ಎರಡೂ ಅಂಶಗಳನ್ನು ಚರಿತ್ರೆಯ ಮಹಾನ್ ತಿರುವು ಎಂದೂ ಕರೆಬಹುದು. ಅದು ಪ್ರಗತಿಪರವಾಗಿದೆ ಅದರಲ್ಲಿ ಯಾವುದೇ ಅನುಮಾನ ಇಲ್ಲ ಎಂದು ಅಡರ್ನೊ ಹೇಳುತ್ತಾನೆ. ಪುನರುಜ್ಜೀವನ ಮತ್ತು ಅದರ ಪರಿಣಾಮಗಳು ನಮಗೆ ಒಂದು ಬಗೆಯದು ಮಾತ್ರವೇ ಆಗಿರಲಿಲ್ಲ. ಆದ್ದರಿಂದ ಇದನ್ನು ಹೆಚ್ಚು ವಿಶ್ಲೇಷಣೆ ಮಾಡಬೇಕು ಎನ್ನುವುದು ಅವನ ನಿಲುವೂ ಹೌದು. ವಾಸ್ತವವಾಗಿ ಹೊರ್ಕೆಮಾರ್ ಮತ್ತು ಅಡರ್ನೊ ಇಬ್ಬರೂ ಪುನರುಜ್ಜೀವನವನ್ನು ನೋಡಿದ ವಿಧಾನವು ಬೇರೆ ಇದೆ. ಅದನ್ನು ಅವರು ಅತ್ಯಂತ ನಿಖರವಾಗಿ ಹೇಳುತ್ತಾರೆ. ಅವರ ಮೊದಲ ನಿಲುವು ಇರುವುದೇ ಪುರಾಣ ಮತ್ತು ಅದರ ಕಟ್ಟುವಿಕೆಯ ಹಿನ್ನೆಲೆಯಲ್ಲಿ ಕೆಲಸ ಮಾಡಿದ ಮನೋಭಾವ. ಅವರು ಅದನ್ನು ಹೇಳುವಾಗಲೇ ಪುರಾಣಗಳ ಓದು ಎನ್ನುವುದು ಪುನರುಜ್ಜೀವನದ ತರುವಾಯ ಬೇರೆಯಾಗಿದೆ ಇದು ಅವರ ಮುಖ್ಯವಾದ ಒಂದು ನಿಲುವು. ಇಲ್ಲಿ ಇನ್ನೊಬ್ಬನ ಹೆಸರನ್ನು ನಾವು ಪ್ರಸ್ತಾವಿಸಬೇಕು: ಅವನ ಹೆಸರು ಮಾರ್ಕ್ವಿಸ್ ಡಿಸೇಡ್. (1740) ಇವನು ಮೂಲತಃ ಒಬ್ಬ

ಕ್ರಾಂತಿಕಾರಿ ಲೇಖಕ. ಅದರ ಜೊತೆಗೆ ಅವನು ಒಬ್ಬ ದಾರ್ಶನಿಕನೂ ಹೌದು. ಅವನು ಸ್ವಾತಂತ್ರ್ಯ ಮತ್ತು ಹಿಂಸೆಗಳ ಕುರಿತು ಮಾತಾಡುತ್ತಾನೆ ಅನಂತರ ಅವನ ವಾದವು ಸೇಡಿಸಂ ಎಂದು ಪ್ರಸಿದ್ಧವಾಯಿತು. ಆದರೆ ಅವನು ಧರ್ಮವನ್ನು ಪ್ರಶ್ನೆ ಮಾಡುತ್ತಾನೆ. ಅದೇ ಅನಂತರ ಸ್ಯಾಡಿಸಂ ಎಂದು ಪ್ರಸಿದ್ಧವಾಯಿತು.

ನಿಸರ್ಗವಾದದ ನಿಲುವು:

ಸಹಜ ಎನ್ನುವಾಗ ನಮಗೆ ಅದರ ಕುರಿತಾದ ಒಂದು ಚಿತ್ರವು ನಮ್ಮ ಮುಂದೆ ಇರುತ್ತದೆ. ಅದನ್ನು ನಾವು ಭೌತಿಕವಾದ ಒಂದು ಜಗತ್ತು ಎಂದು ಹೇಳುತ್ತೇವೆ. ಅದರ ಜೊತೆಗೆ ಅದು ಜೀವನದ ಒಂದು ಕ್ರಮವನ್ನು ಸೂಚಿಸುತ್ತದೆ. ಈವತ್ತು ನಾವು ನಿಸರ್ಗ ಎನ್ನುವುದನ್ನು ಬೇರೆ ಬೇರೆ ಅರ್ಥಗಳಲ್ಲಿ ಬಳಸುತ್ತೇವೆ. ಮತ್ತೊಂದು ಅರ್ಥದಲ್ಲಿ ನಿಸರ್ಗದತ್ತವಾದ್ದು ಎಂದು ಹೇಳುವಾಗ ಅದು ವಂಶಾವಳಿಯನ್ನು ಹೇಳುತ್ತದೆ. ವಾಸ್ತವವಾಗಿ ಇದನ್ನು ಚರ್ಚೆ ಮಾಡುವಾಗ ಎರಡು ಅತ್ಯಂತ ಮುಖ್ಯವಾದ ಅಂಶಗಳನ್ನು ನಮ್ಮ ಮುಂದೆ ಇಡುತ್ತಾನೆ. ನಿಸರ್ಗದ ಜೊತೆಗೆ ನಮ್ಮ ಸಂಬಂಧವು ಮೂಲತಃ ಸ್ವಯಂ ವಿನಾಶಕಾರಿಯೂ ಆಗಬಹುದು. ನಿಸರ್ಗ ಮತ್ತು ಮನುಷ್ಯರ ಸಂಬಂಧವು ಅತ್ಯಂತ ಗಹನವಾದ್ದು. ಇತಿಹಾಸ ಮತ್ತು ಪ್ರಕೃತಿಯ ಸಂಬಂಧವನ್ನು ಭಿನ್ನ ಮಾಡಲಾಗದ ಒಂದು ಅಂಶ ಎಂದು ಹೇಳುತ್ತಾನೆ. ಆದ್ದರಿಂದ ನಾವು ಈವತ್ತು ಪುನರುಜ್ಜೀವನದ ಕೆಲವು ಸಂಗತಿಗಳನ್ನು ಯಾವುದೇ ಆದರ್ಶವಲ್ಲದ ಗ್ರಹಿಕೆಯನ್ನು ಇಟ್ಟುಕೊಂಡು ಮುಂದುವರಿಯಬೇಕಾಗುತ್ತದೆ. ಅದನ್ನು ಸ್ವಲ್ಪವಾದರೂ ಸೋಸುವುದು ಅಗತ್ಯ. ಪುನರುಜ್ಜೀವನವೂ ಎಲ್ಲವನ್ನು ಮಾಡಿತು ಎಂದು ಹೇಳುವುದು ಅಗತ್ಯವಿಲ್ಲ. ಹಾಗಿದ್ದರೂ ನಮಗೆ ವೈಚಾರಿಕತೆ ಎನ್ನುವುದು ಹೇಗೆ ಕಾಲಾತೀತವಾಗಿದೆ ಎಂದು ಅವನು ಹೇಳುತ್ತಾನೆ. ಪುನರುಜ್ಜೀವನ ಎನ್ನುವುದು ಒಂದು ಹಂತದಲ್ಲಿ ತಾನು ಏನನ್ನು ಹೇಳಲು ಉದ್ದೇಶ ಪಟ್ಟಿದ್ದೇನೆ ಎನ್ನುವುದನ್ನು ನಿರೂಪಿಸಲು ವಿಫಲವಾಗುತ್ತದೆ. ಮನುಷ್ಯನಿಂದ ಪ್ರಾರಂಭ ಮಾಡಿ ಸಹಜವಾದ ಭೌತ ಪ್ರಪಂಚದ ವರೆಗೆ ಬೇರೆ ಬೇರೆ ಸಂಗತಿಗಳು ನಡೆದಿವೆ. ಇದನ್ನು ಹೇಳಲು ನಮಗೆ ಬರೀ ಕಾರಣ ಎನ್ನುವ ಒಂದು ಪರಿಕಲ್ಪನೆಯು ಸಾಕಾಗುತ್ತದೆಯೇ ಎನ್ನುವುದು ಅವರ ನಿಲುವು. ಒಂದು ಹಂತದಲ್ಲಿ ಪುನರುಜ್ಜೀವನದ ಚಿಂತನೆಗಳು ಬಹುತ್ವವನ್ನು ನಿರಾಕರಿಸಿ ಒಂದು ಮಾನದಂಡವನ್ನು ಮಾತ್ರವೇ ಗ್ರಹಿಸಿತು. ಭೌತಿಕವಾದ ಅಸ್ತಿತ್ವವು ಇರಬಲ್ಲ ಅನೇಕ ಸಂಗತಿಗಳು ಏಕ ಕೇಂದ್ರಿತವಾದ ಚಿಂತನೆಯಾಗಿ ಮಾರ್ಪಾಡು ಹೊಂದಿತು, ನಮ್ಮ ಭೌತಿಕವಾದ ಪ್ರಪಂಚವು ಅದಕ್ಕೆ ಒಂದು ಖಾಲಿಯಾದ ಹಾಳೆಯಂತೆ ಕಾಣುತ್ತದೆ. ಪ್ರಯೋಗ ಶಾಲೆಯಲ್ಲಿ ಒಂದು ವಸ್ತುವನ್ನು ನೋಡುವುದು

ಅಂದರೆ ಅದರಲ್ಲಿ ಬೇರೆ ಭಾವನೆಗಳು ಇಲ್ಲವೆಂದು ಅರ್ಥ. ಅಲ್ಲಿ ಕಪ್ಪೆಯನ್ನು ಕೊಯ್ಯುತ್ತಾರೆ. ಮೊಲವನ್ನು ಪ್ರಯೋಗಕ್ಕೆ ಬಳಸುತ್ತಾರೆ.ಆಗ ಅವರಿಗೆ ಅದು ಜೀವ ಇರುವ ಪ್ರಾಣಿಯು ಹೌದೋ ಅಲ್ಲವೋ ಎನ್ನುವುದು ಪ್ರಶ್ನೆಯು ಅಲ್ಲ. ಪುನರುಜ್ಜೀವನ ಕಾಲದಲ್ಲಿ ಇದು ಅತ್ಯಂತ ಮಹತ್ವದ ಪ್ರಶ್ನೆಯೂ ಆಗಿತ್ತು. ಪ್ರಯೋಗ ಎಂದರೆ ಅದು ಭಾವನೆಗಿಂತ ಹೊರತಾದ್ದು. ಇಡೀ ಜಗತ್ತು ವಸ್ತು ನಿಷ್ಠವಾದ ಸಂಗತಿಯಂತೆ ಕಾಣಿಸಿತು.

ಕಾರಣ

ಪುನರುಜ್ಜೀವನವು ನಮಗೆ ಒಂದು ಹೊಸದಾದ ಅನುಭವನ್ನು ಕೊಟ್ಟಿತು ಎನ್ನುವುದು ಸತ್ಯ. ಆದರೆ ಅದರ ಜೊತೆಗೆ ಅದು ಜಗತ್ತನ್ನು ತನಗೆ ಬೇಕಾದಂತೆ ವ್ಯಾಖ್ಯಾನ ಮಾಡಿತು. ಮತ್ತೊಂದು ಅರ್ಥದಲ್ಲಿ ಅದು ನಮ್ಮ ಮೇಲೆ ಯಜಮಾನಿಕೆಯನ್ನು ವಹಿಸಿದ್ದೂ ಅಷ್ಟೇ ನಿಜ. ಅದು ಎಷ್ಟು ಪ್ರಭಾವಶಾಲಿ ಎಂದರೆ ಅದರ ಎದುರು ಭೌತಿಕವಾದ ಸಂಗತಿಗಳು ಅತ್ಯಂತ ಸಣ್ಣದು ಎಂದು ಅನಿಸಿತು. ಈ ಹಿನ್ನೆಲೆಯಲ್ಲಿ ಮನುಷ್ಯರು ಮತ್ತು ಅವರ ಜೀವನವನ್ನು ಬೇರೆ ಥರ ಗ್ರಹಿಸಲು ಸಾಧ್ಯ ಎಂದು ಅದು ನಿರೂಪಿಸಿತು.

ಅದರ ಜೊತೆಗೆ ವಸ್ತು ಮತ್ತು ವಿಷಯ ಎನ್ನುವುದನ್ನು ಪ್ರತ್ಯೇಕ ಸಂಗತಿಗಳು ಎಂದು ಭಾವಿಸಿತು. ವಿಷಯ ಮತ್ತು ವಸ್ತು ಎನ್ನುವುದು ಬೇರೆಯಾಗಿದೆ ಎಂದು ನಿರೂಪಿಸಿದ್ದು ಮತ್ತೊಂದು ದೃಷ್ಟಿಕೋನದಲ್ಲಿ ಮಹತ್ವದ ಪ್ರಶ್ನೆ. ವಸ್ತು ಮತ್ತು ವಿಷಯ ಎನ್ನುವುದು ಸ್ವ ಮತ್ತು ಅನ್ಯ ಎನ್ನುವುದನ್ನು ಬೇರೆ ಮಾಡಿದೆ. ಸ್ವಂತಿಕೆ ಎನ್ನುವುದು ಇದರಲ್ಲಿ ಅತ್ಯಂತ ಮುಖ್ಯವಾದ ಒಂದು ನಿಲುವೂ ಹೌದು. ಚರಿತ್ರೆ ಎಂದರೆ ಅದರಲ್ಲಿ ಸ್ವಂತದ ಚರಿತ್ರೆಯೂ ಸೇರಿಕೊಂಡಿದೆ. ಇತಿಹಾಸವು ಈ ದೃಷ್ಟಿಯಿಂದ ಜಗತ್ತನ ಒಂದು ಕಲ್ಪನೆಯ ಪ್ರಶ್ನೆಯೂ ಹೌದು.

ತತ್ವಜ್ಞಾನ ಮತ್ತು ಅದರ ಸಾಧ್ಯತೆಗಳು

ತತ್ವಜ್ಞಾನವನ್ನು ಈವತ್ತು ನಾವು ಹೇಗೆ ನೋಡಬಹುದು ಎನ್ನುವುದನ್ನು ಬಿಟ್ಟು ಅನೇಕರು ಅದನ್ನು ಟೀಕಿಸುತ್ತಾರೆ. ಮತ್ತೆ ಕೆಲವರು ವಾಸ್ತವಕ್ಕಿಂತ ಭಿನ್ನವಾದ ತತ್ವಜ್ಞಾನವನ್ನು ಮಾತ್ರವೇ ತತ್ವಜ್ಞಾನ ಎಂದು ಹೇಳುತ್ತಾರೆ. ಇದು ಸಮಸ್ಯೆಯಾಗಿದೆ ತತ್ವಜ್ಞಾನ ಮತ್ತು ಅದರ ಸಾಧ್ಯತೆಯು ಭಿನ್ನವಾಗಿರುತ್ತದೆ. ತತ್ವಜ್ಞಾನವು ನಮಗೆ ಲೋಕವನ್ನು ನೋಡಲು ಇರುವ ಒಂದು ಸಾಧ್ಯತೆಯೂ ಹೌದು. ಅದರೆ ಇದು ಇರುವ ವಾಸ್ತವವನ್ನು ಮಾತ್ರವೇ ಹೇಳುತ್ತದೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ.



ಆಧುನಿಕ ಜಗತ್ತಿನಲ್ಲಿ ಅತ್ಯಂತ ಮಹತ್ವದ ಚಿಂತಕ ಎಂದು ಹೆಸರುವಾಸಿಯಾದ ಗ್ರಾಂಶಿಯು ನಮಗೆ ಅನೇಕ ಚಿಂತನೆಗಳು ಮತ್ತು ವಿಚಾರಧಾರೆಯನ್ನು ರೂಪಿಸಿ ಕೊಟ್ಟಿದ್ದಾನೆ, ನಾವು ಗ್ರಾಂಶಿಯನ್ನು ನೋಡುವುದು ಅಂದರೆ ಮತ್ತೆ ಸಂಸ್ಕೃತಿಯ ಚಿಂತನೆಗಳನ್ನು ಮರುಯೋಚನೆ ಮಾಡುವುದೂ ಹೌದು. ಅದರ ಜೊತೆಗೆ ಅವನು ತನ್ನ ಬರಹಗಳಲ್ಲಿ ಬರೀ ಸಂಸ್ಕೃತಿಯನ್ನು ಮಾತ್ರವೇ ಹೇಳಿದ್ದಾನೆ ಎಂದು ಭಾವಿಸಬಾರದು. ಅವನಲ್ಲಿ ರಾಜಕೀಯ, ಸಾಂಸ್ಕೃತಿಕ, ತಾತ್ವಿಕ, ಮೊದಲಾದ ಅನೇಕ ವಿಶ್ಲೇಷಣೆಯನ್ನು ಕಾಣುತ್ತೇವೆ. ಅವನ ಚಿಂತನೆಗಳು ಅನೇಕ ರೀತಿಯಲ್ಲಿ ಹರಡಿಕೊಂಡಿದೆ. ಆದ್ದರಿಂದ ಈವತ್ತಿಗೂ ಅವನು ಅತ್ಯಂತ ಮಹತ್ವದ ಚಿಂತಕ ಎನ್ನುವ ಹೆಸರನ್ನು ಪಡೆದುಕೊಂಡಿದ್ದಾನೆ. ಅವನ ಬರಹಗಳು ಮುಕ್ತವಾಗಿದೆ.